**ಕರ್ನಾಟಕ ಸರ್ಕಾರ**

# ಕರ್ನಾಟಕದಿಂದ ಮತ್ತು ಕರ್ನಾಟಕಕ್ಕೆ ಕಾರ್ಮಿಕರ ವಲಸೆ ಕುರಿತು ಮೌಲ್ಯಮಾಪನ ಅಧ್ಯಯನ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evalution Authority

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ**

**ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ**

**ಕರ್ನಾಟಕ ಸರ್ಕಾರ**

**2017**

# ಕರ್ನಾಟಕದಿಂದ ಮತ್ತು ಕರ್ನಾಟಕಕ್ಕೆ ಕಾರ್ಮಿಕರ ವಲಸೆ ಕುರಿತು ಮೌಲ್ಯಮಾಪನ ಅಧ್ಯಯನ


ಪ್ರಧಾನ ಶೋಧಕರು

ಮೆ. ಕೌನ್ಸಿಲ್ ಫಾರ್ ಸೋಶಿಯಲ್ ಡವಲಪ್‌ಮೆಂಟ್


ಕಾರ್ಮಿಕ ಇಲಾಖೆ
ಕರ್ನಾಟಕ ಸರ್ಕಾರ


ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evalution Authority

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ**
**ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ**
**ಕರ್ನಾಟಕ ಸರ್ಕಾರ**

**2017**

**©ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, 2017**

**ಪ್ರಕಟಣೆ**

**ಇವರಿಗಾಗಿ:**
**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ**
**#542, 5ನೇ ಮಹಡಿ, 2ನೇ ಹಂತ,**
**ಬಹುಮಹಡಿ ಕಟ್ಟಡ,**
**ಡಾ. ಬಿ. ಆರ್.ಅಂಬೇಡ್ಕರ್ ವೀಧಿ,**
**ಬೆಂಗಳೂರು–500 001.**

**ಇವರಿಂದ:**
**ಮೆಸರ್ಸ್ ಸಾಮಾಜಿಕ ಅಭಿವೃದ್ಧಿಗಾಗಿ ಸಮಿತಿ**
**ಸಂಘ ರಚ್ನಾ, 53 ಲೋದಿ ಎಸ್ಟೇಟ್**
**ನವ ದೆಹಲಿ–110003**

**ಅಕ್ಷರ ಜೋಡಣೆ ಮತ್ತು ಮುದ್ರಣ ಇವರಿಂದ**

ಭಾರತ ಸರ್ಕಾರ

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು,**

**ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ**

**ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ**

ರೂಪಿಸುವುದಕ್ಕಾಗಿ;

ಭಾರತದ ಎಲ್ಲಾ ಪ್ರಜೆಗಳಿಗೆ

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯವನ್ನು**;

ವಿಚಾರ, ಅಭಿವ್ಯಕ್ತ, ನಂಬಿಕೆ, ಧರ್ಮ ಮತ್ತು

ಉಪಾಸನೆಯ **ಸ್ವಾತಂತ್ರ್ಯವನ್ನು**;

ಸ್ಥಾನಮಾನ ಮತ್ತು ಅವಕಾಶಗಳ **ಸಮತೆಯನ್ನು**

ದೊರೆಯುವಂತೆ ಮಾಡುವುದಕ್ಕಾಗಿ;

ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ

**ಭ್ರಾತೃತ್ವ ಭಾವನೆಯನ್ನು** ಮೂಡಿಸುವುದಕ್ಕೆ

ದೃಢಸಂಕಲ್ಪ ಮಾಡಿ,

ನಮ್ಮ ಸಂವಿಧಾನ ಸಭೆಯಲ್ಲಿ

1949ನೇಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು

**ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,**

**ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ**

# ಮುನ್ನುಡಿ

'ಕರ್ನಾಟಕದಿಂದ ಮತ್ತು ಕರ್ನಾಟಕಕ್ಕೆ ಕಾರ್ಮಿಕರ ವಲಸೆ'ಯ ಅಧ್ಯಯನವು ಕರ್ನಾಟಕ ರಾಜ್ಯದೊಳಗೆ ಮತ್ತು ಕರ್ನಾಟಕ ರಾಜ್ಯದಾಚೆ ಕಾರ್ಮಿಕ ವಲಸೆಗೆ ಕಾರಣವಾಗುವ ವಿವಿಧ ತಳ್ಳುವ ಮತ್ತು ಸೆಳೆಯುವ ಅಂಶಗಳನ್ನು ಅರ್ಥೈಸುವ ಒಂದು ಪ್ರಯತ್ನವಾಗಿರುತ್ತದೆ. ಈ ಅಧ್ಯಯನವನ್ನು ಕೈಗೊಳ್ಳುವಂತೆ ಪ್ರಸ್ತಾವನೆಯನ್ನು ಕಾರ್ಮಿಕ ಇಲಾಖೆಯು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಕೋರಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಈ ಅಧ್ಯಯನವನ್ನು ಕೈಗೊಳ್ಳುವಂತೆ ಮೌಲ್ಯಮಾಪನ ಸಮಾಲೋಚಕ ಸಂಸ್ಥೆಯಾದ ನವ ದೆಹಲಿಯ ಕೌನ್ಸಿಲ್ ಫಾರ್ ಸೋಶಿಯಲ್ ಡೆವಲಪ್‌ಮೆಂಟ್ ಇವರಿಗೆ ಹೊರಗುತ್ತಿಗೆಗೆ ನೀಡಿರುತ್ತದೆ. ಈ ಅಧ್ಯಯನವು ಯಾದಗಿರಿ ಮತ್ತು ಕೊಪ್ಪಳದಿಂದ ಜಿಲ್ಲಾಂತರ್ಗತ ವಲಸಿಗರು ಹಾಗೂ ಅಂತರ್ ಜಿಲ್ಲಾ ವಲಸಿಗರು ಬೆಂಗಳೂರು ಮತ್ತು ಮೈಸೂರಿಗೆ ಹಾಗೂ ಕರ್ನಾಟಕ ರಾಜ್ಯದಿಂದ ಗೋವಾ ಮತ್ತು ಶೋಲಾಪುರ (ಮಹಾರಾಷ್ಟ್ರ)ಕ್ಕೆ ಅಂತರ್‌ರಾಜ್ಯ ವಲಸಿಗರ ಅಧ್ಯಯನವನ್ನು ವಿಶ್ಲೇಷಿಸುತ್ತದೆ. ಈ ಅಧ್ಯಯನಕ್ಕಾಗಿ ಈ ಗುಂಪುಗಳಿಂದ ಮಾದರಿಯಾಗಿ 518 ವಲಸಿಗ ಕಾರ್ಮಿಕರನ್ನು ತೆಗೆದುಕೊಳ್ಳಲಾಗಿದೆ. ಸ್ಥಳೀಯ ಪ್ರದೇಶದಲ್ಲಿ ಕೆಲಸದ ಲಭ್ಯತೆಯ ಕೊರತೆಯು ವಲಸೆಗೆ ಮುಖ್ಯ ಕಾರಣವಾಗಿರುತ್ತದೆ ಎಂದು ಅಧ್ಯಯನದ ಶೋಧನೆಗಳು ತಿಳಿಸಿರುತ್ತದೆ ಮತ್ತು ಬಡವರಲ್ಲಿ ಹಾಗೂ ಅತ್ಯಂತ ಬಡವರಲ್ಲಿ ಅದು ಹೆಚ್ಚು ಪ್ರಚಲಿತವಾಗಿರುತ್ತದೆ.

ಈ ಅಧ್ಯಯನವು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕರ್ನಾಟಕ ಸರ್ಕಾರ ಇವರಿಂದ ನಿರಂತರವಾದ ಬೆಂಬಲ ಹಾಗೂ ಮಾರ್ಗದರ್ಶನವನ್ನು ಪಡೆದಿರುತ್ತದೆ. ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸಹಾ ಅಗತ್ಯ ಮಾಹಿತಿಗಳನ್ನು ಒದಗಿಸುವ ಮೂಲಕ ಅವರ ಬೆಂಬಲ ಮತ್ತು ಸಹಕಾರವನ್ನು ನೀಡಿರುತ್ತಾರೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ತಾಂತ್ರಿಕ ಸಮಿತಿಯ ಸದಸ್ಯರು ಮತ್ತು ಓರ್ವ ಸ್ವತಂತ್ರ ಮೌಲ್ಯಮಾಪಕರ ಮೂಲಕ ಈ ವರದಿಯು ಪರಿಶೀಲಿಸಲ್ಪಟ್ಟಿದ್ದು ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲಾಗಿರುತ್ತದೆ. ಅವರ ಉಪಯುಕ್ತ ಒಳನೋಟಗಳು ಮತ್ತು ಸಲಹೆಗಳು ಈ ಕರಡು ವರದಿಯ ಗುಣಮಟ್ಟವನ್ನು ಹೆಚ್ಚಿಸಿರುತ್ತವೆ.

ವಲಸಿಗರ ನೈಜ ಅಗತ್ಯಗಳನ್ನು ಪೂರೈಸಲು ಮತ್ತು ರಾಜ್ಯದಲ್ಲಿನ ವಲಸೆಯ ಪ್ರಮಾಣವನ್ನು ತಗ್ಗಿಸಲು ಪರಿಣಾಮಕಾರಿ ಕಾರ್ಯತಂತ್ರಗಳನ್ನು ರೂಪಿಸುವಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ಶೋಧನೆಗಳು ಮತ್ತು ಶಿಫಾರಸ್ಸುಗಳು ಇಲಾಖೆಗೆ ಉಪಯುಕ್ತವಾಗಲಿವೆ ಎಂದು ನಾನು ನಿರೀಕ್ಷಿಸುತ್ತೇನೆ.

**ವನಶ್ರೀ ವಿಪಿನ್ ಸಿಂಗ್**

14ನೇ ನವೆಂಬರ್ 2018

ಮುಖ್ಯ ಮೌಲ್ಯಮಾಪನ ಅಧಿಕಾರಿ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

## ಕೃತಜ್ಞತೆಗಳು

ಅತ್ಯಂತ ಮಹತ್ವದ ಈ ಅಧ್ಯಯನವನ್ನು ಕೈಗೊಳ್ಳಲು ನಮಗೆ ಅವಕಾಶವನ್ನು ಮಾಡಿಕೊಟ್ಟ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ನಾವು ಬಹಳ ಕೃತಜ್ಞರಾಗಿದ್ದೇವೆ. ಶ್ರೀಯುತ ಶಿವರಾಜ್ ಸಿಂಗ್ (ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ) ಮತ್ತು ತಾಂತ್ರಿಕ ಸಮಿತಿಯ ಸದಸ್ಯರು ನೀಡಿದ ಅಮೂಲ್ಯ ಸಹಯೋಗ ಮತ್ತು ಸಹಕಾರಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಲಿಕ್ಕೆ ನಮಗೆ ಶಬ್ದಗಳು ಸಿಗುತ್ತಿಲ್ಲ. ಶ್ರೀಯುತ ಎಮ್.ರಂಗಣ್ಣ (ಸಮಾಲೋಚಕರು ಸಂಗ್ರಹಣೆ)ಇವರ ಸಹಕಾರಕ್ಕೆ ನಾವು ಆಭಾರಿಯಾಗಿದ್ದೇವೆ.

ಈ ಯೋಜನೆಯನ್ನು ಮುನ್ನಡೆಸುವಲ್ಲಿ ಮಹತ್ವದ ಪಾತ್ರವಹಿಸಿದ ಸಾಮಾಜಿಕ ಅಭಿವೃದ್ಧಿಗಾಗಿ ಸಮಿತಿಯ ಮಾಜಿ ನಿರ್ದೇಶಕರಾಗಿದ್ದ ದಿವಂಗತ ಅನಿತ ಕೌಲ್ ಅವರಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಯೋಜನೆಯ ಪರಿಕಲ್ಪನೆಯಿಂದ ಆರಂಭಿಸಿ, ಅಧ್ಯಯನದ ಸಾಧನವನ್ನು ರೂಪಿಸಲು ಮತ್ತು ಅಧ್ಯಯನವನ್ನು ನಡೆಸಲು ಈ ಯೋಜನೆಯುದ್ದಕ್ಕೂ ನಮಗೆ ಮಾರ್ಗದರ್ಶನ ನೀಡಿದಂತಹ, ಸಾಮಾಜಿಕ ಅಭಿವೃದ್ಧಿಗಾಗಿ ಸಮಿತಿಯ ಹಿರಿಯ ಸಹೋದ್ಯೋಗಿಗಳಿಗೆ, ಅದರಲ್ಲಿಯೂ ಮುಖ್ಯವಾಗಿ ಪ್ರೊ.ಮುಚಕುಂದ್ ದುಬೆ, ಪ್ರೊ.ಮನೊರಂಜನ್ ಮೊಹಾಂತಿ, ಪ್ರೊ.ಕೆ.ಬಿ. ಸಕ್ಸೇನ, ಪ್ರೊ.ಇಮ್ರನ ಖಾದೀರ್, ಪ್ರೊ.ಟಿ.ಹಕ್ ಮತ್ತು ಪ್ರೊ.ಅಶೋಕ್ ಪಂಕಜ್ ಇವರಿಗೆ ನಾವು ಬಹಳ ಆಭಾರಿಯಾಗಿದ್ದೇವೆ. ಅದರಲ್ಲೂ ವಿಶೇಷವಾಗಿ ಯಾದಗಿರಿ, ಕೊಪ್ಪಳ ಮತ್ತು ಶೋಲಾಪುರದಲ್ಲಿ ಕ್ಷೇತ್ರ ಕಾರ್ಯದಲ್ಲಿ ಸಂಶೋಧನೆಗೆ ಅನುಕೂಲ ಕಲ್ಪಿಸಲು ಸಾಕಷ್ಟು ಸಹಾಯ ನೀಡಿ, ಮಾರ್ಗದರ್ಶನ ನೀಡಿದಂತಹ ಸಾಮಾಜಿಕ ಅಭಿವೃದ್ಧಿಗಾಗಿ ಸಮಿತಿಯ ನಿರ್ದೇಶಕರಾಗಿರುವ ಪ್ರೊ. ಅಶೋಕ್ ಪಂಕಜ್ ಅವರಿಗೆ ನಾವು ಚಿರ ಋಣಿಗಳು.

ಕ್ರೈಸ್ಟ್ ಚರ್ಚ್ ವಿಶ್ವವಿದ್ಯಾಲಯದ ಶ್ರೀಮತಿ ಸುಪರ್ಣಾ ಮುಜುಂದಾರ್ ಕರ್ ಅವರಿಗೆ ಮತ್ತು ಅನ್ವೇಷಕರನ್ನು ಗುರುತಿಸುವಲ್ಲಿ ನಮಗೆ ಸಹಾಯ ಮಾಡಿದ ಗೋವಾ ವಿಶ್ವವಿದ್ಯಾಲಯದ ಪ್ರೊ.ರಾಹುಲ್ ತ್ರಿಪಾಠಿ ಮತ್ತು ಡಾ.ಶ್ರಂಗರೆ ಅಲಕನಂದಾ ಪಿ.ಅವರಿಗೆ ನಾವು ಆಭಾರಿಗಳು. ಕರ್ನಾಟಕ, ಗೋವಾ ಮತ್ತು ಶೋಲಾಪುರದಲ್ಲಿ ಅಧ್ಯಯನವನ್ನು ನಡೆಸಿದಂತಹ ವಿದ್ಯಾರ್ಥಿಗಳು ಮತ್ತು ಕಾರ್ಯಕರ್ತರಾದಂತಹ ಸಮೀರ, ಜಯಂತ, ಪ್ರಜ್ವಲ್, ಸಂತೋಷ, ಅಪೇಕ್ಷಾ, ಮಧು, ದೀಪಾ, ಇರವ, ಕ್ರಿಸ್ಟಾಫರ್, ಆನಂದ, ರಶ್ಮಿ, ಭಾರತಿ ಮತ್ತು ವಿನಯ್ ಈ ಎಲ್ಲ ಯುವ ಪರಿಣತರಿಗೆ ನಾವು ಬಹಳ ಕೃತಜ್ಞರಾಗಿದ್ದೇವೆ.

ನಮ್ಮ ಈ ಅಧ್ಯಯನದಲ್ಲಿ ತಮ್ಮ ಸಮಯವನ್ನು ಕೊಟ್ಟು ಭಾಗವಹಿಸಿದಂತಹ ವಲಸೆ ಬಂದ ಕಾರ್ಮಿಕರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಋಣಿಗಳಾಗಿದ್ದೇವೆ. ಅವರ ಸಹಕಾರವಿಲ್ಲದಿದ್ದಲ್ಲಿ ಈ ಅಧ್ಯಯನವನ್ನು ಮುಗಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಅಧ್ಯಯನದಲ್ಲಿ ಭಾಗವಹಿಸಿದಂತಹ ವಲಸೆ ಬಂದ ಕಾರ್ಮಿಕರಿಗೆ ಈ ವರದಿಯನ್ನು ಸಮರ್ಪಿಸುತ್ತಿದ್ದೇವೆ.

ಮಾರ್ಚ್ 26, 2017 ಅನಾಮಿಕಾ ಪ್ರಿಯದರ್ಶಿನಿ

ನವದೆಹಲಿ (ಯೋಜನಾ ನಿರ್ದೇಶಕಿ)

# ಪರಿವಿಡಿ


| ವಿಷಯ | ಪುಟ ಸಂಖ್ಯೆ |
|---|---|
| ಮುನ್ನುಡಿ | |
| ಕೃತಜ್ಞತೆಗಳು | |
| ಕಾರ್ಯಕಾರಿ ಸಾರಾಂಶ | |
| ಅಧ್ಯಾಯ ಒಂದು–ಪೀಠಿಕೆ | |
| ಅಧ್ಯಾಯ ಎರಡು–ಶೋಧನಾ ವಿಧಾನಶಾಸ್ತ್ರ | |
| ಅಧ್ಯಾಯ ಮೂರು–ಸಾಹಿತ್ಯಾವಲೋಕನ | |
| ಅಧ್ಯಾಯ ನಾಲ್ಕು–ಕರ್ನಾಟಕದಲ್ಲಿ ವಲಸೆ: ಪರಿಸ್ಥಿತಿ, ಸ್ವರೂಪ ಮತ್ತು ಪ್ರೇಷಣ | |
| ಅಧ್ಯಾಯ ಐದು–ಕರ್ನಾಟಕದಲ್ಲಿ "ತಳ್ಳುವ" ಮತ್ತು "ಸೆಳೆ"ಯುವ ಅಂಶಗಳು | |
| ಅಧ್ಯಾಯ ಆರು–ವಲಸಿಗ ಕಾರ್ಮಿಕರ ಪರಿಸ್ಥಿತಿ ಮತ್ತು ಹಕ್ಕುಗಳು | |
| ಅಧ್ಯಾಯ ಏಳು–ಹೆಂಗಸರು ಮತ್ತು ಮಕ್ಕಳ ಪರಿಸ್ಥಿತಿ | |
| ಅಧ್ಯಾಯ ಎಂಟು–ಸಲಹೆಗಳು | |
| ಉಲ್ಲೇಖಗಳು | |
| ಅನುಬಂಧ 1–ಪ್ರಶ್ನಾವಳಿ | |
| ಅನುಬಂಧ 2–(ಅನುವಾದಕರದ್ದು) ಪದಕೋಶ | |

# ಕಾರ್ಯಕಾರಿ ಸಾರಾಂಶ

## ಅಧ್ಯಯನ

"ಕರ್ನಾಟಕದಿಂದ ಮತ್ತು ಕರ್ನಾಟಕಕ್ಕೆ ಕಾರ್ಮಿಕರ ವಲಸೆಯ ಅಧ್ಯಯನ"ದ ಮೂಲಕ, ನಮಗೆ ಲಭ್ಯವಿರುವ ದತ್ತಾಂಶ ಮತ್ತು ಸಾಹಿತ್ಯವನ್ನು ವಿಶ್ಲೇಷಿಸಿ ಹಾಗೂ ಕರ್ನಾಟಕ, ಗೋವಾ ಮತ್ತು ಶೋಲಾಪುರದ 518 ವಲಸಿಗರೊಂದಿಗೆ ಅಧ್ಯಯನ ನಡೆಸಿ ಕರ್ನಾಟಕದಲ್ಲಿ ತಳ್ಳುವ ಮತ್ತು ಸೆಳೆಯುವ ವಿಚಾರಗಳ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಅರ್ಥ ಮಾಡಿಕೊಳ್ಳುವ ಉದ್ದೇಶವಿದೆ. ಯಾದಗಿರಿ ಮತ್ತು ಕೊಪ್ಪಳದ ಜಿಲ್ಲಾಂತರ್ಗತ ವಲಸಿಗರು; ಬೆಂಗಳೂರು ಮತ್ತು ಮೈಸೂರಿನಲ್ಲಿ ಇರುವ ಯಾದಗಿರಿ ಮತ್ತು ಕೊಪ್ಪಳದ ಅಂತರ್ ಜಿಲ್ಲಾ ವಲಸಿಗರು; ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್ ರಾಜ್ಯ ವಲಸಿಗರು; ಗೋವಾ ಮತ್ತು ಶೋಲಾಪುರದಲ್ಲಿನ ಕರ್ನಾಟಕದ ಅಂತರ್ ರಾಜ್ಯ ವಲಸಿಗರನ್ನು ಆಧರಿಸಿ ಈ ಅಧ್ಯಯನವನ್ನು ನಡೆಸಲಾಗಿದೆ.

ಈಗಿರುವ ಕಾರ್ಯಯೋಜನೆಯು, ಕಾರ್ಮಿಕರ ಚಲನೆಯನ್ನು ರೂಪಿಸುವಲ್ಲಿ ತಳ್ಳುವ ಮತ್ತು ಸೆಳೆಯುವ ಹಲವಾರು ಅಂಶಗಳನ್ನು ದಾಖಲಿಸುವುದಾಗಿದೆ ಮತ್ತು ಅದಕ್ಕಿಂತ ಮುಖ್ಯವಾಗಿ ಕರ್ನಾಟಕದಲ್ಲಿ ವಲಸಿಗ ಕಾರ್ಮಿಕರ ಜೀವನ ಮತ್ತು ಕರ್ನಾಟಕದಿಂದ ಹೊರಗೆ ವಲಸೆ ಹೋಗುವ ಕರ್ನಾಟಕದ ಕಾರ್ಮಿಕರ ಜೀವನ ದಾಖಲಿಸುವುದೂ ಆಗಿದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದೊಡನೆ ಸಹಿ ಹಾಕಿದ ನಂತರ ಸಾಮಾಜಿಕ ಅಭಿವೃದ್ಧಿಯ ಸಮಿತಿಗೆ ಈ ಅಧ್ಯಯನವನ್ನು ಒಪ್ಪಿಸಲಾಗಿದೆ.

### ಉದ್ದೇಶಗಳು

ಈ ಕೆಳಗಿನ ವಿಚಾರಗಳನ್ನು ಪರಿಶೀಲಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶಗಳು:

- ವ್ಯಕ್ತಿ ಅಥವಾ ಕುಟುಂಬಗಳು ವಲಸೆ ಹೋಗಲು ಪ್ರೇರೇಪಿಸುವ/ಅನಿವಾರ್ಯವಾಗಿಸುವ ಅಂಶಗಳು
- ವಲಸಿಗ ಕಾರ್ಮಿಕರ ಮತ್ತು ಅವರ ಕುಟುಂಬಗಳ ಸಾಮಾಜಿಕ ಮತ್ತು ಅರ್ಥಿಕ ಚಿತ್ರಣ
- ಒಂದು ಸ್ಥಳದಲ್ಲಿರುವ ಕಾರ್ಮಿಕರ ಒಟ್ಟು ಸಂಖ್ಯೆಯನ್ನು ಗಮನಿಸಿದರೆ ವಲಸೆ ಹೊಗುವ ಕಾರ್ಮಿಕರ ಪ್ರಮಾಣ
- ವಲಸಿಗರ ಅನುಪಾತ, ಅಂದರೆ:

– ಒಬ್ಬರೇ ವಲಸೆ ಹೋಗುವುದು

– ಕುಟುಂಬದೊಂದಿಗೆ ವಲಸೆ ಹೋಗುವುದು

– ಕುಟುಂಬದ ವಯಸ್ಕ ಸದಸ್ಯರೊಂದಿಗೆ ಮಾತ್ರ ವಲಸೆ ಹೋಗುವುದು

- ಮೂರು ವಿಧದ ವಲಸಿಗ ಕಾರ್ಮಿಕರ ಸಾಮಾನ್ಯ ಚಲನೆಯ ವಾರ್ಷಿಕ ಕಾಲಸೂಚಿ
- ಉತ್ತಮ ಆದಾಯ, ವಸತಿ, ಆಹಾರ, ಆರೋಗ್ಯ ರಕ್ಷಣೆಗಿರುವ ಅವಕಾಶ, ಶಿಕ್ಷಣ ಮೊದಲಾದ ಸೌಲಭ್ಯಗಳ ತುಲನಾತ್ಮಕ ವಿಶ್ಲೇಷಣೆ
- ಕುಟುಂಬದೊಂದಿಗೆ ವಲಸೆಬಂದ ಮತ್ತು ಕುಟುಂಬವನ್ನು ಹಿಂದೆ ಬಿಟ್ಟು ಬಂದ ಕಾರ್ಮಿಕರ ಕುಟುಂಬದ ಹೆಂಗಸರು ಮತ್ತು ಮಕ್ಕಳ ಪರಿಸ್ಥಿತಿ
- ಕಾರ್ಮಿಕರು ಮತ್ತು ಅವರ ಕುಟುಂಬದ ಉಳಿತಾಯ ಮತ್ತು ಆದನ್ನು ಜಮಾ ಮಾಡುವ ಸ್ವರೂಪ
- *ವಲಸೆಯ ಮೇಲೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪರಿಣಾಮ
- ಅಂತರ್ ರಾಜ್ಯ ವಲಸಿಗ ಕೆಲಸಗಾರರ ಅಧಿನಿಯಮ 1979 ರ (ಉದ್ಯೋಗ ನಿಬಂಧನೆ ಮತ್ತು ನೌಕರಿಯ ಕರಾರುಗಳು) ಅನುಷ್ಠಾನದ ಪ್ರಕ್ರಿಯೆ ಮತ್ತು ಆ ಕಾನೂನಿನ ಕುರಿತು ವಲಸಿಗ ಕಾರ್ಮಿಕರಲ್ಲಿ, ಅವರ ಉದ್ಯೋಗದಾತ ಮತ್ತು ಅನುಷ್ಠಾನಗೊಳಿಸುವ ಸಂಸ್ಥೆಗಳಲ್ಲಿ ಅರಿವಿನ ಮಟ್ಟ
- * ವಲಸಿಗ ಕಾರ್ಮಿಕರ ತೊಂದರೆ ನಿವಾರಣೆ ವ್ಯವಸ್ಥೆಯ ಪ್ರಭಾವ ಮತ್ತು ಲಭ್ಯತೆ ಹಾಗೂ ಅದೇ ರೀತಿ (1979ರ ಅಧಿನಿಯಮದಂತೆ) ರಾಜ್ಯದ ಒಳಗಿನ ಕರ್ನಾಟಕದ ವಲಸಿಗ ಕಾರ್ಮಿಕರಿಗೆ ರಕ್ಷಣಾ ಕಾನೂನು

- ವಲಸಿಗ ಕಾರ್ಮಿಕರಿಗೆ ಉತ್ತಮ ಅವಕಾಶ ದೊರೆಯುವಂತಾಗಲು ಅವರ ಕೌಶಲ್ಯ ವೃದ್ಧಿಯಲ್ಲಿ ಸರಕಾರದ ಪಾತ್ರದ ಸಾಧ್ಯತೆ
- ಬೇರೆ ರಾಜ್ಯದಿಂದ ಕಾರ್ಮಿಕರು ಕರ್ನಾಟಕಕ್ಕೆ ಬಂದಾಗ, ಕರ್ನಾಟಕದಲ್ಲಿ ನೆಲೆಸಿರುವ ಕಾರ್ಮಿಕರ ಉದ್ಯೋಗಾವಕಾಶದ ಮೇಲೆ ಆಗುವ ಪರಿಣಾಮ ಮತ್ತು ರಾಜ್ಯದಲ್ಲಿ ಅಪರಾಧ ಮತ್ತು ಕಾನೂನು ಸುವ್ಯವಸ್ಥೆಯ ಮೇಲಾಗುವ ಪರಿಣಾಮ.

**ಮಾದರಿ**

ಈ ಕೆಳಗಿನ ವಲಸಿಗ ಕಾರ್ಮಿಕರ ಗುಂಪುಗಳ ಜೊತೆಗೆ ಅಧ್ಯಯನ ನಡೆಸಲಾಯಿತು

ಬೆಂಗಳೂರು ಮತ್ತು ಮೈಸೂರಿನಲ್ಲಿರುವ 218 ಅಂತರ್ ಜಿಲ್ಲಾ ವಲಸಿಗರು

– ಯಾದಗೀರ್ ಜಿಲ್ಲೆಯ ದೊರನಹಳ್ಳಿ (ಶೋಲಾಪುರ ತಾಲ್ಲೂಕು), ಯೆಡಿಯಾಪುರ (ಶೋಲಾಪುರ ತಾಲ್ಲೂಕು ತಾಲ್ಲೂಕು), ಅಶೋಕನಗರ (ಯಾದಗೀರ ತಾಲ್ಲೂಕು) ಮತ್ತು ಚಿಂತನಪಲ್ಲಿ (ಯಾದಗೀರ ತಾಲ್ಲೂಕು)

– ಮಾಯಿನಹಳ್ಳಿ (ಕೊಪ್ಪಳ ತಾಲ್ಲೂಕು), ಅಳವಂಡಿ (ಕೊಪ್ಪಳ ತಾಲ್ಲೂಕು), ಸಿದ್ದಾಪುರ (ಗಂಗಾವತಿ ತಾಲ್ಲೂಕು) ಮತ್ತು ವೆಂಕಟಾಪುರ (ಕುಶ್ಟಗಿ ತಾಲ್ಲೂಕು)

- ಬೆಂಗಳೂರು ಮತ್ತು ಮೈಸೂರಿನಲ್ಲಿರುವ 11 ರಾಜ್ಯಗಳಿಂದ ( ಪಶ್ಚಿಮ ಬಂಗಾಳ, ಬಿಹಾರ, ಉತ್ತರ ಪ್ರದೇಶ, ಜಾರ್ಖಂಡ್, ಓರಿಸ್ಸಾ, ಛತ್ತೀಸ್‌ಗಢ, ಮಧ್ಯಪ್ರದೇಶ, ಪಂಜಾಬ್, ತಮಿಳುನಾಡು, ಆಂಧ್ರಪ್ರದೇಶ ಮತ್ತು ಅಸ್ಸಾಂ) ಬಂದಿರುವ 143 ಅಂತರ್ ರಾಜ್ಯ ವಲಸಿಗರು.
- ಯಾದಗಿರಿ ಮತ್ತು ಕೊಪ್ಪಳದಲ್ಲಿರುವ 56 ಜಿಲ್ಲಾಂತರ್ಗತ ವಲಸಿಗರು
- ಗೋವಾದಲ್ಲಿರುವ 51 ಅಂತರ್ ರಾಜ್ಯ ವಲಸಿಗರು–

– ಉತ್ತರ ಕನ್ನಡ (ಕರ್ನಾಟಕ) ಜಿಲ್ಲೆಯ ಜೋಯ್ಡಾ ಗ್ರಾಮ ಮತ್ತು

– ಬೆಳಗಾವಿ ಜಿಲ್ಲೆಯ (ಕರ್ನಾಟಕ) ಕಾವೂರ್, ಮುಖ್ನಾರ್, ತಿಗಡಿ ಮತ್ತು ಪಾಥೀಹಾಳ್ ಗ್ರಾಮಗಳು

- ಶೋಲಾಪುರದಲ್ಲಿರುವ ಕರ್ನಾಟಕದ ವಿಜಯಪುರ, ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಯ 50 ಅಂತರ್ ರಾಜ್ಯ ವಲಸಿಗರು

**ವಿಧಾನ**

ಮೂರು ರಾಜ್ಯಗಳ ಆರು ಜಿಲ್ಲೆಗಳಲ್ಲಿ ಅಧ್ಯಯನವನ್ನು ನಡೆಸಲಾಯಿತು. ನಾವು ಸಮೀಕ್ಷೆ, ವಿಶದವಾದ ಸಂದರ್ಶನಗಳು ಮತ್ತು ಕೇಂದ್ರಿಕೃತ ಗುಂಪು ಚರ್ಚೆಗಳಂತಹ ಸಾಧನಗಳನ್ನೊಳಗೊಂಡ ಮಿಶ್ರ ರೀತಿ ಪದ್ಧತಿಯನ್ನು ಅನುಸರಿಸಿದೆವು. ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸಾಧನಗಳ ಸಂಯೋಜನೆಯು, ಅಧ್ಯಯನ ನಡೆಸಿರುವ ಆರು ಜಿಲ್ಲೆಗಳ ಅಂತರ್ ಜಿಲ್ಲೆ, ಜಿಲ್ಲೆಯ ಒಳಗಿನ ಮತ್ತು ಅಂತರ್ ರಾಜ್ಯದ ವಲಸಿಗರ ಸಂಕೀರ್ಣ ಸಾಮಾಜಿಕ–ಆರ್ಥಿಕ ಜಟಿಲ ವಾಸ್ತವವನ್ನು ಗ್ರಹಿಸಲು ನಮಗೆ ಸಹಾಯಮಾಡಿತು. ಮೊದಲು ಪ್ರಾಯೋಗಿಕ ಅಧ್ಯಯನವನ್ನು ನಡೆಸಲು ಅಧ್ಯಯನದ ಸಾಧನಗಳನ್ನು ಬಳಸಲಾಯಿತು. ಪ್ರಾಯೋಗಿಕ ಅಧ್ಯಯನವು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ ಒಪ್ಪಿಗೆ ಪಡೆದ ನಂತರ, ಅದೇ ಸಾಧನಗಳನ್ನು ಅಧ್ಯಯನಕ್ಕೆ ಬಳಸಲಾಯಿತು.

**ಮುಖ್ಯ ತೀರ್ಮಾನಗಳು**

I. ಕೆಲಸ ಸಿಗದಿರುವುದೇ ವಲಸೆಗೆ ಬಹಳ ಬಲವಾದ ಕಾರಣವಾಗಿದೆ ಎಂದು ಗುರುತಿಸಲಾಗಿದೆ. ಅಧ್ಯಯನ ನಡೆಸಿದ ಸ್ಥಳಗಳಲ್ಲಿ ಭಾಗವಹಿಸಿದಂತಹ ಶೇಕಡಾ 60ಕ್ಕಿಂತ ಹೆಚ್ಚಿನವರು ಉತ್ತಮ ವೇತನಕ್ಕಾಗಿ ಆಗಲೀ ಅಥವಾ ಉತ್ತಮ ಜೀವನ ಶೈಲಿಯನ್ನು ಹುಡುಕಿಕೊಂಡಾಗಲೀ ಬಂದಿಲ್ಲ, ಬದಲು ಕೆಲಸದ ಲಭ್ಯತೆ ಇಲ್ಲದಿರುವ ಕಾರಣಕ್ಕೆ ವಲಸೆ ಬಂದಿರುವುದಾಗಿ ತಿಳಿಸಿದರು.

II. ಈ ಅಧ್ಯಯನದಲ್ಲಿ ಭಾಗಿಯಾದವರಲ್ಲಿ ಶೇಕಡಾ 68ಕ್ಕಿಂತ ಹೆಚ್ಚಿನವರು ಜಮೀನು ಇಲ್ಲದ ಸಾಮಾಜಿಕವಾಗಿ ಅಂಚಿನಲ್ಲಿರುವ ಜಾತಿ (ಪ.ಜಾ, ಪ.ಪಂ, ಇ.ಹಿಂ.ವ.)ಯವರಾಗಿದ್ದಾರೆ, ಅದರಲ್ಲಿ ಹೆಚ್ಚಿನವರು ಜಮೀನಿಲ್ಲದ ಅಂಚಿನಲ್ಲಿರುವ ಜಾತಿಯವರು. ಪರಿಶಿಷ್ಟ ಜಾತಿಯವರಲ್ಲಿ ಕಾರ್ಮಿಕ ವಲಸೆ ಬಹಳ ಸಾಮಾನ್ಯ ಮತ್ತು ಸಾಮಾಜಿಕವಾಗಿ ಮುಂದುವರಿದ ಜಾತಿಗಳಲ್ಲಿ (ಇತರೇ/ಸಾಮಾನ್ಯ ವರ್ಗದ ಜಾತಿಗಳಲ್ಲಿ) ಇದು ಬಹಳ ಅಪರೂಪ.

III. ಮೂರೂ ವರ್ಗಗಳಲ್ಲಿರುವ (ಜಿಲ್ಲಾಂತರ್ಗತ, ಅಂತರ್ ಜಿಲ್ಲಾ ಮತ್ತು ಅಂತರ್ ರಾಜ್ಯ) ಶೇಕಡಾ 50ಕ್ಕಿಂತ ಹೆಚ್ಚಿನ ವಲಸಿಗರು ಪ್ರತಿ ತಿಂಗಳು ರೂ.6000ಕ್ಕಿಂತ ಕಡಿಮೆ ಗಳಿಸಿರುತ್ತಾರೆ. ಸಾಮಾನ್ಯವಾಗಿ ಕುಟುಂಬದ ಆದಾಯ ರೂ. 25,000ಕ್ಕಿಂತ ಹೆಚ್ಚು ಇರುವ ಕಾರ್ಮಿಕರು ವಲಸೆ ಹೋಗುವುದಿಲ್ಲವೆಂದು ಅಧ್ಯಯನವು ಸೂಚಿಸುತ್ತದೆ.

IV. ಈ ಅಧ್ಯಯನದಲ್ಲಿ ಭಾಗಿಯಾದ ಸುಮಾರು ಶೇಕಡಾ 74 ಮಹಿಳೆಯರು ಮತ್ತು ಶೇಕಡಾ 79 ಪುರುಷರು, ತಾವು ವಲಸೆ ಬಂದ ಕೆಲಸದ ಸ್ಥಳದಲ್ಲಿ ಲಿಂಗ ಆಧಾರಿತ ತಾರತಮ್ಯವನ್ನು ಎಂದಿಗೂ ನೋಡಿಲ್ಲ ಎನ್ನುತ್ತಾರೆ. ಸುಮಾರು ಶೇಕಡಾ 62 ಮಹಿಳಾ ವಲಸಿಗರು ಮತ್ತು ಶೇಕಡಾ 77 ಪುರುಷರು ತಮ್ಮ ಮೂಲ ಊರಿನಲ್ಲೂ ಕೆಲಸದ ಸ್ಥಳದಲ್ಲಿ ಯಾವುದೇ ರೀತಿಯ ತಾರತಮ್ಯ ಇಲ್ಲವೆಂಬ ನಂಬುಗೆಯನ್ನು ಹೊಂದಿದ್ದಾರೆ.

V. ಶೇಕಡಾ 64ಕ್ಕೂ ಹೆಚ್ಚಿನ ಮಹಿಳಾ ವಲಸಿಗರ ವಾರ್ಷಿಕ ಆದಾಯವು ರೂ.75000ಕ್ಕಿಂತಲೂ ಕಡಿಮೆ ಇದೆ. ಶೇಕಡಾ 61 ಪುರುಷ ವಲಸಿಗರ ವಾರ್ಷಿಕ ಆದಾಯ ರೂ.75000ಕ್ಕಿಂತ ಹೆಚ್ಚಿದೆ. ಈ ಧೋರಣೆಯು ಲಿಂಗ ಆಧಾರಿತ ವೇತನ ತಾರತಮ್ಯ ಇರುವುದನ್ನು ಸಹ ತೋರಿಸುತ್ತದೆ. ಸಾಮಾನ್ಯವಾಗಿ ಒಪ್ಪಿಕೊಂಡಂತಹ ಈ ದುರಾಚರಣೆಯನ್ನು ಭಾಗವಹಿಸಿದಂತಹ ಶೇಕಡಾ 73 ಮಹಿಳಾ ಮತ್ತು ಶೇಕಡಾ 84 ಪುರುಷ ಕಾರ್ಮಿಕರು ಗುರುತಿಸುತ್ತಾರೆ.

VI. ತಮ್ಮ ಮೂಲ ಜಿಲ್ಲೆಯಲ್ಲಿ ಹಾಗೂ ಬೆಂಗಳೂರು ಮತ್ತು ಮೈಸೂರಿನ ವಿವಿಧ ಜಿಲ್ಲೆಗಳಲ್ಲಿ ಕೆಲಸ ಮಾಡಿದಂತಹ ಯಾದಗಿರಿ ಮತ್ತು ಕೊಪ್ಪಳದಿಂದ ಭಾಗವಹಿಸಿದ ಶೇಕಡಾ 90ಕ್ಕಿಂತ ಹೆಚ್ಚಿನವರು, ತಾವು ವಲಸೆ ಬಂದ ಊರಿಗಿಂತ ತಮ್ಮ ಮೂಲ ಊರುಗಳಲ್ಲಿ ಬದುಕಿನ ಪರಿಸ್ಥಿತಿ ಉತ್ತಮವಾಗಿತ್ತೆಂದು ಭಾವಿಸುತ್ತಾರೆ.

VII. ಕೈಗೆಟಕುವಂತಹ ಮತ್ತು ಪಡೆಯಬಹುದಾದ ಮಕ್ಕಳ ಶಿಕ್ಷಣ ಮತ್ತು ಆರೋಗ್ಯದ ಸೌಲಭ್ಯಗಳು ಕರ್ನಾಟಕದಲ್ಲಿ ಉತ್ತಮ ಗುಣಮಟ್ಟದಲ್ಲಿವೆ ಎಂದು ಭಾಗವಹಿಸಿದವರಲ್ಲಿ ಹೆಚ್ಚಿನವರು ಅಭಿಪ್ರಾಯಪಟ್ಟರು. ಭಾಗವಹಿಸಿದ ಕರ್ನಾಟಕದವರು, ತಮ್ಮ ಹುಟ್ಟೂರಿನ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು ಬಹಳ ಮೆಚ್ಚಿಕೊಂಡರು.

VIII. ಕಾರ್ಮಿಕರಲ್ಲಿ ವಲಸೆಯು ಅದರಲ್ಲೂ ಕರ್ನಾಟಕದಲ್ಲಿ, ಪ್ರಯಾಣಕ್ಕೆ ಖರ್ಚುಮಾಡುವ ಆರ್ಥಿಕ ಸಾಮರ್ಥ್ಯವನ್ನು ಹಾಗೂ ಕೆಲಸ ದೊರೆಯುವವರೆಗೆ ಮನೆ ಹಾಗೂ ಕುಟುಂಬದ ಸಂಪರ್ಕದಿಂದ ದೂರವಾಗಿ ಬದುಕುವುದನ್ನು ಅವಲಂಬಿಸಿದೆ. ಅಂತರ್ ರಾಜ್ಯ ಮತ್ತು ಅಂತರ್ ಜಿಲ್ಲೆ ವಲಸೆಯು ಕರ್ನಾಟಕದ ಕಡು ಬಡ ಕುಟುಂಬದಲ್ಲಿ ಸಾಮಾನ್ಯವಲ್ಲ.

IX. ಅಂತರ್ ರಾಜ್ಯ ವಲಸಿಗರು ಕರ್ನಾಟಕಕ್ಕೆ ಬರಲು ಜಾತಿ ಮತ್ತು ಲಿಂಗ ಆಧಾರಿತ ಹಿಂಸಾಚಾರವು ತಳ್ಳುವ ಅಂಶವಾಗಿ ಗುರುತಿಸಲ್ಪಟ್ಟಿದೆ. ಬೇಗೂರಿನ (ಬೆಂಗಳೂರು) ಸ್ಥಳೀಯರಿಂದ ಹಿಂಸಾಚಾರವನ್ನು ಅನುಭವಿಸಿದರೂ ಕೆಲವು ಪರಿಶಿಷ್ಟ ಜಾತಿಯ ವಲಸಿಗರು, ತಮ್ಮ ಮೂಲ ಊರಿನಲ್ಲಿ ಪದೇ ಪದೇ ಹಿಂಸಾಚಾರಕ್ಕೆ ಒಳಪಡುತ್ತಿದ್ದುದರಿಂದ ಅದು ತಮಗೆ ಅಷ್ಟೇನೂ ಬಾಧಿಸಲಿಲ್ಲ ಎಂದು ಅಭಿಪ್ರಾಯ ಹಂಚಿಕೊಂಡರು. ಉಡುಪಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಒರಿಯಾದ ಮಹಿಳೆಯೊಬ್ಬಳು ಕೂಡ, ತನ್ನ ಗಂಡನ ಮನೆಯಲ್ಲಿ ಪದೇ ಪದೇ ಶಾರೀರಿಕ ಹಿಂಸೆಗೆ ಗುರಿಯಾಗುತ್ತಿದ್ದುದರಿಂದ, ಕಾರ್ಖಾನೆಯಲ್ಲಿನ ಮಾತಿನ ನಿಂದನೆಯಿಂದ ತಾನು ವಿಚಲಿತಳಾಗಲಿಲ್ಲವೆಂದು ಅಭಿಪ್ರಾಯ ಹಂಚಿಕೊಂಡಳು.

X. ಶೋಲಾಪುರದಲ್ಲಿ ಕಾರ್ಖಾನೆಗಳ ಪ್ರಾಧಾನ್ಯತೆ ಮತ್ತು ಜೀವನೋಪಾಯದ ಅವಕಾಶಗಳು ಕಡಿಮೆಯಾದುದರಿಂದ, ಅದು ಜೋಯ್ಡಾ (ಉತ್ತರ ಕನ್ನಡ) ಮತ್ತು ಬೆಳಗಾವಿಯಿಂದ ಬಂದವರನ್ನು ಒಳಗೊಂಡಂತೆ, ಕರ್ನಾಟಕದಿಂದ ಜನ ವಲಸೆ ಹೋಗಲು ಆರಿಸಿಕೊಳ್ಳುವ ಗಮ್ಯಸ್ಥಳವಾಗಿ ಉಳಿದಿಲ್ಲ.

XI. ಕಾರ್ಖಾನೆಗಳ ಪ್ರಾಧಾನ್ಯತೆ ಕಡಿಮೆಯಾದರೂ, ಶೋಲಾಪುರದಲ್ಲಿರುವ ಭಾಗವಹಿಸಿದ ವಲಸಿಗ ಕೆಲಸಗಾರರ ಜೀವನ ಮತ್ತು ಕೆಲಸದ ವಾತಾವರಣ, ಹೋಲಿಸಿ ನೋಡಿದರೆ ಉತ್ತಮ ಸ್ಥಿತಿಯಲ್ಲಿದೆ. ಸರಕಾರ ತೆಗೆದುಕೊಂಡ ಕ್ರಮಗಳಿಂದಾಗಿ, ಶೋಲಾಪುರದಲ್ಲಿ ನೆಲೆಸಿರುವಂತಹ ಭಾಗವಹಿಸಿರುವ ಹಲವಾರು ವಲಸಿಗ ಕೆಲಸಗಾರರು ಸಕ್ರಮ ಬಡಾವಣೆಗಳಲ್ಲಿ ಸ್ವಂತ ಮನೆಯನ್ನು ಹೊಂದಿದ್ದಾರೆ. ಅವರಿಗೆ ನಿಯತವಾಗಿ ವಿದ್ಯುತ್, ಶೌಚಾಲಯ, ನೀರಿನ ಪೂರೈಕೆ ಮತ್ತು ಕಲ್ಯಾಣ ಯೋಜನೆಗಳು ದೊರಕಿ, ಅವರ ಜೀವನ ಸುಗಮವಾಯಿತು ಮತ್ತು ಕೆಲ ಮಟ್ಟಿಗೆ ಆರೋಗ್ಯಕರವಾಗಿದ್ದೂ ಹೌದು.

**ಇತಿಮಿತಿಗಳು**

- ಪೂರ್ವ ನಿರ್ಧರಿತ ಮಾದರಿಗಳೇ ಈ ಅಧ್ಯಯನದ ಅತ್ಯಂತ ಗಂಭೀರವಾದ ನಿರ್ಬಂಧವಾಗಿವೆ. ಆರರಲ್ಲಿ ಮೂರು ಜಿಲ್ಲೆಗಳಿಗೆ ಸೂಕ್ತ ಮಾದರಿಗಳನ್ನು ಹುಡುಕುವುದು ಅಸಾಧ್ಯವಾಗಿತ್ತು.
- ಹೆಚ್ಚಿನ ವಲಸಿಗ ಕೆಲಸಗಾರರು ನೋಂದಾಯಿಸಿಕೊಂಡಿಲ್ಲ. ಇಂತಹ ಸಂದರ್ಭದಲ್ಲಿ ಯಾವುದೇ ಆಡಳಿತಾತ್ಮಕ ವಿಭಾಗದಿಂದ ವಲಸಿಗರ ಸರಿಯಾದ ಸಂಖ್ಯೆಯನ್ನು ಕಂಡುಹಿಡಿಯುವುದು ದೊಡ್ಡ ಸವಾಲೇ ಸರಿ.
- 2011ರ ಜನಗಣತಿಯಲ್ಲಿ ಜಿಲ್ಲಾ ಮಟ್ಟದ ವಲಸೆಯ ಅಂಕಿ ಅಂಶಗಳನ್ನು ಇನ್ನೂ ಪ್ರಕಟಿಸಿಲ್ಲ ಮತ್ತು ಜಿಲ್ಲಾವಾರು ವಲಸೆಯ ಅಂಕಿಅಂಶಗಳನ್ನು ಕಂಡುಹಿಡಿಯುವುದೂ ಅಸಾಧ್ಯ. ಜಿಲ್ಲೆಯ ಜನಗಣತಿಯ ಕೈಪಿಡಿಯಲ್ಲಿ ಕಾರ್ಖಾನೆಯ ಉದ್ಯೋಗಿಗಳ, ಪ್ರಧಾನ ಹಾಗೂ ಮಹತ್ವವಲ್ಲದ ಕೆಲಸಗಾರರ ಅಂಕಿಅಂಶಗಳಿರುತ್ತವೆಯೇ ಹೊರತು, ವಲಸೆಯ ಕುರಿತಲ್ಲ. ಜಿಲ್ಲಾ ಕಾರ್ಮಿಕ ಕಛೇರಿಯಲ್ಲಿಯೂ ವಲಸೆಯ ಕುರಿತಾದ ಅಂಕಿಅಂಶಗಳು ಸಿಗುವುದಿಲ್ಲ. ಆದುದರಿಂದ, ಯಾವುದೇ ಒಂದು ಸ್ಥಳದಲ್ಲಿರುವ ಒಟ್ಟು ಕಾರ್ಮಿಕರ ಸಂಖ್ಯೆ ಕಂಡುಹಿಡಿಯುವಂತೆ ಕಾರ್ಮಿಕರ ವಲಸೆಯ ಕುರಿತಾದ ನಿರ್ದಿಷ್ಟ ಅಂಕಿಅಂಶಗಳನ್ನು ಕಂಡುಹಿಡಿಯುವುದು ಸಾಧ್ಯವಾಗುವುದಿಲ್ಲ.

**ಅಲ್ಪಾವಧಿ ಶಿಫಾರಸ್ಸುಗಳು**

- ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಮತ್ತು ಜೀವನ ನಿರ್ವಹಣೆಗಾಗಿ ಸ್ಥಳೀಯ ಮಟ್ಟದಲ್ಲಿ ಕೆಲಸವನ್ನು ಸೃಷ್ಟಿಸುವುದು.
- ರೈತರಿಗೆ ಬೀಜ, ರಸಗೊಬ್ಬರ ಮೊದಲಾದವು ಸರಿಯಾಗಿ ದೊರಕುವಂತೆ ಹಾಗೂ ಕಡಿಮೆ ಬಡ್ಡಿದರದಲ್ಲಿ ಸಾಲ ದೊರೆಯುವಂತೆ ನೋಡಿಕೊಳ್ಳುವುದು.
- ಸಣ್ಣ ಉದ್ದಿಮೆದಾರರು ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ ಸುಲಭವಾಗಿ ಸಾಲ ದೊರೆಯುವುದನ್ನು ಖಚಿತಪಡಿಸಿಕೊಳ್ಳುವುದು.
- ಅಧ್ಯಯನ ನಡೆಸಿದ ಎಲ್ಲ ಸ್ಥಳಗಳ ವಲಸಿಗ ಕೆಲಸಗಾರರಿಂದ ದಲ್ಲಾಳಿಯಾಗಿ ಹಣ ಪಡೆಯುವ ನೋಂದಣಿ ಮಾಡಿಕೊಳ್ಳದ ಗುತ್ತಿಗೆದಾರರ ಏಕಸ್ವಾಮ್ಯತೆಯನ್ನು ತಡೆಗಟ್ಟಲು ಕಠಿಣ ಕಾನೂನು/ಕಾರ್ಯನೀತಿ
- ತೊಂದರೆಯ ನಿವಾರಣೆಗೆ ವ್ಯವಸ್ಥೆಯ ಪರಿಣಾಮಕಾರಿ ಅನುಷ್ಠಾನ
- ಮಹಿಳಾ ಕೆಲಸಗಾರರ ಹಕ್ಕುಗಳು ಮತ್ತು ಕೆಲಸದ ಸ್ಥಳದಲ್ಲಿ ಅವರಿಗೆ ಸುರಕ್ಷತೆಯನ್ನು ಕಲ್ಪಿಸುವಂತೆ ಸಂಸ್ಥೆ ಮತ್ತು ವಿಭಾಗಗಳನ್ನು ಗಟ್ಟಿಗೊಳಿಸುವುದು.
- ಕೆಲಸಗಾರರಿಗೆ ಅವರ ಹಕ್ಕುಗಳ ಬಗ್ಗೆ ತಿಳಿಸಲು ಕಾಲಕಾಲಕ್ಕೆ ತರಬೇತಿ, ಕಾರ್ಯಾಗಾರ ನಡೆಸುವ ಅವಕಾಶ ಒದಗಿಸುವುದು.
- ಲಿಂಗ ಸಂವೇದನಾ ಶೀಲತೆಯ ಕುರಿತು ಜಾಗರೂಕರಾಗುವಂತೆ ಕಾರ್ಯಾಗಾರ ರೂಪಿಸಲು ಅವಕಾಶ ಕಲ್ಪಿಸುವುದು.

**ದೀರ್ಘಕಾಲೀನ ಶಿಫಾರಸ್ಸುಗಳು**

- ಸ್ಥಳೀಯ ಮಟ್ಟದಲ್ಲಿ ಉದ್ಯೋಗಾವಕಾಶ ಕಲ್ಪಿಸಲು ಸಾಕಷ್ಟು ಕ್ರಮ ಕೈಗೊಳ್ಳುವುದು.

- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನು ಕುರಿತು ಜಾಗೃತಿ ಹೆಚ್ಚಿಸುವುದು.
- ಸ್ಥಳೀಯ ಮಟ್ಟದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯ ಜೊತೆಗೆ ಉಳಿದ ಅಭಿವೃದ್ಧಿ ಕಾರ್ಯಕ್ರಮ/ಯೋಜನೆಗಳನ್ನು ಸೇರಿಸುವುದು.
- ಉತ್ತಮ ಗುಣಮಟ್ಟದ ಆರೋಗ್ಯ ಸೇವೆಗಳು ಮತ್ತು ಮಕ್ಕಳ ವಿದ್ಯಾಭ್ಯಾಸ ಖಚಿತಪಡಿಸುವುದು (ಹೆಚ್ಚಾಗಿ ಬೇರೆ ರಾಜ್ಯಗಳಲ್ಲಿ, ಏಕೆಂದರೆ ಕರ್ನಾಟಕದ ಹೆಚ್ಚಿನ ವಲಸಿಗ ಕೆಲಸಗಾರರು ತಮ್ಮ ಮೂಲ ಸ್ಥಳದ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಗುಣಮಟ್ಟ ಮತ್ತು ಅದನ್ನು ಸುಲಭವಾಗಿ ಪಡೆಯುವುದನ್ನು ಮೆಚ್ಚುತ್ತಾರೆ).
- ಆದಾಯ ಕೊಡುವಂತಹ ಆರೋಗ್ಯ, ಶಿಕ್ಷಣ, ಕಲ್ಯಾಣ ಕಾರ್ಯಕ್ರಮಗಳ ಯೋಜನೆಗಳ ಪರಿಣಾಮಕಾರಿಯಾದ ಅನುಷ್ಠಾನ.
- ಬಾಲ ಕಾರ್ಮಿಕರನ್ನು ತಡೆಯಲು ಕಠಿಣ ಕಾರ್ಯನೀತಿ.
- ವೇತನದಲ್ಲಿ ಲಿಂಗಬೇಧವನ್ನು ತಡೆಗಟ್ಟುವ ಕಠಿಣ ಕಾರ್ಯನೀತಿ.
- ವಲಸೆ ಬಂದ ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳನ್ನು ರಕ್ಷಿಸುವಂತಹ ಕಠಿಣ ಕಾರ್ಯನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.
- ಲೈಂಗಿಕ ದೌರ್ಜನ್ಯ ವಿರೋಧಿ ಸಮಿತಿಯ ಯಶಸ್ವೀ ಪಾತ್ರ.

**ಕಾರ್ಯನೀತಿಯಲ್ಲಿ ಬದಲಾವಣೆಗಳು**

- ವಲಸಿಗ ಕೆಲಸಗಾರರನ್ನು ನೋಂದಾಯಿಸಿ ಅವರಿಗೆ ಗುರುತಿನ ಚೀಟಿಗಳನ್ನು ನೀಡುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಈ ಗುರುತಿನ ಚೀಟಿಯ ಮೂಲಕ ಅವರಿಗೆ ಈ ಕೆಳಗಿನವುಗಳ ಸೌಲಭ್ಯ ದೊರಕುವುದನ್ನು ಖಾತ್ರಿ ಪಡಿಸಬೇಕು.
- ವಲಸೆ ಬಂದ ಸ್ಥಳದ ಪಡಿತರ ವಿತರಣಾ ವ್ಯವಸ್ಥೆಯ ಅಂಗಡಿ.
- ಸಾರ್ವಜನಿಕ ಆರೋಗ್ಯ ರಕ್ಷಣಾ ಸಂಸ್ಥೆಗಳು.
- ಸರಕಾರಿ ಶಾಲೆಗಳು.
- ಮೂಲಭೂತ ಸೇವೆಗಳಾದ ಆರೋಗ್ಯ, ನೈರ್ಮಲ್ಯ ಮೊದಲಾದವುಗಳು ಸುಲಭವಾಗಿ ದೊರಕುವಂತೆ ಕಾರ್ಯನೀತಿ ರೂಪಿಸುವುದು.
- ವಲಸಿಗ ಕೆಲಸಗಾರರ ಹಕ್ಕುಗಳನ್ನು ಉಲ್ಲಂಘನೆ, ವಲಸೆ ಬಂದ ಮಹಿಳಾ ಕೆಲಸಗಾರರ ಶೋಷಣೆ, ವೇತನ ತಾರತಮ್ಯ ಮತ್ತು ಬಾಲ ಕಾರ್ಮಿಕರನ್ನು ತಡೆಯವಂತೆ ಕಠಿಣ ಕಾರ್ಯನೀತಿಗಳು.
- ನೋಂದಣಿ ಮಾಡಿಕೊಳ್ಳದ ಗುತ್ತಿಗೆದಾರರನ್ನು ನಿಯಂತ್ರಿಸಲು ಕಾನೂನು/ಕಾರ್ಯನೀತಿಗಳನ್ನು ರೂಪಿಸುವುದು.
- ಕೆಲಸದ ಸ್ಥಳಗಳಲ್ಲಿ ಕೆಲಸಗಾರರಿಗೆ, ಉದ್ಯೋಗ ನೀಡಿದವರಿಗೆ ಮತ್ತು ಆಡಳಿತ ವರ್ಗದವರಿಗೆ ವಲಸೆ ಬಂದ ಕೆಲಸಗಾರರ ಹಕ್ಕುಗಳ ಕುರಿತು ತರಬೇತಿ ಶಿಬಿರಗಳನ್ನು ನಡೆಸುವ ಅವಕಾಶ ಕಲ್ಪಿಸುವುದು.
- ಲಿಂಗ ಸಂವೇದನಾಶೀಲತೆಯ ಕುರಿತು ಪುರುಷರು, ಮಹಿಳೆಯರು ಹಾಗೂ ಉದ್ಯೋಗ ನೀಡಿದವರಿಗೆ ಮತ್ತು ಆಡಳಿತ ವರ್ಗದವರಿಗೆ ಕೆಲಸದ ಸ್ಥಳಗಳಲ್ಲಿ ತರಬೇತಿ ಶಿಬಿರಗಳನ್ನು ನಡೆಸುವ ಅವಕಾಶ ಒದಗಿಸುವುದು.

# ಅಧ್ಯಾಯ ಒಂದು
## ಪೀಠಿಕೆ

**ಸನ್ನಿವೇಶ: ಕರ್ನಾಟಕದಲ್ಲಿ ವಲಸೆ**

ಕಳೆದ ಎರಡು ಮೂರು ದಶಕಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿಯ ಸ್ವರೂಪವು, ಕೃಷಿ ಮತ್ತು ಕೃಷಿಯೇತರದ ನಡುವೆ; ಪಟ್ಟಣ ಮತ್ತು ಹಳ್ಳಿ ಪ್ರದೇಶಗಳ ಮಧ್ಯದಲ್ಲಿ, ಅಲ್ಲದೇ ಒಳ್ಳೆಯ ಮತ್ತು ಮಹತ್ವದ ಬೆಳವಣಿಗೆಯನ್ನು ತೋರುತ್ತಿರುವ ರಾಜ್ಯಗಳ ನಡುವಿನ ಅಂತರವನ್ನು ಹೆಚ್ಚಿಸುತ್ತಲೇ ಇದೆ. ಅಭಿವೃದ್ಧಿ ಕೆಲವು ಕ್ಷೇತ್ರಗಳಿಗೆ ಮತ್ತು ಕೆಲವು ರಾಜ್ಯಗಳಿಗೆ ಸೀಮಿತಗೊಂಡಿದೆ. ಕ್ರಿಯಾಶೀಲತೆಯು ಆರ್ಥಿಕ ಅಭಿವೃದ್ಧಿಯ ಜೊತೆಗೂಡಿರುವುದರಿಂದ, ಭಾರತದಲ್ಲಿ ಕರ್ನಾಟಕ, ಕೇರಳ ಮತ್ತು ಗುಜರಾತ್‌ನಂತಹ ರಾಜ್ಯಗಳು ಅಭಿವೃದ್ಧಿಯ ಭರವಸೆ ನೀಡುವ ವಲಯಗಳಾಗಿ ಗೋಚರವಾಗುತ್ತಿವೆ. ಬಿಹಾರ, ಒರಿಸ್ಸಾ ಮತ್ತು ಛತ್ತೀಸ್‌ಗಢದ ಅಭಿವೃದ್ಧಿ ಸೂಚಕಗಳೆಲ್ಲವೂ ಗಾಬರಿ ಹುಟ್ಟಿಸುವಂತಿವೆ. ವಿಷಮಸ್ಥಿತಿಯ ಅಭಿವೃದ್ಧಿ ಸೂಚಕಗಳಿರುವ ರಾಜ್ಯಗಳಿಂದ ಕೆಲಸಗಾರರು, ಉತ್ತಮ ಅಭಿವೃದ್ಧಿ ಸೂಚಕಗಳಿರುವ ರಾಜ್ಯಕ್ಕೆ ವಲಸೆ ಹೋದಲ್ಲಿ, ಹೆಚ್ಚಾಗಿ ಅಧಿಕ ಮತ್ತು ಉತ್ತಮ ಜೀವನೋಪಾಯದ ಅವಕಾಶಗಳು ದೊರೆಯುವುದು ಸಾಮಾನ್ಯ ಸಂಗತಿಯಾಗಿದೆ. ಆದರೆ  ಬೇರೆಯ ರಾಜ್ಯಗಳಿಗೆ ಹೋಲಿಸಿದರೆ ಆರ್ಥಿಕವಾಗಿ ಉತ್ತಮವಾಗಿರುವ ಕರ್ನಾಟಕದಂತಹ ರಾಜ್ಯದ, ರಾಜ್ಯದೊಳಗಿನ ವಲಸೆಯಲ್ಲಿ ತಳ್ಳುವ ವಿಚಾರಗಳನ್ನು ಒಳಗೊಂಡಂತೆ, ಸಾಮಾಜಿಕ ಆರ್ಥಿಕ ಸನ್ನಿವೇಶದ ಬಹಳಷ್ಟು ಸಂಕೀರ್ಣ ಮಜಲುಗಳು ಕೆಲಸಗಾರರ ಚಲನೆಯ ಮೇಲೆ ಪ್ರಭಾವ ಬೀರುತ್ತವೆ.

ಭಾರತದ ಇನ್ನುಳಿದ ಬೇರೆ ರಾಜ್ಯಗಳಂತೆ, ರಾಜ್ಯದೊಳಗಿನ ವಲಸೆ ಕರ್ನಾಟಕದಲ್ಲಿ ಅಸಾಮಾನ್ಯವೇನಲ್ಲ. ಪ್ರತೀ ವರ್ಷ ಬೇರೆ ರಾಜ್ಯದ ಸಾವಿರಾರು ಕೆಲಸಗಾರರನ್ನು ಅದೇ ರೀತಿ ವೃತ್ತಿನಿರತರನ್ನು ತನ್ನೆಡೆಗೆ ಸೆಳೆಯುವ ಈ ರಾಜ್ಯ, ಮುಖ್ಯವಾಗಿ ಸೆಳೆಯುವ ಅಂಶಗಳಿಗೆ ಪ್ರಸಿದ್ಧವಾಗಿದೆ. "ತಿರುಳಿ"ರುವ ಸ್ಥಳ ಎಂದು ಕರೆಸಿಕೊಳ್ಳಲು ಅವಶ್ಯವಾದ ವಪ್ರಭಾವಿ ಗುಣಲಕ್ಷಣಗಳು ಇರುವ ಈ ರಾಜ್ಯದಲ್ಲಿ ಅಂಚಿನಲ್ಲಿರುವ ವಿಲಕ್ಷಣಗಳು ಎದ್ದು ಕಾಣಿಸುತ್ತವೆ. ಕರ್ನಾಟಕದಲ್ಲಿ ಪ್ರಾಂತೀಯ ತಾರತಮ್ಯ ರಾಜಕೀಯ ವಿಷಯವಾಗಿದೆ ಮತ್ತು ರಾಜ್ಯದ ದಕ್ಷಿಣ ಭಾಗವು ರಾಜ್ಯದ ಪ್ರಬಲ ಭೌಗೋಳಿಕ ರಾಜಕೀಯ ವಲಯವಾಗಿದೆ. ಈ ಕ್ರಿಯಾಶಕ್ತಿಯು ಕರ್ನಾಟಕದ ದಕ್ಷಿಣ ಭಾಗದಲ್ಲಿ  ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳ, ನೀರಾವರಿ ಸೌಲಭ್ಯ, ಸಾಲದ ದೊರಕುವಿಕೆ ಮೊದಲಾದವುಗಳಲ್ಲಿ ಎದ್ದುಕಾಣುತ್ತದೆ. ಈ ವಿಷಯಗಳು ಯಾವುದೇ ಭೌಗೋಳಿಕ ರಾಜಕೀಯ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಆವಶ್ಯಕವಾಗಿವೆ. ಇವು ಯಾವಾಗಲೂ ತಳ್ಳುವ ಮತ್ತು ಸೆಳೆಯುವ ವಿಷಯಗಳಾಗಿ ವ್ಯಕ್ತವಾಗುತ್ತವೆ ಮತ್ತು ಪ್ರತಿ ವರ್ಷ ಸಾವಿರಾರು ಜನ, ಅದರಲ್ಲೂ ಬಡ ರೈತರು ಮತ್ತು ಜಮೀನಿಲ್ಲದ ಕೃಷಿಕಾರ್ಮಿಕರು ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಹಾಗೂ ಇತರ ರಾಜ್ಯಗಳಾದ ಗೋವಾ ಮತ್ತು ಮಹಾರಾಷ್ಟ್ರಕ್ಕೆ ವಲಸೆ ಹೋಗುತ್ತಾರೆ. ಕರ್ನಾಟಕದ ವಲಸೆಯ ಸ್ವರೂಪವು "ಅಭಿವೃದ್ಧಿ" ಹೊಂದಿದ ಭೌಗೋಳಿಕ ರಾಜಕೀಯ ವಲಯದಲ್ಲಿರುವ "ಹಿನ್ನೆಡೆಯ ಅಭಿವೃದ್ಧಿ" ಸಂಶೋಧನೆಗೆ ಒಂದು ಉತ್ತಮ ಉದಾಹರಣೆಯಾಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕರ್ನಾಟಕದಿಂದ ಹೊರಗೆ ಮತ್ತು ಕರ್ನಾಟಕಕ್ಕೆ ಬರುವ ವಲಸೆಯ ಅಧ್ಯಯನ ನಡೆಸುವುದರಿಂದ, ಭಾರತದಾದ್ಯಂತ ವಿದ್ಯಾರ್ಥಿಗಳನ್ನು ಮತ್ತು ವೃತ್ತಿಪರರನ್ನು ದೊಡ್ಡ ಪ್ರಮಾಣದಲ್ಲಿ ಆಕರ್ಷಿಸುವಂತಹ ಕರ್ನಾಟಕದಂತಹ ಸ್ಥಿತಿವಂತ ರಾಜ್ಯದ, ಅಧಿಕಾರವಿಲ್ಲದ ಬಡವನ ಸಾಮಾಜಿಕ ಆರ್ಥಿಕ ಪರಿಸ್ಥಿಯ ಸಾರವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತದೆ. ಈ ಅಧ್ಯಯನವು ಕರ್ನಾಟಕದಿಂದ ಹೊರಗೆ ಮತ್ತು ಕರ್ನಾಟಕಕ್ಕೆ ಬರುವ ವಲಸಿಗ ಕೆಲಸಗಾರರ ಸಂಕೀರ್ಣ ಚಲನೆಯನ್ನು ಅರ್ಥಮಾಡಿಕೊಳ್ಳಲು ಸಹಾಯಮಾಡುತ್ತದೆ.

**ಈ ಅಧ್ಯಯನದ ಹಿನ್ನೆಲೆ**

"ಕರ್ನಾಟಕದಿಂದ ಮತ್ತು ಕರ್ನಾಟಕಕ್ಕೆ ಕಾರ್ಮಿಕರ ವಲಸೆಯ ಅಧ್ಯಯನ"ವು, ಕರ್ನಾಟಕ, ಗೋವಾ ಮತ್ತು ಶೋಲಾಪುರದ 518 ವಲಸಿಗ ಕೆಲಸಗಾರರ ಮೇಲೆ ಅಧ್ಯಯನ ನಡೆಸಿ, ಲಭ್ಯವಿರುವ ಅಂಕಿಅಂಶಗಳನ್ನು ಮತ್ತು ಸಾಹಿತ್ಯವನ್ನು ವಿಶ್ಲೇಷಿಸುವ ಮೂಲಕ "ತಳ್ಳುವ ಮತ್ತು ಸೆಳೆಯುವ" ವಿಷಯಗಳಿಗೆ ಪ್ರಭಾವ ಬೀರುವ ಅಂಶಗಳನ್ನು ಅರ್ಥಮಾಡಿಕೊಳ್ಳುವ ಉದ್ದೇಶ ಹೊಂದಿದೆ. ಈ ಅಧ್ಯಯನದಲ್ಲಿ ಭಾಗವಹಿಸಿದ ವಲಸಿಗರು, ಯಾದಗಿರಿ ಮತ್ತು ಕೊಪ್ಪಳದಲ್ಲಿನ ಜಿಲ್ಲಾಂತರ್ಗತ ವಲಸಿಗರು; ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ಅಂತರ್ ಜಿಲ್ಲಾ ವಲಸಿಗರು; ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್ ರಾಜ್ಯ ವಲಸಿಗರು; ಗೋವಾ ಮತ್ತು ಶೋಲಾಪುರದಲ್ಲಿರುವ ಕರ್ನಾಟಕದ ಅಂತರ್ ರಾಜ್ಯ ವಲಸಿಗರು.

ಈಗಿನ ಕಾರ್ಯಯೋಜನೆಯು, ಕೆಲಸಗಾರರ ಚಲನೆಯನ್ನು ರೂಪಿಸುವ ತಳ್ಳುವ–ಸೆಳೆಯುವ ಅಂಶಗಳು ಮತ್ತು ಅದಕ್ಕಿಂತ ಮುಖ್ಯವಾಗಿ ಕರ್ನಾಟಕದ ವಲಸಿಗ ಕೆಲಸಗಾರರ ಜೀವನವನ್ನು ಹಾಗೆಯೇ ಕರ್ನಾಟಕದ ಕೆಲಸಗಾರರು ಕರ್ನಾಟಕದಿಂದ ಹೊರಗೆ ವಲಸೆ ಹೋಗುವುದನ್ನು ದಾಖಲಿಸುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಜೊತೆಗೆ ಒಪ್ಪಂದಕ್ಕೆ ಸಹಿಹಾಕಿದ ನಂತರ, ಸಾಮಾಜಿಕ ಅಭಿವೃದ್ಧಿಯ ಸಮಿತಿಗೆ ಅಧ್ಯಯನವನ್ನು ವಹಿಸಲಾಯಿತು.

**ಉದ್ದೇಶಗಳು**

ಈ ಅಧ್ಯಯನದ ಮುಖ್ಯ ಉದ್ದೇಶಗಳೆಂದರೆ ಇವುಗಳನ್ನು ಪರೀಕ್ಷಿಸುವುದು:

ವ್ಯಕ್ತಿಗಳನ್ನು ಮತ್ತು ಕುಟುಂಬಗಳನ್ನು ವಲಸೆ ಹೋಗುವಂತೆ ಪ್ರೇರೇಪಿಸುವ/ಬಲವಂತಪಡಿಸುವ ವಿಷಯಗಳು.

ವಲಸೆ ಬಂದ ಕೆಲಸಗಾರರ ಮತ್ತು ಅವರ ಕುಟುಂಬದವರ ಸಾಮಾಜಿಕ ಮತ್ತು ಆರ್ಥಿಕ ಸಂಪುಟ

ಆ ಪ್ರದೇಶದಲ್ಲಿರುವ ಒಟ್ಟು ಕೆಲಸಗಾರರ ಸಂಖ್ಯೆಗೆ ಹೋಲಿಸಿದರೆ ವಲಸೆ ಬಂದ ಕೆಲಸಗಾರರ ಸಂಖ್ಯೆ

ಇದರಲ್ಲಿ ವಲಸಿಗರ ಅನುಪಾತ

ಒಬ್ಬಂಟಿಯಾಗಿ ವಲಸೆ ಬಂದವರು

ತಮ್ಮ ಕುಟುಂಬದೊಡನೆ ವಲಸೆ ಬಂದವರು

ಕುಟುಂಬದ ವಯಸ್ಕ ಸದಸ್ಯರೊಂದಿಗೆ ಮಾತ್ರ ವಲಸೆ ಬಂದವರು

ಮೂರು ವರ್ಗದ ವಲಸಿಗ ಕೆಲಸಗಾರರ ಚಲನೆಯ ನಮೂನೆಯ ವಾರ್ಷಿಕ ಕಾಲಸೂಚಿ

ಉತ್ತಮ ಆದಾಯ, ವಸತಿ, ಆಹಾರ, ವೈದ್ಯಕೀಯ, ಶಿಕ್ಷಣ ಸವಲತ್ತುಗಳಿಗೆ ಅವಕಾಶ, ಈ ಸೌಕರ್ಯಗಳ ತುಲನಾತ್ಮಕ ವಿಶ್ಲೇಷಣೆ

ಕುಟುಂಬ ಸಮೇತ ವಲಸೆ ಬಂದ ಕೆಲಸಗಾರರು ಮತ್ತು ಕುಟುಂಬವನ್ನು ಹಿಂದೆ ಬಿಟ್ಟು ಬಂದ ವಲಸಿಗ ಕುಟುಂಬದ ಮಹಿಳೆಯರು ಮತ್ತು ಮಕ್ಕಳ ಪರಿಸ್ಥಿತಿ

ವಲಸೆ ಬಂದ ಕೆಲಸಗಾರರ ಮತ್ತು ಅವರ ಕುಟುಂಬದ ಉಳಿತಾಯ ಮತ್ತು ಅದರ ಜಮಾವಣೆಯ ಸ್ವರೂಪ

ವಲಸೆಯ ಮೇಲೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯ ಪ್ರಭಾವ

ಅಂತರ್–ರಾಜ್ಯ 'ವಲಸಿಗ ಕಾರ್ಮಿಕರ(ಉದ್ಯೋಗ ಮತ್ತು ಸೇವೆಯ ಸ್ಥಿತಿ ಕುರಿತು ನಿಯಮಗಳು) ಅಧಿನಿಯಮ 1979ಯ ಅನುಷ್ಠಾನದ ಪ್ರಕ್ರಿಯೆ ಮತ್ತು ವಲಸಿಗ ಕೆಲಸಗಾರರಲ್ಲಿ, ಅವರ ಉದ್ಯೋಗ ದಾತರಲ್ಲಿ ಮತ್ತು ಕಾನೂನು ಜಾರಿಗೊಳಿಸುವ ಸಂಸ್ಥೆಯಲ್ಲಿ ಕಾಯಿದೆಯ ಕುರಿತು ಅರಿವಿನ ಮಟ್ಟ

ವಲಸಿಗ ಕೆಲಸಗಾರರ ಕುಂದುಕೊರತೆಯ ಪರಿಹಾರಕ್ಕೆ ವ್ಯವಸ್ಥೆಯ ಲಭ್ಯತೆ ಮತ್ತು ಪ್ರಭಾವ ಮತ್ತು ರಾಜ್ಯದೊಳಗೆ ಇರುವ ವಲಸಿಗ ಕೆಲಸಗಾರರಿಗೆ ಅದರಂತೇ ಇರುವ (1979ರ ಅಧಿನಿಯಮದಂತೆ) ಕಾನೂನಿನ ರಕ್ಷಣೆ

ಉತ್ತಮ ಅವಕಾಶಗಳಿಗಾಗಿ ವಲಸಿಗ ಕೆಲಸಗಾರರ ಕೌಶಲ್ಯಾಭಿವೃದ್ಧಿಯಲ್ಲಿ ರಾಜ್ಯದ ಪಾತ್ರವಹಿಸುವಿಕೆಯ ಸಾಧ್ಯತೆ

ಕರ್ನಾಟಕದಲ್ಲಿ ಬೇರೆ ರಾಜ್ಯದ ಕೆಲಸಗಾರರ ಒಳಹರಿವಿನಿಂದ, ಕರ್ನಾಟಕದಲ್ಲಿರುವ ಕೆಲಸಗಾರರ ಉದ್ಯೋಗಾವಕಾಶದ ಮೇಲೆ ಆಗುವ ಪರಿಣಾಮ ಮತ್ತು ರಾಜ್ಯದಲ್ಲಿ ಅಪರಾಧ ಮತ್ತು ಕಾನೂನು ಸುವ್ಯವಸ್ಥೆಯ ಸ್ಥಾನಮಾನ

ಈ ಕೆಳಗಿನ ವಲಸಿಗ ಕೆಲಸಗಾರರ ಗುಂಪಿನೊಂದಿಗೆ ಅಧ್ಯಯನವು ನಡೆಸಲ್ಪಟ್ಟಿತು:

ಬೆಂಗಳೂರು ಅಥವಾ ಮೈಸೂರಿಗೆ (ಪ್ರತಿಕ್ರಿಯಿಸಿದವರು 200) ಕೊಪ್ಪಳ ಮತ್ತು ಯಾದಗಿರಿಯ ವಿವಿಧ ತಾಲ್ಲೂಕುಗಳ 5–7 ಹಳ್ಳಿಗಳಿಂದ ವಲಸೆ ಬಂದ ಕೆಲಸಗಾರರು

ಬಿಹಾರ ಮತ್ತು ಒರಿಸ್ಸಾದಂತಹ ಬೇರೆ ರಾಜ್ಯಗಳಿಂದ (ಪ್ರತಿಕ್ರಿಯಿಸಿದವರು 100, ಅದರಲ್ಲಿ ಕರ್ನಾಟಕದ ಗಡಿಯಲ್ಲಿಲ್ಲದ ರಾಜ್ಯಗಳಿಂದ ಕಡಿಮೆ ಎಂದರೂ 80 ಸೇರಿದ್ದಾರೆ)

ಕೊಪ್ಪಳ ಮತ್ತು ಯಾದಗಿರಿಯ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ವಲಸೆ ಹೋದ ಕೆಲಸಗಾರರು (ಪ್ರತಿಕ್ರಿಯಿಸಿದವರು 50)

ಜೋಯ್ಡಾ (ಉತ್ತರ ಕನ್ನಡ) ಮತ್ತು ಬೆಳಗಾವಿ ಜಿಲ್ಲೆಯ 3 ಹಳ್ಳಿಗಳಿಂದ ಗೋವಾ ಮತ್ತು ಶೋಲಾಪುರಕ್ಕೆ ವಲಸೆ ಹೋದ 100 ಕೆಲಸಗಾರರು

ಮೇಲೆ ಹೇಳಿದ ಮೂರು ಗುಂಪುಗಳ ಕೆಲಸಗಾರರ ನಿಖರವಾದ ಮಾದರಿಯೊಂದಿಗೆ ಅಧ್ಯಯನವನ್ನು ನಡೆಸಲಾಗಿದೆ. ಆದರೆ ಕೊನೆಯ ಎರಡು ಗುಂಪುಗಳ ಮಾದರಿಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದೊಂದಿಗೆ ಚರ್ಚಿಸಿದ ನಂತರ ಸುಧಾರಿಸಲಾಯಿತು. ಜಿಲ್ಲೆಯ ಒಳಗಡೆಯೇ ವಲಸೆಹೋಗುವುದು ಯಾದಗಿರಿಯ ಮತ್ತು ಕೊಪ್ಪಳದಲ್ಲಿ ಬಹಳ ಅಪರೂಪವೆಂದು ಕ್ಷೇತ್ರ ಸಂಶೋಧನೆಯಲ್ಲಿ ತಿಳಿದುಬಂತು. ಯಾದಗಿರಿ ಮತ್ತು ಕೊಪ್ಪಳದ ಜಿಲ್ಲಾ ಕಾರ್ಮಿಕ ಕಚೇರಿಯ ಅಧಿಕಾರಿಗಳೊಂದಿಗೆ ಸಂಶೋಧನಾ ತಂಡವು ಚರ್ಚಿಸಿತು ಮತ್ತು ಜನರು ತಮ್ಮ ಜಿಲ್ಲೆಯ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ (ಕೆಲವೊಮ್ಮೆ 20 ಕಿಮೀ ದೂರ) ಕೆಲಸಕ್ಕಾಗಿ ಹೋಗುತ್ತಾರೆ, ಆದರೆ ಸಾಮಾನ್ಯವಾಗಿ ಸಂಜೆ ಮನೆಗೆ ಮರಳಿ ಹೋಗುತ್ತಾರೆ ಎನ್ನುವ ಮಾಹಿತಿ ದೊರಕಿತು. ಈ ಎರಡು ಜಿಲ್ಲೆಗಳಲ್ಲಿ ಜಿಲ್ಲೆಯ ಒಳಗಿನ ವಲಸೆಯು ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಹೋದ ರೀತಿಯಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಯಾದಗಿರಿ ಮತ್ತು ಕೊಪ್ಪಳದ ಗ್ರಾಮೀಣ ಕೆಲಸಗಾರರು ತಮ್ಮ ತಮ್ಮ ಜಿಲ್ಲೆಯ ಮುಖ್ಯ ಪಟ್ಟಣಗಳಿಗೆ ಕೆಲಸಕ್ಕಾಗಿ ವಲಸೆ ಹೋಗುತ್ತಾರೆ. ಈ ಸಂದರ್ಭವನ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾಕಾರಕ್ಕೆ ತಿಳಿಸಲಾಯಿತು ಮತ್ತು ಅವರಿಂದ ಒಪ್ಪಿಗೆ ಪಡೆದ ನಂತರ, ಯಾದಗಿರಿ ನಗರದಲ್ಲಿ ಯಾದಗಿರಿಯ ಗ್ರಾಮೀಣ ವಲಸಿಗ ಕೆಲಸಗಾರರ ಅಧ್ಯಯನ ನಡೆಸಲಾಯಿತು ಮತ್ತು ಕೊಪ್ಪಳ ನಗರದಲ್ಲಿ ಕೊಪ್ಪಳ ಗ್ರಾಮೀಣ ವಲಸಿಗ ಕೆಲಸಗಾರರ ಅಧ್ಯಯನ ನಡೆಸಲಾಯಿತು.

ಜೋಯ್ಡಾಹಳ್ಳಿ (ಉತ್ತರ ಕನ್ನಡ) ಮತ್ತು ಬೆಳಗಾವಿ ಜಿಲ್ಲೆಯ ವಲಸಿಗ ಕೆಲಸಗಾರರಿಗೆ ಶೋಲಾಪುರವು ಇಷ್ಟಪಟ್ಟು ಹೋಗುವ ಸ್ಥಳವಾಗಿ ಉಳಿದಿಲ್ಲವಾದ್ದರಿಂದ, ಶೋಲಾಪುರದಲ್ಲಿ ಸರಿಯಾದ ಮಾದರಿ ಹುಡುಕುವುದು ಸಾಧ್ಯವಿರಲಿಲ್ಲ. ಲಕ್ಷ್ಮಿ ಮಿಲ್ ಮತ್ತು ಡಬ್ಲ್ಯು. ಜಿ. ಮಿಲ್‌ನಂತಹ ಪ್ರಮುಖ ಕಾರ್ಖಾನೆಗಳು ಮುಚ್ಚಿ ಹೋದುದರಿಂದ, ಶೋಲಾಪುರದ ವಾಣಿಜ್ಯಿಕ ಪ್ರಾಮುಖ್ಯತೆ ಇತ್ತೀಚೆಗೆ ಕಡಿಮೆಯಾಗಿದೆ. ಜಿಲ್ಲಾ ಕಾರ್ಮಿಕ ಕಛೇರಿಯ ಸಂಬಂಧಿಸಿದ/ಚಿಂತಿತ ಅಧಿಕಾರಿಗಳು ಮತ್ತು ವಲಸೆ ಬಂದ ಕರ್ನಾಟಕದ ಕೆಲವು ಕೆಲಸಗಾರರು, ಶೋಲಾಪುರವು ವಲಸಿಗ ಕೆಲಸಗಾರರ ಜನಪ್ರಿಯ ಗುರಿಯಾಗಿ ಉಳಿದಿಲ್ಲ ಅಷ್ಟೇ ಅಲ್ಲ, ಅದರ ಬದಲು ಈಗ ಕೆಲಸಗಾರರು ಅಲ್ಲಿಂದ ಹೊರಹೋಗುವ ತಾಣವಾಗಿ ಗುರುತಿಸಲ್ಪಟ್ಟಿದೆ ಎಂದು ಅಭಿಪ್ರಾಯಪಟ್ಟರು. ಕೆಲ ವರ್ಷಗಳ ಹಿಂದೆ ಶೋಲಾಪುರಕ್ಕೆ ವಲಸೆ ಹೋಗಿ ಅಲ್ಲಿಯೇ ತಮ್ಮ ಕುಟುಂಬದೊಡನೆ ನೆಲೆಸಿರುವ ಕರ್ನಾಟಕದ ಗುಲ್ಬರ್ಗಾ, ರಾಯಚೂರು ಮತ್ತು ವಿಜಯಪುರ ಜಿಲ್ಲೆಯ ಕೆಲ ವಲಸಿಗರನ್ನು ಸಂಶೋಧನಾ ತಂಡವು ಕಂಡುಹಿಡಿಯಿತು. ಈ ಪರಿಸ್ಥಿತಿಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾಕಾರಕ್ಕೆ ತಿಳಿಸಿ, ಅವರಿಂದ ಒಪ್ಪಿಗೆಯನ್ನು ಪಡೆದ ನಂತರ, ಶೋಲಾಪುರದಲ್ಲಿ ಕರ್ನಾಟಕದ ರಾಯಚೂರು, ವಿಜಯಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳ ವಲಸಿಗ ಕೆಲಸಗಾರರ ಅಧ್ಯಯನವನ್ನು ನಡೆಸಲಾಯಿತು.

ಶೋಲಾಪುರ, ಯಾದಗಿರಿ ಮತ್ತು ಕೊಪ್ಪಳದಲ್ಲಿ ಸರಿಯಾದ ಸ್ಯಾಂಪಲ್ ಹುಡುಕುವುದು ಸಾಧ್ಯವಿಲ್ಲದ್ದರಿಂದ, ಸ್ಯಾಂಪಲ್ ನಲ್ಲಿ ಬದಲಾವಣೆಯನ್ನು ಮಾಡಲಾಯಿತು. ಅಂತಿಮವಾಗಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ ಒಪ್ಪಿಗೆ ಪಡೆದ ನಂತರ, ಇವರೊಂದಿಗೆ ಅಧ್ಯಯನವನ್ನು ನಡೆಸಲಾಯಿತು:

ಬೆಂಗಳೂರು ಮತ್ತು ಮೈಸೂರಿನಲ್ಲಿರುವ 218 ಅಂತರ್–ಜಿಲ್ಲಾ ವಲಸಿಗರು

ದೊರನಹಳ್ಳಿ (ಶೋಲಾಪುರ ತಾಲ್ಲೂಕು), ಯೆಡಿಯಾಪುರ (ಶೋರಾಪುರ ತಾಲ್ಲೂಕು), ಅಶೋಕನಗರ (ಯಾದಗಿರಿ ತಾಲ್ಲೂಕು) ಮತ್ತು ಚಿಂತೆನಪಲ್ಲಿ (ಯಾದಗಿರಿ ತಾಲ್ಲೂಕು) ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ಹಳ್ಳಿಗಳು.

ಮೈನಹಳ್ಳಿ (ಕೊಪ್ಪಳ ತಾಲ್ಲೂಕು), ಅಳವಂಡಿ (ಕೊಪ್ಪಳ ತಾಲ್ಲೂಕು), ಸಿದ್ದಾಪುರ (ಗಂಗಾವತಿ ತಾಲ್ಲೂಕು) ಮತ್ತು ವೆಂಕಟಾಪುರ (ಕುಷ್ಟಗಿ ತಾಲ್ಲೂಕು)

ಬೆಂಗಳೂರು ಮತ್ತು ಮೈಸೂರಿನಲ್ಲಿರುವ 11 ರಾಜ್ಯಗಳ (ಪಶ್ಚಿಮ ಬಂಗಾಳ, ಬಿಹಾರ, ಜಾರ್ಖಂಡ್, ಒರಿಸ್ಸಾ, ಛತ್ತೀಸ್‌ಗಢ, ಮಧ್ಯ ಪ್ರದೇಶ, ತಮಿಳ್ನಾಡು, ಪಂಜಾಬ್ ಮತ್ತು ಅಸ್ಸಾಂ) 143 ಅಂತರ್–ರಾಜ್ಯ ವಲಸಿಗರು

ಯಾದಗಿರಿ ಮತ್ತು ಕೊಪ್ಪಳದಲ್ಲಿರುವ 56 ಜಿಲ್ಲಾಂತರ್ಗತ ವಲಸಿಗರು

ಗೋವಾದಲ್ಲಿರುವ 51 ಅಂತರ್–ರಾಜ್ಯ ವಲಸಿಗರ ಊರುಗಳಾದ–

ಉತ್ತರ ಕನ್ನಡ ಜಿಲ್ಲೆ(ಕರ್ನಾಟಕ)ಯ ಜೋಯ್ಡಾ ಗ್ರಾಮ

ಬೆಳಗಾವಿ ಜಿಲ್ಲೆಯ(ಕರ್ನಾಟಕ) ಕಾವುರ, ಮುಖ್ನರ್, ತಿಗಡಿ ಮತ್ತು ಪತಿಹಳ ಗ್ರಾಮಗಳು

ಶೋಲಾಪುರದಲ್ಲಿರುವ ಕರ್ನಾಟಕದ ವಿಜಯಪುರ, ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳ 50 ಅಂತರ್–ರಾಜ್ಯ ವಲಸಿಗರು.

# ಅಧ್ಯಾಯ ಎರಡು
# ಶೋಧನಾ ವಿಧಾನಶಾಸ್ತ್ರ

**ಸಂದರ್ಭ**

ಈ ಅಧ್ಯಯನವು ಕರ್ನಾಟಕದಲ್ಲಿ ವಲಸಿಗ ಕೆಲಸಗಾರರ ಜೀವನದ ಮೇಲೆ ವಲಸೆಯ ತಳ್ಳುವ ಮತ್ತು ಸೆಳೆಯುವ ಅಂಶಗಳ ಪ್ರಭಾವವನ್ನು ಅನ್ವೇಷಿಸಲಿದೆ. ಅಧ್ಯಯನದ ಉದ್ದೇಶದೆಡೆಗೆ ಮುಂದುವರಿಯಲು ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಧಾನಗಳ ಸಂಯೋಜನೆಯನ್ನು ಅಳವಡಿಸಿಕೊಳ್ಳಲಾಗಿದೆ. ಸಂಶೋಧನಾ ವಿಧಾನದಲ್ಲಿ ಸಮೀಕ್ಷೆ, ವಿಶದವಾದ ಸಂದರ್ಶನಗಳು ಮತ್ತು ಕೇಂದ್ರೀಕರಿಸಿದ ಗುಂಪು ಚರ್ಚೆಗಳನ್ನು ಸೇರಿಸಿಕೊಳ್ಳಲಾಗಿದೆ. ಈ ವಿಧಾನವು ಸಂಖ್ಯಾತ್ಮಕ ಫಲಿತಗಳನ್ನು ಮಾನ್ಯಮಾಡಿ ಸುಲಭಗೊಳಿಸಿದೆ. ಅಷ್ಟೇ ಅಲ್ಲ ವಿಶದವಾದ ಸಂದರ್ಶನಗಳ ಸಂದರ್ಭಗಳಲ್ಲಿ ಅಧ್ಯಯನದಲ್ಲಿ ಭಾಗವಹಿಸಿದವರು ಸೇರಿದಾಗಿನ ನಿರ್ದಿಷ್ಟ ಪ್ರತಿಕ್ರಿಯೆಗಳನ್ನು ಸಂದರ್ಭೋಚಿತಗೊಳಿಸಲು ಉಪಯುಕ್ತವಾಗಿದೆ. ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಧಾನಗಳ ಸಂಯೋಜನೆಯು ಆರು ಅಧ್ಯಯನದ ಸ್ಥಳಗಳಲ್ಲಿ (ಮೂರು ರಾಜ್ಯಗಳ) ಇರುವ ಜಿಲ್ಲಾಂತರ್ಗತ, ಅಂತರ್–ಜಿಲ್ಲಾ ಮತ್ತು ಅಂತರ್–ರಾಜ್ಯ ವಲಸಿಗರ ಸಂಕೀರ್ಣ ಸಾಮಾಜಿಕ ವಾಸ್ತವತೆಯನ್ನು ಹಿಡಿದಿಡಲು ಅನುಕೂಲವಾಗಿದೆ. ಅಧ್ಯಯನದಲ್ಲಿ

ಭಾಗವಹಿಸಿದವರ ಗ್ರಹಿಕೆಯ ಒಟ್ಟು ನೋಟವನ್ನು ಅಡಕಮಾಡಲು ಸಮೀಕ್ಷೆಯು ಸಹಾಯಕಾರಿಯಾಗಿದೆ. ಭಾಗವಹಿಸಿದವರು ಹಲವಾರು ವಿಚಾರಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ವಿಶದವಾದ ಸಂದರ್ಶನಗಳು ಸಹಾಯ ಮಾಡಿರುತ್ತವೆ. ಶೋಧನೆ/ಅಧ್ಯಯನವು ಅಧ್ಯಯನ ನಡೆಸುವವರು ಮತ್ತು ಪ್ರತಿಕ್ರಿಯಿಸುವವರು ಎಂದು ಕರೆಯಲ್ಪಡುವ ಸಂಶೋಧನೆ/ಅಧ್ಯಯನದಲ್ಲಿ ಭಾಗವಹಿಸುವಂತಹ ಜನರ ಜತೆಗೂಡಿದ ಕಲಿಕೆಯ ಪ್ರಯಾಣ ಎಂದು ನಾವು ನೋಡುತ್ತೇವೆ. ಸಂಭಾಷಣೆಗಳಲ್ಲಿ/ಅಂತರ್ ಕ್ರಿಯೆಗಳಲ್ಲಿ ಶೋಧಕ/ಅಧ್ಯಯನದ ತಂಡದ ಜೊತೆಗೆ, ಬದಲಾಗುತ್ತಿರುವ ಸಮಾಜ ಮತ್ತು ಆರ್ಥಿಕತೆಗೆ ಅಗತ್ಯವಾದ ಆಡಳಿತ

| ಸಂಖ್ಯೆ | ಅಧ್ಯಯನದ ಉದ್ದೇಶ | ಅಧ್ಯಯನದ ಸಾಧನಗಳು |
|---|---|---|

ಉಪಕ್ರಮದಲ್ಲಿ ತೊಡಗಿಸಿಕೊಳ್ಳಲು ಮತ್ತು ನಿರಂತರ ಸುಧಾರಣೆಗೆ ಕಾರ್ಯನೀತಿಗಳನ್ನು ನಿರೂಪಿಸಲು ಮಾಹಿತಿ ಹಂಚಿಕೊಳ್ಳುವುದರಿಂದ, ನಾವು ಅವರನ್ನು ಶೋಧನೆ ಅಥವಾ ಅಧ್ಯಯನದಲ್ಲಿ ಭಾಗವಹಿಸುವವರು ಎಂದು ಕರೆಯಲು ನಿಶ್ಚಯಿಸಿದ್ದೇವೆ.

**ಅಧ್ಯಯನದ ಉದ್ದೇಶಗಳು ಮತ್ತು ಸಾಧನಗಳು**

ವಿಶದವಾದ ಸಂದರ್ಶನಗಳು, ಕೇಂದ್ರೀಕರಿಸಿದ ಗುಂಪು ಚರ್ಚೆಯಂತಹ ಮಿಶ್ರ ಅಧ್ಯಯನದ ವಿಧಾನದ ಮೂಲಕ, ಈ ಸಮೀಕ್ಷೆ, ಕರ್ನಾಟಕದ ತಳ್ಳುವ ಮತ್ತು ಸೆಳೆಯುವ ಅಂಶಗಳು ವಲಸಿಗ ಕೆಲಸಗಾರರ ಜೀವನದ ಮೇಲೆ ಪರಿಣಾಮ ಹೇಗೆ ಬೀರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿದೆ. ವಲಸೆಯ ಮೇಲೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಂತಹ ನಿರ್ದಿಷ್ಟ ವಿಷಯಗಳ ಪ್ರಭಾವದ ಕುರಿತು ಸಮೀಕ್ಷೆಯು ವಿಶದವಾದ ಸಂದರ್ಶನಗಳು ಮತ್ತು ಕೇಂದ್ರೀಕರಿಸಿದ ಗುಂಪು ಚರ್ಚೆಯ ಮೂಲಕ ಧೃಢೀಕರಿಸಿದೆ. ಅಧ್ಯಯನದ ಪ್ರತಿಯೊಂದು ಉದ್ದೇಶದ ಕುರಿತು ಮಾಹಿತಿಯನ್ನು ಪಡೆಯುವ ಉದ್ದೇಶದಿಂದ, ಸಮೀಕ್ಷೆಯ ಪ್ರಶ್ನಾವಳಿಯನ್ನು ರೂಪಿಸಲಾಯಿತು, ಸಮೀಕ್ಷೆಯ ಸಿದ್ಧ ಪಡಿಸಿದ ಪ್ರಶ್ನಾವಳಿಗೆ ಅಥವಾ ಗುಂಪಿನಲ್ಲಿ ಕೆಲ ಸೂಕ್ಷ್ಮ/ನಿರ್ದಿಷ್ಟ ವಿಚಾರಗಳ ಕುರಿತು ಹಂಚಿಕೊಳ್ಳಲು ಇಚ್ಛಿಸದವರಿಗಾಗಿ ವಿಶದವಾದ ಸಂದರ್ಶನವನ್ನು ನಡೆಸಲಾಯಿತು. ಸಾಮಾನ್ಯ ಕಾಳಜಿಯ ಹಲವಾರು ವಿಚಾರಗಳ ಕುರಿತು ಭಾಗಹಿಸಿದವರ ಅನಿಸಿಕೆಗಳನ್ನು ಗುರುತಿಸಲು ಗುಂಪಾಗಿ ಅಥವಾ ಸಮುದಾಯವಾಗಿ ಕೇಂದ್ರೀಕರಿಸಿದ ಗುಂಪು ಚರ್ಚೆಯನ್ನು ನಡೆಸಲಾಯಿತು. ಅಲ್ಲದೇ ಸರಕಾರಿ ಅಧಿಕಾರಿಗಳು, ಶಿಕ್ಷಣ ತಜ್ಞರು, ಸಾಮಾಜಿಕ ಕಾರ್ಯಕರ್ತರು, ಪತ್ರಿಕೋದ್ಯಮಿಗಳು ಮೊದಲಾದ ಕೆಲ ಆಸಕ್ತರನ್ನು ಈ ಅಧ್ಯಯನಕ್ಕಾಗಿ ಸಂದರ್ಶಿಸಲಾಯಿತು.

ಪ್ರಶ್ನಾವಳಿಯಲ್ಲಿದ್ದ ಎಲ್ಲ ಉದ್ದೇಶಗಳಿಗೆ ಉತ್ತರಿಸುವ ಪ್ರಯತ್ನ ಮಾಡಲಾಯಿತು, ವಿಶದವಾದ ಸಂದರ್ಶನ ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳನ್ನು ನಡೆಸಿ ಅಧ್ಯಯನದ ಕೆಲ ನಿರ್ದಿಷ್ಟ ಉದ್ದೇಶಗಳ ಕುರಿತು ಮಾಹಿತಿ ಕಲೆ ಹಾಕಲಾಯಿತು. ಉದಾಹರಣೆಗೆ, ವಲಸೆ ಬಂದ ಸ್ಥಳದಲ್ಲಿ ಮಹಿಳೆಯರು ಮತ್ತು ಮಕ್ಕಳ ಪರಿಸ್ಥಿತಿಯ ಸಮಸ್ಯೆಯನ್ನು, ವಲಸೆ ಬಂದ ಕಾರ್ಮಿಕ ಮಹಿಳೆಯರ ವಿಶದವಾದ ಸಂದರ್ಶನದ ಮೂಲಕ ಸರಿಯಾಗಿ ಅರ್ಥ ಮಾಡಿಕೊಳ್ಳಬಹುದಾಗಿತ್ತು. ಅದೇ ರೀತಿ, ವಿಶದವಾದ ಸಂದರ್ಶನದ ಕಾಲದಲ್ಲಿ ಭಾಗವಹಿಸಿದ ಮಹಿಳೆಯರಿಗೆ ಈ ಸಮಸ್ಯೆಯ ಕುರಿತು ಪ್ರಶ್ನೆಗಳನ್ನು ಕೇಳಲಾಯಿತು. ಹಾಗೆಯೇ ಕೆಲಸಗಾರರ ವಲಸೆಯ ಮೇಲೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯ ಪ್ರಭಾವದಂತಹ ಕಾರ್ಯನೀತಿಗೆ ಸಂಬಂಧಿಸಿದ ಸಾಮಾನ್ಯ ಕಾಳಜಿ ಹೊಂದಿದ ವಿಷಯಗಳನ್ನು, ಚರ್ಚೆಯ ಮೂಲಕ ಅಧ್ಯಯನದಲ್ಲಿ ಭಾಗವಹಿಸಿದವರ ಸಾಮೂಹಿಕ ಅಭಿಪ್ರಾಯವನ್ನು ಪಡೆದಲ್ಲಿ ಅದು ಸಹಕಾರಿಯಾಗುತ್ತದೆಂದು ಅಧ್ಯಯನದ ತಂಡವು ನಿರ್ಧರಿಸಿ, ಇದನ್ನು ಕೇಂದ್ರೀಕೃತ ಗುಂಪು ಚರ್ಚೆಯಲ್ಲಿ ಪ್ರಸ್ತುತ ಪಡಿಸಿತು.

ಅಧ್ಯಯನದ ಪ್ರತಿಯೊಂದು ಉದ್ದೇಶಗಳನ್ನು ಈಡೇರಿಸಲು ಬಳಸಿದ ಅಧ್ಯಯನದ ಸಾಧನಗಳ ಮಾಹಿತಿಯನ್ನು ಈ ಕೆಳಗೆ ಕೊಟ್ಟಿರುವ ಪಟ್ಟಿಯು ನೀಡುತ್ತದೆ:

| | | ಸಮೀಕ್ಷೆ | ವಿಶದವಾದ ಸಂದರ್ಶನ | ಕೇಂದ್ರೀಕೃತ ಗುಂಪು ಚರ್ಚೆ |
|---|---|---|---|---|
| 1 | ವ್ಯಕ್ತಿಗಳು ಮತ್ತು ಕುಟುಂಬಗಳು ವಲಸೆ ಹೋಗಲು ಪ್ರೇರೇಪಿಸುವ/ಒತ್ತಾಯಿಸುವ ಅಂಶಗಳು | ಎಲ್ಲ ವಲಸಿಗ ಪಾಲ್ಗೊಂಡವರು | ಕೆಲವು ಪುರುಷರು ಮತ್ತು ಮಹಿಳೆಯರು ವಲಸಿಗ ಪಾಲ್ಗೊಂಡವರು | |
| 2 | ವಲಸಿಗ ಕೆಲಸಗಾರರು ಮತ್ತು ಅವರ ಕುಟುಂಬಗಳ ಸಾಮಾಜಿಕ ಮತ್ತು ಆರ್ಥಿಕ ಚಿತ್ರಣ | ಎಲ್ಲ ವಲಸಿಗ ಪಾಲ್ಗೊಂಡವರು | | |
| 3 | ಆ ಸ್ಥಳದಲ್ಲಿರುವ ಒಟ್ಟು ಕೆಲಸಗಾರರಿಗೆ ಹೋಲಿಸಿದರೆ ವಲಸೆ ಹೋದ ಕೆಲಸಗಾರರ ವ್ಯಾಪ್ತಿ | ಎಲ್ಲ ವಲಸಿಗ ಪಾಲ್ಗೊಂಡವರು | ವಿಭಾಗ, ಜಿಲ್ಲೆ, ರಾಜ್ಯ ಮಟ್ಟದಲ್ಲಿ ಸಂಬಂಧಪಟ್ಟ ಸರಕಾರಿ ಅಧಿಕಾರಿಗಳು | |
| 4 | ಒಬ್ಬಂಟಿಯಾಗಿ ವಲಸೆ; ಕುಟುಂಬದ ಜೊತೆಗೆ ವಲಸೆ; ಕುಟುಂಬದ ವಯಸ್ಕ ಸದಸ್ಯರೊಂದಿಗೆ ಮಾತ್ರ ವಲಸೆ ಹೋಗುವವರ ಅನುಪಾತ | ಎಲ್ಲ ವಲಸಿಗ ಪಾಲ್ಗೊಂಡವರು | ವಿಭಾಗ, ಜಿಲ್ಲೆ, ರಾಜ್ಯ ಮಟ್ಟದಲ್ಲಿ ಸಂಬಂಧಪಟ್ಟ ಸರಕಾರಿ ಅಧಿಕಾರಿಗಳು | |
| 5 | 3 ವಿಭಾಗದ ವಲಸಿಗ ಕೆಲಸಗಾರರ ಚಲನೆಯ ಮಾದರಿಯ ವಾರ್ಷಿಕ ಕ್ಯಾಲೆಂಡರ್ | ಎಲ್ಲ ವಲಸಿಗ ಪಾಲ್ಗೊಂಡವರು | | ಮಿಶ್ರ ಗುಂಪು |
| 6 | ಉತ್ತಮ ಆದಾಯ, ವಸತಿ, ಆಹಾರ, ವೈದ್ಯಕೀಯ ಸವಲತ್ತುಗಳಿಗೆ ಅವಕಾಶ, ಶಿಕ್ಷಣ ಮೊದಲಾದ ಸೌಕರ್ಯಗಳ ತುಲನಾತ್ಮಕ ವಿಶ್ಲೇಷಣೆ | ಎಲ್ಲ ವಲಸಿಗ ಪಾಲ್ಗೊಂಡವರು | | ಮಹಿಳೆಯರ ಜೊತೆಗೆ ಒಂದು ಪುರುಷ ವಲಸಿಗರ ಜೊತೆ ಒಂದು |
| 7 | ಕುಟುಂಬದ ಜೊತೆಗೆ ವಲಸೆ ಬಂದ ಮತ್ತು ಕುಟುಂಬವನ್ನು ಹಿಂದೆ ಬಿಟ್ಟು ಬಂದ ವಲಸಿಗ ಕೆಲಸಗಾರರ ಕುಟುಂಬದ ಮಹಿಳೆಯರ ಮತ್ತು ಮಕ್ಕಳ ಸ್ಥಿತಿಗತಿ | ಎಲ್ಲ ವಲಸಿಗ ಪಾಲ್ಗೊಂಡವರು | ಪಾಲ್ಗೊಂಡ ಕೆಲವು ಮಹಿಳೆಯರು | |
| 8 | ವಲಸಿಗ ಕೆಲಸಗಾರರು ಮತ್ತು ಅವರ ಕುಟುಂಬಗಳ ಉಳಿತಾಯ ಮತ್ತು ಹಣ ರವಾನೆಯ ಮಾದರಿ | ಎಲ್ಲ ವಲಸಿಗ ಪಾಲ್ಗೊಂಡವರು | ಕೆಲವು ವಲಸಿಗ ಪುರುಷರು ಮತ್ತು ಮಹಿಳೆಯರು | |
| 9 | ವಲಸೆಯ ಮೇಲೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯ ಪರಿಣಾಮ | ಎಲ್ಲ ವಲಸಿಗ ಪಾಲ್ಗೊಂಡವರು | | ಒಂದು ಮಹಿಳೆಯರೊಡನೆ ಒಂದು ಪುರುಷರೊಡನೆ |
| 10 | ಅಂತರ್ ರಾಜ್ಯ ವಲಸಿಗ ಕೆಲಸಗಾರರ ಅಧಿನಿಯಮ 1979ಯ ಅನುಷ್ಠಾನ ಪ್ರಕ್ರಿಯೆ ಮತ್ತು ಆ ಕಾನೂನಿನ ಕುರಿತು ವಲಸಿಗ ಕಾರ್ಮಿಕರಲ್ಲಿ, ಅವರ ಉದ್ಯೋಗದಾತ ಮತ್ತು ಅನುಷ್ಠಾನಗೊಳಿಸುವ ಸಂಸ್ಥೆಗಳಲ್ಲಿ ಅರಿವಿನ ಮಟ್ಟ | ಎಲ್ಲ ವಲಸಿಗ ಪಾಲ್ಗೊಂಡವರು | ಕೆಲವು ವಲಸಿಗ ಪುರುಷರು, ಮಹಿಳೆಯರು, ಅವರ ಉದ್ಯೋಗದಾತರು, ಸರಕಾರಿ ಅಧಿಕಾರಿಗಳು, ಕಾರ್ಮಿಕ ಸಂಘಟನೆಗಳ ನಾಯಕರು, ಚಳವಳಿಗಾರರು, ಮಾಧ್ಯಮದವರು, ಪಂಡಿತರು | |
| 11 | ವಲಸಿಗ ಕೆಲಸಗಾರರ ಕುಂದುಕೊರತೆಯ ಪರಿಹಾರಕ್ಕೆ ವ್ಯವಸ್ಥೆಯ ಲಭ್ಯತೆ ಮತ್ತು ಪ್ರಭಾವ ಮತ್ತು ರಾಜ್ಯದೊಳಗೆ ಇರುವ ವಲಸಿಗ ಕೆಲಸಗಾರರಿಗೆ ಅದರಂತೇ ಇರುವ (1979ರ ಅಧಿನಿಯಮದಂತೆ) ಕಾನೂನಿನ ರಕ್ಷಣೆ | ಎಲ್ಲ ವಲಸಿಗ ಪಾಲ್ಗೊಂಡವರು | ಕೆಲವು ವಲಸಿಗ ಪುರುಷರು, ಮಹಿಳೆಯರು, ಅವರ ಉದ್ಯೋಗದಾತರು, ಸರಕಾರಿ ಅಧಿಕಾರಿಗಳು, ಕಾರ್ಮಿಕ ಸಂಘಟನೆಗಳ ನಾಯಕರು, ಚಳವಳಿಗಾರರು, ಮಾಧ್ಯಮದವರು, ಪಂಡಿತರು | |

| | | | | |
|---|---|---|---|---|
| 12 | ಉತ್ತಮ ಅವಕಾಶಗಳಿಗಾಗಿ ವಲಸಿಗ ಕೆಲಸಗಾರರ ಕೌಶಲ್ಯಾಭಿವೃದ್ಧಿಯಲ್ಲಿ ರಾಜ್ಯದ ಪಾತ್ರ ವಹಿಸುವಿಕೆಯ ಸಾಧ್ಯತೆ | ಎಲ್ಲ ವಲಸಿಗ ಪಾಲ್ಗೊಂಡವರು | ಕೆಲವು ವಲಸಿಗ ಪುರುಷರು, ಮಹಿಳೆಯರು, ಅವರ ಉದ್ಯೋಗದಾತರು, ಸರಕಾರಿ ಅಧಿಕಾರಿಗಳು, ಕಾರ್ಮಿಕ ಸಂಘಟನೆಗಳ ನಾಯಕರು, ಚಳವಳಿಗಾರರು, ಮಾಧ್ಯಮದವರು, ಪಂಡಿತರು | |
| 13 | ಕರ್ನಾಟಕದಲ್ಲಿ ಬೇರೆ ರಾಜ್ಯದ ಕೆಲಸಗಾರರ ಒಳಹರಿವಿನಿಂದ, ಕರ್ನಾಟಕದಲ್ಲಿರುವ ಕೆಲಸಗಾರರ ಉದ್ಯೋಗಾವಕಾಶದ ಮೇಲೆ ಆಗುವ ಪರಿಣಾಮ ಮತ್ತು ರಾಜ್ಯದಲ್ಲಿ ಅಪರಾಧ ಮತ್ತು ಕಾನೂನು ಸುವ್ಯವಸ್ಥೆಯ ಸ್ಥಾನಮಾನ | ಎಲ್ಲ ವಲಸಿಗ ಪಾಲ್ಗೊಂಡವರು | ಕೆಲವು ವಲಸಿಗ ಪುರುಷರು, ಮಹಿಳೆಯರು, ಅವರ ಉದ್ಯೋಗದಾತರು, ಸರಕಾರಿ ಅಧಿಕಾರಿಗಳು (ವಿಶೇಷವಾಗಿ ಪೋಲಿಸ್ ಮತ್ತು ಆಡಳಿತ ನಡೆಸುವವರಿಂದ | ಮಿಶ್ರ ಗುಂಪು ಪಾಲ್ಗೊಂಡವರ ಜೊತೆಗೆ |

ಅನುಬಂಧ 1ರಲ್ಲಿ ಸೇರಿಸಿದ ಒಂದು ಪ್ರಶ್ನಾವಳಿಯನ್ನು, ಸಾಮಾಜಿಕ ಅಭಿವೃದ್ಧಿಯ ಸಮಿತಿಯಲ್ಲಿ, ಮಹತ್ವದ ಅಧ್ಯಯನ ತಂಡ ಅಭಿವೃದ್ಧಿ ಪಡಿಸಿದೆ. ಇದನ್ನು ಸಾಮಾಜಿಕ ಅಭಿವೃದ್ಧಿಯ ಸಮಿತಿಯ ಹಿರಿಯ ಅಧಿಕಾರಿಗಳೊಡನೆ ಪರ್ಯಾಲೋಚಿಸಿ ಸುಧಾರಿಸಲಾಗಿದೆ. ಪ್ರಶ್ನಾವಳಿಯ ಸುಧಾರಣೆಗಾಗಿ ಇನ್ನೊಂದು ಸಮಾಲೋಚನಾ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಲಾಯಿತು. ಅಲ್ಲಿ ಕರ್ನಾಟಕದಲ್ಲಿ ವಲಸೆಯ ವಿಚಾರದಲ್ಲಿ ಕೆಲಸ ಮಾಡಿದವರು, ಕರ್ನಾಟಕ ಆರೋಗ್ಯ ಅಭಿವೃದ್ಧಿ ಟ್ರಸ್ಟ್‌ನವರು ಕ್ಷೇತ್ರ ಸಂಶೋಧಕರಂತಹ ಕೆಲವು ತಜ್ಞರ ಜೊತೆಗೆ ಅದನ್ನು ಹಂಚಿಕೊಳ್ಳಲಾಯಿತು. ಮುಖ್ಯವಾದ ಸಲಹೆಗಳನ್ನು ಅನ್ವಯಿಸಲಾಯಿತು ಮತ್ತು ಮೊದಲ ಬಾರಿಗೆ ಇದನ್ನು ಬೆಂಗಳೂರಿನ ಗಾರ್ಮೆಂಟ್ ಕಾರ್ಖಾನೆಯಲ್ಲಿ ನಂತರ ಕಟ್ಟಡ ನಿರ್ಮಾಣ ಸ್ಥಳದಲ್ಲಿ ಪರೀಕ್ಷಿಸಲಾಯಿತು. ಕ್ಷೇತ್ರ ಪರೀಕ್ಷೆ ಮತ್ತು 47 ಜನ ಪಾಲ್ಗೊಂಡ ಗುಂಪಿನ ಮೊದಲ ಅಧ್ಯಯನ ಆರಂಭವಾದ ನಂತರ ಪ್ರಶ್ನಾವಳಿಯನ್ನು ಪುನಃ ಪರಿಷ್ಕರಿಸಲಾಯಿತು. ವಿಶದವಾದ ಸಂದರ್ಶನಗಳಿಗೆ ಪೂರ್ಣ ಸಿದ್ಧಪಡಿಸಿದಂತಹ ಅಥವಾ ಭಾಗಶಃ ತಯಾರಿಸಿದ ಪ್ರಶ್ನಾವಳಿ ಇರಲಿಲ್ಲ. ಬದಲು, ಅಧ್ಯಯನದ ನಿರ್ದಿಷ್ಟ ಉದ್ದೇಶಕ್ಕೆ ಸಂಬಂಧಪಟ್ಟ ವಿಷಯಗಳ ಪಟ್ಟಿ ತಯಾರಿಸಲಾಯಿತು ಮತ್ತು ಅಧ್ಯಯನದಲ್ಲಿ ಪಾಲ್ಗೊಂಡವರು ತಮ್ಮ ಅನುಭವಗಳನ್ನು ನಿರರ್ಗಳವಾಗಿ ವಿವರಿಸಲು ಪ್ರೋತ್ಸಾಹಿಸಲಾಯಿತು. ಪ್ರಾಯೋಗಿಕ ಅಧ್ಯಯನದ ವರದಿಯ ಅನುಮೋದನೆಯ ನಂತರ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಪ್ರಶ್ನಾವಳಿಯನ್ನು ಒಳಗೊಂಡ ನಿಜವಾದ ಅಧ್ಯಯನ ಆರಂಭವಾಯಿತು.

**ಅಧ್ಯಯನದ ತಂಡ ಮತ್ತು ಮಾದರಿಯನ್ನು ಗುರುತಿಸಲು ಇರುವ ಸವಾಲುಗಳು**

ಅಧ್ಯಯನ ತಂಡವು ಈ ಕೆಳಗಿನ ಕಾರ್ಮಿಕರ ಗುಂಪಿನ 500 ಜನರೊಡನೆ ಸಂವಹಿಸಬೇಕೆಂದು ನಿರೀಕ್ಷಿಸಲಾಯಿತು.

- ಬೆಂಗಳೂರು ಅಥವಾ ಮೈಸೂರಿಗೆ ಕೊಪ್ಪಳ ಮತ್ತು ಯಾದಗಿರಿಯ ವಿವಿಧ ತಾಲೂಕುಗಳ 5–7 ಹಳ್ಳಿಗಳಿಂದ ವಲಸೆ ಬರುವ ಕೆಲಸಗಾರರು (200 ಪ್ರತಿಕ್ರಿಯಿಸಿದವರು)
- ಬೆಂಗಳೂರಿಗೆ ವಲಸೆ ಬಂದ ಬಿಹಾರ ಮತ್ತು ಒರಿಸ್ಸಾದಂತಹ ಇತರ ರಾಜ್ಯಗಳ ಕೆಲಸಗಾರರು. (ಕರ್ನಾಟಕದ ಗಡಿಯಲ್ಲಿಲ್ಲದ ರಾಜ್ಯಗಳ 80 ಜನರನ್ನು ಸೇರಿಸಿ 100 ಪ್ರತಿಕ್ರಿಯಿಸಿದವರು)
- ಕೊಪ್ಪಳ ಮತ್ತು ಯಾದಗಿರಿಯಲ್ಲಿ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ವಲಸೆ ಹೋಗುವ ಕೆಲಸಗಾರರು. (50 ಪ್ರತಿಕ್ರಿಯಿಸಿದವರು)
- ಜೋಯ್ಡಾ (ಉತ್ತರ ಕನ್ನಡ) ಮತ್ತು ಬೆಳಗಾವಿ ಜಿಲ್ಲೆಯ 3 ಹಳ್ಳಿಗಳಿಂದ ಗೋವಾ ಮತ್ತು ಶೋಲಾಪುರಕ್ಕೆ ವಲಸೆ ಬಂದ 100 ಕೆಲಸಗಾರರು.

ಅಧ್ಯಯನದ ತಂಡವು ಅಧ್ಯಯನದ ಮೂಲತಂಡ ಮತ್ತು ಕ್ಷೇತ್ರ ಶೋಧಕರನ್ನು ಒಳಗೊಂಡಿದೆ. ಮೂಲ ಅಧ್ಯಯನದ ತಂಡವು ಸಾಮಾಜಿಕ ಅಭಿವೃದ್ಧಿಯ ಸಮಿತಿಯ ಪ್ರಾಥಮಿಕ ಸಂಶೋಧಕರನ್ನು ಸೇರಿದಂತೆ ಮೂವರು ಸಂಶೋಧಕರನ್ನು ಒಳಗೊಂಡಿದೆ. ಅಧ್ಯಯನವನ್ನು ಪ್ರಾದೇಶಿಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು/ಪ್ರಾದೇಶಿಕ ಸಂಸ್ಥೆಗಳ ಸಾಮಾಜಿಕ ವಿಜ್ಞಾನಿಗಳನ್ನು ಒಳಗೊಂಡಂತೆ, ಕ್ಷೇತ್ರ ಸಂಶೋಧನೆಯ ಐದು ತಂಡಗಳ ಸಹಾಯದಿಂದ ನಡೆಸಲಾಯಿತು. ಪ್ರತಿಯೊಂದು ತಂಡವೂ ಕೊನೆಯ ಪಕ್ಷ ಒಬ್ಬರು

ಮಹಿಳಾ ಮತ್ತು ಒಬ್ಬರು ಪುರುಷ ಸದಸ್ಯರನ್ನು ಒಳಗೊಂಡಿದೆ. ಈ ಯೋಜನಯ ಮಾರ್ಗದರ್ಶಕ ಹಾಗೂ ಐದು ಅಧ್ಯಯನ ತಂಡಗಳಿಗೆ ಅಭಿಶಿಕ್ಷಣದ ಜೊತೆ ತರಬೇತಿಯ ಐದು ಅವಧಿಗಳನ್ನು ಆಯೋಜಿಸಲಾಯಿತು. ತರಬೇತಿಯ ಜೊತೆ ಮಾರ್ಗದರ್ಶನದ ಅವಧಿಯಲ್ಲಿ ಕ್ಷೇತ್ರ ಸಂಶೋಧಕರಿಗೆ ಈ ಕುರಿತು ಮಾಹಿತಿ ನೀಡಲಾಯಿತು: 1) ಯೋಜನೆ ಮತ್ತು ಅದರ ಉದ್ದೇಶಗಳು; ಮತ್ತು 2) ಅಧ್ಯಯನದ ಸಾಧನಗಳು ಮತ್ತು ಅವುಗಳ ಬಳಕೆ. ಮಾಹಿತಿ ಸಂಗ್ರಹ ಮತ್ತು ವಿಶದವಾದ ಸಂದರ್ಶನಗಳ ಆರಂಭದ ಕೆಲ ದಿನಗಳ ಕಾಲ ಮೂಲ ಅಧ್ಯಯನದ ತಂಡವು ಕ್ಷೇತ್ರ ಸಂಶೋಧಕರ ಪ್ರತೀ ತಂಡದ ಜೊತೆ ಸೇರಿ ಸುಗಮಗೊಳಿಸಿತು.

ಬೆಂಗಳೂರಿನಲ್ಲಿ ಪ್ರಾಯೋಗಿಕ ಅಧ್ಯಯನಕ್ಕೆ ಮಾಹಿತಿಯನ್ನು ಸಂಗ್ರಹಿಸಿದ ಕ್ಷೇತ್ರ ಶೋಧಕರಿಗೆ ಮೊದಲ ಮಾರ್ಗದರ್ಶನದ ಜೊತೆಗೆ ತರಬೇತಿಯನ್ನು ನಡೆಸಲಾಯಿತು. ಅದಕ್ಕಾಗಿ ಮೂಲ ಅಧ್ಯಯನದ ತಂಡವು ವಲಸೆ ವಿಚಾರದ ಕುರಿತು ಕೆಲಸ ಮಾಡಲು ಆಸಕ್ತಿ ಹೊಂದಿದ ಪ್ರಾದೇಶಿಕ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳನ್ನು ಸಂಪರ್ಕಿಸಿತು. ಕೆಲವು ಬಾರಿ ಸಮಾಲೋಚನೆ ನಡೆಸಿದ ನಂತರ ಬೆಂಗಳೂರು, ಮೈಸೂರು ಮತ್ತು ಗೋವಾದಲ್ಲಿ ಕ್ಷೇತ್ರ ಅಧ್ಯಯನ ನಡೆಸಲು ಮೂಲ ಅಧ್ಯಯನದ ತಂಡವು ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯದ ಸಮಾಜ ಶಾಸ್ತ್ರ ವಿಭಾಗ ಮತ್ತು ಗೋವಾ ವಿಶ್ವವಿದ್ಯಾಲಯದ ರಾಜಕೀಯ ವಿಜ್ಞಾನ ವಿಭಾಗದ ಜೊತೆ ಸೇರಿ ಕೆಲಸ ಮಾಡಲು ನಿರ್ಧರಿಸಿತು. ಈ ಎರಡೂ ವಿಭಾಗಗಳಿಂದ ಒಬ್ಬ ಶಿಕ್ಷಕ ವರ್ಗದವರು (ಸಹಾಯಕ ಪ್ರಾಧ್ಯಾಪಕ), ಸಾಮಾಜಿಕ ವಿಚಾರಗಳ ಮೇಲೆ ಈ ಹಿಂದೆ ಅಧ್ಯಯನ ನಡೆಸಿದಂತಹ ಎಂಎ ವಿದ್ಯಾರ್ಥಿಗಳನ್ನು ಮೂಲ ಅಧ್ಯಯನ ತಂಡಕ್ಕೆ ಆರಿಸಲು ಸಹಾಯ ಮಾಡಿದರು. ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯದ ಸಮಾಜ ಶಾಸ್ತ್ರ ವಿಭಾಗದಲ್ಲಿ ಎಂಎ ವಿದ್ಯಾರ್ಥಿಗಳಾಗಿ ದಾಖಲಾದ ಮೂವರು ಕ್ಷೇತ್ರ ಸಂಶೋಧಕರಿಗೆ, ಎರಡನೆಯ ಮಾರ್ಗದರ್ಶನದ ಜೊತೆಗಿನ ತರಬೇತಿಯನ್ನು ಆಯೋಜಿಸಲಾಯಿತು. ಈ ತಂಡವು ಬೆಂಗಳೂರು ಮತ್ತು ಮೈಸೂರಿನಲ್ಲಿ ಅಧ್ಯಯನವನ್ನು ನಡೆಸಿತು. ಮೂರನೆಯ ಕ್ಷೇತ್ರ ಶೋಧನಾ ತಂಡವು ಗೋವಾ ವಿಶ್ವವಿದ್ಯಾಲಯದ ರಾಜಕೀಯ ವಿಜ್ಞಾನ ವಿಭಾಗದ ಇಬ್ಬರು ಎಂಎ ವಿದ್ಯಾರ್ಥಿಗಳನ್ನು ಒಳಗೊಂಡಿತ್ತು ಮತ್ತು ಇವರು ಗೋವಾದಲ್ಲಿ ಅಧ್ಯಯನವನ್ನು ಕೈಗೊಂಡರು.

ಕ್ರೈಸ್ಟ್ ವಿಶ್ವವಿದ್ಯಾಲಯದ ಸಮಾಜ ಶಾಸ್ತ್ರದ ಇಬ್ಬರು ಎಂಎ ವಿದ್ಯಾರ್ಥಿಗಳನ್ನು ಮತ್ತು ಉತ್ತರ ಕರ್ನಾಟಕದಲ್ಲಿ ವಲಸೆಯ ಕುರಿತು ಈ ಹಿಂದೆ ಅಧ್ಯಯನ ನಡೆಸಿದ ಅನುಭವ ಹೊಂದಿದ ಸಮಾಜ ವಿಜ್ಞಾನಿಗಳನ್ನು ನಾಲ್ಕನೆಯ ತಂಡವು ಒಳಗೊಂಡಿತ್ತು. ಈ ತಂಡವು ಯಾದಗಿರಿ, ಕೊಪ್ಪಳ ಮತ್ತು ಶೋಲಾಪುರದಲ್ಲಿ ಅಧ್ಯಯನ ಮಾಡಬೇಕಿತ್ತು. ಉಲ್ಲೇಖ ನಿಯಮದ ಪ್ರಕಾರ ಪ್ರಕಾರ, ಜನರು ತಮ್ಮ ಮೂಲ ಜಿಲ್ಲೆಯಲ್ಲೇ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ವಲಸೆ ಹೋಗುವವರು ಯಾದಗಿರಿ ಮತ್ತು ಕೊಪ್ಪಳದ ಮಾದರಿಗಳಲ್ಲಿ ಇದ್ದರು. ಆದರೆ ತಂಡಕ್ಕೆ ಅಧ್ಯಯನಕ್ಕಾಗಿ ನಿರ್ದಿಷ್ಟವಾದ ಮಾದರಿಯು ದೊರಕಲಿಲ್ಲ. ಶೋಲಾಪುರದಲ್ಲಿ, ಅಧ್ಯಯನಕ್ಕೆ ಬೇಕಾದವರು ಉತ್ತರ ಕನ್ನಡ ಜಿಲ್ಲೆಯ ಬೆಳಗಾವಿ ಗ್ರಾಮದಿಂದ ಮತ್ತು ಬೆಳಗಾವಿ ಜಿಲ್ಲೆಯ ಮೂರು ಹಳ್ಳಿಗಳಿಂದ ಬಂದ ವಲಸಿಗರಾಗಿದ್ದರು. ಈ ವರ್ಗದ ವಲಸಿಗರು ಅಧ್ಯಯನ ತಂಡಕ್ಕೆ ಶೋಲಾಪುರದಲ್ಲಿ ಸಿಗಲಿಲ್ಲ. ಈ ಮಾದರಿಗಳನ್ನು ಕಂಡುಹಿಡಿಯಲು ಮೂಲ ಅಧ್ಯಯನ ತಂಡವು, ಜಿಲ್ಲಾ ಕಾರ್ಮಿಕ ಕಚೇರಿಯನ್ನು ಸಂಪರ್ಕಿಸಿತು. ಪುಣೆ, ಗೋವಾ, ಮಂಗಳೂರು, ಮೈಸೂರು ಮತ್ತು ಬೆಂಗಳೂರು ಕಟ್ಟಡ ನಿರ್ಮಾಣದ ಉತ್ಕರ್ಷದಿಂದಾಗಿ ವಲಸೆಗೆ ಜನಪ್ರಿಯ ಸ್ಥಳಗಳಾಗುವ ತನಕ, ಯಾದಗಿರಿ ಮತ್ತು ಕೊಪ್ಪಳದಲ್ಲಿ ಹಳ್ಳಿಯಿಂದ ಹಳ್ಳಿಗೆ ವಲಸೆ ಸೇರಿದಂತೆ, ಜಿಲ್ಲಾಂತರ್ಗತ ವಲಸೆ ಅಷ್ಟೊಂದು ಅಪರೂಪದ್ದಾಗಿ ಇರಲಿಲ್ಲ ಎಂದು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸ್ಥಳೀಯ ವಲಸಿಗ ಕೆಲಸಗಾರರು ತಿಳಿಸಿದರು. ಜನರು ಸಾಮಾನ್ಯವಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ ಇಲ್ಲವಾದಲ್ಲಿ ಜಿಲ್ಲೆಯ ಪ್ರಮುಖ ಪಟ್ಟಣಕ್ಕೆ ವಲಸೆ ಹೋಗುತ್ತಾರೆ. ಮೂಲ ಅಧ್ಯಯನ ತಂಡವು ಈ ವಿಚಾರವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ತಿಳಿಸಿ, ನಂತರ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅನುಮತಿ ಸಿಕ್ಕ ನಂತರ, ಕೊನೆಗೂ ಅಧ್ಯಯನ ತಂಡವು ಗ್ರಾಮೀಣ ಯಾದಗಿರಿ ಮತ್ತು ಕೊಪ್ಪಳದಿಂದ ಕ್ರಮವಾಗಿ ಆಯಾಯ ಜಿಲ್ಲಾ ಪ್ರಮುಖ ಪಟ್ಟಣಗಳಿಗೆ ವಲಸೆ ಹೋಗುವುದರ ಕುರಿತು ಅಧ್ಯಯನ ನಡೆಸಿತು.

ಶೋಲಾಪುರ ವಿಚಾರದಲ್ಲಿ, ಅಧ್ಯಯನ ತಂಡವು ಸಂಬಂಧಪಟ್ಟ ಸಂಸ್ಥೆಗಳು/ಸಂಘಟನೆಗಳು ಮತ್ತು ಕಾರ್ಮಿಕ ಕಚೇರಿಗಳೊಡನೆ ಸಮಾಲೋಚನೆ ನಡೆಸಿದರೂ, ಅವರಿಗೆ ಉತ್ತರಕನ್ನಡದ ಜೋಯ್ಡಾ ಮತ್ತು ಬೆಳಗಾವಿ ಜಿಲ್ಲೆಯ ಹಳ್ಳಿಗರ ವಲಸೆಯ ಯಾವುದೇ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗಲಿಲ್ಲ. ಮುಖ್ಯವಾಗಿ ಅಕ್ಕಿ, ಸಕ್ಕರೆ ಮತ್ತು ಜವಳಿ ಮಿಲ್ಲುಗಳಿಂದಾಗಿ ಶೋಲಾಪುರವು ವಲಸೆಗೆ ಜನಪ್ರಿಯ ತಾಣವಾಗಿತ್ತು. ಆದರೆ ಜಿಲ್ಲೆಯ ಆರ್ಥಿಕ ಪ್ರಾಮುಖ್ಯತೆ ಇತ್ತೀಚೆಗೆ ಕಡಿಮೆಯಾಗಿದೆ. ಉತ್ತರ ಕರ್ನಾಟಕದ ಕೆಲಸಗಾರರು ಶೋಲಾಪುರದಲ್ಲಿದ್ದರೂ, ಕರ್ನಾಟಕದ ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಯ ಕೆಲಸಗಾರರನ್ನು ಹುಡುಕಲು ಅಧ್ಯಯನ ತಂಡಕ್ಕೆ ಸಾಧ್ಯವಾಗಲಿಲ್ಲ. ತಂಡವು ಜಿಲ್ಲಾ ಕಾರ್ಮಿಕ ಕಚೇರಿಯೊಡನೆ ಸಮಾಲೋಚನೆ ನಡೆಸಿತು ಮತ್ತು ಅಧ್ಯಯನದ ಆ ಮಾದರಿಗಾಗಿ ಕೆಲವು ಕಾರ್ಮಿಕ ಗುತ್ತಿಗೆದಾರರನ್ನು ಸಂಪರ್ಕಿಸಿತು. ಆದರೆ ಈ ಅಧ್ಯಯನಕ್ಕಾಗಿ ಸಂಪರ್ಕಿಸಿದ ಸಂಬಂಧಪಟ್ಟ

ಎಲ್ಲ ವ್ಯಕ್ತಿಗಳೂ, ಜೋಯ್ಡಾ ಮತ್ತು ಬೆಳಗಾವಿಯಿಂದ ಜನರು ಶೋಲಾಪುರಕ್ಕೆ ವಲಸೆ ಹೋಗುವುದಿಲ್ಲವೆಂದು ನಂಬಿದ್ದರು .ಈ ಮಾಹಿತಿಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ತಿಳಿಸಲಾಯಿತು ಮತ್ತು ನಂತರ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಪರವಾನಿಗೆ ಪಡೆದ ನಂತರ, ಶೋಲಾಪುರದಲ್ಲಿರುವ ರಾಯಚೂರು, ವಿಜಯಪುರ ಮತ್ತು ಗುಲ್ಬರ್ಗಾ ಜಿಲ್ಲೆಯ ವಲಸಿಗರ ಕುರಿತು ಅಧ್ಯಯನ ನಡೆಸಲಾಯಿತು.

ಅಂತಿಮವಾಗಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅನುಮತಿ ಪಡೆದ ನಂತರ ಇವರೊಡನೆ ಅಧ್ಯಯನವನ್ನು ನಡೆಸಲಾಯಿತು:

- ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ 218 ಅಂತರ್–ಜಿಲ್ಲಾ ವಲಸಿಗರು
- ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಮುಖ್ಯವಾಗಿ ಭಾರತದ ಉತ್ತರ ಭಾಗದ 11 ರಾಜ್ಯಗಳಿಂದ ಬಂದಿರುವ 143 ಅಂತರ್–ರಾಜ್ಯ ವಲಸಿಗರು
- ಯಾದಗಿರಿ ಮತ್ತು ಕೊಪ್ಪಳದಿಂದ ಬಂದ 56 ಜಿಲ್ಲಾಂತರ್ಗತ ವಲಸಿಗರು; ಮತ್ತು
- ಗೋವಾ ಮತ್ತು ಶೋಲಾಪುರದಲ್ಲಿರುವ 101 ಅಂತರ್–ರಾಜ್ಯ ವಲಸಿಗರು

ಈ ಕೆಳಗಿನ ಪಟ್ಟಿಯು ಲಿಂಗ ಮತ್ತು ಮೂಲ ಸ್ಥಳದ ಆಧಾರದ ಮೇಲೆ ವಿವಿಧ ಸ್ಥಳದ ವಲಸೆಯ ಅಂಕಿ ಅಂಶವನ್ನು ನೀಡುತ್ತದೆ.

| **ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್–ಜಿಲ್ಲಾ ವಲಸಿಗರು** | | | | |
|---|---|---|---|---|
| **ವಲಸೆ ಬಂದ ಸ್ಥಳ** | ಮೂಲ ಸ್ಥಳ | ತೃತೀಯ ಲಿಂಗಿ | ಮಹಿಳೆ | ಪುರುಷ |
| ಬೆಂಗಳೂರು | ಯಾದಗಿರಿ (ಜಿಲ್ಲೆ) | 0 | 38 | 65 |
| | ಕೊಪ್ಪಳ (ಜಿಲ್ಲೆ) | 0 | 51 | 51 |
| ಮೈಸೂರು | ಯಾದಗಿರಿ (ಜಿಲ್ಲೆ) | 0 | 1 | 4 |
| | ಕೊಪ್ಪಳ (ಜಿಲ್ಲೆ) | 0 | 5 | 3 |
| ಯಾದಗಿರಿ **ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸಿಗರು** | | | | |
| ಯಾದಗಿರಿ | ಯಾದಗಿರಿ ತಾಲ್ಲೂಕು | 1 | 8 | 15 |
| | ಶಹಾಪುರ ತಾಲ್ಲೂಕು | 0 | 1 | 3 |
| ಕೊಪ್ಪಳ | ಕೊಪ್ಪಳ ತಾಲ್ಲೂಕು | 0 | 4 | 3 |
| | ಗಂಗಾವತಿ ತಾಲ್ಲೂಕು | 2 | 12 | 7 |
| **ಅಂತರ್–ರಾಜ್ಯ ವಲಸೆ: ಜೋಯ್ಡಾ ಮತ್ತು ಬೆಳಗಾವಿಯಿಂದ ಕಾರ್ಮಿಕರ ಹೊರ ಹರಿವು** | | | | |
| ಗೋವಾ | ಜೋಯ್ಡಾ (ಉತ್ತರ ಕನ್ನಡ) | 0 | 1 | 14 |
| | ಬೆಳಗಾವಿ (ಜಿಲ್ಲೆ) | 1 | 9 | 26 |
| ಸೋಲಾಪುರ | ವಿಜಯಪುರ (ಜಿಲ್ಲೆ) | 0 | 2 | 2 |
| | ರಾಯಚೂರು (ಜಿಲ್ಲೆ) | 0 | 21 | 19 |
| | ಗುಲ್ಬರ್ಗಾ(ಜಿಲ್ಲೆ) | 0 | 2 | 4 |
| **ಅಂತರ್–ರಾಜ್ಯ ವಲಸೆ: ಕರ್ನಾಟಕಕ್ಕೆ ಕಾರ್ಮಿಕರ ಒಳಹರಿವು** | | | | |
| ಬೆಂಗಳೂರು | ಪಶ್ಚಿಮ ಬಂಗಾಳ | 1 | 3 | 8 |
| | ಬಿಹಾರ | 0 | 1 | 16 |
| | ಜಾರ್ಖಂಡ್ | 0 | 2 | 6 |
| | ಓರಿಸ್ಸಾ | 0 | 3 | 6 |
| | ಛತ್ತೀಸ್‌ಗಢ | 0 | 3 | 0 |
| | ಮಧ್ಯ ಪ್ರದೇಶ | 0 | 1 | 0 |
| | ತಮಿಳುನಾಡು | 0 | 2 | 3 |
| | ಉತ್ತರ ಪ್ರದೇಶ | 0 | 0 | 2 |

| | | | | |
|---|---|---|---|---|
| | ಆಂಧ್ರಪ್ರದೇಶ | 0 | 4 | 0 |
| | ಪಂಜಾಬ್ | 0 | 0 | 2 |
| ಮೈಸೂರು | ಪಶ್ಚಿಮ ಬಂಗಾಳ | 0 | 5 | 16 |
| | ಬಿಹಾರ್ | 0 | 2 | 18 |
| | ಜಾರ್ಖಂಡ್ | 0 | 2 | 6 |
| | ಓರಿಸ್ಸಾ | 0 | 6 | 8 |
| | ಛತ್ತೀಸ್‌ಗಢ | 0 | 8 | 0 |
| | ಮಧ್ಯ ಪ್ರದೇಶ | 0 | 4 | 1 |
| | ಅಸ್ಸಾಂ | 0 | 0 | 2 |
| | ಪಂಜಾಬ್ | 0 | 0 | 2 |

**ಪ್ರಾಯೋಗಿಕ ಅಧ್ಯಯನ**

ಈ ಅಧ್ಯಯನವು ಬೆಂಗಳೂರಿನಲ್ಲಿ ಪ್ರಾಯೋಗಿಕ ಅಧ್ಯಯನದ ಮೂಲಕ ಆರಂಭವಾಯಿತು. ಬೆಂಗಳೂರಿನಲ್ಲಿ ನಿರ್ದಿಷ್ಟವಾದ ಅಧ್ಯಯನದಲ್ಲಿ ಪಾಲ್ಗೊಳ್ಳುವವರನ್ನು ಸಂಧಿಸಲು ಪ್ರಾಯೋಗಿಕ ಅಧ್ಯಯನವು ಬಹಳ ಸಹಕಾರಿಯಾಗಿತ್ತು. ಕರ್ನಾಟಕ ಆರೋಗ್ಯ ಪ್ರೋತ್ಸಾಹ ಟ್ರಸ್ ಸಹಕಾರದೊಂದಿಗೆ, ಈ ಮೊದಲು ವಲಸಿಗ ಕೆಲಸಗಾರರ ಸಮೀಕ್ಷೆ ನಡೆಸಿದ ಅನುಭವ ಉಳ್ಳ 3 ಶೋಧಕರನ್ನು ನಾವು ಗುರುತಿಸಿದೆವು. ಪ್ರಶ್ನಾವಳಿಯನ್ನು ಕರ್ನಾಟಕ ಆರೋಗ್ಯ ಪ್ರೋತ್ಸಾಹ ಟ್ರಸ್ಟ್‌ನ ತಜ್ಞರು ಮತ್ತು ಕ್ಷೇತ್ರ ಶೋಧಕರ ಜೊತೆಗೆ ಹಂಚಿಕೊಳ್ಳಲಾಯಿತು. ಅದನ್ನು ಮತ್ತೊಮ್ಮೆ ಪರಿಷ್ಕರಿಸಲಾಯಿತು ಮತ್ತು ಪ್ರಾಯೋಗಿಕ ಅಧ್ಯಯನ ನಡೆಸುವ ಮೊದಲು ಶೋಧಕರಿಗೆ ಒಂದು ದಿನದ ತರಬೇತಿಯನ್ನು ನೀಡಲಾಯಿತು. ಅಧ್ಯಯನದ ಕುರಿತು ಶೋಧಕರಿಗೆ ಶಿಕ್ಷಣ ನೀಡಿ ಅವರಿಗೆ ಈ ರೀತಿಯಲ್ಲಿ ಅಧ್ಯಯನದ ಸಾಧನಗಳ ಪರಿಚಯ ಮಾಡಿ ಕೊಡುವುದು ಈ ತರಬೇತಿಯ ಉದ್ದೇಶವಾಗಿದೆ. ಅಂದರೆ

- ಸಮೀಕ್ಷೆ ನಡೆಸಲು ಸರಿಯಾಗಿ ರೂಪಿಸಿದ ಪ್ರಶ್ನಾವಳಿಯನ್ನು ಬಳಸುವುದು
- ನಿರ್ದಿಷ್ಟ ವಿಷಯದ ಕುರಿತು ವಿಶದವಾದ ಸಂದರ್ಶನ ನಡೆಸುವುದು
- ನಿರ್ದಿಷ್ಟ ವಿಷಯದ ಬಗ್ಗೆ ಕೇಂದ್ರೀಕೃತ ಗುಂಪು ಚರ್ಚೆ ನಡೆಸುವುದು


ವಲಸಿಗ ಕೆಲಸಗಾರರ ಸಮೀಕ್ಷೆ ನಡೆಸಿದ ಅನುಭವ ಕ್ಷೇತ್ರ ಶೋಧಕರಿಗೆ ಇದ್ದ ಕಾರಣ, ಅವರಿಗೆ ಕೆಲವು ಗುತ್ತಿಗೆದಾರರ ಪರಿಚಯವಿತ್ತು. ಪ್ರಾಯೋಗಿಕ ಅಧ್ಯಯನಕ್ಕಾಗಿ ಕಾರ್ಮಿಕ ಗುತ್ತಿಗೆದಾರರನ್ನು ಸಂಪರ್ಕಿಸಲಾಯಿತು. ಉಡುಪಿನ ಕಾರ್ಖಾನೆಯ ಕೆಲಸಗಾರರನ್ನು ಮತ್ತು ಕಟ್ಟಡ ನಿರ್ಮಾಣ ಕೆಲಸಗಾರರನ್ನು ಸಂಪರ್ಕಿಸಲು ಅಧ್ಯಯನದ ತಂಡಕ್ಕೆ ಈ ಗುತ್ತಿಗೆದಾರರರು ಸಹಾಯಮಾಡಿದರು. ಸಂಪರ್ಕಿಸಿದ ಮೂರು ಗುತ್ತಿಗೆದಾರರಲ್ಲಿ ಒಬ್ಬ ಮಾತ್ರ ನೋಂದಾಯಿಸಲ್ಪಟ್ಟಿದ್ದನು. ಅವನು ಯಾದಗಿರಿಯವನಾಗಿದ್ದು, ಬೆಂಗಳೂರಿನ ಕಟ್ಟಡ ಕಾಮಗಾರಿ ಸ್ಥಳಗಳಿಗೆ ಯಾದಗಿರಿ ಮತ್ತು ಕೊಪ್ಪಳವನ್ನೊಳಗೊಂಡಂತೆ, ಉತ್ತರ ಕರ್ನಾಟಕದ ಕೆಲ ಜಿಲ್ಲೆಗಳಿಂದ ಕೆಲಸಗಾರರನ್ನು ಒದಗಿಸುತ್ತಿದ್ದನು.



ಕಾರ್ಖಾನೆಯಲ್ಲಿ ಕ್ಷೇತ್ರ ಶೋಧಕ ಕೇಂದ್ರೀಕೃತ ಗುಂಪು ಚರ್ಚೆಗೆ ಸಹಾಯ ಮಾಡುತ್ತಿರುವುದು

ಎರಡನೆಯ ಗುತ್ತಿಗೆದಾರ ಬೆಳಗಾವಿಯವನಾಗಿದ್ದು, ಮುಖ್ಯವಾಗಿ ಬೆಂಗಳೂರಿನ ಉಡುಪಿನ ಕಾರ್ಖಾನೆಗಳಿಗೆ ಉತ್ತರ ಕರ್ನಾಟಕದ ಮಹಿಳಾ ಕೆಲಸಗಾರರನ್ನು ಸಂಪರ್ಕಿಸಿ ಪೂರೈಸುತ್ತಿದ್ದನು. ಮೂರನೆಯ ಗುತ್ತಿಗೆದಾರ ಬಿಹಾರದವನಾಗಿದ್ದು, ಬೆಂಗಳೂರಿನ ಕಟ್ಟಡ ನಿರ್ಮಾಣ ಕಾಮಗಾರಿ ಸ್ಥಳಗಳಿಗೆ ಬಿಹಾರದಿಂದ ಕೆಲಸಗಾರರನ್ನು ಕರೆ ತಂದಿದ್ದನು. ಪ್ರಾಯೋಗಿಕ ಅಧ್ಯಯನಕ್ಕೆ, ಕೇವಲ ಎರಡು ವರ್ಗದ ವಲಸಿಗ ಕೆಲಸಗಾರರನ್ನು ಸೀಮಿತಗೊಳಿಸಲಾಯಿತು:

1) ಉಡುಪಿನ ಕಾರ್ಖಾನೆಯ ಕೆಲಸಗಾರರು (12 ಜನ ಅಧ್ಯಯನದಲ್ಲಿ ಭಾಗವಹಿಸುವವರು) ಮತ್ತು 2) ಕಟ್ಟಡ ಕಾಮಗಾರಿಯ ಕೆಲಸಗಾರರು(35  ಜನ ಅಧ್ಯಯನದಲ್ಲಿ ಭಾಗವಹಿಸುವವರು). ಉಡುಪಿನ ಕಾರ್ಖಾನೆಯ ಕೆಲಸಗಾರರು ಬೊಮ್ಮನಹಳ್ಳಿ ಮತ್ತು ಗರ್ವೆಭಾವಿಪಾಳ್ಯದಲ್ಲಿರುವ ಎರಡು ಕಾರ್ಖಾನೆಯ ಕೆಲಸಗಾರರಾಗಿದ್ದು, ಕಟ್ಟಡ ನಿರ್ಮಾಣ ಕಾಮಗಾರಿಯ ಕೆಲಸಗಾರರು ಬೇಗೂರಿನ ಡಿಎಲ್‌ಎಫ್ ಮತ್ತು ಎಸ್‌ಆರ್‌ಎಸ್ ಕಟ್ಟಡ ನಿರ್ಮಾಣ ಸ್ಥಳದಲ್ಲಿದ್ದ ಕೆಲಸಗಾರರಾಗಿದ್ದಾರೆ. ಉಡುಪಿನ ಕಾರ್ಖಾನೆಯ ಎಲ್ಲ 12 ಕೆಲಸಗಾರರು ಮಹಿಳೆಯರಾಗಿದ್ದು, ಅವರಲ್ಲಿ 6 ಯಾದ್ಗಿರರದಿಂದ, 4 ಕೊಪ್ಪಳದಿಂದ ಮತ್ತು 2 ಒರಿಸ್ಸಾದಿಂದ ಬಂದವರಿದ್ದರು. 35 ಕಟ್ಟಡ ಕಾಮಗಾರಿ ಕೆಲಸಗಾರರ ಅಧ್ಯಯನದಲ್ಲಿ ಭಾಗವಹಿಸುವವರಲ್ಲಿ ಕರ್ನಾಟಕದಿಂದ 26, ಒರಿಸ್ಸಾದಿಂದ 4, ಬಿಹಾರದಿಂದ 3 ಮತ್ತು ಜಾರ್ಖಂಡ್‌ನಿಂದ 2 ಕೆಲಸಗಾರರಿದ್ದರು. ಕರ್ನಾಟಕದಿಂದ ವಲಸೆ ಬಂದ ಕಟ್ಟಡ ಕಾಮಗಾರಿ ಕೆಲಸಗಾರರಲ್ಲಿ 15 ಯಾದಗಿರಿಯಿಂದ ಮತ್ತು 11 ಕೊಪ್ಪಳದಿಂದ ಬಂದವರಾಗಿದ್ದರು.



ಬೆಂಗಳೂರಿನಲ್ಲಿ ಉಡುಪಿನ ಕಾರ್ಖಾನೆ ಕೆಲಸಗಾರರನ್ನು ಅವರ ಕೆಲಸದ ಸ್ಥಳದಲ್ಲಿ ಸಂದರ್ಶಿಸುತ್ತಿರುವುದು

ಪ್ರತೀ ಸ್ಥಳದಲ್ಲಿ ಸಮೀಕ್ಷೆ ನಡೆಸಿದ ನಂತರ ಅನೌಪಚಾರಿಕ ಗುಂಪು ಚರ್ಚೆ ನಡೆಸಲಾಯಿತು. ಪ್ರಾಯೋಗಿಕ ಅಧ್ಯಯನಕ್ಕೆ ಎರಡು ಕೇಂದ್ರೀಕರಿಸಿದ ಗುಂಪು ಚರ್ಚೆಗಳನ್ನು ನಡೆಸಲಾಯಿತು. ಉಡುಪಿನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಯಾದಗಿರಿ ಮತ್ತು ಕೊಪ್ಪಳದ 5 ಮಹಿಳಾ ಕೆಲಸಗಾರರೊಡನೆ ಮೊದಲ ಕೇಂದ್ರೀಕೃತ ಗುಂಪು ಚರ್ಚೆ ನಡೆಸಲಾಯಿತು ಮತ್ತು ಇನ್ನೊಂದು ಕೇಂದ್ರೀಕೃತ ಗುಂಪು ಚರ್ಚೆಯನ್ನು ಬೇರೆ ರಾಜ್ಯದ (ಬಿಹಾರ, ಒರಿಸ್ಸಾ ಮತ್ತು ಜಾರ್ಖಂಡ್) 7 ಕಟ್ಟಡ ಕಾಮಗಾರಿ ಕೆಲಸಗಾರರೊಡನೆ ನಡೆಸಲಾಯಿತು. ಇದಲ್ಲದೇ, ಉಡುಪಿನ ಕಾರ್ಖಾನೆಯ ಮಹಿಳಾ ಕೆಲಸಗಾರರು, ಕಟ್ಟಡ ನಿರ್ಮಾಣ ಕಾಮಗಾರಿಯ ಕೆಲಸಗಾರರು, ಕಾರ್ಮಿಕ ಗುತ್ತಿಗೆದಾರರು ಮತ್ತು ಬೇಗೂರಿನ ಡಿಎಲ್‌ಎಫ್‌ನಲ್ಲಿರುವ ಕಟ್ಟಡ ನಿರ್ಮಾಣ ಸ್ಥಳದ ವ್ಯವಸ್ಥಾಪಕರೊಡನೆ, ವಿಶದವಾದ ಸಂದರ್ಶನವನ್ನು ನಡೆಸಲಾಯಿತು. ನಾವು ಸಮೀಕ್ಷೆಯಲ್ಲಿ ಒಟ್ಟುಗೂಡಿಸಿದಂತಹ ಮಾಹಿತಿಗಳನ್ನು ಮಾನ್ಯಮಾಡಲು ವಿಶದವಾದ ಸಂದರ್ಶನಗಳು, ಅನೌಪಚಾರಿಕ ಚರ್ಚೆ ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳು ಗಣನೀಯವಾಗಿ ಸಹಾಯಕಾರಿಯಾಗಿದ್ದವು.

**ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಧ್ಯಯನದ ಸ್ಥಳಗಳು**

ವಲಸಿಗ ಕೆಲಸಗಾರರ ಕೆಲಸದ ಸ್ಥಳದಲ್ಲಿ ಮತ್ತು ಅವರ ಮನೆಗಳಲ್ಲಿ ಅಧ್ಯಯನವನ್ನು ನಡೆಸಲಾಯಿತು. ಭಾಗವಹಿಸಿದ ವಲಸಿಗ ಕೆಲಸಗಾರರನ್ನು ಅವರ ಕೆಲಸದ ಸ್ಥಳದಲ್ಲಿ ಸಂದರ್ಶಿಸಲಾಗಿದ್ದು, ಭಾಗವಹಿಸಿದವರ ಮನೆಗಳಿಗೆ ಹೋಗಿದ್ದರಿಂದ ಅವರ ಜೀವನದ ಸ್ಥಿತಿಯ ಕುರಿತಾದ ಮಹತ್ವದ ವಿಚಾರಗಳು ದೊರೆತವು. ಬೆಂಗಳೂರಿನಲ್ಲಿ, ಯಾದಗಿರಿಯ ವಲಸಿಗರು ವಾಸಿಸುತ್ತಿರುವ ಐಡಿಯಲ್ ಹೋಮ್ ಕ್ಲಬ್, ಕೆಂಚನಹಳ್ಳಿ, ಆದಿತ್ಯ ಲೇ ಔಟ್, ಮತ್ತು ರಾಜರಾಜೇಶ್ವರಿ ನಗರದಲ್ಲಿ ಅಧ್ಯಯನವನ್ನು ನಡೆಸಲಾಯಿತು. ಅಧ್ಯಯನದಲ್ಲಿ ಭಾಗಿಯಾದ ಕೊಪ್ಪಳದ ಕಾರ್ಮಿಕ ವಲಸಿಗರು ಬಂಗಾರಪ್ಪ ಗುಡ್ಡೆ ಮತ್ತು ಉತ್ತರಹಳ್ಳಿಯಲ್ಲಿ ವಾಸಿಸುತ್ತಿದ್ದರು. ಅಧ್ಯಯನದಲ್ಲಿ ಭಾಗಿಯಾದ ಬೇರೆ ರಾಜ್ಯಗಳವರು ಮುಖ್ಯವಾಗಿ ಬಿಹಾರ, ಜಾರ್ಖಂಡ್ ಮತ್ತು ಒರಿಸ್ಸಾದಿಂದ ಬಂದವರು. ಒಟ್ಟಿನಲ್ಲಿ ಅಧ್ಯಯನದಲ್ಲಿ ಭಾಗಿಯಾದ 267 ಜನ ಬೆಂಗಳೂರಿನಲ್ಲಿ ಕೆಲಸಮಾಡುತ್ತಿದ್ದಾರೆ.



ಬೆಂಗಳೂರಿನ ಕಟ್ಟಡ ನಿರ್ಮಾಣ ಸ್ಥಳದಲ್ಲಿ ಕೆಲಸಗಾರರು ಮದುವೆ ಕಾರ್ಯಕ್ರಮಕ್ಕೆ ತಯಾರಿ ನಡೆಸುತ್ತಿರುವುದು



ಬೆಂಗಳೂರಿನಲ್ಲಿರುವ ಕೆಲಸಗಾರರ ಮನೆ


ಮೈಸೂರಿನಲ್ಲಿ ವಲಸೆಯು ಮುಖ್ಯವಾಗಿ ನೆಸ್ಲೆ, ಗ್ರಾನೈಟ್ ಮತ್ತು ರಬ್ಬರ್ ಕಾರ್ಖಾನೆಗಳಿರುವ ನಂಜನಗೂಡಿನಂತಹ ಹೊರವಲಯದಲ್ಲಿರುವ ಕೈಗಾರಿಕಾ ಉಪನಗರಗಳಲ್ಲಿ ಕೇಂದ್ರೀಕೃತವಾಗಿದೆ. ಕೈಗಾರಿಕಾ ವಿಭಾಗವಲ್ಲದೇ, ಮೈಸೂರಿನಲ್ಲರುವ ವಲಸಿಗರು ಕಟ್ಟಡ ನಿರ್ಮಾಣ, ಮನೆಗೆಲಸ, ಚಿಲ್ಲರೇ ವ್ಯಾಪಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಉತ್ತರ ಭಾರತದ ರಾಜ್ಯಗಳಿಂದ ಬಂದವರು ಹೆಚ್ಚಾಗಿ ಚಿಲ್ಲರೆ ವ್ಯಾಪಾರದಲ್ಲಿ, ಮತ್ತು ಅಕ್ಕಪಕ್ಕದ ರಾಜ್ಯಗಳಿಂದ ಬಂದ ವಲಸಿಗರು ಸಾಮಾನ್ಯವಾಗಿ ಮನೆ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಹೋಟೆಲ್‌ಗಳು ಮತ್ತು ಉಪಹಾರಗೃಹಗಳು ವಲಸಿಗರಿಗೆ ಅದರಲ್ಲೂ ಅಸ್ಸಾಂ ಮತ್ತು ಇತರ ಈಶಾನ್ಯ ರಾಜ್ಯಗಳ ಅಂತರ್–ರಾಜ್ಯಗಳ ವಲಸಿಗರಿಗೆ ಜನಪ್ರಿಯ ಜೀವನ ನಿರ್ವಹಣಾ ಆಯ್ಕೆಗಳಾಗುತ್ತಿವೆ. ಅಧ್ಯಯನದ ತಂಡಕ್ಕೆ, ಮೈಸೂರು ನಗರದಲ್ಲಿರುವ ನಝರಾಬಾದ್ ಪ್ರದೇಶ ಮತ್ತು ಮೈಸೂರಿನ ಪಕ್ಕದಲ್ಲಿರುವ ಕೈಗಾರಿಕಾ ಉಪನಗರವಾದ ನಂಜನಗೂಡಿನಲ್ಲಿರುವ ವಲಸಿಗ ಕೆಲಸಗಾರರೊಡನೆ ಸಂವಹಿಸಬೇಕೆಂದು ಅಧಿಕಾರಿಗಳು ಮತ್ತು ಕಾರ್ಮಿಕ ಗುತ್ತಿಗೆದಾರರಂತಹ ಸಂಬಂಧ ಪಟ್ಟ ಅಧಕಾರಿಗಳು ಸಲಹೆ ನೀಡಿದರು. ಕೈಗಾರಿಕಾ ಉಪನಗರದಲ್ಲಿ, ವಲಸೆ ಬಂದ ಕೆಲಸದವರು ಉದ್ಯೋಗ ನೀಡಿದಾತ ಕಾರ್ಖಾನೆಯ ಆವರಣದಲ್ಲಿ ಒದಗಿಸಿರುವ ವಸತಿ ಸೌಕರ್ಯದಲ್ಲಿ ವಾಸಿಸುತ್ತಾರೆ. ಮೈಸೂರು ನಗರದಲ್ಲಿರುವ ನಝರಾಬಾದ್ ಪ್ರದೇಶದ ಕಾರ್ಮಿಕರ ಕಾಲೋನಿಯಲ್ಲಿ; ಮೈಸೂರಿನ ಹೊರವಲಯದಲ್ಲಿರುವ ನಂಜನಗೂಡು ಕೈಗಾರಿಕಾ ಉಪನಗರದ ಎರಡು ಕಾರ್ಮಿಕ ಕಾಲೋನಿಗಳಲ್ಲಿ; ಮತ್ತು ನೆಸ್ಲೆ ಮತ್ತು ರೀಡ್ ಮತ್ತು ಟೇಲರ್ ಕಂಪನಿಯ ಆವರಣದಲ್ಲಿ ಅಧ್ಯಯನವನ್ನು ನಡೆಸಲಾಯಿತು. 13 ಅಂತರ್–ಜಿಲ್ಲಾ (ಯಾದಗಿರಿ ಮತ್ತು ಕೊಪ್ಪಳ) ಮತ್ತು 80 ಅಂತರ್–ರಾಜ್ಯ ವಲಸಿಗರನ್ನು ಒಳಗೊಂಡಂತೆ, ಒಟ್ಟು 93 ವಲಸಿಗ ಕೆಲಸಗಾರರನ್ನು ಮೈಸೂರಿನಲ್ಲಿ ಸಂದರ್ಶಿಸಲಾಯಿತು.



ಮೈಸೂರಿನಲ್ಲಿ ವಲಸಿಗ ಕೆಲಸಗಾರರಿಗಿರುವ ವಸತಿಗೃಹ

**ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಅಧ್ಯಯನದ ಸ್ಥಳಗಳು**

ಈ ಮೊದಲು ತಿಳಿಸಿದಂತೆ, ಕೊಪ್ಪಳ, ಯಾದಗಿರಿ ಮತ್ತು ಶೋಲಾಪುರ ಅಷ್ಟೇ ಅಲ್ಲ ಗೋವಾದಲ್ಲಿ ಬೇಕಾಗಿರುವ ಮಾದರಿಯನ್ನು ಹುಡುಕುವುದು ಸುಲಭವಲ್ಲ, ಕ್ಷೇತ್ರ ಸಂಶೋಧಕರು ಮತ್ತು ಸಿಎಸ್ಟಿಶಯ ಸದಸ್ಯರನ್ನು ಹೊಂದಿರುವ ಅಧ್ಯಯನ ತಂಡವು, ಮಾದರಿಗಾಗಿ ಸಂಪರ್ಕಿಸಿದ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳ ಸೂಚನೆಯ ಮೇರೆಗೆ, ಈ ಪಟ್ಟಣಗಳ ಹಲವಾರು ಪ್ರದೇಶಗಳಿಗೆ ಭೇಟಿನೀಡಿತು. ಯಾದ್ಗೀಕರ ಮತ್ತು ಕೊಪ್ಪಳ ಗ್ರಾಮೀಣ ಪ್ರದೇಶದ ಕೆಲಸಗಾರರು, ತಮ್ಮ ಜಿಲ್ಲೆಯ ಇನ್ನೊಂದು ಹಳ್ಳಿಗಿಂತ ಬೇರೆ ಜಿಲ್ಲೆ ಮತ್ತು/ಅಥವಾ ರಾಜ್ಯಗಳಿಗೆ ವಲಸೆಹೋಗಲು ಇಚ್ಛಿಸುತ್ತಾರೆಂದು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಂಸ್ಥೆಗಳು ಕೂಡ ಅಭಿಪ್ರಾಯಪಟ್ಟರು. ಈ ಮೊದಲು ತಿಳಿಸಿದಂತೆ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಒಪ್ಪಿಗೆ ಪಡೆದೊಡನೆ, ನಾವು ಯಾದಗಿರಿಯ ಗ್ರಾಮೀಣ ಪ್ರದೇಶದಿಂದ ಯಾದಗಿರಿ ಪಟ್ಟಣಕ್ಕೆ ಬಂದ ವಲಸಿಗರ ಮತ್ತು ಕೊಪ್ಪಳ ಗ್ರಾಮೀಣ ಪ್ರದೇಶದಿಂದ ಕೊಪ್ಪಳ ಪಟ್ಟಣಕ್ಕೆ ವಲಸೆ ಬಂದವರ ಮೇಲೆ ನಮ್ಮ ಅಧ್ಯಯನವನ್ನು ಕೇಂದ್ರೀಕರಿಸಿದೆವು.



ಯಾದಗಿರಿಯಲ್ಲಿರುವ ಜಿಲ್ಲಾಂತರ್ಗತ ವಲಸಿಗ ಕೆಲಸಗಾರರ ಮನೆ

ಕೊಪ್ಪಳ ಕರ್ನಾಟಕದ ಒಂದು ಚಿಕ್ಕ ಜಿಲ್ಲಾ ನಗರ. ಈ ನಗರದಲ್ಲಿ ವಲಸಿಗ ಕೆಲಸಗಾರರಿಗೆ ಜೀವನ ನಿರ್ವಹಣೆಯ ಆಯ್ಕೆಗಳು ಬಹಳ ಕಡಿಮೆ. ಅಧ್ಯಯನ ತಂಡವು, ಮೆಹಬೂಬ್ ನಗರ, ಚುಕುನಲ್ ರಸ್ತೆ, ಭಾಗ್ಯನಗರ, ಓಜನಹಳ್ಳಿ ರಸ್ತೆ ಮತ್ತು ಕೊಪ್ಪಳದ ವಿಜಯ ನಗರ ಕಾಲೋನಿಗೆ ಭೇಟಿ ನೀಡಿತು. ಇಟ್ಟಿಗೆ ಭಟ್ಟಿ, ಕಟ್ಟಡ ನಿರ್ಮಾಣ ಸ್ಥಳಗಳಂತಹ ಕೆಲವೇ ಭಾಗಗಳಲ್ಲಿ ಕೆಲಸಗಾರರಿಗೆ ಉದ್ಯೋಗದ ಲಭ್ಯತೆ ಇತ್ತು. ಈ ವಿಭಾಗಗಳು ಹೆಚ್ಚಾಗಿ ಉತ್ತರ ಭಾರತದ ಕೆಲಸಗಾರರನ್ನು ಅಥವಾ ಅದೇ ಊರಿನವರನ್ನು ಆಕರ್ಷಿಸುತ್ತಿದ್ದವು. ಗ್ರಾಮೀಣ ಮತ್ತು ನಗರ ಪ್ರದೇಶಗಳನ್ನೊಳಗೊಂಡಂತೆ, ಕೊಪ್ಪಳದ ಸುತ್ತಮುತ್ತಲಿನ ಭಾಗದಿಂದ ಜನರು, ಕೆಲಸಕ್ಕಾಗಿ ಬೆಳಗಿನ ಹೊತ್ತು ನಗರಕ್ಕೆ ಬಂದು, ಸಂಜೆ ತಮ್ಮ ಸ್ಥಳಗಳಿಗೆ ವಾಪಸ್ಸು ಹೋಗುತ್ತಿದ್ದರು.



ಕೊಪ್ಪಳದಲ್ಲಿ ಇಟ್ಟಿಗೆ ಭಟ್ಟಿ ಕೆಲಸಗಾರರು

ಕೊಪ್ಪಳದ ಓಜನಹಳ್ಳಿ ರಸ್ತೆ ಮತ್ತು ವಿಜಯ ನಗರ ಕಾಲೊನಿಯಲ್ಲಿ ಜಿಲ್ಲಾಂತರ್ಗತ ವಲಸಿಗರು ಕಂಡುಬಂದರು. ಓಜನಹಳ್ಳಿ ರಸ್ತೆಯು ನಾಲ್ಕು ಇಟ್ಟಿಗೆ ಭಟ್ಟಿಗಳ ಕೆಲಸಗಾರ ಮನೆಯಾಗಿತ್ತು ಮತ್ತು ವಿಜಯ ನಗರ ಕಾಲೊನಿಯಲ್ಲಿ ಒಂದು ಇಟ್ಟಿಗೆ ಭಟ್ಟಿಯ ಕೆಲಸಗಾರರು ಮತ್ತು ಕಟ್ಟಡ ನಿರ್ಮಾಣ ಮಾಡುವ ಕೆಲಸಗಾರರು ನೆಲೆಸಿದ್ದರು. ಈ ಎರಡು ಪ್ರದೇಶಗಳಲ್ಲಿ ನೆಲೆಸಿರುವ ಕೆಲಸಗಾರರು ಸಾಧಾರಣವಾಗಿ ಕೊಪ್ಪಳ ತಾಲ್ಲೂಕಿನವರೇ ಆಗಿದ್ದರು. ಈ ಅಧ್ಯಯನಕ್ಕಾಗಿ ಕೊಪ್ಪಳದಲ್ಲಿ ಸಂದರ್ಶನ ನಡೆಸಿದ 28 ಜಿಲ್ಲಾಂತರ್ಗತ ವಲಸಿಗರು, ಕೊಪ್ಪಳ ನಗರದಿಂದ ಸುಮಾರು 35–49 ಕಿಲೋಮೀಟರ್ ದೂರದಲ್ಲಿರುವ ಕೊಪ್ಪಳ ಬ್ಲಾಕ್ನಿ ಅಬ್ಬೀಗೇರಿ ಗ್ರಾಮದವರು ಮತ್ತು ಗಂಗಾವತಿ ಬ್ಲಾಕ್‌ನ ಕಕ್ಕರಗೋಳ್ ಮತ್ತು ಕೆಸರ್ಹರಟ್ಟಿ ಗ್ರಾಮದವರು.

ಯಾದಗಿರಿಯಲ್ಲಿ ಅಧ್ಯಯನ ತಂಡವು ಯಾದಗಿರಿ ನಗರದ ಹಲವಾರು ಪ್ರದೇಶಗಳಿಗೆ ಭೇಟಿನೀಡಿತು ಮತ್ತು ರಾಜೀವ ಗಾಂಧಿ ನಗರ, ಸಾಯಿನಗರ ಮತ್ತು ಶಾಜೀವನ ನಗರಗಳಲ್ಲಿ ಜಿಲ್ಲಾಂತರ್ಗತ ಕೆಲಸಗಾರರು ಇವರಿಗೆ ಸಿಕ್ಕರು. ಈ ಪ್ರದೇಶಗಳಲ್ಲಿದ್ದ ಜಿಲ್ಲಾಂತರ್ಗತ ವಲಸಿಗ ಕೆಲಸಗಾರರು ಯಾದಗಿರಿ ಜಿಲ್ಲೆಯ ಕಮುಲು, ಮಡೆಚಲ್ಲಿ, ಗರೇಸ್ಮಗಿ, ಮಕ್ಷಿ, ಕಡಮಟ್ಟಿ, ಯಮಚೂರು, ಕಳವಳಗುಡಿ ಗ್ರಾಮದವರು. ಯಾದಗಿರಿಯಲ್ಲಿ ಭಾಗವಹಿಸಿದಂತಹ 28 ಜನರ ಸಂದರ್ಶನ ಮಾಡಲಾಯಿತು.

**ಗೋವಾ ಮತ್ತು ಶೋಲಾಪುರದಲ್ಲಿ ಅಧ್ಯಯನದ ಸ್ಥಳಗಳು**

ಗೋವಾದಲ್ಲಿ ಅಧ್ಯಯನ ನಡೆಸುತ್ತಿದ್ದ ತಂಡದವರಿಗೆ, ಉತ್ತರ ಕನ್ನಡ ಜಿಲ್ಲೆಯ ಜೋಯ್ಡಾ ಗ್ರಾಮದಿಂದ ಬಂದ ವಲಸಿಗ ಕೆಲಸಗಾರರನ್ನು ಹುಡುಕುವುದು ಕಷ್ಟವಾಗಿತ್ತು. ತಂಡದವರು, ಕಾರ್ಮಿಕ ಕಾರ್ಯದರ್ಶಿಯವರ ಕಚೇರಿಯನ್ನು ಸಂಪರ್ಕಿಸಿತು. ಅವರು ಸಂಬಂದಪಟ್ಟ ಅಧಿಕಾರಿಗಳು ಮತ್ತು ಸಂಸ್ಥೆಯ ಸಂಪರ್ಕವನ್ನು ನೀಡಿದರು. ಅಧಿಕಾರಿಗಳು/ಸಂಸ್ಥೆಗಳು ಇವರಿಬ್ಬರೂ, ಅಧ್ಯಯನದಲ್ಲಿ ಭಾಗವಹಿಸುವವರನ್ನು ತಲುಪುವಲ್ಲಿ ಅಧ್ಯಯನ ತಂಡಕ್ಕೆ ಸಹಾಯ ಮಾಡಿದರು. ಅವರಲ್ಲಿ ಒಬ್ಬರು ಘನ ತ್ಯಾಜ್ಯ ನಿರ್ವಹಣೆಯಲ್ಲಿ ಕೆಲಸ ಮಾಡಿದವರಾಗಿದ್ದು, ಅವರಿಗೆ ಕೆಲವು ಕಾರ್ಮಿಕ ಗುತ್ತಿಗೆದಾರರ ಪರಿಚಯವಿತ್ತು. ಇನ್ನೊಬ್ಬರು, ಮಾನವ ಹಕ್ಕುಗಳ ಹೋರಾಟಗಾರರಾಗಿದ್ದು, ಗೋವಾದಲ್ಲಿರುವ ಕಾರ್ಮಿಕರ ತೊಂದರೆಗಳನ್ನು ಪ್ರತಿಪಾದಿಸುವ "ಸಾಹಸ್" ಎನ್ನುವ ಸಂಸ್ಥೆಯ ಜೊತೆ ಸೇರಿದವರಾಗಿದ್ದರು. ಅವರ ಶಿಫಾರಸ್ಸಿನಂತೆ, ಅಧ್ಯಯನ ತಂಡವು ಬರ್ನಾ, ಪೋಂಡಾ, ವಾಸ್ಕೋ ಮತ್ತು **ಪೋರ್ವೊರಿನ್‌ಗಳಿಗೆ** ಭೇಟಿ ಕೊಟ್ಟು, ಜೋಯ್ಡಾದ (ಉತ್ತರ ಕನ್ನಡದ) 15 ಮತ್ತು ಬೆಳಗಾವಿಯ 36 ವಲಸಿಗ ಕೆಲಸಗಾರರನ್ನು ಸಂದರ್ಶಿಸಿತು.



ಗೋವಾದಲ್ಲಿ ಅಂತರ್–ರಾಜ್ಯ ವಲಸಿಗ ಕೆಲಸಗಾರರ ಗುಂಪು ಕೆಲಸದ ಸ್ಥಳದಲ್ಲಿ ಇಳಿಯುತ್ತಿರುವುದು

ಆದರೆ ಶೋಲಾಪುರದಲ್ಲಿ ಈ ಜಿಲ್ಲೆಗಳ ವಲಸಿಗ ಕೆಲಸಗಾರರು ಕಂಡುಬರುವುದಿಲ್ಲ. ಬೆಳಗಾವಿಯಿಂದ ವಲಸೆ ಹೋಗುವ ವಿಚಾರವನ್ನು ತಿಳಿಯಲು ಈ ತಂಡವು ಬೆಳಗಾವಿ ಜಿಲ್ಲೆಗೆ ಭೇಟಿ ನೀಡಿತು. ಬೆಳಗಾವಿ ನಗರದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ತಂಡವು ಭೇಟಿ ಮಾಡಿದರೂ, ಬೆಳಗಾವಿಯಿಂದ ಶೋಲಾಪುರಕ್ಕೆ ವಲಸೆ ಹೋಗುವವರ ಕುರಿತು ಸ್ಪಷ್ಟ ಮಾಹಿತಿ ದೊರೆಯಲಿಲ್ಲ. ಕೈಗಾರಿಕೆ ಮಹತ್ವ ಪಡೆಯುತ್ತಿರುವ, ಜೊತೆಗೆ ಕೆಲವು ಪ್ರಮುಖವಾದ ಶಿಕ್ಷಣ ಸಂಸ್ಥೆಗಳನ್ನು ಹೊಂದಿದ ನಗರವಾಗಿ ಬೆಳಗಾವಿ ಹೊರಹೊಮ್ಮಿದೆ, ಹಾಗಾಗಿ ಕಾರ್ಮಿಕರು ಮತ್ತು ವೃತ್ತಿಪರರು ವಲಸೆ ಹೊಂದಲು ಎದುರು ನೋಡುವ ಪ್ರಮುಖ ನಗರವಾಗಿದೆ.

ದಶಕಗಳ ಮೊದಲು ಅತಿಯಾದ ಅಪರಾಧಗಳಿಂದಾಗಿ ಈ ನಗರವು ವ್ಯಾಪಾರಕ್ಕೆ ಸುರಕ್ಷಿತವಾಗಿರಲಿಲ್ಲ, ಆಗ ಜಿಲ್ಲೆಯ ಜನರು ಶೋಲಾಪುರಕ್ಕೆ ವಲಸೆ ಹೋಗುತ್ತಿದ್ದರೆಂದು ಬೆಳಗಾವಿಯ ಒಬ್ಬ ಪತ್ರಿಕೋದ್ಯಮಿಯು ತಿಳಿಸಿದರು. ಉತ್ತರ ಕನ್ನಡ ಜಿಲ್ಲೆಯ ಜೋಯ್ಡಾ ತಾಲೂಕಿನ ಜನರು, ಪುಣೆ, ಗೋವಾ ಅಲ್ಲದೇ ಮೈಸೂರು ಮತ್ತು ಬೆಂಗಳೂರನ್ನು ವಲಸೆ ಹೋಗಲು ಆಯ್ದುಕೊಂಡರು.



ಶೋಲಾಪುರದಲ್ಲಿರುವ ವಲಸಿಗ ಕೆಲಸಗಾರರ ವಸತಿ ಪ್ರದೇಶ

ಕೈಗಾರಿಕೆಯಲ್ಲಿ ಪ್ರಾಮುಖ್ಯತೆ ಇಳಿಮುಖವಾಗುತ್ತಿರುವುದರಿಂದ ಶೋಲಾಪುರ ನಗರವು, ಬೆಳಗಾವಿ ಮತ್ತು ಜೋಯ್ಡಾದ ಜನರಿಗೆ ಜನಪ್ರಿಯ ಅರಸಿಕೊಂಡು ಹೋಗುವ ನಗರವಾಗಿ ಉಳಿದಿಲ್ಲ. ಅಧ್ಯಯನದ ತಂಡವು ಜಿಲ್ಲಾ ಕಾರ್ಮಿಕ ಕಚೇರಿಯ ಅಧಿಕಾರಿಗಳೊಡನೆ ಸಮಾಲೋಚಿಸಿತು ಮತ್ತು ಪುಣೆ ರಸ್ತೆ, ಮಂಗಳವಾಡಾ ರಸ್ತೆ, ಭಯ್ಯಾ ಚೌಕ್, ಮೊಹಾದಿಯ ಜಗಜೀವನ ರಾಮ್ ಕಾಲೊನಿ ಮತ್ತು ಲಸ್ಕರ್ (ಸಾದರ ಬಝಾರ್) ನಂತಹ ಬಡಾವಣೆಗಳಿಗೆ ವಲಸಿಗರು ನೆಲೆಸಿರುವ ಸ್ಥಳಗಳಿಗೆ ಭೇಟಿ ನೀಡಿತು. ಮಹಾರಾಷ್ಟ್ರದ ಜಿಲ್ಲೆಗಳಿಂದ ಬಂದವರು ಈ ಬಡಾವಣೆಗಳಲ್ಲಿ ನೆಲೆಸಿದ್ದರು. ಕರ್ನಾಟಕದ ವಲಸಿಗ ಕೆಲಸಗಾರರು ಮುಖ್ಯವಾಗಿ ರಾಯಚೂರು ಮತ್ತು ವಿಜಯಪುರದಿಂದ ಬಂದಿದ್ದರು. ಕೆಲವರು ಗುಲ್ಬರ್ಗಾ ಮತ್ತು ಮೈಸೂರಿನಿಂದ ಬಂದವರೂ ಇದ್ದರು. ಶೋಲಾಪುರದ ಕೆಲವು ಮುಖ್ಯ ಕಾರ್ಖಾನೆಗಳು ಮುಚ್ಚಿ ಹೋದುದರಿಂದ, ಇತ್ತೀಚಿನ ದಿನಗಳಲ್ಲಿ ಅದರ ಪ್ರಾಮುಖ್ಯತೆ ಗಣನೀಯವಾಗಿ ಕುಸಿದಿದೆ. ಅದು ವಲಸಿಗರಲ್ಲಿ ಪ್ರಮುಖ ಆಯ್ಕೆಯಾಗಿ ಉಳಿದಿಲ್ಲ. ಬದಲು ಈ ಜಿಲ್ಲೆಯು ಕಾರ್ಮಿಕರನ್ನು ಒದಗಿಸುವ ಜಿಲ್ಲೆಯಾಗಿ ಪರಿವರ್ತನೆಗೊಂಡಿದೆ. ಅಲ್ಲದೇ, ಶೋಲಾಪುರದಲ್ಲಿ ಪುರುಷರ ವೇತನವು ರೂ.300ಕ್ಕಿಂತ ಕಡಿಮೆ (ಸುಮಾರು ರೂ.280) ಮತ್ತು ಮಹಿಳೆಯರಿಗೆ ಸುಮಾರು ರೂ.250 (ರೂ.220–250). ಕರ್ನಾಟಕದಲ್ಲಿ ಕೆಲಸಗಾರರಿಗೆ ಸಾಮಾನ್ಯವಾಗಿ ಇಷ್ಟೇ ಸಿಗುತ್ತಿದ್ದು, ಇನ್ನುಳಿದಂತೆ ಹೆಚ್ಚಿನ ಸಂದರ್ಭಗಳಲ್ಲಿ ಶೋಲಾಪುರದಲ್ಲಿರುವ ಸಾಮಾನ್ಯ ವೇತನಕ್ಕಿಂತ ಹೆಚ್ಚೇ ದೊರೆಯುತ್ತದೆ. ಕೊನೆಯದಾಗಿ, ಕರ್ನಾಟಕದ ವಿಜಯಪುರ, ರಾಯಚೂರು ಮತ್ತು ಗುಲ್ಬರ್ಗಾದ 46 ವಲಸಿಗ ಕೆಲಸಗಾರರನ್ನು ಶೋಲಾಪುರದಲ್ಲಿ ನಾವು ಸಂದರ್ಶಿಸಿದೆವು. ಈ ವಲಸಿಗರು ಕೆಲವು ವರ್ಷಗಳ ಹಿಂದೆ ಶೋಲಾಪುರಕ್ಕೆ ಬಂದಿದ್ದರು ಮತ್ತು ಈಗ ಶೋಲಾಪುರದಲ್ಲಿ ತಮ್ಮ ಕುಟುಂಬದ ಜೊತೆಗೆ ನೆಲೆನಿಂತಿದ್ದಾರೆ.

ಒಟ್ಟಿನಲ್ಲಿ, ಈ ಅಧ್ಯಯನವು ಈಗಿರುವ ಸಾಮಾಜಿಕ–ಆರ್ಥಿಕ ಸಂದರ್ಭದಲ್ಲಿ ವಲಸೆಯ ತಳ್ಳುವ ಮತ್ತು ಸೆಳೆಯುವ ಅಂಶಗಳನ್ನು, ರೂಪಿಸುವ ಸಂಕೀರ್ಣ ಪದರುಗಳನ್ನು ಅರ್ಥಮಾಡಿಕೊಳ್ಳಲು ಉದ್ದೇಶಿಸಿದೆ. ಸಮೀಕ್ಷೆಗೆ ಜನರ ಪ್ರತಿಕ್ರಿಯೆಯು ಯಾವಾಗಲೂ ಔಪಚಾರಿಕವಾಗಿತ್ತು ಮತ್ತು ಕೆಲ ಮಟ್ಟಿಗೆ ಯಾಂತ್ರಿಕವಾಗಿತ್ತು, ಅವರು ವಿಶದವಾದ ಸಂದರ್ಶನ ಮತ್ತು ಕೇಂದ್ರೀಕೃತ ಗುಂಪು ಚರ್ಚೆ ನಡೆಸುವಾಗಲೇ ಬಹಳ ಹಾಯಾಗಿದ್ದರು.

## ಅಧ್ಯಾಯ 3

# ಸಾಹಿತ್ಯಾವಲೋಕನ

**ಸಂದರ್ಭ**

ಮಾನವನ ಸಾಮಾಜಿಕ ಚರಿತ್ರೆಯು ವಿವಿಧ ದಿಕ್ಕುಗಳಲ್ಲಿ ಅವನ ಚಲನೆಯ ಚರಿತ್ರೆಯ ಇತಿಹಾಸವೂ ಹೌದು. ಒಂದು ಸ್ಥಳದಿಂದ ಇನ್ನೊಂದೆಡೆ ಅದರಲ್ಲೂ ಗ್ರಾಮೀಣ ಪ್ರದೇಶದಿಂದ ಪಟ್ಟಣಗಳಿಗೆ ವಲಸೆ ಹೋಗುವುದು ಭಾರತೀಯ ಸಮಾಜದ ಪ್ರಚಲಿತ ಲಕ್ಷಣವಾಗಿದ್ದು, ಇದರಲ್ಲಿ ಹೊಸದೇನೂ ಇಲ್ಲ. ಪೂರ್ವ ವಸಾಹತುಶಾಹಿ ಸಮಯದಲ್ಲಿ, ಕಟ್ಟಡಗಳನ್ನು ಕಟ್ಟುವುದಕ್ಕೆ ಮತ್ತು ಉತ್ಪಾದನೆಗೆ ಕೆಲಸಗಾರರ ಆವಶ್ಯಕತೆ ಉದ್ಭವಿಸಿದಾಗ ವಲಸೆ ಪ್ರಚೋದಿಸಲ್ಪಟ್ಟಿತು. (ಹಬೀಬ್,2011). ಕೈಗಾರಿಕೆಗಳ ಆರಂಭ ಮತ್ತು ಕ್ರಮೇಣ ಆಧುನಿಕ ಕಾಲದ ಕಾರಣದಿಂದ, ವಲಸೆಯ ವಿಸ್ತಾರವು ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪ್ರಮುಖವಾದ ವಿಷಯವಾಯಿತು. ಜಾಗತೀಕರಣದ ಪ್ರಭಾವವು ಆಳವಾದುದರ ಪರಿಣಾಮ ನಗರ ಪ್ರದೇಶಗಳಲ್ಲಿ ಬಂಡವಾಳ ಹೂಡಿಕೆ ತೀವ್ರವಾಯಿತು ಪರಿಣಾಮ, ಹಳ್ಳಿಗಳಿಂದ ಪಟ್ಟಣಗಳಿಗೆ ದೊಡ್ಡ ಪ್ರಮಾಣದಲ್ಲಿ ವಲಸೆ ಪ್ರಾರಂಭವಾಯಿತು. ಒಂದು ಸ್ಥಳದಿಂದ ಇನ್ನೊಂದೆಡೆ ಸ್ಥಳ ಬದಲಾಯಿಸಿ, ನೆಲೆ ನಿಲ್ಲುವುದು ಸಾಮಾನ್ಯ ಮಾದರಿಯಾಯಿತು ಮತ್ತು ವಲಸೆಯು ನಗರೀಕರಣದ ತಾರ್ಕಿಕತೆಯ ಪರಿಣಾಮವಾಯಿತು. ಕಳೆದ ಮೂರು–ನಾಲ್ಕು ಶತಮಾನಗಳಲ್ಲಿ, ವಸಾಹತುಶಾಹೀ, ಕೈಗಾರಿಕರಣ, ನಗರೀಕರಣ ಮತ್ತು ಜಾಗತೀಕರಣದಂತಹ ರಚನಾತ್ಮಕ ಬದಲಾವಣೆಯಿಂದ ವಲಸೆಯು ರೂಪುಗೊಂಡಿತು. ಕೆಲವು ನಿರ್ದಿಷ್ಟ ಪ್ರದೇಶಗಳಿಂದ ಹೊರಹರಿವನ್ನು ಪ್ರಚೋದಿಸುವ ಮಹತ್ವದ "ತಳ್ಳುವ" ವಿಚಾರ, "ಹಿನ್ನಡೆಯ ಅಭಿವೃದ್ಧಿ" ಎಂದು ಅಂಡ್ರ್ಯೂ ಗಂಡರ್ ಫ್ರಾಂಕ್ ಅಭಿಪ್ರಾಯ ಪಡುತ್ತಾರೆ. ಕೆಲವು ಗುಂಪುಗಳು/ವಲಯಗಳ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಬಹುಸಂಖ್ಯಾತ ಜನರು ಮತ್ತು ಬಹಳಷ್ಟು ಭೂ–ರಾಜಕೀಯ ವಿಭಾಗಗಳು ಅಂಚಿಗೆ ತಳ್ಳಲ್ಪಡುವುದರ ವಿರೋಧಾಭಾಸದ ಅಭಿವ್ಯಕ್ತಿಯನ್ನು ಇವರು ಹಿನ್ನಡೆ ಅಭಿವೃದ್ಧಿಗೊಳ್ಳುವುದು ಎಂದು ವ್ಯಾಖ್ಯಾನಿಸುತ್ತಾರೆ. (ಫ್ರಾಂಕ್, 1966). ಐತಿಹಾಸಿಕ ಸನ್ನಿವೇಶವೂ, ಆರ್ಥಿಕತೆ ಮತ್ತು ಕಾರ್ಯನೀತಿಗಳ ಜೊತೆಗೆ ಒಳಗೊಳ್ಳುವುದು, ಯಾವುದೇ ಪ್ರದೇಶದ ಅಭಿವೃದ್ಧಿಯ ಪಥವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಸಾಮಾನ್ಯರ ಕಳೆದುಕೊಳ್ಳುವುದರ ಮೂಲಕವೇ ಮೇಲಿನವರಲ್ಲಿ ಸಂಪತ್ತು ಮತ್ತು ಅಧಿಕಾರ ಸಾಂದ್ರಗೊಳ್ಳಲು ಸಾಧ್ಯ. ದೊಡ್ಡ ಪ್ರಮಾಣದಲ್ಲಿ ಮತ್ತು ಹಿಂಸಾತ್ಮಕವಾಗಿ ಸಾಮಾನ್ಯರು ಕಳೆದುಕೊಳ್ಳುವುದನ್ನು ಉಂಟು ಮಾಡುವುದೇ ಬಹುತೇಕ ಅಭಿವೃದ್ಧಿ ಯೋಜನೆಗಳ ವಿಶಿಷ್ಟ ಲಕ್ಷಣವಾಗಿದೆ. ಈ ಸನ್ನಿವೇಶವು ಜೀವನಾಂಶಕ್ಕೆ ಅತಿ ಕಡಿಮೆ ಅವಕಾಶಗಳಿರುವ ಹಿಂದುಳಿದ ಪ್ರದೇಶದಿಂದ ಭರವಸೆ ಮೂಡಿಸುವಂತಹ, ಅವಕಾಶಗಳಿರುವ " ಅಭಿವೃದ್ಧಿ ಹೊಂದಿದ" ಪ್ರದೇಶಗಳಿಗೆ ಜನರನ್ನು ಹೆಚ್ಚಾಗಿ ತಳ್ಳುತ್ತದೆ.

ಕಾರ್ಮಿಕರ ವಲಸೆಯನ್ನು ಉದ್ಯೋಗಾವಕಾಶ ವಿಸ್ತಾರವಾಗಿರುವ ಸ್ಥಳಗಳ ಕಡೆಗೆ ಕಾರ್ಮಿಕರ ಚಲನೆ ಎಂದು ವ್ಯಾಖ್ಯಾನಿಸಬಹುದು. ಆಧುನಿಕ ವಲಸೆ ಅಧ್ಯಯನ ಮತ್ತು ವಿಶ್ಲೇಷಣೆಯ ಸಂಸ್ಥಾಪಕ ಇ.ಜಿ.ರಾವೆನ್‌ಸ್ಟಿನ್ ಪ್ರಕಾರ, ಕಾರ್ಖಾನೆಗಳು ಮತ್ತು ವ್ಯಾಪಾರವು ಬೆಳೆದಂತೆ, ಸಾರಿಗೆ ವ್ಯವಸ್ಥೆಯಲ್ಲಿ ಅಭಿವೃದ್ಧಿ ಕಂಡುಬಂದು, ವಲಸೆ ಹೆಚ್ಚುತ್ತದೆ ಮತ್ತು ವಲಸೆಗೆ ಮುಖ್ಯ ಕಾರಣ ಆರ್ಥಿಕತೆ (1885). ಈ ಪ್ರಬಂಧವು ವಲಸೆಯ ಸ್ವರೂಪದಲ್ಲಿ ಅದರಲ್ಲೂ ಅಂತರ್–ರಾಜ್ಯ ವಲಸೆಯ ವಿಚಾರದಲ್ಲಿ ಸ್ಪಷ್ಟವಾಗಿದೆ. ಲೋಯಿಸ್ ಶೆಂಕ್–ಸ್ಯಾಂಡ್‌ಬರ್ಜೆನ್ ವಲಸೆಯಲ್ಲಿ ಆರ್ಥಿಕತೆಯ ಪಾತ್ರವನ್ನು ಎತ್ತಿತೋರಿಸಿದ್ದಾರೆ. ಒರಿಸ್ಸಾದಲ್ಲಿ ನಡೆಸಿದ ಪ್ರಾಥಮಿಕ ಕ್ಷೇತ್ರ ಸಮೀಕ್ಷೆಯ ಆಧಾರದ ಮೇಲೆ, ಶೇಕಡಾ 60ಕ್ಕಿಂತ ಹೆಚ್ಚು ವಲಸೆಯು ಆರ್ಥಿಕತೆಯ ಕಾರಣದಿಂದ ಉಂಟಾಗುತ್ತದೆಂದು ಆಕೆಯು ತೀರ್ಮಾನಿಸಿದರು (ಕಾರ್ಲೇಕರ್ 1995). ಜಾತಿ ಮತ್ತು ಲಿಂಗದಂತಹ ಸಾಮಾಜಿಕ ವಿಚಾರಗಳು ಸಹ ವಲಸೆಯ ಸ್ವರೂಪವನ್ನು ರೂಪಿಸುವಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಭಾರತದಲ್ಲಿ, ಜಾತಿ ಮತ್ತು ಲಿಂಗದಂತಹ ವಿಚಾರಗಳು ವಲಸೆ ನಿರ್ಧರಿಸುವಲ್ಲಿ ನಿರ್ಣಾಯಕವಾಗುತ್ತವೆಂದು, ಈ ಅಧ್ಯಯನವು ಒತ್ತಿ ಹೇಳುತ್ತದೆ.

**ಭಾರತದಲ್ಲಿ ಆಂತರಿಕ ವಲಸೆ**

ಕಡಿಮೆ ದೂರದ ವಲಸೆಯು ಭಾರತದಲ್ಲಿ ಬಹಳ ಸಾಮಾನ್ಯವಾಗಿದ್ದು ಒಟ್ಟು ವಲಸೆಯ ಸುಮಾರು ಶೇಕಡಾ 60 ಜನ ಅವರು ಹುಟ್ಟಿದ ಜಿಲ್ಲೆಯಲ್ಲಿಯೇ ತಮ್ಮ ನಿವಾಸವನ್ನು ಮತ್ತು ಸುಮಾರು ಶೇಕಡಾ 20ರಷ್ಟು ರಾಜ್ಯದ ಒಳಗಡೆ ತಮ್ಮ ನಿವಾಸವನ್ನು ಬದಲಿಸುತ್ತಾರೆ. ಒಟ್ಟು ವಲಸಿಗರಲ್ಲಿ ಕೇವಲ ಶೇಕಡಾ 20ರಷ್ಟು ಮಾತ್ರ ತಮ್ಮ ಜಿಲ್ಲೆ ಮತ್ತು ರಾಜ್ಯದ ಗಡಿಯನ್ನು ದಾಟಿ ಹೋಗುತ್ತಾರೆ. 2007–08ರ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ ಅಂದಾಜು 32.6ಕೋಟಿ (ಒಟ್ಟು ಜನಸಂಖ್ಯೆಯ ಶೇಕಡಾ 28.5) ಜನರು ಆಂತರಿಕ ವಲಸಿಗರು. ಆದರೆ ವಲಸೆಯ ವರ್ಗದ ಜನರ ಗಣತಿಯಲ್ಲಿ "ಪ್ರಾಯೋಗಿಕ ಹಾಗೂ ಪರಿಕಲ್ಪನಾತ್ಮಕ ಮಾಪಕ ತೊಂದರೆಗಳಿರುವುದರಿಂದ ಇವರ ಸಂಖ್ಯೆಯ ಅಂದಾಜು ಬಹಳ ಕಡಿಮೆಯಾಗಿ ಕಾಣಿಸುತ್ತದೆ" ಎಂದು ಕೆಲವು ತಜ್ಞರು ಅಭಿಪ್ರಾಯ ಪಡುತ್ತಾರೆ. ಕಡಿಮೆ ಉದ್ಯೋಗಾವಕಾಶ, ಕಾರ್ಮಿಕರ

ಮಾರುಕಟ್ಟೆಯ ಬದಲಾಗುವ ಬೇಡಿಕೆ, ಕೃಷಿ ಬಿಕ್ಕಟ್ಟು, ಜಾತಿ ಮತ್ತು ಲಿಂಗದಂತಹ ಅಸಹನೀಯ ಸಾಮಾಜಿಕ ವಿಚಾರಗಳು ಜನರನ್ನು ಉತ್ತಮ ಜೀವನವನ್ನು ಹುಡುಕಿಕೊಂಡು ವಲಸೆ ಹೋಗಲು ತಳ್ಳುತ್ತವೆ.

ಭಾರತದಲ್ಲಿ ಯಾವುದೇ ರಾಜ್ಯದ ಅಭಿವೃದ್ಧಿಗೆ ವಲಸೆ ಬಹಳ ದೊಡ್ಡ ಅಂಶವಾಗಿರುತ್ತದೆ (ಮಿಸ್ರಾ, 1998:2). ಭಾರತದಲ್ಲಿ ಆಂತರಿಕ ವಲಸೆಯನ್ನು ಅಂತರ್ಗತ ಮತ್ತು ಅಂತರ್–ರಾಜ್ಯ ವಲಸೆಯೆಂದು ವರ್ಗೀಕರಿಸಲಾಗಿದೆ. ಗ್ರಾಮ ಮತ್ತು ಪಟ್ಟಣಗಳ ಅಭಿವೃದ್ಧಿಯ ಮಟ್ಟದಲ್ಲಿ ವ್ಯತ್ಯಾಸ ಹಾಗೂ ರಾಜ್ಯಗಳ ಮಧ್ಯೆ ಉತ್ತಮ ಮತ್ತು ಕಡಿಮೆ ಮಟ್ಟದ ಉದ್ಯೋಗಾವಕಾಶಗಳು ಉಂಟಾದಾಗ ಮುಖ್ಯವಾಗಿ ಈ ರೀತಿಯ ವಲಸೆ ಉಂಟಾಗುತ್ತದೆ. ಪಟ್ಟಣಗಳು ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಬೆಳೆಯಲು ಯೋಜನೆ ಮತ್ತು ಅಭಿವೃದ್ಧಿಯ ಪ್ರಕ್ರಿಯೆಗಳು ಸಹಾಯ ಮಾಡಿವೆ. ಉನ್ನತ ಮಟ್ಟದ ಅಭಿವೃದ್ಧಿಯು, ಹೆಚ್ಚಿನ ಉದ್ಯೋಗಾವಕಾಶಕ್ಕೆ ಕಾರಣವಾಗಿ, ಕಡಿಮೆ ಜೀವನಾವಕಾಶವಿದ್ದ ಮತ್ತು/ಅಥವಾ ಕಡಿಮೆ ವೇತನವಿದ್ದ ಪ್ರದೇಶದ ವಲಸಿಗರನ್ನು ಸೆಳೆಯುವ ವಿಚಾರವಾಗಿ ವ್ಯಕ್ತವಾಗುತ್ತದೆ. ಪಟ್ಟಣ ಮತ್ತು ಹಳ್ಳಿಗಳ ನಡುವಿನ ಅಸಮಾನ ಅಭಿವೃದ್ಧಿಯೇ ವಲಸೆಗೆ ಕಾರಣವಾಗಿದೆ, ಅದರಿಂದಾಗಿ ಬೆಳವಣಿಗೆ ಮತ್ತು ಉದ್ಯೋಗಾವಕಾಶಗಳು ನಗರ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆ. ಈ ರೀತಿಯ ಅಭಿವೃದ್ಧಿಯ ಪ್ರಕ್ರಿಯೆಯ ಆವರ್ತ ಪರಿಣಾಮ ಎಷ್ಟು ತೀವ್ರವಾಗಿದೆ ಎಂದರೆ ಗ್ರಾಮೀಣ ಪ್ರದೇಶಗಳು ಹಿಂದುಳಿದ ಸ್ಥಿತಿಯಲ್ಲಿ ಸದಾಕಾಲ ಇರುವಂತಾಗಿದೆ (ಮಿರ್ಡಾಲ್, 1957).

ಉದ್ಯೋಗದಲ್ಲಿ ಅನಿಶ್ಚಿತತೆ ಪರಿಣಾಮ ಕಾರ್ಮಿಕ ಮಾರುಕಟ್ಟೆಯ ಅಸ್ಥಿರತೆಯು ಭಾರತದಲ್ಲಿ ಇತ್ತೀಚೆಗೆ ಚಿಂತೆಗೆ ಕಾರಣವಾಗಿದೆ, ಹೊಸ ಉದಾರ ಸುಧಾರಣೆಗಳಿಂದಾಗಿ ಹಲವಾರು ಅಭಿವೃದ್ಧಿಶೀಲ ರಾಷ್ಟ್ರಗಳು ಹೊಸ ಸನ್ನಿವೇಶವನ್ನು ಅನುಭವಿಸುತ್ತಿವೆ. ಉದ್ಯೋಗ ಅನೌಪಚಾರಿಕಗೊಂಡಿರುವುದು ಮತ್ತು ಅನುಚಿತ ಪರಿಸ್ಥಿತಿಯಲ್ಲೂ ಕೆಲಸ ಮಾಡಲೇಬೇಕಾದ ಅನಿವಾರ್ಯತೆ, ಅದರಲ್ಲೂ ಹೆಂಗಸರನ್ನೂ ಒಳಗೊಂಡತೆ, ಉಂಟಾಗಿರುವುದು, ಜಾಗತೀಕರಣಗೊಂಡ ಆರ್ಥಿಕತೆಯ ಸಾಮಾನ್ಯ ಲಕ್ಷಣವಾಗಿದೆ. ಅನೌಪಚಾರಿಕತೆಯಲ್ಲಿ ಮುಖ್ಯವಾಗಿ ಕೆಲಸವನ್ನು ಉಪ ಗುತ್ತಿಗೆ ಕೊಡುವುದಾಗಿದೆ ಮತ್ತು ಕೆಲಸದ ತಂಡದ ಗಾತ್ರ ಕಡಿಮೆ ಮಾಡುವುದಾಗಿದೆ. ವೇತನ ಕೊಡುವುದನ್ನು ಕಡಿಮೆ ಮಾಡಲು ಪ್ರಯತ್ನಿಸಲು, ಹೆಚ್ಚುವರಿ ಸೌಲಭ್ಯಗಳಲ್ಲಿ ಹಣ ಉಳಿಸಲು ಮತ್ತು ತನ್ನ ಉದ್ಯೋಗಿಗಳಿಗೆ ಕಾರ್ಮಿಕ ಸಂಘಟನೆಯ ಹಕ್ಕನ್ನು ನಿರಾಕರಿಸಲು ಉದ್ಯೋಗ ನೀಡುವವರು ಅನೌಪಚಾರಿಕ ಪ್ರಕ್ರಿಯೆಯನ್ನು ಬಹಳವಾಗಿ ಪಾಲಿಸುತ್ತಿದ್ದಾರೆ (ತ್ರಿಪಾಠಿ ಮತ್ತು ದಾಶ್, 1997). ಹೀಗೆ ಅನೌಪಚಾರಿಕ ಕೆಲಸಗಾರರು ಗುತ್ತಿಗೆ ಕೆಲಸಗಾರರೆಂಬ ಅರ್ಹತೆಯ ಮೇಲೆ ನಗಣ್ಯ ಹಕ್ಕುಗಳೊಡನೆ ಕಡಿಮೆ ವೇತನದಲ್ಲಿ ಕೆಲಸ ಮಾಡಬೇಕಾಗಿದೆ. ಕಾನೂನಿಗೆ ಒಳಪಡದ ನಡುವಿನವರು ಮತ್ತು ಮಧ್ಯವರ್ತಿಗಳು ಕಾರ್ಮಿಕರನ್ನು ಅಕ್ಷರಶಃ ಹಿಡಿತದಲ್ಲಿ ಇಟ್ಟುಕೊಂಡು, ಅವರ ಆದಾಯವನ್ನು ಹಾಗೂ ಕಾರ್ಮಿಕರ ಕೆಲಸದ ಮತ್ತು ಜೀವಿತ ಸ್ಥಿತಿಯನ್ನು ನಿಯಂತ್ರಿಸಿದ್ದರಿಂದ ಕಾರ್ಮಿಕರ ದೌರ್ಬಲ್ಯ ಹೆಚ್ಚಾಗಿದೆ (ಕುಪ್ಪ್, 2006).

ಎಸ್. ಎನ್. ಮಿಸ್ರಾ ಗ್ರಾಮೀಣ ಪ್ರದೇಶಗಳಲ್ಲಿ ತಲೆಮಾರುಗಳಿಂದ ಹಾಸುಹೊಕ್ಕಿರುವ ಹಿಂದುಳಿಯುವಿಕೆ ಮತ್ತು ಕುಂಠಿತ ಅಭಿವೃದ್ಧಿಯನ್ನು ಪರೀಕ್ಷಿಸಿ, ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ವಾಣಿಜ್ಯೀಕರಣಗೊಳ್ಳದೇ, ಹೊಟ್ಟೆಪಾಡಿಗಾಗಿ ಕೃಷಿಯಲ್ಲಿ ತೊಡಗಿಸಿಕೊಂಡಿರುವುದು ಪ್ರಮುಖವಾಗಿರುವುದೇ ನಿರುದ್ಯೋಗ ಹೆಚ್ಚಾಗಲು ಕಾರಣವೆಂಬ ವಾದ ಮುಂದಿಟ್ಟರು. ಕ್ರಮೇಣ ಜನರು ಜೀವನೋಪಾಯವನ್ನು ಅರಸಿ, ಪಟ್ಟಣಗಳ ಕಡೆಗೆ ಕಡ್ಡಾಯವಾಗಿ ವಲಸೆ ಹೋಗಬೇಕಾಯಿತು (ಮಿಸ್ರಾ, 1998:7). ಯೋಜನೆಗಳು ಮತ್ತು ಅಭಿವೃದ್ಧಿಯ ಮುಖಾಂತರ, ಹೆಚ್ಚಿನ ಸಂಪನ್ಮೂಲಗಳು ಮತ್ತು ಬಂಡವಾಳ ಹೂಡಿಕೆಯು ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕೇಂದ್ರಿಕೃತಗೊಂಡವೆಂದು ಅವರು ವಾದಿಸಿದರು. ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ, ಆರ್ಥಿಕ ಸಂಪನ್ಮೂಲಗಳು ಮುಖ್ಯವಾಗಿ ಪಟ್ಟಣಗಳಲ್ಲಿ ಕೇಂದ್ರೀಕೃತಗೊಂಡು, ಅವುಗಳನ್ನು ಮುನ್ನಡೆಸಲು ದೊಡ್ಡ ಪ್ರಮಾಣದ ಮಾನವಶಕ್ತಿಯ ಆವಶ್ಯಕತೆಯಿದ್ದು, ತನ್ಮೂಲಕ ಗ್ರಾಮೀಣ ಪ್ರದೇಶಗಳಿಂದ ಜನರು ಬರಲು ಸೆಳೆಯುವ ಮುಖ್ಯ ಅಂಶವಾಗಿ ಪರಿಣಮಿಸಿತು (ಮಿಸ್ರಾ, 1998: 7; ಜೋಸೆಫ್ ಮತ್ತು ಸ್ಟಾನಿಸ್ಲಾಸ್, 2007:05). ಹಳ್ಳಿ ಪಟ್ಟಣಗಳ ನಡುವಿನ ವ್ಯತ್ಯಾಸದಿಂದ ಬಂಡವಾಳ ಕೇಂದ್ರೀಕರಣದ ವಿಚಾರದಲ್ಲಿ ವಿಭಾಗವಾಗಿದ್ದು, ಚಿಕ್ಕ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಕಡಿಮೆ ಇಲ್ಲದಂತಾಗಲು ಕಾರಣವಾಯಿತು.

ಮಾರ್ನೊನ್ ಡೊಮಿಂಗ್ಯುಸ್ ಡೊಸ್ ಸಾಂಟೋಸ್, ವಲಸೆಯ ಹರಿವು ಮತ್ತು ಅಭಿವೃದ್ಧಿಶೀಲ ಆರ್ಥಿಕತೆಯ ಬೆಳವಣಿಗೆಯಲ್ಲಿ ಕಾಣಿಸುವ ಚಲನಶೀಲತೆಯನ್ನು ವಿಶ್ಲೇಷಿಸಲು ಪ್ರಯತ್ನಿಸಿದರು (2003). ಕೆಲಸಗಾರರ ಚಲನೆಯು, ಅವರು ವಲಸೆ ಹೋಗುವ ನಿರ್ದಿಷ್ಟ ಪ್ರದೇಶದ ಆರ್ಥಿಕತೆಯ ಬೆಳವಣಿಗೆಯನ್ನು ವಿಸ್ತಾರಗೊಳಿಸುವ ಪರಿಣಾಮವನ್ನು ಹೊಂದಿದೆ ಎಂದು ಅವರು ಸೂಚಿಸಿದರು. ವಲಸಿಗರ ಒಳ ಹರಿವು ಮತ್ತು ಒಂದು ನಿರ್ದಿಷ್ಟ ಪ್ರದೇಶದ ಅಭಿವೃದ್ಧಿಯ ನಡುವಿನ ಸಂಬಂಧದ ಸ್ವರೂಪದಲ್ಲಿ ಚಲನಶೀಲತೆ ಇರುತ್ತದೆ. ಅಭಿವೃದ್ಧಿಯ ಮೇಲೆ ವಲಸೆಯ ಋಣಾತ್ಮಕ ಪರಿಣಾಮಗಳ ಕುರಿತು ಈ ಮೊದಲು, ಹೆಚ್ಚಿನ ಗಮನ

ನೀಡಲಾಗುತ್ತಿತ್ತು. ಇದು ಅಭಿವೃದ್ಧಿಗೆ ಮಾರಕವಾಗಿದ್ದು ಇದನ್ನು ನಿರ್ಬಂಧಿಸಬೇಕು ಮತ್ತು ನಿಯಂತ್ರಿಸಬೇಕೆಂದು ತಿಳಿಯಲಾಗಿತ್ತು. ಆದರೆ, ಜಾಗತೀಕರಣ ಮತ್ತು ಜಾಗತಿಕ ಆರ್ಥಿಕ ಬಂಡವಾಳ ಕ್ರಮೇಣ ಮಾರುಕಟ್ಟೆ ಪ್ರವೇಶಿಸಿದಾಗ ವಲಸೆಯನ್ನು ಬೇರೇ ರೀತಿಯಲ್ಲಿ ಅರ್ಥೈಸಲಾಯಿತು. ಉದ್ಯೋಗಾವಕಾಶ, ಶಿಕ್ಷಣ, ಮೂಲ ಸ್ಥಳದಿಂದ ದೂರ, ಆರೋಗ್ಯ ಸವಲತ್ತುಗಳು ಮತ್ತು ನೈರ್ಮಲ್ಯೀಕರಣದ ದೊರಕುವಿಕೆ ಮತ್ತು ವಲಸೆಯ ನಿಜವಾದ ಖರ್ಚು, ಇವು ಯಾವುದೇ ವಲಸಿಗ ವಲಸೆಯ ತಾಣವನ್ನು ನಿರ್ಧರಿಸುವಲ್ಲಿ ಸಹಕಾರಿಯಾಗುವ ಪ್ರಮುಖವಾದ ಅಂಶಗಳೆಂದು ಹಲವಾರು ವಿದ್ವಾಂಸರು ವಾದಿಸುತ್ತಾರೆ (ಮಿಸ್ರಾ, 1998: 7; ಸುಂದರಿ,2007:67).

**ವಲಸೆ: ಪರಿಣಾಮ ಮತ್ತು ಸವಾಲುಗಳು**

ಹತ್ತು ಭಾರತೀಯರಲ್ಲಿ ಇಬ್ಬರು ಜಿಲ್ಲೆಗಳ ಅಥವಾ ರಾಜ್ಯದ ಗಡಿಯೊಳಗೆ ಒಂದೆಡೆಯಿಂದ ಒಂದೆಡೆಗೆ ಚಲಿಸಿ ಆಂತರಿಕ ವಲಸಿಗರಾಗಿರುತ್ತಾರೆ ಮತ್ತು ಈ ವಾಸ್ತವಾಂಶ 1.2 ಶತಕೋಟಿಗಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಮ್ಮ ದೇಶದಲ್ಲಿ ಬಹಳ ಮಹತ್ವದ ವಿಚಾರವಾಗಿದ್ದು ದೊಡ್ಡ ವಲಸೆಯ ಚಿತ್ರಣವನ್ನು ಪ್ರತಿಬಿಂಬಿಸುತ್ತದೆ. ಮದುವೆ ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಭಾರತದಲ್ಲಿ ಆಂತರಿಕ ವಲಸೆಗೆ ಸಾಮಾನ್ಯ ಕಾರಣವಾಗುತ್ತದೆ. ಆಂತರಿಕ ಸಂಚಾರದಲ್ಲಿ ದೂರ ಪಯಣದ ಮತ್ತು ಪುರುಷ–ಪ್ರಧಾನ ಕಾರ್ಮಿಕ ವಲಸಿಗರದ್ದೇ ಬಹಳ ಮುಖ್ಯ ಭಾಗವಾಗಿದೆ. ಈ ಚಲನೆ ಶಾಶ್ವತವಾಗಿರಬಹುದು, ಅರೆ–ಶಾಶ್ವತವಾಗಿರಬಹುದು ಅಥವಾ ಕಾಲೋಚಿತವಾಗಿರಬಹುದು. ಶಾಶ್ವತ ವಲಸಿಗರಿಗಿಂತ ಕಾಲೋಚಿತ ಅಥವಾ ನಿರ್ದಿಷ್ಟವಾಗಿ ಹೇಳಬೇಕೆಂದರೆ ಸುತ್ತುವ ವಲಸಿಗರು ಗಮನಾರ್ಹವಾಗಿ ವಿಭಿನ್ನ ಕಾರ್ಮಿಕ ಮಾರುಕಟ್ಟೆಯ ಮತ್ತು ಸಮನ್ವಯದ ಅನುಭವಗಳನ್ನು ಹೊಂದಿರುತ್ತಾರೆ. ಆದರೆ, ಕಾಲೋಚಿತ ವಲಸೆಯ ಹರಿವಿನ ನಿರ್ದಿಷ್ಟ ದತ್ತಾಂಶಗಳು, ಮತ್ತು ಕ್ರಮಬದ್ಧವಾಗಿ ದಾಖಲಿಸಿದ ಈ ವಲಸಿಗರ ಅನುಭವಗಳಿಗೂ, ಈಗಿರುವ ತಿಳುವಳಿಕೆಗೂ ಬಹು ದೊಡ್ಡ ಅಂತರವಿದೆ.

ಕಳೆದ ಐದು ಜನಗಣತಿಗಳಿಗಿಂತ 2011ರ ಜನಗಣತಿಯು ಮೊದರ ಬಾರಿ, ಭಾರತದ ನಗರಗಳ ಜನಸಂಖ್ಯೆಯು ಗ್ರಾಮೀಣ ಜನಸಂಖ್ಯೆಗಿಂತ ಬಹಳ ವೇಗವಾಗಿ ಬೆಳೆದಿರುವುದನ್ನು ತೋರಿಸಿತು. 2001ರಲ್ಲಿ ಭಾರತದ ಜನಸಂಖ್ಯೆಯಲ್ಲಿ ಶೇಕಡಾ 28ರಷ್ಟು ಇದ್ದದ್ದು, ಈಗ ಶೇಕಡಾ 31 ನಗರ ಪ್ರದೇಶದ್ದೆಂದು ವರ್ಗೀಕರಿಸಲಾಗಿದೆ. 2007–08ರಲ್ಲಿ, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯು ನಗರ ಪ್ರದೇಶಗಳಲ್ಲಿ ವಲಸೆಯ ದರವನ್ನು (ಜನಸಂಖ್ಯೆಯಲ್ಲಿರುವ ವಲಸಿಗರ ಪ್ರಮಾಣ) ಶೇಕಡಾ 35 ಎಂದು ಲೆಕ್ಕ ಹಾಕಿರುತ್ತದೆ. ವಲಸೆಯ ಜೊತೆಗೆ, ಜನಸಂಖ್ಯೆಯ ಸಹಜ ಹೆಚ್ಚಳ ಮತ್ತು ನಗರ ಪ್ರದೇಶಗಳೆಂದು ಹೊಸದಾಗಿ ಗುರುತಿಸಲ್ಪಟ್ಟವನ್ನು ಜನಗಣತಿಯಲ್ಲಿ ಸೇರಿಸಿದ್ದು, ಈ ಎಲ್ಲವು ನಗರಪ್ರದೇಶಗಳ ಬೆಳವಣಿಗೆಗೆ ಕಾರಣವಾದವು.

ಅವರ ವಾಸದ ಅವಧಿ ಎಷ್ಟೇ ಇದ್ದರೂ, ಭಾಷೆ ಮತ್ತು ಸಂಸ್ಕೃತಿಯಲ್ಲಿ ಅಗಾಧ ವೈವಿಧ್ಯತೆಯನ್ನು ಹೊಂದಿರುವ ದೇಶದಲ್ಲಿ, ವಲಸಿಗ ಕಾರ್ಮಿಕರು ತಾವು ಬಂದ ಊರುಗಳಲ್ಲಿ ಕೆಲವು ಮುಖ್ಯ ತೊಂದರೆಗಳನ್ನು ಎದುರಿಸುತ್ತಾರೆ. ಹೆಚ್ಚಿನ ವಲಸಿಗರು, ಅದರಲ್ಲೂ ಹೊಸ ಸ್ಥಳದ ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿ, ತಮ್ಮ ಮೂಲ ಸ್ಥಳಕ್ಕಿಂತ ಬೇರೆಯದೇ ಆದ ಜಾಗಕ್ಕೆ ವಲಸೆ ಹೋದವರು, ಕಿರುಕುಳವನ್ನು ಎದುರಿಸಬೇಕಾಗುತ್ತದೆ ಮತ್ತು ರಾಜಕೀಯವಾಗಿ ಹೊರಗೆ ಉಳಿಯುತ್ತಾರೆ. ಕಾರ್ಮಿಕರ ಹಕ್ಕುಗಳ ನಿಬಂಧನೆಗಳನ್ನು ಹೊಂದಿರುವ ಕೆಲವೇ ಕೆಲವು ಶಾಸನಗಳು ಅಪರೂಪವಾಗಿ ಜಾರಿಯಲ್ಲಿವೆ.

ಆಂತರಿಕ ವಲಸಿಗರು ಶಿಕ್ಷಣದಲ್ಲಿ ವಿವಿಧ ಪದವಿ, ಆದಾಯದ ಮಟ್ಟಗಳು ಮತ್ತು ನೈಪುಣ್ಯತೆ ಹೊಂದಿದ್ದು, ಜಾತಿ, ಧರ್ಮ, ಕುಟುಂಬ ಸಂಯೋಜನೆ, ವಯಸ್ಸು ಮತ್ತು ಇತರ ಗುಣಗಳನ್ನು ಹೊಂದಿದ ವೈವಿಧ್ಯಮಯ ವ್ಯಕ್ತಿತ್ವದವರಾಗಿರುತ್ತಾರೆ. ಈ ಲಕ್ಷಣಗಳನ್ನು ಪ್ರತಿಫಲಿಸುವ ಸ್ಪಷ್ಟವಾದ ದತ್ತಾಂಶಗಳಿಲ್ಲ. ಆದರೆ ಹೆಚ್ಚಿನ ವಲಸಿಗರು, ನಿರ್ದಿಷ್ಟವಾಗಿ ಹೇಳಬೇಕೆಂದರೆ, ವಸತಿಯ ಅವಧಿ 60 ದಿನಗಳಿಂದ ಒಂದು ವರ್ಷದವರೆಗೆ ಇರುವ ಅರೆ–ಶಾಶ್ವತ ಮತ್ತು ತಾತ್ಕಾಲಿಕ ವಲಸಿಗರು, 14 ರಿಂದ 40 ವರ್ಷ ವಯೋಮಿತಿಯಲ್ಲಿರುತ್ತಾರೆ ಎಂದು ಸೂಕ್ಷ್ಮ ಸಮೀಕ್ಷೆಗಳು ಸೂಚಿಸುತ್ತದೆ. ಚಾರಿತ್ರಿಕವಾಗಿ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಇದ್ದ ಕಾರಣದಿಂದ ಸಂವಿಧಾನದಲ್ಲಿ ಸ್ಪಷ್ಟವಾಗಿ ರಕ್ಷಣೆ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅಲ್ಪಕಾಲೀನ ವಲಸೆಯ ಹರಿವಿನಲ್ಲಿ ಬಹುಸಂಖ್ಯಾತರಾಗಿದ್ದಾರೆ.

ಕಾರ್ಮಿಕರ ವಲಸೆಯ ಹರಿವಿನಲ್ಲಿ ಶಾಶ್ವತ, ಅರೆ ಶಾಶ್ವತ ಮತ್ತು ಕಾಲೋಚಿತ ಅಥವಾ ಸುತ್ತುವ ವಲಸಿಗರು ಸೇರಿದ್ದಾರೆ. ಅಭಿಪ್ರಾಯ ಸಂಗ್ರಹಣೆಯಲ್ಲಿ ಶಾಶ್ವತ ಮತ್ತು ಅರೆ ಶಾಶ್ವತ ವರ್ಗದಲ್ಲಿರುವ ಹೆಚ್ಚಿನ ವಲಸಿಗರ ಮಾಹಿತಿ ಲಭ್ಯವಿದೆ, ಹಾಗೂ ಸುತ್ತುವ ವಲಸಿಗರ ಸಂಖ್ಯೆ ಮತ್ತು ಲಕ್ಷಣಗಳ ಕುರಿತು ದೊಡ್ಡ ಪ್ರಮಾಣದ ಅಂಕಿಅಂಶ ದತ್ತಾಂಶವು ಬಹಳ ಕಡಿಮೆ ಲಭ್ಯವಿದೆ. ಅರೆ–ಶಾಶ್ವತ ವಲಸಿಗರೆಂದರೆ, ವಲಸೆ ಬಂದ ಸ್ಥಳಗಳಲ್ಲಿ ಅನಿಶ್ಚಿತ ಉದ್ಯೋಗವನ್ನು ಹೊಂದಿರುವವರು ಅಥವಾ ಶಾಶ್ವತ ಸ್ಥಳ

ಬದಲಾವಣೆ ಮಾಡಲು ಸಂಪನ್ಮೂಲಗಳ ಕೊರತೆ ಇರುವವರು. ಅವರು ತಾವು ಸೇರಿದ ಊರಿನಲ್ಲಿ ವರ್ಷಗಳು ಅಥವಾ ದಶಕಗಳ ಕಾಲ ವಾಸಿಸುತ್ತಿದ್ದರೂ, ಪ್ರಾಯಶಃ ತಮ್ಮ ಮೂಲ ಸ್ಥಳದಲ್ಲಿ ಮನೆ ಮತ್ತು ಕುಟುಂಬವನ್ನು ಹೊಂದಿರುತ್ತಾರೆ.

ಕಾಲೋಚಿತ ಅಥವಾ ಸುತ್ತುವ ವಲಸಿಗರು, ಇದಕ್ಕೆ ವಿರುದ್ಧವಾಗಿ, ಪ್ರಾಯಶಃ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕೆಲಸವನ್ನು ಹುಡುಕುತ್ತಾ ಹೋಗುತ್ತಾರೆ, ಅಥವಾ ಪ್ರತೀ ವರ್ಷ ಅದೇ ಸ್ಥಳಕ್ಕೆ ಹಿಂದಿರುಗಿ ಬರುತ್ತಿರುತ್ತಾರೆ. ಈ ರೀತಿಯ ಸುತ್ತುವ ಚಲನೆಯನ್ನು ಅಳವಡಿಸಿಕೊಂಡ ವಲಸಿಗರು ತಾವು ಸೇರಿದ ಊರುಗಳಲ್ಲಿ ಪ್ರತೀ ಬಾರಿ ಆರು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಸಮಯ ಉಳಿಯುತ್ತಾರೆ, ಹಾಗಾಗಿ ಅವರು ಸೇರಿದ ಊರುಗಳಲ್ಲಿ ಸಮಾಜ ಸೌಕರ್ಯಗಳ ಆವಶ್ಯಕತೆ ಹೊಂದಿರುತ್ತಾರೆ. ವ್ಯಕ್ತಿಯ ಶಾಶ್ವತ ನಿವಾಸ ಒಂದೇ ಆಗಿ ಉಳಿಯುತ್ತದೆ, ಆದರೆ ಅವರ ಆರ್ಥಿಕ ಚಟುವಟಿಕೆಯ ಸ್ಥಳ ಬದಲಾಗುತ್ತದೆ ಎಂದು ವಿದ್ವಾಂಸರು ಈ ವಲಸೆಯನ್ನು ವಿವರಿಸುತ್ತಾರೆ. ಮದುವೆಯಿಂದಾಗಿ ವಲಸೆ ಬಂದ ಬಹಳಷ್ಟು ಮಹಿಳೆಯರು, ತಮ್ಮ ವಲಸೆಯ ಪ್ರಾಥಮಿಕ ಉದ್ದೇಶ ಮದುವೆಯಾಗಿದ್ದರೂ, ಕಾರ್ಮಿಕರ ಮಾರುಕಟ್ಟೆಯಲ್ಲಿ ಪಾಲ್ಗೊಳ್ಳುವವರಾಗುತ್ತಾರೆ. ಉದಾಹರಣೆಗೆ, ನಗರದಲ್ಲಿನ ಮನೆಗೆಲಸದ ಮಹಿಳೆಯ ಉದ್ಯೋಗ, ಮಹಿಳೆಯರಿಗೆ ತ್ವರಿತವಾಗಿ ಉದ್ಯೋಗ ಒದಗಿಸುವ ಕ್ಷೇತ್ರವಾಗಿದೆ, ಇದರಲ್ಲಿ ಹೆಚ್ಚಿನವರು ಹಳ್ಳಿಯಿಂದ ನಗರಕ್ಕೆ ಬಂದ ವಲಸಿಗರು. 2001ರ ಜನಗಣತಿಯಲ್ಲಿ 307 ಮಿಲಿಯನ್ ಆಂತರಿಕ ವಲಸಿಗರನ್ನು ಪಟ್ಟಿಮಾಡಲಾಗಿದೆ, ಆದರೆ ಯಾರು ತನ್ನ ಹುಟ್ಟೂರನ್ನು ಅಥವಾ ಕಳೆದ ಬಾರಿ ವಾಸಿಸಿದ ಸ್ಥಳವನ್ನು ಬಿಟ್ಟು ಬೇರೆ ಸ್ಥಳದಲ್ಲಿ ವಾಸಿಸುತ್ತಾನೋ ಅವರನ್ನು ವಲಸಿಗ ಎಂದು ವ್ಯಾಖ್ಯಾನಿಸುತ್ತದೆ.

ಈ ವ್ಯಾಖ್ಯಾನ ಬಹು ದೊಡ್ಡ ವೈವಿಧ್ಯವನ್ನು ಸೂಚಿಸುತ್ತದೆ. ಇದು ಜನ ತಮ್ಮ ಮೂಲ ಸ್ಥಳದ ಸುತ್ತಮುತ್ತಲಿನ ಸ್ಥಳಗಳಿಗೆ, ಹೆಚ್ಚಾಗಿ ಅದೇ ಜಿಲ್ಲೆಯಲ್ಲಿ, ವಲಸೆ ಹೋಗುವುದನ್ನು ಒಳಗೊಂಡಿರುತ್ತದೆ ಮತ್ತು ಬಹುಶಃ ದೊಡ್ಡ ಸಂಖ್ಯೆಯಲ್ಲಿ, ಯಾರು ತಾವು ಹುಟ್ಟಿದ ಸ್ಥಳದಲ್ಲಿ ಅಥವಾ ತಮ್ಮ ಹೊಸದಾಗಿ ಸೇರಿದ ಊರಿನಲ್ಲಿ, ಕಡೆಯ ನಿವಾಸದಲ್ಲಿ ಗಣತಿಯನ್ನು ಮಾಡುವ ಹೆಚ್ಚಿನ ಸಾಧ್ಯತೆ ಇರುತ್ತದೋ ಅಂತಹ ಕಾಲೋಚಿತ ವಲಸಿಗರನ್ನು ಬಿಟ್ಟುಬಿಡುತ್ತದೆ. ರಾಷ್ಟ್ರೀಯ ಕಾರ್ಯನೀತಿಯು ವಲಸಿಗರಿಗೆ, ತಮ್ಮ ಊರಿನಲ್ಲಿ ಪಡಿತರ ಚೀಟಿಯಿಂದ ತಮ್ಮ ಹೆಸರನ್ನು ತೆಗೆಸಿದರೆ, ಹೊಸ ಪಡಿತರ ಚೀಟಿ ಪಡೆಯುವ ಹಕ್ಕು ಕೊಡುತ್ತದೆ. ಆದರೆ ಈ ಕಾರ್ಯನೀತಿಯ ಪ್ರಯೋಜನವನ್ನು ಪಡೆಯುವುದು ವಲಸಿಗ ಕೆಲಸಗಾರರಿಗೆ ಬಹಳ ಕಷ್ಟ. ಹೆಚ್ಚಿನವರಿಗೆ ಹೊಸ ಪಡಿತರ ಚೀಟಿ ಪಡೆಯುವ ಸರಿಯಾದ ಪದ್ಧತಿ ಗೊತ್ತಿರುವುದಿಲ್ಲ, ಮತ್ತು ಇನ್ನುಳಿದವರು ಈ ಮೊದಲು ಚೀಟಿಯನ್ನು ಹೊಂದಿಲ್ಲದಿದ್ದರೆ, ಅವರು ತಮ್ಮ ರಾಜ್ಯದಲ್ಲಿ ಗುರುತು ಪತ್ರಗಳನ್ನು (ಮತದಾನದ ಗುರುತುಪತ್ರದಂತಹ) ಕೊಡುವಾಗ ಅಲ್ಲಿ ಇಲ್ಲದಿದ್ದರೆ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಇದಲ್ಲದೇ ವಲಸಿಗರು ಕೊಡುವ ಕಾಗದ ಪತ್ರಗಳನ್ನು ಅಧಿಕಾರಿಗಳು ಹೆಚ್ಚಾಗಿ ಒಪ್ಪುವುದಿಲ್ಲ (ಲಂಚ ಮತ್ತು ತಾರತಮ್ಯದಂತಹ ಹಲವಾರು ಕಾರಣಗಳಿಗೆ). ಈ ಕಾರಣಕ್ಕಾಗಿ, ಹೆಚ್ಚಿನ ವಲಸಿಗರು ತಮ್ಮ ಮೂಲ ರಾಜ್ಯದಿಂದ ತಮ್ಮ ಹೆಸರನ್ನು ತೆಗೆಯುವ ತೊಂದರೆಗೆ ಒಡ್ಡಿಕೊಳ್ಳುವುದಿಲ್ಲ ಏಕೆಂದರೆ ತಾವು ಸೇರಿದ ಊರಿನಲ್ಲಿ ಹೊಸ ಪಡಿತರ ಚೀಟಿ ದೊರಕುತ್ತದೆಂಬ ಭರವಸೆ ಅವರಿಗಿರುವುದಿಲ್ಲ. ಒಟ್ಟಿನಲ್ಲಿ, ಅವರ ವಲಸಿಗ ಸ್ಥಾನಮಾನವು  ಕಳುಹಿಸಿದ ಮತ್ತು ಸೇರಿದ ಎರಡೂ ಸ್ಥಳಗಳಲ್ಲಿ ಅವರಿಗೆ ಗುರುತಿನ ದಾಖಲೆಗಳನ್ನು ಪಡೆಯುವಲ್ಲಿ ತೊಂದರೆ ಉಂಟುಮಾಡುತ್ತದೆ.

ಗುರುತನ್ನೇ ಧೃಡಪಡಿಸಲು ಆಗದಂತಹ ಮೂಲಭೂತ ತೊಂದರೆಯಿಂದ, ಸವಲತ್ತುಗಳು ಮತ್ತು ಸಮಾಜ ಸೌಲಭ್ಯಗಳ ಲಾಭಗಳನ್ನು ಪಡೆಯುವ ಅವಕಾಶದಿಂದ ವಂಚಿತರಾಗುತ್ತಾರೆ. ಗುರುತಿನ ಚೀಟಿ ಇಲ್ಲ ಎಂದಾದಲ್ಲಿ ವಲಸಿಗರು ಆರ್ಥಿಕವಾಗಿ ಹಿಂದುಳಿದ ಭಾಗದ ಜನರಿಗಾಗಿ ಇರುವ ಅನುದಾನ ಪಡೆದ ಆಹಾರ, ಉರುವಲು, ಆರೋಗ್ಯ ಸೇವೆಗಳು ಅಥವಾ ಶಿಕ್ಷಣದಂತಹ ಸವಲತ್ತುಗಳನ್ನು ಪಡೆಯಲು, ಅಸಾಧ್ಯವಾಗುತ್ತದೆ. ವಲಸಿಗರ ಮಕ್ಕಳ ಶಿಕ್ಷಣಕ್ಕೆ ಅವಕಾಶ ದೊರೆಯಲಿಲ್ಲ ಎಂದಾದಲ್ಲಿ, ಅದು ಮತ್ತೊಂದು ಪೀಳಿಗೆಗೆ ಬಡತನವನ್ನು ಹರಡುವ ಸ್ಥಿತಿಯನ್ನು ಉಲ್ಬಣಗೊಳಿಸುತ್ತದೆ. ಒಟ್ಟಿನಲ್ಲಿ, ಆಂತರಿಕ ವಲಸಿಗರನ್ನು ಪಡೆದ ಸಮಾಜ ಅವರನ್ನು ಹೊರಗಿನವರಂತೆ ಗುರುತಿಸಿ, ಹಕ್ಕುಗಳು ಮತ್ತು ಸವಲತ್ತುಗಳನ್ನು ಒದಗಿಸುವಲ್ಲಿ  ತಾರತಮ್ಯ ತೋರಿಸಿದರೆ, ಹಲವು ಗುಂಪುಗಳನ್ನು ಆರ್ಥಿಕ ಮತ್ತು ರಾಜಕೀಯವಾಗಿ ಶಾಶ್ವತವಾಗಿ ದೂರವಿಟ್ಟಂತಾಗುತ್ತದೆ, ಮತ್ತು ಭಾರತದಲ್ಲಿ ಹೊರಗಿಡುವ ಪ್ರವೃತ್ತಿ ಆಳವಾಗಿರುವುದನ್ನು ತೋರಿಸುತ್ತದೆ.

1961–2001ರ ದಶಕಗಳ ನಡುವಿನ ಜನಗಣನೆಯಲ್ಲಿ ಗ್ರಾಮೀಣ ಮತ್ತು ನಗರದ ಜನಸಂಖ್ಯೆಯಲ್ಲಿನ ಬದಲಾವಣೆ ವಯಸ್ಕ ಗಂಡಸಿನ (25–49 ವಯಸ್ಸಿನವರು) ವಲಸೆಯ ದರವು ಶೇಕಡಾ 4 ರಿಂದ ಶೇಕಡಾ 5.4 ರ ವ್ಯಾಪ್ತಿಯಲ್ಲಿತ್ತೆಂದು ತೋರಿಸುತ್ತದೆ. ವಲಸೆಯ ಸ್ವತಂತ್ರ ಮಾಪಕವಾದ, ಭಾರತ ಮಾನವ ಅಭಿವೃದ್ಧಿ ಸಮೀಕ್ಷೆಯು, ಪುರುಷ ಗ್ರಾಮೀಣ–ನಗರ ವಲಸೆಯ ದರವು 6.8 ಇದ್ದು, ಭಾರತೀಯ ಜನಸಂಖ್ಯಾ ಮತ್ತು ಆರೋಗ್ಯ ಸಮೀಕ್ಷೆಯು ಪುರುಷ ಮಾದರಿಯಲ್ಲಿ, ವಲಸೆಯ ದರವು ಶೇಕಡಾ 5.3 ಎಂದು ಸೂಚಿಸುತ್ತದೆ (ಮುನ್ಶಿಡ ಮತ್ತು ರೋಸೆಂಜ್ವಿಗ್, 2016). ಗ್ರಾಮೀಣ ಪ್ರದೇಶಕ್ಕಿಂತ ನಗರಗಳಲ್ಲಿ ಜೀವನ ನಿರ್ವಹಣಾ ವೆಚ್ಚ

ಹೆಚ್ಚಾಗಿರುವುದರಿಂದ, ಸ್ವಲ್ಪ ಮಟ್ಟಿಗೆ, 45% ಕ್ಕಿಂತ ಹೆಚ್ಚಿರುವ ಗ್ರಾಮೀಣ–ನಗರ ವೇತನ ತಾರತಮ್ಯವನ್ನು ಸಮರ್ಥಿಸಿಕೊಳ್ಳಬಹುದಾಗಿದೆ. ವಲಸೆ ಹೋಗದೇ ಇರಲು ಇನ್ನೊಂದು ಬದಲೀ ವಿವರಣೆ ಎಂದರೆ, ಹೋಗುವ ಊರಿನಲ್ಲಿ ಬೆಂಬಲಿಸುವ (ಜಾತಿ) ಒಂದು ಜಾಲ ಇಲ್ಲದಿದ್ದರೆ ನಗರ ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸುವುದು ಅಸಾಧ್ಯ. ಹೋಲಿಕೆಯ ದೃಷ್ಟಿಯಿಂದ ಆರ್ಥಿಕವಾಗಿ ಮೇಲ್ಮಟ್ಟದಲ್ಲಿರುವ ಕುಟುಂಬಗಳು, ಜಾತಿಯಲ್ಲಿ ಪುನರ್ ವಿತರಣೆಯಾಗುವುದು ಮತ್ತು ಜಾಲದಿಂದ ಹೆಚ್ಚಾಗಿ ನಿರ್ಗಮಿಸುವ ಕುರಿತು ಬದಲೀ ವಿವರಣೆಗಳು ಲಭ್ಯವಿವೆ (ಇಬಿಡ್).

**ವಲಸೆಯ ಲಿಂಗ ಮತ್ತು ಜಾತಿ ಅಂಶಗಳು**

ಪುರುಷರಿಗೆ ಮತ್ತು ಮಹಿಳೆಯರಿಗೆ ವಲಸೆಯ ವಿಚಾರದಲ್ಲಿ ಸನ್ನಿವೇಶ ಮತ್ತು ಹರವು ಬದಲಾಗುತ್ತದೆ. ಎಸ್. ಸುಂದರಿ ಅವರು, ತಮಿಳು ನಾಡಿನಲ್ಲಿ ಮಹಿಳಾ ವಲಸೆಯ ಕುರಿತು ನಡೆಸಿದ ವಿಸ್ತೃತ ಸನ್ನಿವೇಶದ ಅಧ್ಯಯನದಲ್ಲಿ, ಜೀವನೋಪಾಯದ ಕಾಳಜಿಯು ಕಾರ್ಮಿಕರನ್ನು ವಲಸೆ ಹೋಗಲು ಬಲವಂತಪಡಿಸುವ ಒಂದು ಮೂಲಭೂತವಾದ ಮತ್ತು ಮುಖ್ಯವಾದ ಕಾಳಜಿಯಾಗಿದೆ ಎಂದು ಸೂಚಿಸಿದರು (ಸುಂದರಿ, 2007). ಭಾರತದಲ್ಲಿರುವ ಒಟ್ಟು ವಲಸಿಗರ ಜನಸಂಖ್ಯೆಯಲ್ಲಿ, ಸಂಖ್ಯೆಯ ದೃಷ್ಟಿಯಿಂದ ಮಹಿಳಾ ವಲಸೆಯು ಪ್ರಬಲವಾಗಿದೆ. 1971ರಿಂದ ಮಹಿಳಾ ವಲಸೆಯು ಪುರುಷರ ವಲಸೆಯನ್ನು ಹಿಂದಿಕ್ಕಿದೆ (ಜನಗಣತಿ, 2011). ಪುರುಷ ವಲಸಿಗರಿಗೆ ಹೋಲಿಸಿದರೆ ಮಹಿಳಾ ವಲಸಿಗರ ಸಂಖ್ಯೆಯು ಇಮ್ಮಡಿಗಿಂತ ಹೆಚ್ಚಾಗಿದೆ. ಅಭಿವೃದ್ಧಿಶೀಲ ದೇಶಗಳಲ್ಲಿ ಕಾರ್ಮಿಕರ ವಲಸೆಯು ಸ್ತ್ರೀಮಯವಾಗಿದೆ ಎಂದು ಹಲವಾರು ಅಧ್ಯಯನಗಳು ಸೂಚಿಸುತ್ತವೆ (ಸುಂದರಿ, 2007; ಶಾಂತಿ,2006; ಕಾರ್ಲೆಕರ್,1995). ಸ್ತ್ರೀಮಯವಾದ ವಲಸೆಗಳಾದುದರಿಂದ, ಅನೌಪಚಾರಿಕತೆ ಮತ್ತು ಶೋಷಣೆಯೂ ಹಲವು ಪಟ್ಟು ಹೆಚ್ಚಾಗಿದೆ. ಮೇಲಾಗಿ, ಭಾರತದಲ್ಲಿನ ಮಹಿಳಾ ವಲಸೆಯ ನಿಜವಾದ ವಾಸ್ತವಿಕತೆಯನ್ನು ಗ್ರಹಿಸುವುದು ಅಸಾಧ್ಯವಾದುದರಿಂದ, ಕಾರ್ಯನೀತಿಗಳ ಮೂಲಕ ಮಧ್ಯ ಪ್ರವೇಶಿಸುವುದು ಕಷ್ಟಕರವಾಗಿದೆ.

ವಿಶ್ವಸಂಸ್ಥೆಯ ರಾಷ್ಟ್ರೀಯ ಲೆಕ್ಕಪತ್ರ ವ್ಯವಸ್ಥೆಯಂತೆ, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯು ಮನೆಕೆಲಸಗಳನ್ನು ಹಾಗೆಯೇ ಉಚಿತ ಸಾಮಾನುಗಳನ್ನು ಸಂಗ್ರಹಿಸುವುದು ಮತ್ತು ತಯಾರು ಮಾಡುವಂತಹ (ಉರುವಲಿಗಾಗಿ ಸೌದೆ ಸಂಗ್ರಹಿಸುವುದು, ಹೊಲಿಗೆ, ಮೊದಲಾದವು) ಸ್ವಂತ ಬಳಕೆಗಾಗಿ ಮಾಡುವ ಕೆಲಸಗಳನ್ನು ಆರ್ಥಿಕ ಚಟುವಟಿಕೆಗಳನ್ನಾಗಿ ಪರಿಗಣಿಸುವುದಿಲ್ಲ (ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ 2007). ಆರ್ಥಿಕತೆಗೆ ಮತ್ತು ಸಮಾಜಕ್ಕೆ ಮಹಿಳೆಯರ ಕೊಡುಗೆ ಹೆಚ್ಚಾಗಿ ಈ ಎರಡು ವಿಭಾಗಗಳಲ್ಲಿ ಇರುತ್ತದೆ. ಹಾಗಾಗಿ, ಉತ್ಪಾದನೆಯ ಹಲವಾರು ರಂಗಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುವುದು ಸ್ಪಷ್ಟವಾಗಿದ್ದರೂ, ದುಡಿಮೆಯನ್ನು ಅಳೆಯುವ ನಮ್ಮ ಅಂಕಿಅಂಶಗಳ ವ್ಯವಸ್ಥೆ ಮಹಿಳೆಯರ ಕೆಲಸವನ್ನು, ಕೆಲಸ ಎಂದು ಗುರುತಿಸುವುದಿಲ್ಲ ಹಾಗೂ ಲಭ್ಯವಿರುವ ವಿವಿಧ ದೇಶಗಳ ಮಹಿಳಾ ಕಾರ್ಮಿಕ ಬಲದ ಭಾಗವಹಿಸುವಿಕೆಯ ದತ್ತಾಂಶಗಳ ಪ್ರಕಾರ, ಭಾರತವು 127ನೆಯ ಸ್ಥಾನದಲ್ಲಿದೆ (ಐಎಲ್ಒ, 2013). ಆರ್ಥಿಕತೆಯಲ್ಲಿ ಮಹಿಳೆಯರ ಪಾತ್ರವು ವಿರಳವಾಗಿ ಅಂಗೀಕೃತವಾಗಿದ್ದು, ಕ್ರಮೇಣವಾಗಿ ಈ ನಿರಾಕರಣೆಯನ್ನು ಮಹಿಳೆಯರೂ ಸೇರಿದಂತೆ ಸಮಾಜವು ಒಪ್ಪಿಕೊಂಡಿದೆ. ಈ ಬೆಳವಣಿಗೆಯು ಆರ್ಥಿಕತೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಗುರುತಿಸುವಿಕೆಯಲ್ಲಿನ ತೊಂದರೆಯನ್ನು ಎದ್ದು ತೋರಿಸಿತು.

ವ್ಯಾಪಾರದ ಉದಾರೀಕರಣ ಮತ್ತು ಮಾರುಕಟ್ಟೆ ಆಧಾರಿತ ಆರ್ಥಿಕತೆಯು ಕಾರ್ಮಿಕರ ಚಲನೆಯ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರುತ್ತವೆ. ಮಹಿಳಾ ಕಾರ್ಮಿಕರಲ್ಲಿರುವ ಹೇಳಿದಂತೆ ಕೇಳುವ ಮತ್ತು ಪರಿಸ್ಥಿತಿಯಿಂದಾಗಿ ದುರ್ಬಲರಾಗುವ ಗುಣಗಳು, ಅವರನ್ನು ಹಲವಾರು ರಂಗಗಳಲ್ಲಿ ಆದ್ಯತೆಯ ಕೆಲಸಗಾರರನ್ನಾಗಿಸುತ್ತದೆ ಮತ್ತು ಈ ಅಂಶವೇ ಮುಖ್ಯವಾಗಿ ಮಹಿಳಾ ವಲಸೆ ಹೆಚ್ಚಳದಲ್ಲಿ ಸ್ಪಷ್ಟವಾಗುತ್ತದೆ. ನಗರಗಳಲ್ಲಿ ಲಿಂಗ ನಿರ್ದಿಷ್ಟ ಕೆಲಸಗಳ ಬೇಡಿಕೆಯೂ ಇರುತ್ತದೆ. ಕೆಲಸದ ಅನೌಪಚಾರಿಕತೆಯಿಂದಾಗಿ, ಕಾರ್ಮಿಕ ಮಾರುಕಟ್ಟೆಯ ವಿಭಜನೆ ಎದ್ದು ಕಂಡಿತು ಮತ್ತು ಮಹಿಳಾ ಪ್ರಾಬಲ್ಯದ ಕೆಲಸಗಳು ಅಪಮೌಲ್ಯಗೊಂಡಿವೆ, ಕೆಳದರ್ಜೆಗೆ ಇಳಿದಿವೆ ಮತ್ತು ಅವುಗಳೇ ಅತಿ ಕನಿಷ್ಠ ವೇತನದ ಉದ್ಯೋಗಗಳಾಗಿವೆ (ಶಾಂತಿ, 2006).

ವಲಸೆಯು ಜೀವನೋಪಾಯಕ್ಕೆ ಹೆಚ್ಚಿನ ಅವಕಾಶಗಳಲ್ಲದೇ, ಆರ್ಥಿಕತೆಯ ವಿಭಿನ್ನತೆಗೆ, ಮೇಲ್ಮುಖದ ಚಲನೆಗೆ ಮತ್ತು ವೈಯಕ್ತಿಕ ಬೆಳವಣಿಗೆಗೆ ಮತ್ತು ಸ್ವಾಯತ್ತತೆಗೆ ತಂತ್ರವಾಗಿದೆ. ಮಹಾರಾಷ್ಟ್ರದ ಕಾಲೋಚಿತ ವಲಸಿಗರ ಅಧ್ಯಯನದಲ್ಲಿ, ದಿವ್ಯಾ ಪಾಂಡೆ ಇವರು ಮಹಿಳೆಯರ ವಲಸೆಯ ಹಿಂದಿನ ಕಾರಣವನ್ನು ಕಂಡುಹಿಡಿಯುತ್ತಾರೆ. ಗ್ರಾಮೀಣ ಗಣ್ಯ ಮಹಿಳೆಯರು ಉತ್ತಮ ಶಿಕ್ಷಣ ಮತ್ತು ಅವಕಾಶಗಳಿಗಾಗಿ ಹಾಗೆಯೇ ಬಡ ಮಹಿಳೆಯರು ಜೀವನೋಪಾಯದ ಆಯ್ಕೆಗಳಿಗಾಗಿ ಪಟ್ಟಣಗಳು ಮತ್ತು ನಗರಗಳಿಗೆ ವಲಸೆ ಹೋಗುತ್ತಾರೆ ಎಂಬ ಅಂಶದ ಕಡೆಗೆ ಅವರು ಗಮನ ಸೆಳೆಯುತ್ತಾರೆ(ಪಾಂಡೆ, 1998). ರಾಜ್ಯದೊಳಗಡೆ ಅದರಲ್ಲೂ ಜಿಲ್ಲಾಂತರ್ಗತ ವಲಸೆ ಮಹಿಳಾ ಕಾರ್ಮಿಕರಲ್ಲಿ ಬಹಳ ಸಾಮಾನ್ಯ. ಮಹಿಳೆಯರು ಬರೀ ಕುಟುಂಬದೊಡನೆ ಮಾತ್ರವಲ್ಲದೇ ಒಬ್ಬಂಟಿಯಾಗಿಯೂ ವಲಸೆ ಹೋಗುತ್ತಾರೆ. ಅವರು ಜನಪ್ರಿಯ ಸಾಂಪ್ರದಾಯಿಕ ಕ್ಷೇತ್ರಗಳಷ್ಟೇ ಅಲ್ಲ, ಮನೆಗೆಲಸ ಮತ್ತು ಕಾರ್ಖಾನೆಯ ಕೆಲಸದಿಂದ

ಆರಂಭಿಸಿ ಬಂಜೆತನದ ಉದ್ಯಮದಿಂದ ಉದ್ಭವಿಸಿದ ಅವಕಾಶಗಳಿರುವ ಅಸಾಂಪ್ರದಾಯಿಕ ಮತ್ತು ಉದಯೋನ್ಮುಖ ಕ್ಷೇತ್ರಗಳಲ್ಲೂ ಕಂಡುಬರುತ್ತರೆ. ಬಹಳಷ್ಟು ಸಂದರ್ಭಗಳಲ್ಲಿ, ಈ ಉದಯೋನ್ಮುಖ ಕ್ಷೇತ್ರಗಳು ಕಾನೂನಿನಡಿಯಲ್ಲಿ ಸರಿಯಾಗಿ ಬರುವುದಿಲ್ಲ ಮತ್ತು ವಲಸಿಗ ಮಹಿಳೆಯರು ಕಡ್ಡಾಯವಾಗಿ ದುರ್ಬಲವಾದ ಪರಿಸ್ಥಿತಿಯಲ್ಲಿ ಬದುಕಬೇಕಾಗುತ್ತದೆ ಮತ್ತು ಕೆಲಸ ಮಾಡಬೇಕಾಗುತ್ತದೆ. ಅಂತಹ ಒಂದು ಕ್ಷೇತ್ರವೆಂದರೆ ಬಂಜೆತನದ ಉದ್ಯಮ, ಇಲ್ಲಿ ಬಡ ಮಹಿಳೆಯರ ಗರ್ಭವನ್ನು ಬಾಡಿಗೆಗೆ ನೀಡಲಾಗುತ್ತದೆ. ಕೃತಕವಾಗಿ ಗರ್ಭ ಧರಿಸುವ ಪ್ರಕ್ರಿಯೆಯಲ್ಲಿ, ಬಸಿರು ಮತ್ತು ಮಗುವಿನ ಜನನ ಬಹಳಷ್ಟು ಬಾರಿ ಆರೋಗ್ಯದ ಹಲವಾರು ತೊಂದರೆಗಳನ್ನು ಉಂಟುಮಾಡುತ್ತದೆ, ಕೆಲವೊಮ್ಮೆ ಬಾಡಿಗೆ ತಾಯಿಯರ ಸಾವಿಗೂ ಕಾರಣವಾಗುತ್ತದೆ (ಪಾಂಡೆ, 2014). ಕಾನೂನು ಕ್ರಮಗಳು ಸಾಕಷ್ಟು ಇಲ್ಲದಿರುವ ಈ ಉದ್ಯಮದಲ್ಲಿ, ಬಡ ಮಹಿಳೆಯರ ದೇಹವನ್ನು ಬಳಸಿಕೊಂಡು ಅವರ ಕೊಡುಗೆ ಕಣ್ಣಿಗೆ ಕಾಣದಂತಿರುವುದನ್ನು ಪಿಂಕಿ ವಿರಾನಿ ವಿವರವಾಗಿ ಚರ್ಚಿಸುತ್ತಾರೆ (ವಿರಾನಿ, 2016).

ಜಾತಿ ಮತ್ತು ವಲಸೆಯ ನಡುವಿನ ಸಂಬಂಧ ಹಲವಾರು ವಿದ್ವಾಂಸರಿಂದ ಅನ್ವೇಶಿಸಲ್ಪಟ್ಟ ಇನ್ನೊಂದು ಆಯಾಮ. ಪರಿಶಿಷ್ಟ ಪಂಗಡಗಳಿಂದ ಮತ್ತು ಪರಿಶಿಷ್ಟ ಜಾತಿಗಳಿಂದ ಬಂದ ಜನರಿಗೆ ಆಂಧ್ರ ಪ್ರದೇಶ, ಮಹಾರಾಷ್ಟ್ರ ಮತ್ತು ಜಾರ್ಖಂಡ್‌ಗಳಿಗೆ ವಲಸೆ ಹೋಗಲು ಹೆಚ್ಚಿನ ಒಲವು ಇರುತ್ತದೆ (2003). ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ಜಾತಿಗಳಲ್ಲಿ ವಲಸೆಯ ದರವು ಇನ್ನುಳಿದ ಸಾಮಾನ್ಯ ವರ್ಗದ ಸಾಮಾಜಿಕವಾಗಿ ಗೌರವ ಪಡೆವ ಜಾತಿಯವರಿಗಿಂತ ಹೆಚ್ಚಾಗಿದೆಯೆಂದು ಉತ್ತರ ಬಿಹಾರದ ಮೇಲೆ ನಡೆಸಿದ ಅಧ್ಯಯನವು ತೋರಿಸುತ್ತದೆ (ಕರಣ್, 2003). ವಲಸಿಗರ ಉದ್ಯೋಗ ಮಾರುಕಟ್ಟೆಯನ್ನು ಹೆಚ್ಚಾಗಿ ಜಾತಿ ಆಧಾರದಲ್ಲಿ ವಿಭಜಿಸಲಾಗಿದೆ ಮತ್ತು ಕೆಲವು ಪ್ರಕರಣಗಳಲ್ಲಿ ಯಾವುದೋ ಒಂದು ಜಾತಿಯ ವಲಸಿಗನನ್ನು ನಿರ್ದಿಷ್ಟ ಕ್ಷೇತ್ರದಲ್ಲಿ ಪ್ರವೇಶಿಸದಂತೆ ನಿರ್ಬಂಧಿಸಿ ತಾರತಮ್ಯ ತೋರಿಸಿದ ದೃಷ್ಟಾಂತಗಳಿವೆ (ಐಓಎಮ್, 2005). ಕರ್ನಾಟಕದ ವಲಸೆಯ ಮಾದರಿಯ ಇತ್ತೀಚಿನ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ಅಂಕಿಅಂಶ, ಜಾತಿ ಮತ್ತು ಗ್ರಾಮೀಣ ಭಾರತದಲ್ಲಿ ಶ್ರೇಣೀಕೃತ ಸನ್ನಿವೇಶದಲ್ಲಿ ಬಹಳ ಪ್ರಸ್ತುತವಾಗುವ ವಿವಿಧ ತಳ್ಳುವ ಅಂಶಗಳ ಸ್ಪಷ್ಟ ಪರಿಣಾಮವನ್ನು ಸೂಚಿಸುತ್ತದೆ. ಸುಪ್ರಸಿದ್ಧ ವಿದ್ವಾಂಸರಾದ ಸುಖ್ ದೇವ್ ಥೊರಾಟ್ ಶೇಕಡಾ 38 ಜನ ನಗರ ಪ್ರದೇಶಗಳಲ್ಲಿ ಬದುಕುತ್ತಿರುವ ವೇಗವಾಗಿ ನಗರೀಕರಣಕ್ಕೊಳಗಾಗುತ್ತಿರುವ ಈ ಪರಿಸ್ಥಿತಿಯಲ್ಲಿ ಹೇಗೆ ವಲಸೆಯ ನಮೂನೆಗಳು ಪಕ್ಷಪಾತದಿಂದ ದಲಿತರ ವಿರುದ್ಧ ಇರುತ್ತವೆಯೆಂದು ಟಿಪ್ಪಣಿ ಮಾಡುತ್ತಾರೆ (2015).

**ಕರ್ನಾಟಕದಲ್ಲಿ ವಲಸೆ**

ಕಳೆದ ಎರಡು–ಮೂರು ದಶಕಗಳಲ್ಲಿ ಅಭಿವೃದ್ಧಿಯ ನಮೂನೆಯು ಕೃಷಿ ಮತ್ತು ಕೃಷಿಯೇತರದ; ಗ್ರಾಮೀಣ ಮತ್ತು ನಗರ ಪ್ರದೇಶಗಳ; ಮತ್ತು ಉತ್ತಮ ಮತ್ತು ವಿಷಮ ಅಭಿವೃದ್ಧಿಯ ಸೂಚಕಗಳನ್ನು ಹೊಂದಿರುವ ರಾಜ್ಯಗಳ ನಡುವಿನ ಅಂತರವನ್ನು ಸ್ಥಿರವಾಗಿ ಹೆಚ್ಚಿಸುತ್ತಾ ಬಂದಿದೆ. ಅದು ಸ್ಥಿರವಾಗಿ ಕೆಲವು ಪ್ರದೇಶಗಳಲ್ಲಿ ಮತ್ತು ಕೆಲವು ರಾಜ್ಯಗಳಲ್ಲಿ ಕೇಂದ್ರೀಕೃತಗೊಂಡಿದೆ. ಭಾರತದಲ್ಲಿ ಕರ್ನಾಟಕ, ಕೇರಳ ಮತ್ತು ಪಂಜಾಬ್ ರಾಜ್ಯಗಳು ಅಭಿವೃದ್ಧಿಯ ಭರವಸೆಯ ವಲಯಗಳಾದರೆ, ಬಿಹಾರ, ಒರಿಸ್ಸಾ ಮತ್ತು ಛತ್ತೀಸ್‌ಗಢದ ಅಭಿವೃದ್ಧಿ ಸೂಚಕಗಳೆಲ್ಲವೂ ಗಾಬರಿ ಹುಟ್ಟಿಸುವಂತಿವೆ. ವಿಷಮ ಅಭಿವೃದ್ಧಿಯ ಸೂಚಕಗಳಿರುವ ರಾಜ್ಯಗಳಿಂದ ಕಾರ್ಮಿಕರು ಅದಕ್ಕೆ ಹೋಲಿಸಿದರೆ ಉತ್ತಮವಾಗಿರುವ ಅಭಿವೃದ್ಧಿ ಸೂಚಕಗಳಿರುವ ರಾಜ್ಯಗಳಿಗೆ ವಲಸೆ ಬಂದರೆ ಹೆಚ್ಚು ಮತ್ತು ಉತ್ತಮ ಜೀವನೋಪಾಯದ ಅವಕಾಶಗಳು ದೊರಕುತ್ತದೆಂಬುದು ಸ್ಪಷ್ಟ ಮತ್ತು ಸಾಮಾನ್ಯ ವಿದ್ಯಮಾನವಾಗಿದೆ. ತುಲನಾತ್ಮಕವಾಗಿ "ಅಭಿವೃದ್ಧಿ" ಹೊಂದಿರುವ ಕರ್ನಾಟಕದಂತಹ ರಾಜ್ಯದಿಂದ ಹೊರವಲಸೆ ಹಾಗೂ ಒಳ ವಲಸೆಯು, ಕಾರ್ಮಿಕರ ಚಲನೆ ಮತ್ತು "ತಳ್ಳುವ" ಅಂಶಗಳನ್ನು ಒಳಗೊಂಡಂತೆ, ಸಾಮಾಜಿಕ–ಆರ್ಥಿಕ ಪರಿಸ್ಥಿತಿಯ ಹಲವಾರು ಸಂಕೀರ್ಣ ಪದರುಗಳನ್ನು ಸೂಚಿಸುತ್ತದೆ.

ಮೂಲಸೌಕರ್ಯಗಳ ಮತ್ತು ಕಟ್ಟಡ ನಿರ್ಮಾಣದ ಹಲವಾರು ಯೋಜನೆಗಳು ಮುನ್ನಡೆಯುತ್ತಿರುವ ರಾಜ್ಯಗಳು, ಕೈಗಾರಿಕಾ ಅಭಿವೃದ್ಧಿಯಲ್ಲಿ ತಟಸ್ಥವಾದ ರಾಜ್ಯಗಳಿಂದ ಕಾರ್ಮಿಕರು ಹೆಚ್ಚಾಗಿ ಹರಿದು ಬರುವುದನ್ನು ನೋಡುತ್ತವೆ. ವೇಗವಾಗಿ ಬೆಳೆಯುತ್ತಿರುವ ಎಲೆಕ್ಟ್ರಾನಿಕ್ಸ್ ಸಿಟಿಯಂತಹ ಬೆಂಗಳೂರಿನಿಂದಾಗಿ, ಅಭಿವೃದ್ಧಿ ಯೋಜನೆಗಳಿಂದ ಪ್ರಯೋಜನ ಪಡೆದ ರಾಜ್ಯವೆಂದು ಹೇಳಬಹುದಾದ, ಕರ್ನಾಟಕ ರಾಜ್ಯವು, ದೇಶದಾದ್ಯಂತ ಅದರಲ್ಲೂ ಬಿಹಾರದಂತಹ ರಾಜ್ಯಗಳ, ವಿದ್ಯಾರ್ಥಿಗಳಿಗೆ ಮತ್ತು ವೃತ್ತಿಪರರರಿಗೆ ಜನಪ್ರಿಯ ಗಮ್ಯಸ್ಥಾನವಾಗಿದೆ. 2011ರ ಜನಗಣತಿಯಂತೆ, ಪ್ರತೀ ಮೂವರು ಭಾರತೀಯ ವಲಸಿಗರಲ್ಲಿ ಒಬ್ಬನು ಕೆಲಸವನ್ನು ಹುಡುಕಿಕೊಂಡು ದಕ್ಷಿಣಕ್ಕೆ ಹೊರಡುತ್ತಾನೆ ಮತ್ತು ಇತ್ತೀಚಿನ ದಿನಗಳಲ್ಲಿ ಕರ್ನಾಟಕವು ಕಾರ್ಮಿಕರ ವಲಸೆಗೆ ಒಂದು ಬಹಳ ಮುಖ್ಯವಾದ ಗಮ್ಯಸ್ಥಾನವಾಗಿದೆ. ಆದಾಗ್ಯೂ, ರಾಜ್ಯದೊಳಗಿನ ವಲಸೆ ಹೊರತುಪಡಿಸಿ, ಉತ್ತಮ ಸ್ಥಿತಿಯಲ್ಲಿರುವ ಈ ರಾಜ್ಯದಿಂದಲೂ ಕಾರ್ಮಿಕರ ಹೊರಹರಿವು ಚಾಲ್ತಿಯಲ್ಲಿದೆ. ಕರ್ನಾಟಕದ ವಲಸೆಯ ನಮೂನೆಯು ಭೌಗೋಳಿಕ ರಾಜಕೀಯ ವಲಯದ "ಹಿನ್ನೆಡೆಯ ಅಭಿವೃದ್ಧಿ" ಅಧ್ಯಯನಕ್ಕೆ ಉತ್ತಮ ಉದಾಹರಣೆಯಾಗಿದೆ. ಬೇರೇ ಮಾತುಗಳಲ್ಲಿ ಹೇಳಬೇಕೆಂದರೆ,

ದೇಶದಾದ್ಯಂತ ವಿದ್ಯಾರ್ಥಿಗಳನ್ನು ಮತ್ತು ವೃತ್ತಿಪರರನ್ನು ದೊಡ್ಡ ಪ್ರಮಾಣದಲ್ಲಿ ಸೆಳೆಯುವ ಉತ್ತಮ ಸ್ಥಿತಿಯಲ್ಲಿರುವ ಕರ್ನಾಟಕದಂತಹ ರಾಜ್ಯದಲ್ಲಿ, ಕರ್ನಾಟಕದಿಂದ ಹೊರಗೆ ಮತ್ತು ಕರ್ನಾಟಕಕ್ಕೆ ವಲಸೆಯ ಅಧ್ಯಯನವು, ಬಡ ಮತ್ತು ಹಿಂದುಳಿದವರ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ವ್ಯಕ್ತವಾಗುವಿಕೆ/ಮುಂದುವರಿಸುವಿಕೆಯ ಗತಿಶೀಲತೆಯನ್ನು ಅರ್ಥಮಾಡಿಕೊಳ್ಳಲು ಸಹಾಯಮಾಡುತ್ತದೆ.

ಈ ಮೊದಲು ಚರ್ಚಿಸಿದಂತೆ, ಕರ್ನಾಟಕದಲ್ಲಿ ವಲಸೆಯ ನಮೂನೆಯಲ್ಲಿ ಜಾತಿ ಬಹಳ ಮುಖ್ಯ ಭೂಮಿಕೆಯನ್ನು ನಿರ್ವಹಿಸುತ್ತದೆ. "ಕರ್ನಾಟಕದಲ್ಲಿ ದಲಿತರ ಅಭಿವೃದ್ಧಿಯ ಸ್ಥಿತಿ"ಯ ಕುರಿತು ನಡೆದ ಅಧ್ಯಯನವನ್ನು ಉಲ್ಲೇಖಿಸುತ್ತಾ ಸುಖದೇವ್ ಥೋರಾಟ್, ಶಿಕ್ಷಣ ಮತ್ತು ಸಂಪನ್ಮೂಲ ಪಡೆಯಲು ದೊರಕುವ ಅವಕಾಶವು, ಕರ್ನಾಟಕದಲ್ಲಿ ಜಾತಿ ಆಧಾರಿತ ವಲಸೆಯ ನಮೂನೆಯನ್ನು ನಿರ್ಧರಿಸುವ ಒಂದು ಮುಖ್ಯ ಅಂಶವಾಗಿದೆ ಎಂದು ಸೂಚಿಸುತ್ತಾರೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರು 0.42 ಹೆಕ್ಟೇರ್‌ಗಳು; ಪರಿಶಿಷ್ಟ ಪಂಗಡದವರು 0.77 ಹೆಕ್ಟೇರ್‌ಗಳು; ಇನ್ನುಳಿದ ಇತರೆ ಹಿಂದುಳಿದ ವರ್ಗದವರು 0.89 ಹೆಕ್ಟೇರ್‌ಗಳು; ಹಾಗೂ ಇನ್ನುಳಿದವರು 1.39 ಹೆಕ್ಟೇರ್‌ಗಳಷ್ಟು ಗಾತ್ರದ ಭೂಮಿಯನ್ನು ಹೊಂದಿದ್ದಾರೆ. ಭೂ ಹಿಡುವಳಿಯಲ್ಲಿ ಕಂಡುಬರುವ ಜಾತಿ ಆಧಾರಿತ ವರ್ಗ ಶ್ರೇಣಿಯು ಶಿಕ್ಷಣಕ್ಕಿರುವ ಅವಕಾಶಗಳಲ್ಲಿಯೂ ಕಂಡುಬರುತ್ತವೆ. ರಾಜ್ಯದ ಉನ್ನತ ಶಿಕ್ಷಣದ ದಾಖಲಾತಿ ಸರಾಸರಿ ಶೇಕಡಾ 18 ಆಗಿದೆ ಆದರೆ, ಕೇವಲ ಶೇಕಡಾ 7 ಪರಿಶಿಷ್ಟ ಜಾತಿಯವರು ಮತ್ತು ಶೇಕಡಾ 5 ಪರಿಶಿಷ್ಟ ಪಂಗಡದವರು ಉನ್ನತ ಶಿಕ್ಷಣಕ್ಕೆ ದಾಖಲಿಸಿಕೊಂಡಿದ್ದಾರೆ, ಮತ್ತು ಇನ್ನುಳಿದ/ಸಾಮಾನ್ಯ ಜಾತಿಯವರು ಶೇಕಡಾ 22.2ರಷ್ಟು ಉನ್ನತ ಸಂಖ್ಯೆಯಲ್ಲಿ ಮತ್ತು ಇತರೆ ಹಿಂದುಳಿದ ವರ್ಗದವರು ಶೇಕಡಾ 21.3ರ ಸರಾಸರಿಯಲ್ಲಿದ್ದಾರೆ. ಸಾಮಾಜಿಕವಾಗಿ ಹಿಂದುಳಿದ ಜಾತಿಯ ವಿದ್ಯಾರ್ಥಿಗಳಿಗೆ ಹೋಲಿಸಿದರೆ, ಸಾಮಾಜಿಕವಾಗಿ ಮೇಲ್ಜಾತಿಯಲ್ಲಿರುವ ಸುಶಿಕ್ಷಿತ ಜನರ ಪ್ರಮಾಣವು ಮೂರು ಪಾಲು ಹೆಚ್ಚಾಗಿದೆ. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದವರ ಯುವಜನತೆ ಶಿಕ್ಷಣಕ್ಕೆ ಪ್ರವೇಶ ಪಡೆದುಕೊಳ್ಳುವುದು ಬಹಳ ಕಡಿಮೆ ಎಂಬುದು ಎದ್ದು ಕಾಣುತ್ತದೆ. ವ್ಯಂಗ್ಯವೆಂದರೆ, ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಯುವಜನತೆಗೆ ವಿಶ್ವವಿದ್ಯಾಲಯಗಳನ್ನು ಸೇರಲು ಸಾಧ್ಯವಾಗಿ, ಉನ್ನತ ಪದವಿಗಳನ್ನು ಪಡೆದರೂ, ಸಾಮಾಜಿಕವಾಗಿ ಮೇಲ್ಜಾತಿಯ ಯುವಜನತೆ ಉದ್ಯೋಗ ಪಡೆಯುವ ಸಾಧ್ಯತೆ ಹೆಚ್ಚುವಂತೆ, ಇವರು ಉದ್ಯೋಗ ಪಡೆಯುವ ಸಂಭಾವ್ಯತೆ ಹೆಚ್ಚಾಗುವುದಿಲ್ಲ. ವಿಶ್ವವಿದ್ಯಾಲಯಗಳ ಪದವಿ ಹೊಂದಿರುವ ಪರಿಶಿಷ್ಟ ಜಾತಿಯವರ ನಿರುದ್ಯೋಗದ ಪ್ರಮಾಣವು ಶೇಕಡಾ 11.6 ಇದ್ದರೆ, ಸಾಮಾನ್ಯ/ಇತರ ಜಾತಿಯವರದು ಶೇಕಡಾ 4.2 ಇದೆ ಮತ್ತು ಅದೇ ವಿಭಾಗದಲ್ಲಿ ಇತರೆ ಹಿಂದುಳಿದ ವರ್ಗದವರು ಶೇಕಡಾ 3 ಇದ್ದಾರೆ. ಈ ಸಂದರ್ಭದಲ್ಲಿ, ಸಾಮಾಜಿಕವಾಗಿ ಹಿಂದುಳಿದ ಜಾತಿಯ ಜನರು ಉನ್ನತ ಶಿಕ್ಷಣವನ್ನು ಪಡೆದಿದ್ದರೂ, ಕಡಿಮೆ ಸಂಬಳದ ಕೆಲಸಗಳಿಗೆ ಸೇರಿಕೊಳ್ಳದೇ ಬೇರೆ ದಾರಿ ಇರುವುದಿಲ್ಲ. ಉಮಾ, ಮಧು ಮತ್ತು ಹಬೀಬ್ ಅವರು ತಮ್ಮ ಅಧ್ಯಯನ "ಸೇರ್ಪಡೆಗಾಗಿ ಪ್ರಾದೇಶಿಕ ವಲಸೆ"ಯಲ್ಲಿ, "ತಮ್ಮ ಜೀವನೋಪಾಯಕ್ಕಾಗಿ ವಲಸೆ ಬಂದ ಹೆಚ್ಚಿನ ಬಡ ಕೃಷಿಕರು ಪರಿಶಿಷ್ಟ ಜಾತಿಗಳಂತೆ ಹಿಂದುಳಿದ ಬಡ ಕುಟುಂಬದಿಂದ ಬಂದವರಾಗಿರುತ್ತಾರೆ" ಎಂದು ಟಿಪ್ಪಣಿಸುತ್ತಾರೆ (ಉಮಾ, ಮಧು ಮತ್ತು ಹಬೀಬ್, 2013:3). ಹೀಗೆ, ಸಾಮಾಜಿಕವಾಗಿ ತುಳಿತಕ್ಕೊಳಗಾದ ಜಾತಿಗಳು ಶಿಕ್ಷಣ, ಸಂಪನ್ಮೂಲಗಳು, ಉದ್ಯೋಗ ಮತ್ತು ಅಂತಿಮವಾಗಿ ಉತ್ತಮ ಜೀವನ ಪಡೆಯಲು, ಜಾತಿಗಳಲ್ಲಿನ ಶ್ರೇಣಿ ವ್ಯವಸ್ಥೆಯು, ಅಡ್ಡಿಪಡಿಸುವಲ್ಲಿ ಮುಖ್ಯ ಪಾತ್ರ ನಿರ್ವಹಿಸುತ್ತದೆಂದು ಥೊರಾಟ್ ಸೂಚಿಸುತ್ತಾರೆ.

ರಾಜ್ಯದ ಮೇಲ್ಜಾತಿಗಳಿಗೆ ಹೋಲಿಸಿದರೆ ಸಾಮಾಜಿಕವಾಗಿ ಹಿಂದುಳಿದ ಜಾತಿಗಳಲ್ಲಿ ಎದ್ದು ಕಾಣುವಂತೆ ತಳ್ಳುವ ವಿಚಾರಗಳ ಒತ್ತಾಯವಿರುತ್ತದೆ. ಮೇಲ್ಜಾತಿಯವರಿಗೆ ಹೋಲಿಸಿದರೆ, ಹಿಂದುಳಿದ ಬಡ ಜಾತಿಯಲ್ಲಿ ವಲಸೆಯ ಪ್ರಮಾಣ ಹೆಚ್ಚಾಗಿರುತ್ತದೆಂಬುದನ್ನು ಯಾರೂ ಊಹಿಸಬಹುದು. ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಒಟ್ಟಾರೆ ವಲಸೆಯ ಪ್ರಮಾಣವು ಶೇಕಡಾ 34 ಮತ್ತು ಪರಿಶಿಷ್ಟ ಪಂಗಡಗಳು ಶೇಕಡಾ 25.7 ಹಾಗೂ ಇತರೆ ಹಿಂದುಳಿದ ವರ್ಗಗಳ ಮತ್ತು ಇತರ ವರ್ಗದವರು ಕ್ರಮವಾಗಿ ಶೇಕಡಾ 38 ಮತ್ತು ಶೇಕಡಾ 41 ಆಗಿರುತ್ತದೆ. ಗಮನ ಸೆಳೆಯುವ ಅಂಶವೆಂದರೆ, ಪರಿಶಿಷ್ಟ ಜಾತಿಗಳಲ್ಲಿ ಗ್ರಾಮೀಣ ಪ್ರದೇಶದಿಂದ ಗ್ರಾಮೀಣ ಪ್ರದೇಶಕ್ಕೆ ವಲಸೆಯು ಹೆಚ್ಚಾಗಿದ್ದು ಶೇಕಡಾ 78 ಇದೆ, ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಶೇಕಡಾ 73, ಇತರೆ ಹಿಂದುಳಿದ ವರ್ಗಗಳಲ್ಲಿ ಶೇಕಡಾ 58 ಮತ್ತು ಸಾಮಾನ್ಯ/ಇತರೆ ಜಾತಿಗಳಲ್ಲಿ ಶೇಕಡಾ 42 ಇರುತ್ತದೆ. ಆದರೆ ಇತರೆ ಜಾತಿಗಳಲ್ಲಿ ಅಥವಾ ಸಾಮಾಜಿಕವಾಗಿ ಮೇಲ್ಜಾತಿಯಲ್ಲಿರುವ ಜನರು ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ವಲಸೆ ಹೋಗುವ ಪ್ರಮಾಣವು ಬಹಳ ಹೆಚ್ಚಾಗಿರುತ್ತದೆ. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶದ ಚಲನೆಯಲ್ಲಿ ಇತರೆ ಜಾತಿಗಳ ವರ್ಗದವರು ಅಧಿಕ ಪ್ರಮಾಣದಲ್ಲಿದ್ದು ಶೇಕಡಾ 25 ಇದ್ದರೆ, ನಂತರೆ ಇತರೆ ಹಿಂದುಳಿದ ವರ್ಗಗಳು ಶೇಕಡಾ 20 ಇರುತ್ತಾರೆ. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶದ ವಲಸೆಯಲ್ಲಿ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದವರ ಪ್ರಮಾಣವು ಕ್ರಮವಾಗಿ ಕೇವಲ ಶೇಕಡಾ 14 ಮತ್ತು ಶೇಕಡಾ 16 ಆಗಿರುತ್ತದೆ. ರಾಜ್ಯದ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದವರು ಸಾಮಾನ್ಯವಾಗಿ ರಾಜ್ಯದ ಒಳಗಡೆಯೇ ಮತ್ತು ಹೆಚ್ಚಾಗಿ ರಾಜ್ಯದ ಗ್ರಾಮೀಣ ಪ್ರದೇಶದಿಂದ ಗ್ರಾಮೀಣ ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶದ ವಲಸೆಯು ಮೇಲ್ಜಾತಿಯ ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗಗಳ ವರ್ಗದವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಸಾಮಾಜಿಕವಾಗಿ ಮೇಲ್ಜಾತಿಯವರು ಸಾಮಾನ್ಯವಾಗಿ ಶಿಕ್ಷಣ ಮತ್ತು/ಅಥವಾ ಉತ್ತಮ ಜೀವನೋಪಾಯಕ್ಕಾಗಿ ಗ್ರಾಮೀಣ ಪ್ರದೇಶದಿಂದ ನಗರಗಳಿಗೆ ವಲಸೆ ಹೋಗುತ್ತಾರೆಂದು ಇದು ಸೂಚಿಸುತ್ತದೆ. ಮತ್ತೊಂದೆಡೆ, ಅತಿ ಚಿಕ್ಕ ಜಮೀನನ್ನು ಹೊಂದಿರುವ ಅಥವಾ ಜಮೀನಿಲ್ಲದ ಕಾರ್ಮಿಕರಾಗಿರುವ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದವರು, ಪ್ರಾಯಶಃ ಕೂಲಿ ಕಾರ್ಮಿಕರಾಗಿ ವಲಸೆ ಹೋಗುತ್ತಾರೆ.

ಹೀಗೆ, ಜಾತಿಯು ವಲಸೆಯಲ್ಲಿ ಸ್ಪಷ್ಟವಾಗಿ ಪ್ರಭಾವ ಬೀರತ್ತದೆಂದು ನಮ್ಮಲ್ಲಿರುವ ಅಂಕಿಅಂಶಗಳು ಸೂಚಿಸುತ್ತವೆ. ಆಂತರಿಕ ಮತ್ತು ಹೊರಹೋಗುವ ವಲಸೆಗಳೆರಡರಲ್ಲೂ, ಕರ್ನಾಟಕದ ಕಾರ್ಮಿಕರ ಚಲನೆಗೆ ಖಂಡಿತವಾಗಿಯೂ ಇತರ ಹಲವಾರು ವಿಷಯಗಳು ಪ್ರಭಾವ ಬೀರುತ್ತವೆ. ಇತರ ರಾಜ್ಯಗಳ ವಲಸಿಗರಿಗೆ ಈ ರಾಜ್ಯವು ಮುಖ್ಯವಾಗಿ ಬಹಳ ಭರವಸೆಯ ಗಮ್ಯತಾಣವಾಗಿ ಪರಿಚಿತವಾಗಿದೆ. ವೇಗವಾಗಿ ಬೆಳೆಯುತ್ತಿರುವ ಈ ನಗರದ ಕಟ್ಟಡ ನಿರ್ಮಾಣ ಸ್ಥಳಗಳು, ಬಿಹಾರ, ಒರಿಸ್ಸಾ ಮತ್ತು ಅಸ್ಸಾಂನಂತಹ ದೂರದ ರಾಜ್ಯಗಳ ವಲಸಿಗರಿಂದ ಕೂಡಿದೆ. ಕರ್ನಾಟಕದಲ್ಲಿ ರಾಜ್ಯದೊಳಗಿನ ಅಥವಾ ಅಂತರ್–ಜಿಲ್ಲಾ ವಲಸೆಯ ಸಂದರ್ಭವು ಮುಖ್ಯವಾಗಿ ರಾಜ್ಯದೊಳಗಿನ ಅಸಮನಾದ ಅಭಿವೃದ್ಧಿಯಿಂದ ಪ್ರೇರೇಪಿತವಾಗಿದೆ. ಮೂಲ ಸೌಕರ್ಯ ಮತ್ತು ಕೈಗಾರಿಕಾ ಅಭಿವೃದ್ಧಿಯ ದೃಷ್ಟಿಗೆ ಹೋಲಿಸಿದರೆ ದಕ್ಷಿಣ ಕರ್ನಾಟಕವು ಉತ್ತಮವಾಗಿದ್ದು ಉತ್ತರದಿಂದ ದಕ್ಷಿಣ ಕರ್ನಾಟಕದವರೆಗೆ ವಲಸೆಯನ್ನು ಅದು ಪ್ರೇರೇಪಿಸುತ್ತದೆ. ದಕ್ಷಿಣ ಕರ್ನಾಟಕದಲ್ಲಿನ ಕೆಲಸದ ಹೊಸ ಅವಕಾಶಗಳು ಮತ್ತು ಹೆಚ್ಚಿನ ವೇತನವು ಉತ್ತರ ಕರ್ನಾಟಕದ ಜನರನ್ನು ಸೆಳೆಯುವ ಪ್ರಮುಖ ಅಂಶಗಳಾದವು (ಉಮಾ, ಮಧು ಮತ್ತು ಹಬೀಬ್, 2013:4). ನಂತರ ಪ್ರತೀ ವರ್ಷವೂ ದಕ್ಷಿಣ ಕರ್ನಾಟಕವು, ಕಟ್ಟಡ ನಿರ್ಮಾಣ, ಉಪಚಾರ ಮತ್ತು ಉತ್ಪಾದನಾ ವಿಭಾಗದಲ್ಲಿ ಕೆಲಸ ಮಾಡುವ ಅಂತರ್–ರಾಜ್ಯ ಮಾತ್ರವಲ್ಲ ರಾಜ್ಯದೊಳಗಿನ ವಲಸಿಗರ ಒಳಹರಿವಿಗೆ ಸಾಕ್ಷಿಯಾಯಿತು (ಮೀನಾಕ್ಷಿ, 2017)

# ಅಧ್ಯಾಯ 4
# ಕರ್ನಾಟಕದಲ್ಲಿ ವಲಸೆ: ಪರಿಸ್ಥಿತಿ, ಸ್ವರೂಪ ಮತ್ತು ಸಂದಾಯ

### ಅಧ್ಯಯನದ ಭಾಗಿಗಳು

ಅಧ್ಯಯನಕ್ಕಾಗಿ, 518 ವಲಸಿಗ ಕಾರ್ಮಿಕರೊಡನೆ ಮತ್ತು 50 ಸಂಬಂಧಪಟ್ಟ ಅಧಿಕಾರಿಗಳೊಡನೆ ಅಧ್ಯಯನದ ತಂಡವು ಸಂವಹಿಸಿತು. 518 ವಲಸಿಗ ಕಾರ್ಮಿಕರಲ್ಲಿ, ಪ್ರಾಯೋಗಿಕ ಅಧ್ಯಯನದಲ್ಲಿ ಭಾಗವಹಿಸಿದ 47 ಜನರು ಇದ್ದರು. ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿದ್ವಾಂಸರು ಮತ್ತು ವಲಸಿಗ ಕಾರ್ಮಿಕರ ಸಮಸ್ಯೆಗಳ ಕುರಿತು ಕೆಲಸ ಮಾಡುತ್ತಿರುವ ಚಳವಳಿಗಾರರು ಹಾಗೂ ಬೆಂಗಳೂರು ಮತ್ತು ಗೋವಾದಲ್ಲಿರುವ ಕಾರ್ಮಿಕ ಕಾರ್ಯದರ್ಶಿಗಳಿಂದ ಶೋಲಾಪುರ, ಯಾದಗಿರಿ ಮತ್ತು ಕೊಪ್ಪಳದ ಕಾರ್ಮಿಕ ಅಧಿಕಾರಿಗಳವರೆಗಿನ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಇದ್ದರು. ಪಾಲ್ಗೊಂಡ 518 ಭಾಗಿದಾರರಲ್ಲಿ, 5 ತೃತೀಯ ಲಿಂಗಿಗಳು, 201 ಮಹಿಳೆಯರು ಮತ್ತು 312 ಪುರುಷರು ಇದ್ದರು. ಹೀಗೆ ಅಧ್ಯಯನದಲ್ಲಿ ಭಾಗವಹಿಸಿದ ವಲಸಿಗ ಕಾರ್ಮಿಕರಲ್ಲಿ ಸುಮಾರು

ಶೇಕಡಾ 39 ಮಹಿಳೆಯರು ಇದ್ದರೆ, ಶೇಕಡಾ 60 ಪುರುಷರಿದ್ದರು. ತೃತೀಯ ಲಿಂಗಿಗಳು ಕೇವಲ 5 ಜನರಿದ್ದು, ಅವರು ಭಾಗವಹಿಸಿದ ಒಟ್ಟು ವಲಸಿಗ ಕಾರ್ಮಿಕರ ಶೇಕಡಾ 1 ರಷ್ಟಿದ್ದರು.

ಭಾಗವಹಿಸಿದ ಐವರು ತೃತಿಯ ಲಿಂಗಿಗಳಲ್ಲಿ ಇಬ್ಬರು (ಸುಮಾರು ಶೇಕಡಾ 40); ಭಾಗವಹಿಸಿದ ಮಹಿಳೆಯರಲ್ಲಿ ಶೇಕಡಾ 68; ಮತ್ತು ಭಾಗವಹಿಸಿದ ಪುರುಷರಲ್ಲಿ ಶೇಕಡಾ 74 ದಿನಗೂಲಿ ನೌಕರರರಾಗಿದ್ದರು. ಹೀಗೆ ಎಲ್ಲ ಲಿಂಗಗಳ ಹೆಚ್ಚಿನ ಕೆಲಸಗಾರರರು ದಿನಗೂಲಿ ನೌಕರರಾಗಿದ್ದರು. ಕಾರ್ಖಾನೆಯ ಕೆಲಸವು ಭಾಗವಹಿಸಿದ ಕಾರ್ಮಿಕ ವಲಸಿಗರ ಎರಡನೆಯ ಸಾಮಾನ್ಯ ಉದ್ಯೋಗವಾಗಿತ್ತು.

| ಲಿಂಗ | ಉದ್ಯೋಗ | | | | | |
|---|---|---|---|---|---|---|
| | ರೈತ | ಸ್ವಉದ್ಯೋಗಿ | ದಿನಗೂಲಿ ಕಾರ್ಮಿಕ | ಕಾರ್ಖಾನೆ ಕಾರ್ಮಿಕ | ಕೃಷಿ ಕಾರ್ಮಿಕ | ಇತರರು |
| ತೃತೀಯಲಿಂಗಿ | 0% | 20%(1) | 40%(2) | 40%(2) | 0% | 0% |
| ಮಹಿಳೆ | 0% | 6.54% | 67.85% | 19.64% | 2.38% | 3.57% |
| ಪುರುಷ | 0.36% | 6.49% | 73.64% | 15.52% | 1.8% | 2.16% |

ಕಾರ್ಖಾನೆಯ ಕೆಲಸ ಮತ್ತು ದಿನಗೂಲಿಯಲ್ಲಿ ಭಾಗವಹಿಸಿದ ತೃತೀಯ ಲಿಂಗಿಗಳ ಸಂಖ್ಯೆಯು ಒಂದೇ(ಶೇಕಡಾ 40) ಆಗಿದೆ. ಅಧ್ಯಯನದಲ್ಲಿ ಭಾಗವಹಿಸಿದವರಲ್ಲಿ ಸುಮಾರು ಶೇಕಡಾ 20 ಮಹಿಳೆಯರು, ಶೇಕಡಾ 16 ಪುರುಷರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾರೆ. ಬೆಂಗಳೂರು ಮತ್ತು ಮೈಸೂರಿಗೆ ಯಾದಗಿರಿ ಮತ್ತು ಕೊಪ್ಪಳದಿಂದ ವಲಸೆ ಬಂದ ಮಹಿಳೆಯರು ಕಾರ್ಖಾನೆಗಳಲ್ಲಿ ಕೆಲಸ ಮಾಡುವುದು ಸಾಮಾನ್ಯವಾಗಿದೆ. ಕೆಲ ಮಹಿಳೆಯರು ಮನೆ ಕೆಲಸದವರಾಗಿಯೂ ಕೆಲಸಮಾಡುತ್ತಿದ್ದಾರೆ. ಹೇಳಬೇಕೆಂದರೆ, ಪಕ್ಕದ ರಾಜ್ಯ ತಮಿಳು ನಾಡು ಮತ್ತು ಆಂಧ್ರ ಪ್ರದೇಶದಿಂದ ಬಂದ ಭಾಗವಹಿಸಿದ ಎಲ್ಲ 6 ಮಹಿಳೆಯರು ಮನೆ ಕೆಲಸದವರಾಗಿದ್ದಾರೆ.

ಗೋವಾವನ್ನು ಹೊರತು ಪಡಿಸಿ, ಭಾಗವಹಿಸಿದ ಹೆಚ್ಚಿನ ವಲಸಿಗರು ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದವರಾಗಿದ್ದಾರೆ. ಅಧ್ಯಯನದಲ್ಲಿ ಭಾಗವಹಿಸಿದಂತಹ ಕರ್ನಾಟಕದ ಶೇಕಡಾ 45 ಜನ ಪರಿಶಿಷ್ಟ ಜಾತಿಗಳವರಾಗಿದ್ದಾರೆ. ಗೋವಾದಲ್ಲಿ, ಬೆಳಗಾವಿ ಮತ್ತು ಉತ್ತರ ಕನ್ನಡದ ಭಾಗವಹಿಸಿದ ಶೇಕಡಾ 51 ವಲಸಿಗರು ಸಾಮಾಜಿಕವಾಗಿ ಗೌರವಾನ್ವಿತ ಜಾತಿಗೆ ಸೇರಿದವರು ಮತ್ತು ಶೇಕಡಾ 37 ಪರಿಶಿಷ್ಟ ಜಾತಿಗಳವರಾಗಿದ್ದಾರೆ. ಮತ್ತೊಂದೆಡೆ, ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ಶೇಕಡಾ 80 ಕಾರ್ಮಿಕ ವಲಸಿಗರು ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದವರಾಗಿದ್ದಾರೆ ಮತ್ತು ಶೇಕಡಾ 12 ಇತರೆ ಜಾತಿಗಳವರು(ಉಳಿದ ವರ್ಗ). ಗೋವಾ ಮತ್ತು ಶೋಲಾಪುರವನ್ನು ಹೊರತುಪಡಿಸಿ, ಇತರೆ ಹಿಂದುಳಿದ ವರ್ಗದವರು (ಶೇಕಡಾ 29) ಕರ್ನಾಟಕದಲ್ಲಿ ಅಧ್ಯಯನದಲ್ಲಿ ಭಾಗವಹಿಸಿದ ಎರಡನೇ ದೊಡ್ಡ ವಲಸಿಗ ಗುಂಪಾಗಿದೆ. ಕರ್ನಾಟಕದ ಅಧ್ಯಯನದ ಸ್ಥಳಗಳಲ್ಲಿ ಪರಿಶಿಷ್ಟ ಪಂಗಡದವರ ಮತ್ತು ಇತರ ವರ್ಗದವರ ಭಾಗವಹಿಸುವಿಕೆಯು ಕ್ರಮವಾಗಿ ಶೇಕಡಾ 11 ಮತ್ತು ಶೇಕಡಾ 17 ಆಗಿರುತ್ತದೆ. ಇತರೆ ಹಿಂದುಳಿದ ವರ್ಗದವರು ಮತ್ತು ಪರಿಶಿಷ್ಟ ಪಂಗಡದವರು ಇಬ್ಬರೂ ಶೇಕಡಾ 6 ಗೋವಾದಲ್ಲಿ ಮತ್ತು ಶೇಕಡಾ 4 ಶೋಲಾಪುರದಲ್ಲಿ ಒಳಗೊಂಡಿರುತ್ತಾರೆ.

| **ವಲಸೆ ಬಂದ ಸ್ಥಳ** | **ಜಾತಿ** | | | |
|---|---|---|---|---|
| | **ಪರಿಶಿಷ್ಟ ಜಾತಿ** | **ಪರಿಶಿಷ್ಟ ಪಂಗಡ** | **ಇತರೆ ಹಿಂದುಳಿದ ವರ್ಗ** | **ಇತರೆ ಜಾತಿಯವರು** |
| ಗೋವಾ | 37.25% | 5.88% | 5.88% | 50.98% |
| ಕರ್ನಾಟಕ | 44.81% | 10.08% | 28.29% | 16.8% |
| ಮಹಾರಾಷ್ಟ್ರ | 80% | 4% | 4% | 12% |

ಹೀಗೆ, ಗೋವಾವನ್ನು ಹೊರತುಪಡಿಸಿ, ಅಧ್ಯಯನದ ಸ್ಥಳದಲ್ಲಿ ಅಧ್ಯಯನದಲ್ಲಿ ಭಾಗವಹಿಸಿದ ಬಹುಪಾಲು ವಲಸಿಗರು ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದವರಾಗಿದ್ದಾರೆ. ಗೋವಾದಲ್ಲಿ ಅಧ್ಯಯನದಲ್ಲಿ ಭಾಗವಹಿಸಿದ ಅರ್ಧಕ್ಕಿಂತ ಹೆಚ್ಚಿನವರು ಸಾಮಾಜಿಕವಾಗಿ ಗೌರವಾನ್ವಿತ ಜಾತಿಯಿಂದ ಬಂದಿರುವುದರಿಂದ ಈ ನಿಟ್ಟಿನಲ್ಲಿ ಗೋವಾ ಕೂಡ ಇದಕ್ಕೆ ಹೊರತಾಗಿದೆ. ನಾವು ಗೋವಾವನ್ನು ಹೊರತು ಪಡಿಸಿದರೆ, ಪರಿಶಿಷ್ಟ ಜಾತಿಗಳಲ್ಲಿ ವಲಸೆಯು ಬಹಳ ಸಾಮಾನ್ಯವೆಂದು ಅಧ್ಯಯನವು ತೋರಿಸುತ್ತದೆ.

**ವಲಸಿಗರ ಆರ್ಥಿಕ ವ್ಯಕ್ತಿಚಿತ್ರ**

ಈ ಅಧ್ಯಯನದಲ್ಲಿ ಭಾಗವಹಿಸಿದ ಹೆಚ್ಚಿನವರಿಗೆ, ಅವರ ಮೂಲ ಊರುಗಳಲ್ಲಿ ವಲಸೆಯು ನಿಯತವಾಗಿ ನಡೆಯುವ ವಿದ್ಯಮಾನ. ಕೆಲಸ ದೊರೆಯದೇ ಇರುವುದೇ ಕಾರ್ಮಿಕರು ವಲಸೆ ಹೋಗಲು ಬಹಳ ಸ್ಪಷ್ಟವಾದ ಕಾರಣ ಎಂದು ಗೊತ್ತಾಗುತ್ತದೆ. ಅಧ್ಯಯನದಲ್ಲಿ ಭಾಗವಹಿಸಿದ ಹಲವರು ತಾವು ಹೆಚ್ಚಿನ ಆದಾಯಕ್ಕಾಗಿ ವಲಸೆ ಹೋಗಿಲ್ಲ, ಆದರೆ ತಮ್ಮ ಮೂಲ ಸ್ಥಳದಲ್ಲಿ ಜೀವನೋಪಾಯದ ಅವಕಾಶಗಳು ಇಲ್ಲದಿರುವುದು ಮತ್ತು ಕಡಿಮೆ ವೇತನವಿರುವುದರಿಂದ ಬದುಕುಳಿಯುವುದು ಕಷ್ಟವಾದುದರಿಂದ ಹೋಗಬೇಕಾಯಿತೆಂದು ಒತ್ತಿಹೇಳಿದರು. ಕಾರ್ಮಿಕರ ಜಾತಿ ಮತ್ತು ಲಿಂಗದಂತಹ ಸಾಮಾಜಿಕ ಸನ್ನಿವೇಶಗಳೊಂದಿಗೆ ಈ ವಿಚಾರವು ಆಳವಾಗಿ ಬೆಸೆದುಕೊಂಡಿದೆ. ಈ ಅಧ್ಯಯನದಲ್ಲಿ ಭಾಗವಹಿಸಿದ ಸಾಮಾಜಿಕವಾಗಿ ಹಿಂದುಳಿದ ಜಾತಿಗಳ(ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗ) ಶೇಕಡಾ 68ಕ್ಕಿಂತ ಹೆಚ್ಚಿನವರು ಜಮೀನಿಲ್ಲದವರು. ಅಧ್ಯಯನದಲ್ಲಿ ಭಾಗವಹಿಸಿದವರಲ್ಲಿ ಸಾಮಾಜಿಕವಾಗಿ ಹಿಂದುಳಿದ ಜಾತಿಯಿಂದ ಬಂದವರಲ್ಲಿ ಜಮೀನು ಹೊಂದಿರುವ ಹೆಚ್ಚಿನವರ, ಜಮೀನಿನ ಗಾತ್ರ ಒಂದು ಎಕರೆಗಿಂತ ಕಡಿಮೆ ಇದೆ. ಮತ್ತೊಂದೆಡೆ, ಸಾಮಾಜಿಕವಾಗಿ ಗೌರವಾನ್ವಿತ ಜಾತಿಯಿಂದ ಬಂದ, ಭಾಗವಹಿಸಿದವರಲ್ಲಿ ಶೇಕಡಾ 46ಕ್ಕಿಂತ ಹೆಚ್ಚಿನವರು 3 ಎಕರೆಗಿಂತ ದೊಡ್ಡದಾದ ಜಮೀನು ಹೊಂದಿರುತ್ತಾರೆ.

| ಜಾತಿ | ಜಮೀನಿನ ಗಾತ್ರ | | | | |
|---|---|---|---|---|---|
| | ಭೂಮಿ ಇಲ್ಲ | 1 ಎಕರೆಗಿಂತ ಕಡಿಮೆ | 2 ಎಕರೆಗಿಂತ ಕಡಿಮೆ | 3 ಎಕರೆಗಿಂತ ಕಡಿಮೆ | 3 ಎಕರೆಗಿಂತ ಹೆಚ್ಚು |
| ಪರಿಶಿಷ್ಟ ಜಾತಿ | 74.65% | 14.72% | 9.58% | 0.68% | 0.32% |
| ಪರಿಶಿಷ್ಟ ಪಂಗಡ | 70% | 26.6% | 3.3% | 0 | 0 |
| ಇತರೆ ಹಿಂದುಳಿದ ವರ್ಗ | 68% | 17.32% | 10% | 3.3% | 1.3% |
| ಇತರರು | 33.3% | 6.6% | 6.6% | 0 | 46.6% |

ಭಾಗವಹಿಸಿದ ಸುಮಾರು ಶೇಕಡಾ 50 ಪುರುಷ ಕಾರ್ಮಿಕ ವಲಸೆಗಾರರರು ವಾರ್ಷಿಕವಾಗಿ ರೂ.1,00,000 ಅಥವಾ ಪ್ರತಿ ತಿಂಗಳು ರೂ.8,400 ಗಳಿಸುತ್ತಾರೆ. ಈ ಶೇಕಡಾ 50ರಲ್ಲಿ ಶೇಕಡಾ 21 ಜನ ವಾರ್ಷಿಕವಾಗಿ ರೂ.1,25,000ಕ್ಕಿಂತ ಮಿಗಿಲಾಗಿ(ಸುಮಾರು ರೂ.10,500ತಿಂಗಳಿಗೆ) ಸಂಪಾದಿಸುತ್ತಾರೆ. ಈ ಆದಾಯದ ಮಿತಿಯಲ್ಲಿ ಬರುವ ಮಹಿಳಾ ಕಾರ್ಮಿಕ ವಲಸಿಗರ ಸಂಖ್ಯೆ ಶೇಕಡಾ 5ಕ್ಕಿಂತ ಸ್ವಲ್ಪ ಹೆಚ್ಚು. ಭಾಗವಹಿಸಿದ ಶೇಕಡಾ 50 ಮಹಿಳೆಯರಿಗಿಂತ ಹೆಚ್ಚಿನವರು ವಾರ್ಷಿಕವಾಗಿ ರೂ.50,000ದಿಂದ ರೂ.1,00,000 (ರೂ.4,200ರಿಂದ ರೂ.8,400 ಮಾಸಿಕ) ಗಳಿಸುತ್ತಿದ್ದರು. ಭಾಗವಹಿಸಿದ ವಲಸಿಗರಲ್ಲಿ ವಾರ್ಷಿಕವಾಗಿ ರೂ.15,000ಕ್ಕಿಂತ ಕಡಿಮೆ ಸಂಪಾದಿಸುವವರು ಮಹಿಳೆಯರಲ್ಲಿ ಸುಮಾರು ಶೇಕಡಾ 12 ಮತ್ತು ಪುರುಷರಲ್ಲಿ ಶೇಕಡಾ 8 ಇದ್ದರು.

| ಲಿಂಗ | **ವಾರ್ಷಿಕ ಆದಾಯ (ರೂಪಾಯಿಗಳಲ್ಲಿ)** | | | | | | |
|---|---|---|---|---|---|---|---|
| | 15000ಕ್ಕಿಂತ ಕಡಿಮೆ | 16000–25000 | 26000–50000 | 51000–75000 | 76000–100000 | 100000–125000 | 125000ಕ್ಕಿಂತ ಹೆಚ್ಚು |
| ತೃತೀಯ ಲಿಂಗಿ | 0% | 20% | 40% | 20% | 0% | 20% | 0% |
| ಮಹಿಳೆ | 11.76% | 12.94% | 15.88% | 23.52% | 30.58% | 2.35% | 2.94% |
| ಪುರುಷ | 7.09% | 11.7% | 10.28% | 10.28% | 10.63% | 29.43% | 20.56% |

ಹೀಗೆ, ಬಹಳ ಕಡಿಮೆ ಆದಾಯವಿರುವವರಲ್ಲಿ ವಲಸೆ ಬಹಳ ಸಾಮಾನ್ಯವಾಗಿರುವುದಿಲ್ಲವೆಂದು ಮೇಲಿನ ದತ್ತಾಂಶಗಳು ತೋರಿಸುತ್ತವೆ. ಆದಾಗ್ಯೂ, ಕರ್ನಾಟಕದಲ್ಲಿ ಜಿಲ್ಲಾಂತರ್ಗತ ಮತ್ತು ಅಂತರ್-ರಾಜ್ಯ ವಲಸೆಯು ಅತಿ ಕಡಿಮೆ ಆದಾಯವಿರುವ ಕಾರ್ಮಿಕರಲ್ಲಿ ಬಹಳ ಸಾಮಾನ್ಯವೆಂದು ಪ್ರಾಂತ್ಯವಾರು ವಿಂಗಡನೆ ತೋರಿಸುತ್ತದೆ.

| **ವಲಸೆ ಬಂದ ಸ್ಥಳ** | **ಕುಟುಂಬದ ಮಾಸಿಕ ಆದಾಯ ರೂ.ಗಳಲ್ಲಿ** |
|---|---|

| | 6000ಕ್ಕಿಂತ ಕಡಿಮೆ | 6000–15000 | 16000–25000 | 26000–35000 | 36000ಕ್ಕಿಂತ ಹೆಚ್ಚು |
|---|---|---|---|---|---|
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸಿಗರು | 97.91% | 2.09% | 0% | 0% | 0% |
| ಬೆಂಗಳೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ವಲಸಿಗರು | 57.43% | 32.87% | 9.34% | 0.3% | 0% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬೇರೆ ರಾಜ್ಯಗಳ ವಲಸಿಗರು | 52.94% | 30.39% | 16.66% | 0% | 0% |
| ಗೋವಾದಲ್ಲಿರುವ ಉತ್ತರ ಬೆಳಗಾವಿ ಮತ್ತು ಉತ್ತರ ಕನ್ನಡದ ವಲಸಿಗರು | 37.25% | 52.94% | 9.80% | 0% | 0% |
| ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ವಲಸಿಗರು | 56% | 40% | 2% | 2% | 0% |

ಎಲ್ಲ ವಿಭಾಗಗಳ(ಜಿಲ್ಲಾಂತರ್ಗತ, ಅಂತರ್–ಜಿಲ್ಲಾ ಮತ್ತು ಅಂತರ್–ರಾಜ್ಯ) ಶೇಕಡಾ 50 ವಲಸಿಗರು ಮಾಸಿಕವಾಗಿ ರೂ.6000ಕ್ಕಿಂತ ಕಡಿಮೆ ಸಂಪಾದಿಸಿದರೆಂದು ಮೇಲಿನ ದತ್ತಾಂಶಗಳು ತೋರಿಸುತ್ತವೆ. ಯಾದಗಿರಿ ಮತ್ತು ಕೊಪ್ಪಳ ಗ್ರಾಮಾಂತರ ಪ್ರದೇಶದಿಂದ ತಮ್ಮ ಜಿಲ್ಲಾ ಮುಖ್ಯ ನಗರಕ್ಕೆ ಹೋದ ಸುಮಾರು ಶೇಕಡಾ 98 ವಲಸಿಗರು ತಿಂಗಳಿಗೆ ರೂ.6000ಕ್ಕಿಂತ ಕಡಿಮೆ ಸಂಪಾದಿಸುತ್ತಿದ್ದರು ಮತ್ತು ಅವರಲ್ಲಿ ಸುಮಾರು ಶೇಕಡಾ 2ರಷ್ಟು ರೂ.6000 ಮತ್ತು ರೂ.15000ದ ಮಧ್ಯೆ ಸಂಪಾದಿಸುತ್ತಿದ್ದರು. ಬೆಂಗಳೂರು ಮತ್ತು ಮೈಸೂರಿಗೆ ಈ ಎರಡು ಜಿಲ್ಲೆಗಳಿಂದ ವಲಸೆ ಬಂದು ತಿಂಗಳಿಗೆ ರೂ.6000ಕ್ಕಿಂತ ಕಡಿಮೆ ಆದಾಯವಿರುವ ಕಾರ್ಮಿಕರ ಸಂಖ್ಯೆಯು ಜಿಲ್ಲಾಂತರ್ಗತ ವಲಸಿಗರಿಗೆ ಹೋಲಿಸಿದರೆ ಹೆಚ್ಚಿರಲಿಲ್ಲ, ಅವರು ಅಂತರ್–ಜಿಲ್ಲಾ ವಲಸಿಗರ ಸುಮಾರು ಶೇಕಡಾ 58ರಷ್ಟಿದ್ದರು. ಅದೇ ರೀತಿಯ ಕಡಿಮೆ ಆದಾಯ ಹೊಂದಿದ್ದು ಇತರ ರಾಜ್ಯಗಳಿಂದ ಬಂದ ವಲಸಿಗರು, ಬೆಂಗಳೂರಿನಲ್ಲಿ ಒಟ್ಟು ಅಂತರ್–ರಾಜ್ಯ ಅಧ್ಯಯನದಲ್ಲಿ ಭಾಗವಹಿಸಿದ ವಲಸಿಗರ 53 ಶೇಕಡಾ ಇದ್ದರು. ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಯಾವುದೇ ಜಿಲ್ಲಾಂತರ್ಗತ ವಲಸಿಗರು ತಿಂಗಳಿಗೆ ರೂ.15000ಕ್ಕಿಂತ ಹೆಚ್ಚು ಸಂಪಾದಿಸಲಿಲ್ಲ. ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್–ಜಿಲ್ಲಾ ಮತ್ತು ಅಂತರ್–ರಾಜ್ಯ ವಲಸಿಗರ ವಿಚಾರದಲ್ಲಿ, ಹೆಚ್ಚು ಕಡಿಮೆ ಪ್ರತಿಯೊಬ್ಬರು ತಿಂಗಳಿಗೆ ರೂ.26000ಕ್ಕಿಂತ ಕಡಿಮೆ ಸಂಪಾದಿಸಿದರು. ಗೋವಾ ಮತ್ತು ಶೋಲಾಪುರದಲ್ಲಿ ಪರಿಸ್ಥಿತಿಯೇನೂ ಬೇರೆಯಾಗಿರಲಿಲ್ಲ. ಗೋವಾದಲ್ಲಿರುವ ಶೇಕಡಾ 90 ಮತ್ತು ಶೋಲಾಪುರದಲ್ಲಿರುವ ಶೇಕಡಾ 96 ವಲಸಿಗರು ತಿಂಗಳಿಗೆ ರೂ.15000ಕ್ಕಿಂತ ಕಡಿಮೆ ಸಂಪಾದಿಸಿದರು. ಅಧ್ಯಯನದಲ್ಲಿ ಭಾಗವಹಿಸಿದ ಶೋಲಾಪುರದಲ್ಲಿರುವ(ಶೇಕಡಾ 2) ಕೆಲವರನ್ನು ಬಿಟ್ಟರೆ, ಭಾಗವಹಿಸಿದ ಬೇರಾವುದೇ ವಲಸಿಗರು ತಿಂಗಳಿಗೆ ರೂ.25000 ಮಿಗಿಲಾಗಿ ಸಂಪಾದಿಸಲಿಲ್ಲ. ಈ ಅಧ್ಯಯನದ ಮಾದರಿಯು ಬಹಳ ಸಣ್ಣದಾಗಿದ್ದರೂ, ತಿಂಗಳಿಗೆ ರೂ.25000ಕ್ಕಿಂತ ಹೆಚ್ಚಿಗೆ ಸಂಪಾದಿಸಿದರೆ ಆ ಕೆಲಸಗಾರರು ವಲಸೆ ಹೋಗುವುದಿಲ್ಲವೆಂದು ಭಾವಿಸಬಹುದಾಗಿದೆ.

**ವಲಸೆಯ ನಮೂನೆ**

ಈ ಅಧ್ಯಯನದ ಉದ್ದೇಶವೇನೆಂದರೆ, ಒಬ್ಬಂಟಿಯಾಗಿ, ಕುಟುಂಬದ ಜೊತೆಗೆ ಮತ್ತು ವಯಸ್ಕ ಗೆಳೆಯರು ಹಾಗೂ ಸಂಬಂಧಿಕರೊಡನೆ ವಲಸೆ ಹೋಗುವ, ಈಗಿರುವ ವಲಸೆಯ ನಮೂನೆಯನ್ನು ಪರಿಶೋಧಿಸುವುದಾಗಿತ್ತು. ಈ ಅಧ್ಯಯನದಲ್ಲಿ ಭಾಗವಹಿಸಿದ ಬಹುಸಂಖ್ಯಾತರು ಒಬ್ಬಂಟಿಯಾಗಿಯೇ ವಲಸೆ ಬಂದಿದ್ದಾರೆ. ತಮ್ಮ ಕುಟುಂಬದೊಡನೆ ವಲಸೆ ಬಂದ ಅಧ್ಯಯನದಲ್ಲಿ ಭಾಗವಹಿಸಿದಂತಹ ಶೇಕಡಾ 64, ಯಾದಗಿರಿ ಮತ್ತು ಕೊಪ್ಪಳದ ಜಿಲ್ಲಾಂತರ್ಗತ ವಲಸಿಗರನ್ನು ಹೊರತುಪಡಿಸಿ, ಶೇಕಡಾ 63 ರಿಂದ ಶೇಕಡಾ 90ರಷ್ಟು ಕಾರ್ಮಿಕರು ಒಬ್ಬಂಟಿಯಾಗಿ ವಲಸೆ ಬಂದಿದ್ದಾರೆ. ಇತರ ವಯಸ್ಕರೊಡನೆ ವಲಸೆ ಹೋಗುವ ವಲಸೆಯ ವಿನ್ಯಾಸ ಕರ್ನಾಟಕದಲ್ಲಿ ಬಹಳ ವಿರಳ. ಜಿಲ್ಲಾಂತರ್ಗತ ವಲಸಿಗರು ಇತರ ವಯಸ್ಕರೊಡನೆ ವಲಸೆ ಹೋಗಿಲ್ಲ ಮತ್ತು ಈ ರೀತಿಯ ಅಂತರ್–ರಾಜ್ಯ ಮತ್ತು ಜಿಲ್ಲಾಂತರ್ಗತ ವಲಸಿಗರ ಸಂಖ್ಯೆಯು ಕ್ರಮವಾಗಿ ಶೇಕಡ 4 ಮತ್ತು ಶೇಕಡಾ 2ರಷ್ಟು ಕಡಿಮೆ ಪ್ರಮಾಣದಲ್ಲಿದೆ. ಆದಾಗ್ಯೂ, ಅಧ್ಯಯನದಲ್ಲಿ ಭಾಗವಹಿಸಿದ ಗೋವಾದಲ್ಲಿರುವ ಶೇಕಡಾ 16, ಮತ್ತು ಶೋಲಾಪುರದಲ್ಲಿ ಶೇಕಡಾ 14 ವಲಸಿಗರು ಇತರರೊಡನೆ ವಲಸೆ ಬಂದಿದ್ದಾರೆ.

| ವಲಸೆ ಬಂದ ಸ್ಥಳ | ಯಾರೊಂದಿಗೆ ನೀವು ವಲಸೆ ಬಂದಿರುವಿರಿ? | | |
|---|---|---|---|
| | ಒಬ್ಬಂಟಿ | ಕುಟುಂಬ | ಬೇರೆಯವರೊಂದಿಗೆ |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸೆ | 34% | 64% | 2% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ವಲಸಿಗರು | 82% | 18% | 0% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬೇರೆ ರಾಜ್ಯಗಳ ವಲಸಿಗರು | 90% | 6% | 4% |
| ಗೋವಾದಲ್ಲಿರುವ ಉತ್ತರ ಬೆಳಗಾವಿ ಮತ್ತು ಉತ್ತರ ಕನ್ನಡದ ವಲಸಿಗರು | 63% | 22% | 16% |
| ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ವಲಸಿಗರು | 74% | 12% | 14% |

ನಾಲ್ಕು ಜಾತಿ ವಿಭಾಗಗಳಲ್ಲಿನ ವಲಸೆಯ ವಿನ್ಯಾಸದ ಈ ಅಧ್ಯಯನವು, ಒಬ್ಬಂಟಿಯಾಗಿ ವಲಸೆ ಹೋಗಬೇಕೋ ಬೇಡವೋ ಎಂದು ಕಾರ್ಮಿಕರು ನಿರ್ಧರಿಸುವಲ್ಲಿ ಜಾತಿಯು ಮುಖ್ಯವಾದ ನಿರ್ಣಾಯಕನಾಗುವುದಿಲ್ಲವೆಂದು ತೋರಿಸಿಕೊಡುತ್ತದೆ. ನಾಲ್ಕು ಜಾತಿ ವಿಭಾಗಗಳಲ್ಲಿ ಒಬ್ಬಂಟಿಗರಾಗಿ ವಲಸೆ ಹೋದವರ ಪ್ರಮಾಣವು ಶೇಕಡಾ 15ರಿಂದ ಶೇಕಡಾ 22ರ ನಡುವೆ ಇರುತ್ತದೆ. ಭಾಗವಹಿಸಿದ ಎಲ್ಲ ಜಾತಿ ವಿಭಾಗಗಳಲ್ಲಿನ ಹೆಚ್ಚಿನವರು ಒಬ್ಬಂಟಿಯಾಗಿ ವಲಸೆ ಹೋಗಿಲ್ಲ ಹಾಗೂ ಅವರ ಪ್ರಮಾಣವು ಶೇಕಡಾ 75 ಮತ್ತು ಶೇಕಡಾ 91ರ ನಡುವೆ ಇರುತ್ತದೆ.

| ಜಾತಿ | ನೀವು ಒಬ್ಬಂಟಿಯಾಗಿ ಬಂದಿರುವಿರಾ? | |
|---|---|---|
| | ಹೌದು | ಇಲ್ಲ |
| ಪರಿಶಿಷ್ಟ ಜಾತಿ | 15.38% | 84.64% |
| ಪರಿಶಿಷ್ಟ ಪಂಗಡ | 9.67% | 90.32% |
| ಇತರೆ ಹಿಂದುಳಿದ ವರ್ಗಗಳು | 24.48% | 75.51% |
| ಇತರರು | 21.42% | 78.57% |

ಯಾದಗಿರಿ ಮತ್ತು ಕೊಪ್ಪಳದ ಜಿಲ್ಲಾಂತರ್ಗತ ವಲಸಿಗರನ್ನು ಹೊರತು ಪಡಿಸಿ, ಉಳಿದವರು ತಮ್ಮ ಮೂಲ ಊರುಗಳಿಂದ ಬರುವ ಕಾಲೋಚಿತ ವಲಸೆಯ ಕುರಿತಾದ ಪ್ರಶ್ನೆಗೆ ಉತ್ತರಿಸುವಲ್ಲಿ ಕಷ್ಟಪಟ್ಟರು. ಅವರು ತಮ್ಮ ವಲಸೆಯ ಕುರಿತಾದ ಮಾಹಿತಿಯನ್ನು ಹಂಚಿಕೊಳ್ಳುವಲ್ಲಿ ಹೆಚ್ಚು ದಿಟ್ಟತನದಿಂದ ಇದ್ದರು. ಭಾಗವಹಿಸಿದ ಎಲ್ಲ ಮೂರು ವಿಭಾಗಗಳ ಸುಮಾರು ಶೇಕಡಾ 50 ಅಥವಾ ಅದಕ್ಕಿಂತ ಹೆಚ್ಚು ಜನರು ಯಾವುದೇ ನಿರ್ದಿಷ್ಟ ಕಾಲದಲ್ಲಿ ವಲಸೆ ಹೋಗಿರಲಿಲ್ಲ, ಆದಾಗ್ಯೂ ಯಾವುದೇ ನಿರ್ದಿಷ್ಟ ಕಾಲದಲ್ಲಿ ವಲಸೆ ಹೋದವರ ಪ್ರಮಾಣವು ಶೇಕಡಾ 40ರಿಂದ ಶೇಕಡಾ 51ರ ನಡುವೆ ಇದೆ.

| ವಲಸಿಗರ ವರ್ಗಗಳು | ನೀವು ಯಾವುದಾದರೂ ನಿರ್ದಿಷ್ಟ ಕಾಲದಲ್ಲಿ ವಲಸೆ ಬಂದಿರುವಿರಾ? | |
|---|---|---|
| | ಹೌದು | ಇಲ್ಲ |
| ಒಬ್ಬಂಟಿಯಾಗಿ ವಲಸೆ | 41.27% | 58.73% |
| ಕುಟುಂಬದೊಡನೆ ವಲಸೆ | 46.88% | 53.13% |
| ಇತರ ವಯಸ್ಕರೊಂದಿಗೆ ವಲಸೆ | 50.50% | 49.50% |

ತಮ್ಮ ಮೂಲ ಜಿಲ್ಲೆಯ ಕಾಲೋಚಿತ ವಲಸೆಯ ಕುರಿತಾದ ಪ್ರತಿಕ್ರಿಯೆಯಲ್ಲಿ, ಅಧ್ಯಯನ ನಡೆಸಿದ ಆರು ಜಿಲ್ಲೆಗಳ ಆರು ಗುಂಪುಗಳಲ್ಲಿರುವ ವಲಸಿಗರ ಮಧ್ಯೆ ಬಹಳ ವ್ಯತ್ಯಾಸವಿತ್ತು. ಪ್ರಶ್ನೆಗೆ ಪ್ರತಿಕ್ರಿಯಿಸಲು ಹಿಂಜರಿದ ಅಥವಾ ತಮ್ಮ ಮೂಲ ಸ್ಥಳದಲ್ಲಿ ಕಾಲೋಚಿತ ವಲಸೆಯ ವಾಡಿಕೆಯ ಕುರಿತು ಗೊತ್ತಿಲ್ಲದವರು ಶೇಕಡಾ 8ರಿಂದ ಶೇಕಡಾ 61ರಷ್ಟು ಹೆಚ್ಚಿನ ಸಂಖ್ಯೆಯವರೆಗೆ ಇದ್ದರು. ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ಶೇಕಡಾ 92ಕ್ಕಿಂತ ಹೆಚ್ಚು ಅಂತರ್–ಜಿಲ್ಲಾ ವಲಸಿಗರಿಗೆ ತಮ್ಮ ಮೂಲ ಊರುಗಳಲ್ಲಿ ಕಾಲೋಚಿತ ವಲಸೆ ಇಲ್ಲವೆಂದು ಖಾತ್ರಿಯಾಗಿ ಗೊತ್ತಿತ್ತು ಮತ್ತು ಕೆಲಸದ ದೊರಕುವಿಕೆ ಮತ್ತು ಆವಶ್ಯಕತೆಯನ್ನು ಅವಲಂಬಿಸಿ ಜನರು ವಲಸೆ ಹೋಗುತ್ತಾರೆಂದು ತಿಳಿದಿತ್ತು. ಆದಾಗ್ಯೂ, ತಮ್ಮ ಮಾತೃ ಜಿಲ್ಲೆಗಳಲ್ಲಿ ಇರುವ ಶೇಕಡಾ 57ಕ್ಕಿಂತ ಹೆಚ್ಚಿನ ಜಿಲ್ಲಾಂತರ್ಗತ ವಲಸಿಗರು ಕಾಲೋಚಿತ ವಲಸೆ ತಮ್ಮ ಮೂಲ ಊರುಗಳಲ್ಲಿ ಇದೆಯೆಂದು ಅಭಿಪ್ರಾಯಪಟ್ಟರು.

| ವಲಸೆ ಬಂದ ಸ್ಥಳ | ನಿಮ್ಮ ಮೂಲಸ್ಥಳದಿಂದ ಜನರು ವಲಸೆ ಹೋಗಲು ನಿರ್ದಿಷ್ಟ ಕಾಲವೇನಾದರೂ ಇದೆಯೇ? | | |
|---|---|---|---|
| | ಹೌದು | ಇಲ್ಲ | ಗೊತ್ತಿಲ್ಲ |
| ಬೆಂಗಳೂರಿನಲ್ಲಿರುವ ಅಂತರ್–ಜಿಲ್ಲಾ ವಲಸಿಗರು | – | 92.31% | 7.69% |

| | | | |
|---|---|---|---|
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್/ರಾಜ್ಯ ವಲಸಿಗರು | 6.50% | 49.59% | 43.90% |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸಿಗರು | 57.41 | 12.96% | 29.63% |
| ಗೋವಾ ಮತ್ತು ಶೋಲಾಪುರದಲ್ಲಿರುವ ಅಂತರ್–ರಾಜ್ಯ ವಲಸಿಗರು | 35.64% | 19.8% | 44.55% |
| ಗೋವಾ | 31.37% | 7.84% | 60.78% |
| ಶೋಲಾಪುರ | 40% | 32% | 28% |

ಆಸಕ್ತಿಯ ವಿಷಯವೆಂದರೆ, ಅಂತರ್–ರಾಜ್ಯ ವಲಸಿಗರಲ್ಲಿ ಶೇಕಡಾ 6.5 ವಲಸಿಗರಿಗೆ ಮಾತ್ರ ತಮ್ಮ ಮೂಲ ಊರುಗಳಲ್ಲಿ ಕಾಲೋಚಿತ ವಲಸೆ ಇರುವ ಕುರಿತು ಖಚಿತವಾಗಿ ತಿಳಿದಿತ್ತು ಮತ್ತು ಸುಮಾರು ಶೇಕಡಾ 44 ಜನರಿಗೆ ಅದರ ಕುರಿತು ಖಚಿತವಾಗಿ ತಿಳಿದಿರಲಿಲ್ಲ. ಪ್ರಪಂಚಕ್ಕೆ ಪರಿಚಯವಿರುವ ಪ್ರವಾಸೀ ಕೇಂದ್ರ ಗೋವಾ, ಕಾಲೋಚಿತ ವಲಸೆಗೆ ಹೆಸರುವಾಸಿಯಾಗಿದೆ. ಆದಾಗ್ಯೂ, ಈ ಅಧ್ಯಯನದ ಕ್ಷೇತ್ರ ಕೆಲಸವು ಅಕಾಲದಲ್ಲಿ ನಡೆಯಿತು ಮತ್ತು ಅಧ್ಯಯನದಲ್ಲಿ ಭಾಗವಹಿಸಿದರಲ್ಲಿ ಹೆಚ್ಚಿನವರು ಗೋವಾದಲ್ಲಿ ನೆಲೆಸಿದರು. ಭಾಗವಹಿಸಿದ ಶೋಲಾಪುರದ ಎಲ್ಲ ವಲಸಿಗರು ಶೋಲಾಪುರದಲ್ಲಿ ನೆಲೆಸಿದರು. ಆದಾಗ್ಯೂ, ಗೋವಾದ ಶೇಕಡಾ 61 ಅಧ್ಯಯನದ ಭಾಗಿಗಳು ಮತ್ತು ಶೋಲಾಪುರದ ಶೇಕಡಾ 28 ಭಾಗಿಗಳಿಗೆ ತಮ್ಮ ಮೂಲ ಊರುಗಳಲ್ಲಿನ ಕಾಲೋಚಿತ ವಲಸೆಯ ಕುರಿತು ಖಚಿತವಾಗಿ ತಿಳಿದಿರಲಿಲ್ಲ. ಶೋಲಾಪುರದ ಶೇಕಡಾ 40 ಮತ್ತು ಗೋವಾದ ಶೇಕಡಾ 31 ಜನರು ತಮ್ಮ ಮೂಲ ಊರುಗಳಲ್ಲಿ ಕಾಲೋಚಿತ ವಲಸೆ ಸಾಮಾನ್ಯವಾಗಿತ್ತೆಂದು ಖಚಿತಪಡಿಸಿದರು.

ಅಂತರ್–ರಾಜ್ಯ ವಲಸಿಗರು 11 ರಾಜ್ಯಗಳಿಂದ ಬಂದಿದ್ದು, ತಮ್ಮ ಮೂಲ ಸ್ಥಳಗಳಲ್ಲಿ ವಲಸೆಗೆ ಪ್ರಚಲಿತವಾದ ಕಾಲದ ಕುರಿತ ಅವರ ಪ್ರತಿಕ್ರಿಯೆಯು ಬಹಳ ವೈವಿಧ್ಯಮಯವಾಗಿತ್ತು. ಸಾಮಾನ್ಯವಾಗಿ ತಮ್ಮ ಮೂಲ ಊರುಗಳಲ್ಲಿನ ಸುಗ್ಗಿಯ ಸಮಯವನ್ನು ಕಾಲೋಚಿತವಾದ ವಲಸೆ ಅವಲಂಬಿಸಿರುತ್ತದೆಂದು ಭಾಗಿಯಾದ ಅಂತರ್–ರಾಜ್ಯ ವಲಸಿಗರು ಗಮನಿಸಿದರು. ಅಧ್ಯಯನದಲ್ಲಿ ಭಾಗವಹಿಸಿದ ಹೆಚ್ಚಿನ ವಲಸಿಗರು ಪರಿಶಿಷ್ಟ ಜಾತಿಯವರು ಆಗಿದ್ದರು ಹಾಗೂ ಈ ಅಧ್ಯಯನದಲ್ಲಿ ಭಾಗಿಯಾದ ಶೇಕಡಾ 75 ಪರಿಶಿಷ್ಟ ಜಾತಿಯವರು, ಅವರ ಹತ್ತಿರ ಜಮೀನಿರಲಿಲ್ಲ. ಇನ್ನುಳಿದ ಮೂರು ಜಾತಿ ವರ್ಗಗಳ ವಿಚಾರದಲ್ಲಿ ಹೇಳಬೇಕೆಂದರೆ, ಭಾಗಿಗಳಾದ ವಲಸಿಗರು ಒಂದೋ ಜಮೀನು ಇಲ್ಲದವರಾಗಿದ್ದರು ಇದ್ದರೂ ಅವರ ಜಮೀನು ಒಂದು ಎಕರೆಗಿಂತ ಚಿಕ್ಕದಾದ ಬಹಳ ಸಣ್ಣ ಜಮೀನಾಗಿರುತ್ತಿತ್ತು. ಈ ಸನ್ನಿವೇಶದ ಜೊತೆಗೆ, ಅತಿ ಕಡಿಮೆ ಜೀವನೋಪಾಯದ ಸಾಧ್ಯತೆಗಳು ಹಾಗೂ ಕಡಿಮೆ ವೇತನ ಜೊತೆಗೂಡಿ, ಬಡ ವಲಸಿಗರು ಕೆಲಸವನ್ನು ಹುಡುಕಿಕೊಂಡು ವಲಸೆ ಹೋಗಬೇಕಾದ ಅನಿವಾರ್ಯತೆ ಉಂಟಾಯಿತು. ಅವರು ಸಾಮಾನ್ಯವಾಗಿ ಯಾವುದೇ ನಿರ್ದಿಷ್ಟ ಕಾಲಕ್ಕೆ ವಲಸೆ ಹೋಗಲಿಲ್ಲ, ಹೆಚ್ಚಿನವರು ತಮ್ಮ ಕುಟುಂಬದ ಜೊತೆಗೆ ವಲಸೆ ಹೊರಟರು. ಕಾರ್ಖಾನೆಯ ಕೆಲಸಗಾರರು, ಕಟ್ಟಡ ನಿರ್ಮಾಣದ ಕಾರ್ಮಿಕರು, ಆತಿಥ್ಯದ ವಲಯದಲ್ಲಿರುವವರು ಸಾಮಾನ್ಯವಾಗಿ ವಲಸೆಯ ಯಾವುದೇ ನಿರ್ದಿಷ್ಟ ಕಾಲಸೂಚಿಯನ್ನು ಅನುಸರಿಸುವುದಿಲ್ಲ. ಆದಾಗ್ಯೂ, ಹೆಚ್ಚಿನವರು ತಮ್ಮ ಮೂಲ ಸ್ಥಳಗಳ ಸುಗ್ಗಿಯ ಸಮಯದಲ್ಲಿ ಊರಿಗೆ ವಾಪಾಸಾಗುತ್ತಾರೆ. ಕೆಲಸದ ದೊರಕುವಿಕೆಗೆ ಅನುಗುಣವಾಗಿ ಅವರು ವಲಸೆಯ ಗಮ್ಯ ಸ್ಥಳಕ್ಕೆ ಆಗಮಿಸುತ್ತಾರೆ. ಆದರೆ, ಯಾದಗಿರಿ ಮತ್ತು ಕೊಪ್ಪಳದ ಇಟ್ಟಿಗೆ ಭಟ್ಟಿಯಲ್ಲಿ ಕೆಲಸ ಮಾಡುವವರು, ಫೆಬ್ರವರಿ–ಮಾರ್ಚಿಯಿಂದ ಸೆಪ್ಟೆಂಬರ್–ಅಕ್ಟೋಬರ್‌ವರೆಗೆ 6–8 ತಿಂಗಳುಗಳಿಗೆ ವಲಸೆ ಹೋಗುತ್ತಾರೆ. ಅಧ್ಯಯನದ ಭಾಗಿಗಳಾದ, ಗೋವಾ ಮತ್ತು ಶೋಲಾಪುರದ ಕೆಲಸಗಾರರು, ಅಕ್ಟೋಬರ್–ನವೆಂಬರ್ ಮತ್ತು ಮಾರ್ಚ್–ಏಪ್ರಿಲ್ ನಡುವಿನ ಸಮಯ ತಮ್ಮ ಮೂಲ ಊರುಗಳಲ್ಲಿ ಸಾಮಾನ್ಯವಾಗಿ ವಲಸೆಯ ಕಾಲವಾಗಿರುತ್ತದೆಂದು ತಿಳಿಸಿದರು.

**ಉಳಿತಾಯ ಮತ್ತು ಸಂದಾಯ**

ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಶೇಕಡಾ 90ಕ್ಕಿಂತ ಹೆಚ್ಚಿನ ಅಂತರ್–ರಾಜ್ಯ ಮತ್ತು ಸುಮಾರು ಶೇಕಡಾ 82 ಅಂತರ್–ಜಿಲ್ಲಾ ವಲಸಿಗರು, ತಮ್ಮ ಕುಟುಂಬಗಳ ಪೋಷಣೆಗಾಗಿ ಸಂಪಾದಿಸಲು ಒಬ್ಬಂಟಿಯಾಗಿ ವಲಸೆ ಬರುತ್ತಾರೆ. ವಿಶದವಾದ ಸಂದರ್ಶನ ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ಸಮಯದಲ್ಲಿ ಹೆಚ್ಚಿನ ಭಾಗಿದಾರರು, ತಮ್ಮ ಕುಟುಂಬಗಳ ಪೋಷಣೆಗಾಗಿ ತಾವು ಉಳಿತಾಯ ಮಾಡಬೇಕೆಂದು ತಿಳಿಸಿದರು. ಹಾಗಿದ್ದರೂ, ಶೇಕಡಾ 66ಕ್ಕಿಂತ ಹೆಚ್ಚು ಮಹಿಳೆಯರು ಮತ್ತು ಶೇಕಡಾ 68 ಪುರುಷ ವಲಸಿಗರು ತಮ್ಮಿಂದ ಉಳಿತಾಯ ಸಾಧ್ಯವಾಗದೆಂದು ಖಚಿತಪಡಿಸಿದರು.

| ಲಿಂಗ | ನೀವು ಹಣ ಉಳಿತಾಯ ಮಾಡುತ್ತೀರಾ? | | |
|---|---|---|---|
| | ಹೌದು | ಇಲ್ಲ | ಗೊತ್ತಿಲ್ಲ |
| ತೃತೀಯ ಲಿಂಗಿ | 20% | 80% | 0% |
| ಮಹಿಳೆ | 14.56% | 80.58% | 5.82% |

| | | | |
|---|---|---|---|
| ಪುರುಷ | 14.85% | 78.21% | 6.93% |

ಬಹುತೇಕ ಅಧ್ಯಯನದಲ್ಲಿ ಭಾಗಿಗಳಾದ ವಲಸಿಗರು, ತಾವು ಮನೆಗೆ ಹಣ ಕಳುಹಿಸುವುದಿಲ್ಲವೆಂದು ಸಮೀಕ್ಷೆಯ ಸಂದರ್ಭದಲ್ಲಿ ತಿಳಿಸಿದರು. ಅಧ್ಯಯನದಲ್ಲಿ ಭಾಗವಹಿಸಿದ ಶೇಕಡಾ 81 ಮಹಿಳೆಯರು ಮತ್ತು ಶೇಕಡಾ 79 ಪುರುಷ ವಲಸಿಗ ಕಾರ್ಮಿಕರು ತಾವು ಮನೆಗೆ ಹಣ ಕಳುಹಿಸುವುದಿಲ್ಲವೆಂದರು ಹಾಗೂ ಸುಮಾರು ಶೇಕಡಾ 15 ಮಹಿಳೆಯರು ಮತ್ತು ಶೇಕಡಾ 15 ಪುರುಷರು ಮನೆಗೆ ಹಣ ಕಳುಹಿಸುವುದಾಗಿ ತಿಳಿಸಿದರು.

ಜಾತಿ ಆಧಾರದಲ್ಲಿ ವಿಂಗಡಿಸಿದ ಮಾಹಿತಿಯೂ ಇದೇ ವಿನ್ಯಾಸವನ್ನು ತೋರಿಸುತ್ತದೆ. ಅಧ್ಯಯನದಲ್ಲಿ ಭಾಗಿಗಳಾದ ಎಲ್ಲ ಐದು ಸಾಮಾಜಿಕ ವರ್ಗಗಳ ಶೇಕಡಾ 70ಕ್ಕೂ ಹೆಚ್ಚಿನವರು ಮನೆಗಳಿಗೆ ಹಣ ಕಳುಹಿಸುತ್ತಿರಲಿಲ್ಲ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಶೇಕಡಾ 16 ರಂತೆ ಪರಿಶಿಷ್ಟ ಜಾತಿಯವರು, ಅವರ ನಂತರ ಶೇಕಡಾ 12ರಂತೆ ಇತರೆ ಹಿಂದುಳಿದ ವರ್ಗದವರು ಮನೆಗೆ ಹಣ ಸಂದಾಯ ಮಾಡುತ್ತಿದ್ದರು. ಅಧ್ಯಯನದಲ್ಲಿ ಭಾಗವಹಿಸಿದವರಲ್ಲಿ ತಮ್ಮ ಮನೆಗಳಿಗೆ ಹಣ ಸಂದಾಯ ಮಾಡುವವರ ಪ್ರಮಾಣವು ಶೇಕಡಾ 10ರಿಂದ ಶೇಕಡಾ 16ರವರೆಗೆ ಬದಲಾಗುತ್ತಿತ್ತು.

| ಜಾತಿ | ನೀವು ನಿಮ್ಮ ಕುಟುಂಬಕ್ಕೆ ಹಣ ಕಳುಹಿಸುತ್ತೀರಾ? | | |
|---|---|---|---|
| | ಹೌದು | ಇಲ್ಲ | ಗೊತ್ತಿಲ್ಲ |
| ಪರಿಶಿಷ್ಟ ಜಾತಿ | 15.89% | 77.48% | 6.62% |
| ಪರಿಶಿಷ್ಟ ಪಂಗಡ | 9.52% | 71.42% | 19.04% |
| ಇತರೆ ಹಿಂದುಳಿದ ವರ್ಗ | 10.52% | 82.45% | 7.36% |
| ಇತರರು | 11.94% | 85.07% | 2.98% |

ಭಾಗವಹಿಸಿದ ವಲಸಿಗ ಕಾರ್ಮಿಕರ ದತ್ತಾಂಶವು, ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬೇರೆ ರಾಜ್ಯಗಳ ವಲಸಿಗರಲ್ಲಿ ಹಣ ಸಂದಾಯವು ಬಹಳ ಸಾಮಾನ್ಯವೆಂದು ತೋರಿಸುತ್ತದೆ. ಅವರಲ್ಲಿ ಶೇಕಡಾ 50 ಜನರು ತಮ್ಮ ಕುಟುಂಬಗಳಿಗೆ ಹಣ ಸಂದಾಯ ಮಾಡುತ್ತಾರೆ, ಅದೇ ಇವರ ಸಹವರ್ತಿಗಳಾದ ಯಾದಗಿರಿ ಮತ್ತು ಕೊಪ್ಪಳದಿಂದ ಬಂದ ಅಂತರ್–ಜಿಲ್ಲಾ ವಲಸಿಗರ ಸಂಖ್ಯೆ ಶೇಕಡಾ 6ಕ್ಕಿಂತ ಕಡಿಮೆಯಾಗಿದೆ. ಗೋವಾದಲ್ಲಿರುವ ಉತ್ತರ ಕರ್ನಾಟಕದ ವಲಸಿಗರಲ್ಲಿ ಶೇಕಡಾ 57ಕ್ಕಿಂತ ಹೆಚ್ಚು ಮತ್ತು ಶೋಲಾಪುರದಲ್ಲಿರುವ ಶೇಕಡಾ 64 ಜನರು ಮನೆಗೆ ಹಣ ಕಳುಹಿಸುತ್ತಾರೆ. ಆದರೆ ಗೋವಾದಲ್ಲಿರುವ ಶೇಕಡಾ 39 ಮತ್ತು ಶೋಲಾಪುರದಲ್ಲಿರುವ ಶೇಕಡಾ 36 ಜನರು ತಮ್ಮ ಮೂಲ ಊರಿಗೆ ಹಣವನ್ನು ಕಳುಹಿಸುತ್ತಿಲ್ಲ.

| ಹಣ ಕಳುಹಿಸುವ ಸ್ವರೂಪ: ನೀವು ಮನೆಗೆ ಹಣ ಕಳುಹಿಸುತ್ತೀರಾ? | | | |
|---|---|---|---|
| ವಲಸೆ ಬಂದ ಸ್ಥಳ | ಹೌದು | ಇಲ್ಲ | ಅನ್ವಯಿಸುವುದಿಲ್ಲ |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸೆ | 16% | 74% | 10% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ವಲಸಿಗರು | 5.81% | 90.69% | 3.48% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಇತರ ರಾಜ್ಯಗಳ ವಲಸಿಗರು | 50% | 23.52% | 26.47% |
| ಗೋವಾದಲ್ಲಿರುವ ಉತ್ತರ ಬೆಳಗಾವಿ ಮತ್ತು ಉತ್ತರ ಕನ್ನಡದ ವಲಸಿಗರು | 57.44% | 38.29% | 4.25% |
| ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ವಲಸಿಗರು | 65% | 36% | 0% |

ಗೋವಾ ಮತ್ತು ಶೋಲಾಪುರದಲ್ಲಿ ಕುಟುಂಬ ಸಹಿತರಾಗಿ ವಲಸಿಗರು ನೆಲೆಸಿದ್ದರೂ, ತಾವು ಮನೆಗೆ ಹಣ ಕಳುಹಿಸುವುದಾಗಿ ತಿಳಿಸಿದರು. ಹಾಗಾಗಿ ವಿಶದವಾದ ಸಂದರ್ಶನದ ಕಾಲದಲ್ಲಿ ಈ ಪ್ರಶ್ನೆ ಕೇಳಲಾಯಿತು. ಅಧ್ಯಯನದಲ್ಲಿ ಭಾಗವಹಿಸಿದ ಗೋವಾದವರು ತಾವು ಊರಿನಲ್ಲಿರುವ ಮನೆಗೆ, ಅದರಲ್ಲೂ ಅವರಿಗೆ ಹೆಚ್ಚು ಸಂಪಾದಿಸುವ ಅವಕಾಶ ದೊರಕುವ ಪ್ರವಾಸಿಗರ ಕಾಲದಲ್ಲಿ ಹಣ ಕಳುಹಿಸುವುದಾಗಿ ತಿಳಿಸಿದರು. ಈಗ ಶೋಲಾಪುರವು ವಲಸೆಗೆ ಜನಪ್ರಿಯ ಆಯ್ಕೆಯಾಗಿ ಉಳಿದಿಲ್ಲದೇ ಇದ್ದರೂ ಮತ್ತು ಇಲ್ಲಿ ನೀಡುವ ವೇತನವು ಉಳಿದೆಡೆಗೆ ಹೋಲಿಸಿದರೆ ಕಡಿಮೆ ಇದ್ದರೂ, ಇಲ್ಲಿ ಈಗಾಗಲೇ ನೆಲೆಸಿರುವ ವಲಸಿಗರಿಗೆ ಇದು

ಒಳ್ಳೆಯ ಸ್ಥಳ ಎಂದು ಶೋಲಾಪುರದ ಇಬ್ಬರು ಮಹಿಳಾ ವಲಸಿಗ ಭಾಗಿದಾರರು ಹೇಳಿದರು. ಭಾಗವಹಿಸಿದ ಶೋಲಾಪುರದ ವಲಸಿಗ ಮಹಿಳೆಯರು ಸರಕಾರದ ಸಹಾಯದಿಂದ ಕಟ್ಟಿಸಿದ ತಮ್ಮ ಸ್ವಂತ ಮನೆಯಲ್ಲಿದ್ದರು ಮತ್ತು ಅವರು ಬಡವರಿಗಾಗಿ ಇರುವ ಕಲ್ಯಾಣ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದರು. ಅವರಿಗೆ ಹೆಚ್ಚು ಸಂಪಾದಿಸಲು ಆಗದೇ ಇದ್ದರೂ, ವಸತಿಯ ಮೇಲೆ, ಜೀವನ ನಿರ್ವಹಣೆಗೆ, ಆರೋಗ್ಯ ಮತ್ತು ಮಕ್ಕಳ ಶಿಕ್ಷಣದ ಮೇಲಿನ ಖರ್ಚು ಬಹಳ ಕಡಿಮೆ ಇತ್ತು. ಈ ಸನ್ನಿವೇಶವು ಅವರನ್ನು ಸಂತೃಪ್ತ ಜೀವನವನ್ನು ನಡೆಸಲು ಮತ್ತು ಊರಿನಲ್ಲಿರುವ ಹೆತ್ತವರಿಗೆ ಹಣ ಕಳುಹಿಸಲೂ ಸಹಾಯ ಮಾಡಿತು.

ಆಸಕ್ತಿಯ ಸಂಗತಿ ಎಂದರೆ, ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸಿಗರು ತಮ್ಮ ಕುಟುಂಬಗಳಿಗೆ ಕಳುಹಿಸುವ ಹಣವು, ಅದೇ ಜಿಲ್ಲೆಯ ಅಂತರ್–ಜಿಲ್ಲಾ ವಲಸಿಗರು ಕಳುಹಿಸುವ ಹಣದಷ್ಟು ಕಡಿಮೆ ಇರಲಿಲ್ಲ. ಯಾದಗಿರಿ ಮತ್ತು ಕೊಪ್ಪಳದ ಸುಮಾರು ಶೇಕಡಾ 16 ಜಿಲ್ಲಾಂತರ್ಗತ ವಲಸಿಗರು, ತಮ್ಮಲ್ಲಿ ಹೆಚ್ಚಿನವರು (ಶೇಕಡಾ 64) ಕುಟುಂಬದ ಜೊತೆಗೆ ವಲಸೆ ಬಂದಿದ್ದರೂ ಮನೆಗೆ ಹಣ ಕಳುಹಿಸಿದರು. ಅದೇ, ಯಾದಗಿರಿ ಮತ್ತು ಕೊಪ್ಪಳದಿಂದ ಅಧ್ಯಯನದಲ್ಲಿ ಭಾಗವಹಿಸಿದ ಕೇವಲ ಶೇಕಡಾ 18 ಜನ ಕುಟುಂಬದ ಜೊತೆಗೆ ಬೆಂಗಳೂರು ಮತ್ತು ಮೈಸೂರಿಗೆ ವಲಸೆ ಬಂದಿದ್ದರು. ಹಾಗಿದ್ದರೂ, ಅವರಲ್ಲಿ ಕೇವಲ ಶೇಕಡಾ 6 ಜನರು ಹಣವನ್ನು ಊರಿಗೆ ಕಳುಹಿಸಿದರು.

ಒಬ್ಬಂಟಿಯಾಗಿ ಬಂದ ಅಂತರ್–ಜಿಲ್ಲೆ ವಲಸಿಗ ಕಾರ್ಮಿಕರು ಹೆಚ್ಚಾಗಿ ತಮ್ಮ ಮೂಲ ಊರುಗಳಿಗೆ ಭೇಟಿ ನೀಡುತ್ತಿರುವ ಜೊತೆಗಾರರು/ಗೆಳೆಯರು/ಸಂಬಂಧಿಕರ ಮೂಲಕ ಹಣವನ್ನು ಕಳುಹಿಸುತ್ತಿದ್ದರೆಂಬ ವಿಷಯ ವಿಶದವಾದ ಸಂದರ್ಶನಗಳು ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ಸಂದರ್ಭದಲ್ಲಿ ಹೊರಹೊಮ್ಮಿತು. ಅಂತರ್–ಜಿಲ್ಲಾ ಮತ್ತು ಜಿಲ್ಲಾಂತರ್ಗತ ಯಾದಗಿರಿ ಮತ್ತು ಕೊಪ್ಪಳದ ಬಹುತೇಕ ವಲಸಿಗರು, ವರ್ಷದಲ್ಲಿ ಕನಿಷ್ಟ ಪಕ್ಷ 2ರಿಂದ 4ಬಾರಿ ಊರಿಗೆ ಭೇಟಿ ನೀಡಿದ್ದರೆಂದು ಈ ಕೆಳಗೆ ಕೊಟ್ಟಿರುವ ಪಟ್ಟಿಯು ವಿಶದಪಡಿಸುತ್ತದೆ. ಈ ಮೂರು ಜಿಲ್ಲೆಗಳ ಜಿಲ್ಲಾಂತರ್ಗತದ ಸುಮಾರು ಶೇಕಡಾ 38 ಮತ್ತು ಅಂತರ್–ಜಿಲ್ಲೆಯ ಶೇಕಡಾ 26 ವಲಸಿಗರು ತಾವು ಕನಿಷ್ಟ ಪಕ್ಷ ತಿಂಗಳಿಗೆ ಒಂದು ಬಾರಿ ತಮ್ಮ ಮನೆಗೆ ಭೇಟಿ ನೀಡುತ್ತೇವೆ ಎಂದು ಮಾಹಿತಿ ಹಂಚಿಕೊಂಡರು. ಬೆಂಗಳೂರಿನಲ್ಲಿರುವ ಕೊಪ್ಪಳದ ವಲಸಿಗರು, ಹಣವನ್ನು ಉಳಿಸಿ, ತಮ್ಮ ಉಳಿತಾಯವನ್ನು ಸಾಮಾನ್ಯವಾಗಿ ವರ್ಷದಲ್ಲಿ 3 ರಿಂದ 4 ಬಾರಿ, ಮನೆಗೆ ಭೇಟಿ ನೀಡುವಾಗ ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಾರೆಂಬುದನ್ನು ಕೇಂದ್ರೀಕೃತ ಗುಂಪು ಚರ್ಚೆಗಳ ಸಂದರ್ಭದಲ್ಲಿ ಹಂಚಿಕೊಂಡರು. ಯಾದಗಿರಿ ಮತ್ತು ಕೊಪ್ಪಳದಲ್ಲಿ ಈ ಅಧ್ಯಯನವನ್ನು ರೂ.500 ಮತ್ತು ರೂ.1000ದ ನೋಟುಗಳ ಅಪಮೌಲ್ಯೀಕರಣದ ನಂತರ ನವೆಂಬರ್ ತಿಂಗಳಲ್ಲಿ ನಡೆಸಲಾಯಿತು. ಭಾಗವಹಿಸಿದ ಹೆಚ್ಚಿನವರು, ಅದರಲ್ಲೂ ಯಾದಗಿರಿ ಮತ್ತು ಕೊಪ್ಪಳದ ಮಹಿಳೆಯರು ತಮ್ಮ ಬ್ಯಾಂಕ್‌ನ ಖಾತೆ ಇಲ್ಲವೆಂಬ ಮಾಹಿತಿಯನ್ನು ಹಂಚಿಕೊಂಡರು. ನಮಗೆ ನಿರ್ದಿಷ್ಟವಾದ ಮಾಹಿತಿ ತಿಳಿದಿಲ್ಲವಾದರೂ, ಬಹುತೇಕ ಅಂತರ್–ಜಿಲ್ಲಾ ವಲಸಿಗರ ಬಳಿಯೂ ಬ್ಯಾಂಕ್‌ನ ಖಾತೆ ಇಲ್ಲವೆಂದು ಅಂದುಕೊಳ್ಳಬಹುದು ಮತ್ತು ಅವರು ಮನೆಗೆ ಹಣ ಕೊಂಡೊಯ್ಯಲು ಬಹುಶಃ ಇದೇ ಮುಖ್ಯ ಕಾರಣವಾಗಿರಬಹುದು.

**ಮನೆಗೆ ಭೇಟಿ**

ಒಂದು ಹಳ್ಳಿಯಿಂದ ಬಂದ ಜಿಲ್ಲಾಂತರ್ಗತ ವಲಸಿಗರು ಸಾಮಾನ್ಯವಾಗಿ ಒಟ್ಟಿಗೆ ಒಂದೇ ಬಡಾವಣೆ/ನೆರೆಹೊರೆಯಲ್ಲಿ ವಾಸಮಾಡುತ್ತಾರೆ ಮತ್ತು ತಮ್ಮ ಹಳ್ಳಿಯಿಂದ ಬಂದು ಮನೆಗೆ ಹೋಗುವ ಜನರು ಅವರಿಗೆ ಕನಿಷ್ಟ ಪಕ್ಷ ಪ್ರತೀ ತಿಂಗಳು ಅಥವಾ ಪಾಕ್ಷಿಕವಾಗಿಯೇ ಸುಲಭವಾಗಿ ಸಿಗುತ್ತಾರೆ. ತಮ್ಮ ಮೂಲ ಊರುಗಳಿಗೆ ಹೋಗುತ್ತಿರುವ ಸಹವರ್ತಿಗಳು/ಗೆಳೆಯರು/ಸಂಬಂಧಿಕರ ಮೂಲಕ ನಿಯಮಿತವಾಗಿ ಹಣ ಕಳುಹಿಸುವುದು ಅವರಿಗೆ ಸುಲಭವಾಗುತ್ತದೆ. ಯಾದಗಿರಿ ಮತ್ತು ಕೊಪ್ಪಳದ ಜಿಲ್ಲಾಂತರ್ಗತ ವಲಸಿಗರಿಗಿಂತ ಅಂತರ್–ಜಿಲ್ಲಾ ವಲಸಿಗರು ಮನೆಗೆ ಹಣ ಕಳುಹಿಸುವ ಅಭ್ಯಾಸದ ಹಿಂದಿನ ಬಹು ಮುಖ್ಯ ಕಾರಣ ಎಂದರೆ ಮೊದಲಿನ ಗುಂಪಿನವರು ಬಡ ಕುಟುಂಬದಿಂದ ಬಂದಿರುವುದು.

| ಎಷ್ಟು ದಿನಗಳಿಗೊಮ್ಮೆ ನಿಮ್ಮ ಮನೆಗೆ ನೀವು ವಾಪಸ್ಸು ಹೋಗುತ್ತೀರಾ? | | | | | |
|---|---|---|---|---|---|
| ವಲಸೆ ಬಂದ ಸ್ಥಳ | ತಿಂಗಳಿಗೊಮ್ಮೆ | ವರ್ಷದಲ್ಲಿ 2–4 ಬಾರಿ | ವರ್ಷಕ್ಕೊಮ್ಮೆ | 2–3 ವರ್ಷಗಳಿಗೆ ಒಂದು ಬಾರಿ | ಬಂದ ನಂತರ ವಾಪಾಸು ಹೋಗಿಲ್ಲ |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸೆ | 38% | 60% | 2 | 0% | 0% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ | 25.95% | 50.50% | 21.54% | 1.34% | 0.67% |

| | | | | | |
|---|---|---|---|---|---|
| ಯಾದಗಿರಿ ಮತ್ತು ಕೊಪ್ಪಳದ ವಲಸಿಗರು | | | | | |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಇತರ ರಾಜ್ಯಗಳ ವಲಸಿಗರು | 4.49% | 35.95% | 52.80% | 6.74% | 0% |
| ಗೋವಾದಲ್ಲಿರುವ ಉತ್ತರ ಬೆಳಗಾವಿ ಮತ್ತು ಉತ್ತರ ಕನ್ನಡದ ವಲಸಿಗರು | 43.75% | 28.12% | 25% | 0% | 3.12% |
| ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ವಲಸಿಗರು | 50% | 16.66% | 4.16% | 0% | 29.16% |

ಬಹುತೇಕ ಎಲ್ಲ ಜಿಲ್ಲಾಂತರ್ಗತ ವಲಸಿಗರು ಬಹಳ ಬಡವರಾಗಿದ್ದಾರೆ ಮತ್ತು ತಮ್ಮಲ್ಲಿ ಹಣವಿದ್ದರೆ ತಾವು ಗೋವಾ, ಪುಣೆ, ಬೆಂಗಳೂರು ಮತ್ತು ಮೈಸೂರಿನಂತಹ ನಗರಗಳಿಗೆ ವಲಸೆ ಹೋಗುತ್ತಿದ್ದೆವೆಂದು ಕೇಂದ್ರೀಕೃತ ಗುಂಪು ಚರ್ಚೆಯ ಸಂದರ್ಭದಲ್ಲಿ ಹೇಳಿಕೆ ದಾಖಲಿಸಿದ್ದಾರೆ. ಜಿಲ್ಲಾಂತರ್ಗತ ವಲಸಿಗರಲ್ಲಿ ಸುಮಾರು ಶೇಕಡಾ 98 ವಲಸಿಗರು ತಿಂಗಳಿಗೆ ರೂ.6000ಕ್ಕಿಂತ ಕಡಿಮೆ ಸಂಪಾದಿಸುತ್ತಾರೆ. ಅವರ ಹೆತ್ತವರು ಮತ್ತು ವಿಸ್ತೃತ ಕುಟುಂಬ ದಟ್ಟ ದಾರಿದ್ರ್ಯದಲ್ಲಿ ಜೀವಿಸುತ್ತಿರುವುದರಿಂದ, ಊರಿನಲ್ಲಿರುವ ತಮ್ಮ ಕುಟುಂಬಕ್ಕೆ ಹಣ ಕಳುಹಿಸುವುದು ಅವರಿಗೆ, ಬಹಳ ಪ್ರಾಮುಖ್ಯವಾಗುತ್ತದೆ. ಜಿಲ್ಲಾಂತರ್ಗತ ವಲಸಿಗರ ಚಲನೆಯು ಪ್ರಧಾನವಾಗಿ ಕಾಲೋಚಿತವಾದದ್ದು ಹಾಗೂ ಭಾಗವಹಿಸಿದ ಎಲ್ಲ ಜಿಲ್ಲಾಂತರ್ಗತ ವಲಸಿಗರು, ಲಿಂಗಬೇಧವಿಲ್ಲದಂತೆ ವರ್ಷಕ್ಕೆ 2 ರಿಂದ 4 ಬಾರಿ ಮನೆಗೆ ಹೋಗಿದ್ದಾರೆ. ಈ ಮಾದರಿಯು ಅಂತರ್–ಜಿಲ್ಲಾ ವಲಸಿಗರಲ್ಲಿಯೂ ಸಾಮಾನ್ಯವಾಗಿದೆ ಮತ್ತು ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದಿಂದ ಬಂದ ಶೇಕಡಾ 62ಕ್ಕಿಂತ ಹೆಚ್ಚಿನ ಪುರುಷರು ಮತ್ತು ಶೇಕಡಾ 44 ಮಹಿಳೆಯರು, ತಾವು ವರ್ಷಕ್ಕೆ 2ರಿಂದ 4ಬಾರಿ ಮನೆಗೆ ಹೋಗಿರುವುದಾಗಿ ತಿಳಿಸಿದರು. ಅಂತರ್–ಜಿಲ್ಲಾ ವಲಸಿಗರಲ್ಲಿ, ಶೇಕಡಾ 27 ಮಹಿಳೆಯರು ಮತ್ತು ಶೇಕಡಾ 25 ಪುರುಷರಂತೂ ತಿಂಗಳಿಗೊಮ್ಮೆ ಊರಿಗೆ ಹೋಗಿದ್ದರು. ಜಿಲ್ಲಾಂತರ್ಗತ ವಲಸಿಗರಲ್ಲಿ ತಿಂಗಳಿಗೊಮ್ಮೆ ಮನೆಗೆ ಹೋಗುವ ಪ್ರವೃತ್ತಿಯು ಬಹಳ ಸಾಮಾನ್ಯವಾಗಿದ್ದು, ಶೇಕಡಾ 39ಕ್ಕಿಂತ ಮಿಗಿಲಾಗಿ ಮಹಿಳೆಯರು ಮತ್ತು ಶೇಕಡಾ 42 ಪುರುಷರು ಪ್ರತಿ ತಿಂಗಳು ಮನೆಗೆ ಭೇಟಿ ನೀಡಿದ್ದಾರೆ.

| ಎಷ್ಟು ದಿನಗಳಿಗೊಮ್ಮೆ ನಿಮ್ಮ ಮನೆಗೆ ನೀವು ವಾಪಸ್ಸು ಹೋಗುತ್ತೀರ? | | | | | | |
|---|---|---|---|---|---|---|
| ವಲಸೆ ಬಂದ ಸ್ಥಳ | ಲಿಂಗ | ತಿಂಗಳಿಗೊಮ್ಮೆ | ವರ್ಷದಲ್ಲಿ 2–4 ಬಾರಿ | ವರ್ಷಕ್ಕೊಮ್ಮೆ | 2–3 ವರ್ಷಗಳಿಗೊಮ್ಮೆ | ನಾನಿಲ್ಲಿ ಬಂದ ನಂತರ ವಾಪಾಸು ಹೋಗಿಲ್ಲ |
| ಯಾದಗೀರ್ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸೆ | ತೃತೀಯ ಲಿಂಗಿ | 0% | 100% | 0% | 0% | 0% |
| | ಮಹಿಳೆ | 39.13% | 60.86% | 0% | 0% | 0% |
| | ಪುರುಷ | 41.66% | 58.33% | 0% | 0% | 0% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗೀರ್ ಮತ್ತು ಕೊಪ್ಪಳದ ವಲಸಿಗರು | ತೃತೀಯ ಲಿಂಗಿ | 100% | 0% | 0% | 0% | 0% |
| | ಮಹಿಳೆ | 27% | 62.16% | 9% | 1.80% | 0% |
| | ಪುರುಷ | 25.5% | 44.4% | 30% | 1.1% | 1.1% |

ಐವರಲ್ಲಿ ಇಬ್ಬರು ತೃತೀಯ ಲಿಂಗಿ ವಲಸಿಗರು ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದು, ಇಬ್ಬರೂ ಪ್ರತಿ ತಿಂಗಳು ಮನೆಗೆ ಭೇಟಿ ನೀಡಿದ್ದಾರೆ. ಮತ್ತೊಂದೆಡೆ, ಅಧ್ಯಯನದಲ್ಲಿ ಭಾಗಿಯಾದ ಯಾದಗಿರಿಯಲ್ಲಿರುವ ಓರ್ವ ತೃತೀಯ ಲಿಂಗಿ ವರ್ಷಕ್ಕೆ 2ರಿಂದ 4

ಬಾರಿ ಮನೆಗೆ ಭೇಟಿ ನೀಡಿದ್ದಾರೆ. ಕೆಲವು ಅಂತರ್–ಜಿಲ್ಲಾ ಪುರುಷ ವಲಸಿಗರು 2 ರಿಂದ 3 ವರ್ಷಗಳಿಗೊಮ್ಮೆ ಮನೆಗೆ ಭೇಟಿ ನೀಡಿದ್ದಾರೆ ಮತ್ತು ಇನ್ನು ಕೆಲವರು ಮನೆ ಬಿಟ್ಟು ಬಂದ ನಂತರ ವಾಪಸ್ಸು ಹೋಗಿಯೇ ಇಲ್ಲ.

# ಅಧ್ಯಾಯ ಐದು
# ಕರ್ನಾಟಕದಲ್ಲಿ ತಳ್ಳುವ ಮತ್ತು ಸೆಳೆಯುವ ಅಂಶಗಳು

**ಸಂದರ್ಭ**

ಭಾರತದಲ್ಲಿ ಹತ್ತಿರದ ಸ್ಥಳವಳಿಗೆ ವಲಸೆ ಹೋಗುವುದು ಬಹಳ ಸಾಮಾನ್ಯ. ಒಟ್ಟು ವಲಸಿಗರಲ್ಲಿ ಸುಮಾರು ಶೇಕಡಾ 60 ಜನ ತಮ್ಮ ಹುಟ್ಟೂರಿನ ಜಿಲ್ಲೆಯಲ್ಲಿ ಮತ್ತು ಸುಮಾರು ಶೇಕಡಾ 20 ರಾಜ್ಯದೊಳಗಡೆಗೆ ನಿವಾಸವನ್ನು ಬದಲಿಸುತ್ತಾರೆ. ಒಟ್ಟು ವಲಸಿಗರಲ್ಲಿ ಕೇವಲ ಶೇಕಡಾ 20 ತಮ್ಮ ಜಿಲ್ಲೆ ಮತ್ತು ರಾಜ್ಯದ ಗಡಿ ದಾಟಿ ವಲಸೆ ಹೋಗುತ್ತಾರೆ. 2007–08ರ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ಅಂಕಿ ಅಂಶದ ಪ್ರಕಾರ, ಭಾರತದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು 32.6 ಕೋಟಿ (28.5%) ಜನರು ಆಂತರಿಕ ವಲಸೆಗಾರರೆಂದು ಅಂದಾಜು ಮಾಡಲಾಗಿದೆ. ಈ ವರ್ಗದ ವಲಸಿಗರನ್ನು "ಪ್ರಾಯೋಗಿಕ ಹಾಗೂ ಪರಿಕಲ್ಪನಾತ್ಮಕ ಮಾಪಕ ತೊಂದರೆಗಳಿರುವುದರಿಂದ ಇವರ ಸಂಖ್ಯೆಯ ಅಂದಾಜು ಬಹಳ ಕಡಿಮೆಯಾಗಿ ಕಾಣಿಸುತ್ತದೆ" ಎಂದು ಕೆಲವು ತಜ್ಞರು ಅಭಿಪ್ರಾಯ ಪಡುತ್ತಾರೆ. 2001ರ ಜನಗಣತಿಯಲ್ಲಿ 307 ದಶಲಕ್ಷ ಆಂತರಿಕ ವಲಸಿಗರನ್ನು ಪಟ್ಟಿ ಮಾಡಲಾಗಿದೆ ಆದರೆ ಯಾರು ತನ್ನ ಹುಟ್ಟಿದ ಸ್ಥಳ ಅಥವಾ ತನ್ನ ಹಿಂದಿನ ನಿವಾಸ ಸ್ಥಳದಿಂದ ಬೇರೆಯದಾದ ಸ್ಥಳದಲ್ಲಿ ವಾಸಿಸುತ್ತಾರೋ ಅವರನ್ನು ವಲಸಿಗನೆಂದು ಅದು ಪರಿಭಾಷಿಸುತ್ತದೆ. ತಮ್ಮ ಹುಟ್ಟೂರಿನ ಸುತ್ತ ಮುತ್ತಲಿನ ಸ್ಥಳಗಳಿಗೆ, ಹೆಚ್ಚಾಗಿ ಅದೇ ಜಿಲ್ಲೆಯೊಳಗೆ ವಲಸೆ ಹೋಗುವ ಹಲವು ಜನರು ಈ ಪರಿಭಾಷೆಗೆ ಸೇರುತ್ತಾರೆ ಹಾಗೂ ಬಹುಶಃ ಬಹಳಷ್ಟು ಕಾಲೋಚಿತ ವಲಸಿಗರನ್ನು, ಅವರ ಹುಟ್ಟೂರಿನಲ್ಲಿ ಲೆಕ್ಕ ಮಾಡುವುದರಿಂದ ಅಥವಾ ಅವರ ಹೊಸ ಗಮ್ಯ ಸ್ಥಳದಲ್ಲಿ ಹಿಂದಿನ ನಿವಾಸವೆಂದು ಲೆಕ್ಕ ಮಾಡುವುದರಿಂದ, ಅವರು ವಲಸಿಗರ

ಪಟ್ಟಿಯಿಂದ ಬಿಟ್ಟು ಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ವಲಸಿಗರ ಹೊರ ಹರಿವಿನ ಮತ್ತು ಜಿಲ್ಲಾ ಮಟ್ಟದಲ್ಲಿ ಒಳ ಹರಿವಿನ ಪ್ರಮಾಣದ ಸ್ಪಷ್ಟ ಮಾಹಿತಿಯನ್ನು ಪಡೆಯುವುದು ಕಷ್ಟ.

2011ರ ಜನಗಣತಿಯ ವಲಸೆಯ ಅಂಕಿಅಂಶಗಳು ಇನ್ನೂ ಪ್ರಕಟಗೊಂಡಿಲ್ಲ. ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನಗಣತಿಯ ಮತ್ತು ಜನಗಣತಿಯದಲ್ಲದ ದತ್ತಾಂಶವನ್ನು ಒಳಗೊಂಡಿರುವ ಜಿಲ್ಲಾ ಜನಗಣತಿಯ ಕೈಪಿಡಿಯಲ್ಲಿ, ವಲಸೆಯ ಸ್ಪಷ್ಟ ದತ್ತಾಂಶ ಇಲ್ಲ. ಈ ಕೈಪಿಡಿಯಲ್ಲಿ ಒಟ್ಟಾರೆ ಕೆಲಸಗಾರರ ಸಂಖ್ಯೆಯ ಬಗ್ಗೆ–ಮುಖ್ಯ, ಅಂಚಿನಲ್ಲಿರುವ ಮತ್ತು ಕೆಲಸ ಮಾಡದಿರುವವರನ್ನು ಒಳಗೊಂಡು–ದತ್ತಾಂಶಗಳಿದ್ದರೂ, ವಲಸೆಗಾರರ ನಿರ್ದಿಷ್ಟ ದತ್ತಾಂಶ ಇದರಲಿಲ್ಲ. ವಲಸೆಯ ಕುರಿತಾದ ನಿರ್ದಿಷ್ಟ ಮಾಹಿತಿ ಇದರಲ್ಲಿಲ್ಲ. ಜಿಲ್ಲಾ ಕಾರ್ಮಿಕ ಕಚೇರಿಯಲ್ಲಿಯೂ ಜಿಲ್ಲೆಯಿಂದ ವಲಸೆ ಹೋಗುವವರ ಸಂಖ್ಯೆಯ ದತ್ತಾಂಶಗಳಿಲ್ಲ. ಈ ಹಿನ್ನೆಲೆಯಲ್ಲಿ, ಒಂದು ಸ್ಥಳದಲ್ಲಿರುವ ಕೆಲಸಗಾರರ ಒಟ್ಟು ಸಂಖ್ಯೆಗೆ ಹೋಲಿಸಿ ಕಾರ್ಮಿಕರ ವಲಸೆಯ ವ್ಯಾಪ್ತಿಯನ್ನು ಕಂಡುಹಿಡಿಯುವುದು ಅಸಾಧ್ಯ.

| ಕಳುಹಿಸಿದ ಜಿಲ್ಲೆ/ಗ್ರಾಮ | ಕೆಲಸದ ತಂಡದ ಭಾಗವಹಿಸುವಿಕೆ | | | ಪ್ರಧಾನ ಕೆಲಸಗಾರರು | ಅಲ್ಪಾವಧಿ ಕೆಲಸಗಾರರು | ಕೃಷಿ | | | ಕುಟುಂಬದ ಉದ್ಯಮ | ಉಳಿದ ಕೆಲಸಗಾರರು | ಕೆಲಸಗಾರರಲ್ಲದವರು |
|---|---|---|---|---|---|---|---|---|---|---|---|
| | ಒಟ್ಟು | ಪುರುಷ ಕೆಲಸಗಾರರ ಭಾಗವಿಸುವಿಕೆ | ಮಹಿಳಾ ಕೆಲಸಗಾರರ ಭಾಗವಿಸುವಿಕೆ | | | ಒಟ್ಟು | ಬೆಳೆಗಾರರು | ಕೃಷಿ ಕಾರ್ಮಿಕ | | | |
| **ಯಾದಗಿರಿ** | **46.6%** | **53.7%** | **39.5%** | **79.8%** | **20.2%** | **71.9%** | **29.1%** | **42.8%** | **2.4%** | **25.7%** | **53.4%** |
| **ಕೊಪ್ಪಳ** | **47.1%** | **55.4%** | **38.7%** | **77.6%** | **22.4%** | **66.7%** | **25%** | **41.7%** | **2.9%** | **30.5%** | **52.9%** |
| **ಬೆಳಗಾವಿ** | **44.1%** | **56.64%** | **31.11%** | **36.29%** | **7.77%** | **64.6%** | **33.8%** | **30.8%** | **2.9%** | **32.5%** | **55.95%** |
| **ಉತ್ತರ ಕನ್ನಡ** | **42.34%** | **59.29%** | **25.03%** | **34.67%** | **7.67%** | **37.4%** | **18.3%** | **19.1%** | **1.6%** | **60.99%** | **57.7%** |

2011ರ ಜನಗಣತಿಯಲ್ಲಿ ವಲಸೆಯ ಮಾಹಿತಿ ಸಿಗದಿದ್ದರೂ, ಕರ್ನಾಟಕದ ಜಿಲ್ಲೆಗಳ ಇತರೇ ಅಧ್ಯಯನವು ಕಾರ್ಮಿಕ ವರ್ಗದ ಕುರಿತಾಗಿರುವ ದತ್ತಾಂಶಗಳು ನಮ್ಮ ಅಧ್ಯಯನದ ಜಿಲ್ಲೆಗಳಲ್ಲಿ (ಉಲ್ಲೇಖ ನಿಯಮದ ಪ್ರಕಾರ) ಕಡ್ಡಾಯವಾಗಿ ತಳ್ಳುವ ಅಂಶಗಳಿರುವ ಸಂದರ್ಭವನ್ನು ತೋರಿಸುತ್ತದೆ. ಈ ಜಿಲ್ಲೆಗಳಲ್ಲಿ ಕಾರ್ಮಿಕ ಬಲದ ಭಾಗವಹಿಸುವಿಕೆಯ ದರವು ಶೇಕಡಾ 42 ಮತ್ತು ಶೇಕಡಾ 47 ರ ನಡುವೆ ತುಯ್ದಾಡುತ್ತದೆ ಎಂದು ಮೇಲಿನ ಪಟ್ಟಿ ಹೇಳುತ್ತದೆ. ಸಂಶೋಧನೆಗಾಗಿ ಕಳುಹಿಸಿದ ಕರ್ನಾಟಕದ ನಾಲ್ಕು ಜಿಲ್ಲೆಗಳ ಒಟ್ಟು ಜನಸಂಖ್ಯೆಯ ಸುಮಾರು ಶೇಕಡಾ 53ರಿಂದ ಶೇಕಡಾ 58 ಕೆಲಸಗಾರರಲ್ಲದವರೆಂದು ದಾಖಲಾಗಿದ್ದಾರೆ. ಇಂದಿರಾ ಹಿರಾವೇ ಹೇಳುವಂತೆ, ಕೆಲಸಗಾರರಲ್ಲದವರ ಮತ್ತು ಮಹಿಳಾ ಕಾರ್ಮಿಕ ಬಲದ ಕಡಿಮೆ ಭಾಗವಹಿಸುವಿಕೆಯ ಪ್ರಮಾಣವು, ಕೆಲಸ ಮಾಡುವುದರಿಂದ ವಾಪಸ್ಸಾಗುವುದಾಗಲೀ, ಅಥವಾ ಭಾಗವಹಿಸದಿರುವಿಕೆ ಅದರಲ್ಲೂ ಕಾರ್ಮಿಕರ ಮಾರುಕಟ್ಟೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಇಲ್ಲದಿರುವುದನ್ನು ತೋರಿಸುವುದಿಲ್ಲ, ಆದರೆ ರಾಷ್ಟ್ರೀಯ ಮಾದರಿ ಸಮೀಕ್ಷೆಯು ಸರಿಯಾಗಿ ಗ್ರಹಿಸುವಲ್ಲಿ ಅಸಮರ್ಥವಾಗಿದೆ" ಎಂದು ಕಡ್ಡಾಯವಾಗಿ ಗುರುತಿಸಬೇಕಿದೆ (ಹಿರಾವೇ, 2011:37) ಮಾಪನ ಮಾಡಲಾಗದಿರುವ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಜನರು ತೊಡಗಿಕೊಂಡಿರುತ್ತಾರೆ ಮತ್ತು ಈ ವರ್ಗದಲ್ಲಿ ಅದರಲ್ಲೂ ಮನೆಗಳಲ್ಲಿ ಕೆಲಸ ಮಾಡುವ ಜನರನ್ನು, ಕೆಲಸಗಾರರೆಂದೇ ಗುರುತಿಸಿಲ್ಲ. ಕೆಲಸಗಾರರೆಂದು ಗುರುತಿಸಲ್ಪಡವರು ಕಡ್ಡಾಯವಾಗಿ ಕಡಿಮೆ ವೇತನಕ್ಕೆ ಕೆಲಸ ಮಾಡಬೇಕಾಗುತ್ತದೆಂಬುದನ್ನು ಹೇಳಬೇಕಾದ ಅಗತ್ಯವಿಲ್ಲ ಮತ್ತು ವಲಸೆಗೆ ತಳ್ಳುವಂತಹ ಹಲವಾರು ಸಂಗತಿಗಳೊಂದಿಗೆ ಅವರು ವ್ಯವಹರಿಸಬೇಕಾಗುತ್ತದೆ. ಉತ್ತರ ಕನ್ನಡವನ್ನು ಹೊರತುಪಡಿಸಿ, ಸಂಶೋಧನೆಗಾಗಿ ಕಳುಹಿಸಿದ ಎಲ್ಲ ಜಿಲ್ಲೆಗಳಲ್ಲಿ ಶೇಕಡಾ 12ರಿಂದ ಶೇಕಡಾ 23 ಪರಿಶಿಷ್ಟ ಜಾತಿ ಮತ್ತು ಶೇಕಡಾ 26ರಿಂದ ಶೇಕಡಾ 49ಕ್ಕಿಂತ ಮಿಗಿಲಾದ ಜನರು ಅನಕ್ಷರಸ್ಥರಾಗಿದ್ದರೆಂದು ಕೆಳಗೆ ತೋರಿಸಿದ ಪಟ್ಟಿಯು ಸೂಚಿಸುತ್ತದೆ. ಕರ್ನಾಟಕದಲ್ಲಿ ವಲಸೆಯ ಕುರಿತು ಕೆಲಸ ಮಾಡುತ್ತಿದ್ದ ಸುಖದೇವ್ ಥೊರಟ್ ಮತ್ತು ಇನ್ನಿತರ ವಿದ್ವಾಂಸರು, ಕಾರ್ಮಿಕರ ವಲಸೆ ಮತ್ತು ಪರಿಶಿಷ್ಟ ಜಾತಿಯ ಹೆಚ್ಚಿನ ಪ್ರಮಾಣದ ಜನಸಂಖ್ಯೆ ಜೊತೆಗೆ ಕಡಿಮೆ ಪ್ರಮಾಣದ ಸಾಕ್ಷರತೆಯ ನಡುವಿನ ಆಳವಾದ ಪರಸ್ಪರ ಸಂಬಂಧವನ್ನು ಒತ್ತಿ ಹೇಳಿದ್ದಾರೆ (ಉಮಾ, ಮಧು ಮತ್ತು ಹಬೀಬ್, 2013:4).

| ಕಳುಹಿಸಿದ ಜಿಲ್ಲೆ/ಗ್ರಾಮ | ಒಟ್ಟು ಜನಸಂಖ್ಯೆ | ಪರಿಶಿಷ್ಟ ಜಾತಿ | ಸಾಕ್ಷರತೆ |
|---|---|---|---|
| ಯಾದಗಿರಿ | 11,74,271 | 23.28% | 51.8% |
| ಕೊಪ್ಪಳ | 13,89,920 | 18.6% | 68.1% |
| ಬೆಳಗಾವಿ | 47,79,661 | 12.12% | 73.5% |
| ಉತ್ತರ ಕನ್ನಡ | 14,37,169 | 8.10% | 84.06% |

ಉದ್ಯೋಗಾವಕಾಶದ ಸೀಮಿತ ಅವಕಾಶಗಳು, ಕಾರ್ಮಿಕ ಮಾರುಕಟ್ಟೆಯ ಬದಲಾಗುತ್ತಿರುವ ಬೇಡಿಕೆಗಳು, ಕೃಷಿಯಲ್ಲಿನ ಬಿಕ್ಕಟ್ಟು, ಜಾತಿ ಮತ್ತು ಲಿಂಗದಂತಹ ದುರ್ಭರವಾದ ಸಾಮಾಜಿಕ ಆಚರಣೆಗಳಂತಹ ಕೆಲವು ನಿರ್ಣಾಯಕ ಅಂಶಗಳು, ಉತ್ತಮ ಜೀವನವನ್ನು ಅನ್ವೇಷಿಸುತ್ತಾ ವಲಸೆ ಹೋಗಲು ಜನರನ್ನು ತಳ್ಳಿದವು. ವಲಸೆಯು ಭಾರತೀಯ ಸಮಾಜ ಮತ್ತು ಆರ್ಥಿಕತೆಯ ಸಾಮಾನ್ಯ ಲಕ್ಷಣವಾಗಿದೆ ಎನ್ನುವುದನ್ನು ಮೇಲೆ ಹೇಳಿದ ವಿಚಾರಗಳು ಸ್ಪಷ್ಟ ಪಡಿಸುತ್ತವೆ ಎನ್ನುವುದನ್ನು ಈ ಅಧ್ಯಯನವು ಎತ್ತಿ ಹಿಡಿಯುತ್ತದೆ. ಈ ಅಧ್ಯಯನದಲ್ಲಿ ಭಾಗಿಯಾದ ಬಹುತೇಕರು ತಮ್ಮ ಮೂಲ ಸ್ಥಳಗಳಲ್ಲಿ ವಲಸೆಯು ನಿಯತವಾದ ವಿದ್ಯಮಾನವೆಂದು ನಂಬಿದ್ದರು. ಬೆಂಗಳೂರಿನ ಶೇಕಡಾ 87ಕ್ಕಿಂತ ಹೆಚ್ಚು ವಲಸಿಗ ಕಾರ್ಮಿಕರು ಮತ್ತು ಮೈಸೂರಿನ ಶೇಕಡಾ 90ಕ್ಕಿಂತ ಹೆಚ್ಚಿನವರು ತಮ್ಮ ಮೂಲ ಊರುಗಳಲ್ಲಿ ವಲಸೆಯು ಬಹಳ ಸಾಮಾನ್ಯ ಬದಲಾವಣೆ ಎಂದು ಒತ್ತಿ ಹೇಳಿದರು. ಉತ್ತರ ಕರ್ನಾಟಕದ ಎರಡು ಅಧ್ಯಯನದ ಸ್ಥಳಗಳಲ್ಲಿದ್ದ ಜಿಲ್ಲಾಂತರ್ಗತ ವಲಸಿಗರಲ್ಲಿ, ಕೊಪ್ಪಳದಲ್ಲಿನ ಶೇಕಡಾ 68 ಮತ್ತು ಯಾದಗಿರಿಯ ಶೇಕಡಾ 64 ವಲಸಿಗರೂ ಇದೇ ಚಿಂತನೆಯನ್ನು ಒಪ್ಪಿಕೊಂಡರು. ಉತ್ತರ ಕನ್ನಡದಿಂದ ಬಂದ ಗೋವಾದಲ್ಲಿರುವ ಶೇಕಡಾ 68ಕ್ಕಿಂತ ಹೆಚ್ಚಿನ ವಲಸಿಗರು ಸಹ, ತಮ್ಮ ಮೂಲ ಊರುಗಳಲ್ಲಿ ವಲಸೆ ಒಂದು ನಿಯತವಾದ ವಿದ್ಯಮಾನ ಎಂದು ಪರಿಗಣಿಸಿದರು. ಶೋಲಾಪುರದ ವಿಚಾರದಲ್ಲಿ, ಭಾಗವಹಿಸಿದ ಶೇಕಡಾ 50 ಜನ ಈ ಬೆಳವಣಿಗೆ ತಮ್ಮ ಮೂಲ ಸ್ಥಳಗಳಲ್ಲಿ ಪ್ರಸ್ತುತವಾಗಿದೆ ಎಂದರೂ, ಅವರಲ್ಲಿ ಶೇಕಡಾ 44 ಜನ ಹಾಗೆ ಯೋಚಿಸಲಿಲ್ಲ.

| ವಲಸೆ ಬಂದ ಸ್ಥಳ | ನಿಮ್ಮ ಮೂಲ ಸ್ಥಳದಲ್ಲಿ ವಲಸೆ ಸಾಮಾನ್ಯ ಅಥವಾ ನಿಯಮಿತವಾಗಿ ನಡೆಯುವ ವಿದ್ಯಮಾನವೇ? | | |
|---|---|---|---|
| | ಹೌದು | ಇಲ್ಲ | ಗೊತ್ತಿಲ್ಲ |
| ಕೊಪ್ಪಳ | 68% | 32% | 0% |
| ಯಾದಗಿರಿ | 64% | 36% | 0% |
| ಬೆಂಗಳೂರು | 87.11% | 2.66% | 10.22% |
| ಮೈಸೂರು | 90.24% | 4.87% | 4.87% |
| ಗೋವಾ | 54.6% | 22.5% | 22.8% |
| ಶೋಲಾಪುರ | 50% | 44% | 6% |

**ಸಾಮಾಜಿಕ ಆರ್ಥಿಕ ತಳ್ಳುವ ಅಂಶಗಳು**

ಪರಿಶಿಷ್ಟ ಜಾತಿಯಲ್ಲಿ ಕಾರ್ಮಿಕರ ವಲಸೆ ಬಹಳ ಸಾಮಾನ್ಯ ಮತ್ತು ಸಮಾಜದಲ್ಲಿ ಮುಂದುವರಿದ ಜಾತಿಗಳಲ್ಲಿ ಅಥವಾ ಇನ್ನುಳಿದ ವರ್ಗಗಳ (ಇತರೆ ಹಿಂದುಳಿದ ವರ್ಗಗಳ) ಅಡಿಯಲ್ಲಿ ಬರುವ ಜಾತಿಗಳಲ್ಲಿ ಸಾಮಾನ್ಯವಾಗಿರಲಿಲ್ಲ ಎಂದು ಆರು ಅಧ್ಯಯನದ ಸ್ಥಳಗಳಲ್ಲಿರುವ ಭಾಗವಹಿಸಿದವರು ಅಭಿಪ್ರಾಯಪಟ್ಟರು. ಇನ್ನುಳಿದ ವರ್ಗಗಳ ವಲಸಿಗರ ಕುರಿತಾದ ಈ ಪರಿಕಲ್ಪನೆಯು, ಕರ್ನಾಟಕದಲ್ಲಿ ಹೊದಾಣಿಕೆಯಾಗಲಿಲ್ಲ, ಇಲ್ಲಿ ಇತರೆ ಹಿಂದುಳಿದ ವರ್ಗಗಳ ವಲಸಿಗರ ಪ್ರಮಾಣವು ಸಾಮಾಜಿಕವಾಗಿ ಮುಂದುವರಿದ ಜಾತಿಯ ವಲಸಿಗರಿಗಿಂತ ಶೇಕಡಾ 13 ಹೆಚ್ಚಾಗಿತ್ತು. ಅಧ್ಯಯನದಲ್ಲಿ ಭಾಗವಹಿಸಿದ ಸುಮಾರು ಶೇಕಡಾ 34 ಜನ ಪರಿಶಿಷ್ಟ ಜಾತಿಗಳಲ್ಲಿ ವಲಸೆಯು ಬಹಳ ಸಾಮಾನ್ಯ ಎಂದು ನಂಬಿದ್ದರು, ನಂತರ ಇತರೆ ಹಿಂದುಳಿದ ವರ್ಗಗಳ (ಶೇಕಡಾ 26) ಮತ್ತು ಪರಿಶಿಷ್ಟ ಪಂಗಡಗಳ (ಶೇಕಡಾ 25). ಭಾಗಿಯಾದವರಲ್ಲಿ ಸುಮಾರು ಶೇಕಡಾ 19 ಜನ ಸಾಮಾನ್ಯ ಜಾತಿಯಲ್ಲಿ ಇದು ಸಾಮಾನ್ಯವಾದ ವಿಚಾರ ಎಂದು ನಂಬಿದ್ದರು, ಆದಾಗ್ಯೂ, ಶೇಕಡಾ 51 ಹಾಗೆ ಅಂದುಕೊಂಡಿರಲಿಲ್ಲ.

| **ಜಾತಿ ವರ್ಗ** | **ಯಾವುದಾದರೂ ನಿರ್ದಿಷ್ಟ ಜಾತಿಯಲ್ಲಿ ಕಾರ್ಮಿಕರ ವಲಸೆ ಬಹಳ ಸಾಮಾನ್ಯವಾಗಿದೆಯೇ?** | | |
|---|---|---|---|
| | **ಹೌದು** | **ಇಲ್ಲ** | **ಗೊತ್ತಿಲ್ಲ** |
| **ಪರಿಶಿಷ್ಟ ಜಾತಿ** | **33.96%** | **44.33%** | **21.69%** |
| **ಪರಿಶಿಷ್ಟ ಪಂಗಡ** | **25%** | **52.5%** | **22.5%** |
| **ಇತರೆ ಹಿಂದುಳಿದ ವರ್ಗ** | **26.41%** | **37.73%** | **35.84%** |
| **ಇತರರು** | **18.9%** | **51.35%** | **29.74%** |

ಅಧ್ಯಯನದ ಎಲ್ಲ ಸ್ಥಳಗಳಲ್ಲಿರುವ ಭಾಗಿಗಳಾದ ಶೇಕಡಾ 60ಕ್ಕಿಂತ ಹೆಚ್ಚಿನವರು ತಾವು ಹೆಚ್ಚಿನ ವೇತನಕ್ಕಾಗಲೀ ಅಥವಾ ಹೆಚ್ಚಿನ ಜೀವನೋಪಾಯದ ಅವಕಾಶಗಳಿಗಾಗಲೀ ವಲಸೆ ಬಂದಿಲ್ಲ, ಬದಲು ಕೆಲಸ ಸಿಗಲಿಲ್ಲವೆಂಬ ಕಾರಣಕ್ಕಾಗಿ ಬಂದಿರುವುದೆಂದು ಅಭಿಪ್ರಾಯಪಟ್ಟರು. ವಾಸ್ತವವಾಗಿ, ಉತ್ತಮ ವೇತನ, ಜೀವನೋಪಾಯದ ಹೆಚ್ಚಿನ ಅವಕಾಶಗಳು ಮತ್ತು ಕಲ್ಯಾಣ

ಯೋಜನೆಗಳಂತಹ ಸೆಳೆವ ವಿಚಾರಗಳು ವಲಸೆಯ ಹಿಂದಿನ ಮುಖ್ಯ ಕಾರಣಗಳೆಂದು ಅನಿಸಲಿಲ್ಲ. ಭಾಗವಹಿಸಿದವರಲ್ಲಿ ಕರ್ನಾಟಕದ ಶೇಕಡಾ ಒಂದಕ್ಕಿಂತ ಕಡಿಮೆ ಮತ್ತು ಗೋವಾದ ಶೇಕಡಾ 2ಕ್ಕಿಂತ ಕಡಿಮೆ ಜನರು, ತಮ್ಮ ಮೂಲ ಸ್ಥಳಗಳಿಂದ ವಲಸೆ ಬರಲು ಜೀವನೋಪಾಯದ ಅವಕಾಶಗಳು ಬಹಳ ಸಾಮಾನ್ಯವಾದ ಕಾರಣವೆಂದು ಅಭಿಪ್ರಾಯಪಟ್ಟರು. ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಅಂತರ್–ಜಿಲ್ಲಾ ವಲಸಿಗರನ್ನು ಹೊರತುಪಡಿಸಿ, ಅಧ್ಯಯನದ ಎಲ್ಲ ಸ್ಥಳಗಳಲ್ಲಿರುವ ಭಾಗವಹಿಸಿದ ಶೇಕಡಾ 64ಕ್ಕಿಂತ ಹೆಚ್ಚಿನವರು, ಕೆಲಸ ಸಿಗದಿರುವುದೇ ಸ್ಪಷ್ಟವಾಗಿ ವಲಸೆಗೆ ತಳ್ಳುವ ವಿಚಾರವಾಗಿದೆಯೆಂದು ಅಭಿಪ್ರಾಯಪಟ್ಟರು. ಉತ್ತರ ಕರ್ನಾಟಕದ ಕೆಲಸಗಾರರು ತಮ್ಮ ಜಿಲ್ಲೆಗಳಿಗಿಂತ, ಬೇರೆ ಜಿಲ್ಲೆಗಳು ಅಥವಾ ರಾಜ್ಯಗಳಿಗೆ ವಲಸೆ ಹೋಗಲು ಆದ್ಯತೆ ನೀಡುತ್ತಾರೆಂದು, ದಕ್ಷಿಣ ಕರ್ನಾಟಕ, ಗೋವಾ ಮತ್ತು ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದಿಂದ ಬಂದ ವಲಸಿಗರ ಮಾಹಿತಿಯು ತೋರಿಸುತ್ತದೆ. ವಾಸ್ತವವಾಗಿ, ಉತ್ತರ ಕನಾಟಕದ ಜನತೆ, ತಮ್ಮ ರಾಜ್ಯದ ದಕ್ಷಿಣದಲ್ಲಿರುವ ನಗರಗಳಾದ ಬೆಂಗಳೂರು ಮತ್ತು ಮೈಸೂರಿನ ಬದಲು, ಮಹರಾಷ್ಟ್ರ, ಗೋವಾ ಮತ್ತು ಆಂಧ್ರ ಪ್ರದೇಶದಂತಹ ನೆರೆ ರಾಜ್ಯಗಳಿಗೆ ವಲಸೆ ಹೋಗಲು ಇಚ್ಛಿಸುತ್ತಾರೆ.

| ವಲಸೆ ಬಂದ ಸ್ಥಳ | ನಿಮ್ಮ ಮೂಲಸ್ಥಾನದಿಂದ ಹೊರ ವಲಸೆ ಹೋಗಲು ಕಾರಣ? | | | | | | | |
|---|---|---|---|---|---|---|---|---|
| | ಕೆಲಸ ಇಲ್ಲದಿರುವುದು | ಬೆಳೆ ನಷ್ಟ | ಬರಗಾಲ | ಸಾಲ ಮರುಪಾವತಿ | ಉತ್ತಮ ವೇತನ | ಜೀವನೋಪಾಯದ ಹೆಚ್ಚಿನ ಅವಕಾಶಗಳು | ಕಾರ್ಮಿಕರಿಗೆ ಉತ್ತಮ ಕಲ್ಯಾಣ ಯೋಜನೆಗಳು | ಉಳಿದವು |
| **ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸೆ** | **56.5%** | **2.64%** | **4.4%** | **2.16%** | **3.72%** | **26.2%** | **4.3%** | **0%** |
| **ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ವಲಸಿಗರು** | **72.16%** | **3.18%** | **1.36%** | **2.86%** | **8.86%** | **4.42%** | **2.11%** | **5.05%** |
| **ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬೇರೆ ರಾಜ್ಯಗಳ ವಲಸಿಗರು** | **65.77%** | **0%** | **0%** | **7.77%** | **12.74%** | **13.7%** | **0%** | **0%** |
| **ಗೋವಾದಲ್ಲಿರುವ ಉತ್ತರ ಬೆಳಗಾವಿ ಮತ್ತು ಉತ್ತರ ಕನ್ನಡದ ವಲಸಿಗರು** | **64.7%** | **1.96%** | **15.64%** | **5.02%** | **4.74%** | **0.83%** | **0.55%** | **0%** |
| **ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ವಲಸಿಗರು** | 94% | 6% | **0%** | **0%** | **0%** | **0%** | **0%** | **0%** |

ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಶೇಕಡಾ 57 ಜಿಲ್ಲಾಂತರ್ಗತ ವಲಸಿಗರು, ಕೆಲಸ ಇಲ್ಲದಿರುವುದೇ ತಮ್ಮ ಹಳ್ಳಿಗಳಿಂದ ವಲಸೆ ಬರಲು ಮುಖ್ಯ ಕಾರಣ ಎಂದು ಗುರುತಿಸಿದರು. ಆದಾಗ್ಯೂ, ತಮ್ಮ ಮೂಲ ಸ್ಥಳಗಳಿಂದ ಅಂತರ್–ಜಿಲ್ಲೆ ಮತ್ತು ಅಂತರ್–ರಾಜ್ಯ ವಲಸೆಯು ಬಹಳ ಸಾಮಾನ್ಯ ಎಂದು ಒತ್ತಿ ಹೇಳಿದರು. ಅವರ ಜೊತೆಯವರು ಬೇರೆ ಜಿಲ್ಲೆಗಳಿಗೆ ಮತ್ತು / ಅಥವಾ ರಾಜ್ಯಗಳಿಗೆ ವಲಸೆ ಹೋದರೂ, ಜಿಲ್ಲಾಂತರ್ಗತ ವಲಸಿಗರಲ್ಲಿ ಶೇಕಡಾ 26ಕ್ಕಿಂತ ಹೆಚ್ಚಿನವರು ಯಾದಗಿರಿ ಮತ್ತು ಕೊಪ್ಪಳದಿಂದ ವಲಸೆ ಹೋಗಲು ಹೆಚ್ಚಿನ ಜೀವನೋಪಾಯದ ಅವಕಾಶಗಳೇ ಬಹಳ ಸಾಮಾನ್ಯವಾದ ಕಾರಣ ಎಂದು ಅಭಿಪ್ರಾಯ ಪಟ್ಟರು.

ಕೊಪ್ಪಳದ ಒಂದು ಮತ್ತು ಯಾದಗಿರಿಯ ಮೂರು ಇಟ್ಟಿಗೆ ಭಟ್ಟಿಗಳಲ್ಲಿ ಕೆಲಸ ಮಾಡುತ್ತಿದ್ದ ವಲಸಿಗರನ್ನು ಹೊರತುಪಡಿಸಿ, ಹೆಚ್ಚಿನ ಜಿಲ್ಲಾಂತರ್ಗತ ವಲಸಿಗರು, ತಮ್ಮ ಮೂಲ ಹಳ್ಳಿಗಳಲ್ಲಿ ಕೆಲಸ ಇಲ್ಲದಿದ್ದಾಗ ಅಥವಾ ನಗರಗಳಲ್ಲಿ ಕೆಲಸದ ಹೆಚ್ಚಿನ ಅವಕಾಶಗಳು ಬಂದಾಗ ತಮ್ಮ ಜಿಲ್ಲೆಯ ನಗರ ಪ್ರದೇಶಕ್ಕೆ ವಲಸೆ ಹೋಗುವ ಕಾಲೋಚಿತ ವಲಸಿಗರಾಗಿದ್ದಾರೆ. ಸಾಮಾನ್ಯವಾಗಿ ಗುತ್ತಿಗೆದಾರರ ಮೂಲಕ ಸಂಭಾವ್ಯ ಉದ್ಯೋಗದಾತರು ಅವರನ್ನು ಸಂಪರ್ಕಿಸುತ್ತಾರೆ ಮತ್ತು ಕೆಲವೊಮ್ಮೆ ಅವರ ಸಂಬಂಧಿಕರ ಮೂಲಕ ಅಥವಾ ಜಿಲ್ಲೆಯ ಮುಖ್ಯ ಪಟ್ಟಣದಲ್ಲಿ ನೆಲೆಸಿರುವ ಅವರ ಪರಿಚಯದವರ ಮೂಲಕ ಸಂಪರ್ಕಿಸುತ್ತಾರೆ.

ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಉತ್ತರ ಕನ್ನಡದಲ್ಲಿರುವ ಅಧ್ಯಯನದ ಎರಡು ಜಿಲ್ಲೆಗಳ ಶೇಕಡಾ 72 ವಲಸಿಗ ಕಾರ್ಮಿಕರು, ಕೆಲಸ ಇಲ್ಲದಿರುವುದನ್ನು ಗಮನಿಸಿದರು, ಹಾಗೂ ಸುಮಾರು ಶೇಕಡಾ 9 ಜನರು ಉತ್ತಮ ವೇತನವೇ ತಮ್ಮ ಮೂಲ ಸ್ಥಳಗಳಿಂದ ಕಾರ್ಮಿಕರ ಹೊರ ಹರಿವಿಗೆ ಸಾಮಾನ್ಯ ಕಾರಣವೆಂದು ನಂಬಿದರು. ಆಶ್ಚರ್ಯಕರವಾಗಿ, ತಮ್ಮ ಮೂಲ ಸ್ಥಳಗಳಿಂದ ಕಾರ್ಮಿಕರು ವಲಸೆ ಬರಲು ಉತ್ತಮ ಕಲ್ಯಾಣ ಯೋಜನೆಗಳೇ ಸೆಳೆಯುವ ವಿಚಾರಗಳಾಗಿವೆ ಎಂದು ಯಾದಗಿರಿ ಮತ್ತು ಕೊಪ್ಪಳದ ಕೆಲವು ವಲಸಿಗರು ಸೂಚಿಸಿದರು. ಈ ವಲಸಿಗರು ಬೆಂಗಳೂರು ಮತ್ತು ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದವರು ಮಾತ್ರವಲ್ಲ, ತಮ್ಮ ಮೂಲ ಜಿಲ್ಲೆಯ ಮುಖ್ಯ ಪಟ್ಟಣ/ನಗರ ಪ್ರದೇಶದ ಒಳಗಡೆ ಕೆಲಸ ಮಾಡುತ್ತಿದ್ದರು. ಬೆಂಗಳೂರು ಮತ್ತು ಮ್ಯಸೂರಿನಲ್ಲಿರುವ ಶೇಕಡಾ 2ಕ್ಕಿಂತ ಹೆಚ್ಚು ಅಂತರ್–ಜಿಲ್ಲಾ ವಲಸಿಗರಿಗೆ ಹೋಲಿಸಿದರೆ, ಶೇಕಡಾ 4 ಜಿಲ್ಲಾಂತರ್ಗತ ವಲಸಿಗರು ತಮ್ಮ ಮೂಲ ಜಿಲ್ಲೆಯಿಂದ ವಲಸೆ ಬರಲು ಉತ್ತಮ ಕಲ್ಯಾಣ ಯೋಜನೆಗಳು ಕಾರಣ ಎಂದರು. ಯಾದಗಿರಿ ಮತ್ತು ಕೊಪ್ಪಳದ (ಅಂತರ್–ಜಿಲ್ಲಾ

ಮತ್ತು ಜಿಲ್ಲಾಂತರ್ಗತ ಎರಡಕ್ಕೂ) ವಲಸಿಗರನ್ನು ಹೊರತುಪಡಿಸಿ ಗೋವಾದಲ್ಲಿರುವ ಇಬ್ಬರು, ತಮ್ಮ ಮೂಲ ಸ್ಥಳಗಳಿಂದ ಕಾರ್ಮಿಕರು ವಲಸೆ ಬರಲು ಉತ್ತಮ ಕಲ್ಯಾಣ ಯೋಜನೆಗಳೇ ಸಾಮಾನ್ಯ ಕಾರಣಗಳಾಗಿವೆ ಎಂದು ಅಭಿಪ್ರಾಯಪಟ್ಟರು. ಬೆಂಗಳೂರು ಮತ್ತು ಮೈಸೂರಿಗೆ ಬರುವ ಬೇರೆ ರಾಜ್ಯಗಳ ವಲಸಿಗರು ಕೂಡ, ತಮ್ಮ ವಲಸೆಯ ತಾಣಕ್ಕೆ ಸೆಳೆಯುವ ಮುಖ್ಯವಾದ ಅಥವಾ ಬಹಳ ಸಾಮಾನ್ಯವಾದ ವಿಚಾರ ಅದು ಎಂದು ಪರಿಗಣಿಸಲಿಲ್ಲ. ದಕ್ಷಿಣ ಕರ್ನಾಟಕದಲ್ಲಿರುವ ಶೇಕಡಾ 67 ಅಂತರ್-ರಾಜ್ಯ ವಲಸಿಗರು, ಕೆಲಸ ಇಲ್ಲದೇ ಇರುವುದು ವಲಸೆಗೆ ಬಹಳ ಸಾಮಾನ್ಯ ಕಾರಣ ಎಂದು ಅಭಿಪ್ರಾಯಪಟ್ಟರು, ಅವರಲ್ಲಿ ಸುಮಾರು ಶೇಕಡಾ 27 ಜನ ಬೆಂಗಳೂರು ಮತ್ತು ಮೈಸೂರಿನಲ್ಲಿ, ಜೀವನೋಪಾಯದ ಹೆಚ್ಚಿನ ಅವಕಾಶವನ್ನು ಬಹಳ ಆಕರ್ಷಕವಾದ ಸೆಳೆಯುವ ಅಂಶವಾಗಿ ಗುರುತಿಸಿದರು. ಅವರಲ್ಲಿ ಸುಮಾರು ಶೇಕಡಾ 8 ಜನ, ಸಾಲವನ್ನು ತೀರಿಸುವ ಉದ್ದೇಶದಿಂದ ತಮ್ಮ ಮೂಲ ಸ್ಥಳದಿಂದ ಕಾರ್ಮಿಕರು ಅಲ್ಲಿಗೆ ವಲಸೆ ಬಂದಿದ್ದಾರೆಂದು ತಿಳಿದಿದ್ದರು. ಯಾದಗಿರಿ ಮತ್ತು ಕೊಪ್ಪಳದಿಂದ ಬಂದ ಶೇಕಡಾ 97 ಕ್ಕಿಂತ ಹೆಚ್ಚಿನ ವಲಸಿಗರು, ಸಾಲ ತೀರಿಸುವುದನ್ನು ಬಹಳ ಸಾಮಾನ್ಯವಾದ ಸೆಳೆಯುವ ವಿಚಾರವಾಗಿ ಗುರುತಿಸಲಿಲ್ಲ. ಗೋವಾದಲ್ಲಿರುವ ಸುಮಾರು ಶೇಕಡಾ 5 ವಲಸಿಗರು ಸಹ ಸಲ ತೀರಿಸುವುದನ್ನು ಒಂದು ಮುಖ್ಯ ಸಾಮಾನ್ಯ ತಳ್ಳುವ ವಿಚಾರವೆಂದು ಗುರುತಿಸಿದರು.

ಗೋವಾದಲ್ಲಿರುವ (ಶೇಕಡಾ 17) ಮತ್ತು ಶೋಲಾಪುರದಲ್ಲಿರುವ (ಶೇಕಡಾ 6) ಕೆಲವು ಉತ್ತರ ಕರ್ನಾಟಕದ ವಲಸಿಗರು, ತಮ್ಮ ಮೂಲ ಸ್ಥಳಗಳಲ್ಲಿನ ಬರಗಾಲ ಮತ್ತು ಬೆಳೆಯ ವೈಫಲ್ಯ ಪ್ರಬಲವಾದ ನೂಕು ಅಂಶವೆಂದು ಪರಿಗಣಿಸಿದರು. ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಸುಮಾರು ಶೇಕಡಾ 4 ಜಿಲ್ಲಾಂತರ್ಗತ ವಲಸಿಗರು ಬರಗಾಲವು ವಲಸೆಗೆ ಬಹಳ ಸಾಮಾನ್ಯವಾದ ಕಾರಣವೆಂದು ಸೂಚಿಸಿದರು, ಇದೇ ಜಿಲ್ಲೆಯಿಂದ ಬಂದು ತಮ್ಮ ಮೂಲ ಜಿಲ್ಲೆಯೊಳಗೆ ಅಥವಾ ಬೆಂಗಳೂರು/ಮೈಸೂರಿನಲ್ಲಿ ಕೆಲಸ ಮಾಡುತ್ತಿರುವ ಸುಮಾರು ಶೇಕಡಾ 6 ವಲಸಿಗರು, ಬೆಳೆ ವೈಫಲ್ಯವೇ ಜಿಲ್ಲೆಯ ಸಾಮಾನ್ಯ ತಳ್ಳುವ ಅಂಶವೆಂದು ಗುರುತಿಸಿದರು. ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್-ರಾಜ್ಯ ವಲಸಿಗರಾರೂ ಬರಗಾಲ, ಬೆಳೆ ವೈಫಲ್ಯ ಮತ್ತು ಉತ್ತಮ ಕಲ್ಯಾಣ ಯೋಜನೆಗಳನ್ನು, ತಮ್ಮ ಮೂಲ ಸ್ಥಳಗಳಲ್ಲಿ ಬಹಳ ಸಾಮಾನ್ಯವಾದ ತಳ್ಳು/ಸೆಳೆ ವಿಚಾರಗಳಾಗಿವೆಯೆಂದು ಗುರುತಿಸಲಿಲ್ಲ. ಕರ್ನಾಟಕದಿಂದ ಹೊರಗೆ ಮತ್ತು ಕರ್ನಾಟಕಕ್ಕೆ ಕಾರ್ಮಿಕರ ವಲಸೆಯಲ್ಲಿ, ಸೆಳೆಯುವ ಆಕರ್ಷಕ ಅಂಶಗಳಿಗಿಂತ, ತಳ್ಳುವ ವಿಚಾರಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದು ಅಧ್ಯಯನದ ತೀರ್ಮಾನಗಳು ತೋರಿಸುತ್ತವೆ. ಕೆಲಸ ಸಿಗಲಿಲ್ಲವೆಂದು ಸಾಮಾನ್ಯವಾಗಿ ಕಾರ್ಮಿಕರು ವಲಸೆಹೋಗುತ್ತಾರೆ. ಕೆಲಸ ದೊರೆಯದಿರುವುದೇ ಕರ್ನಾಟಕದಿಂದ ಹೊರಗೆ ಮತ್ತು ಕರ್ನಾಟಕಕ್ಕೆ ಕಾರ್ಮಿಕರ ವಲಸೆಗೆ ಅನಿವಾರ್ಯವಾದ ಕಾರಣವಾಗಿ ಕಂಡುಬರುತ್ತದೆ.

**ತಳ್ಳುವ ಮತ್ತು ಸೆಳೆಯುವ ಅಂಶಗಳ ಕುರಿತು ಭಾಗವಹಿಸಿದವರ ಗ್ರಹಿಕೆ**

ವಲಸೆಯ ಸಾಮಾನ್ಯ ಕಾರಣದ ಕುರಿತು ಭಾಗವಹಿಸಿದವರ ಒಟ್ಟಾರೆ ಪ್ರತಿಕ್ರಿಯೆಯು, ವಿವಿಧ ಜಾತಿ ವರ್ಗಗಳ ಬಹಳ ಸಾಮಾನ್ಯವಾದ ತಳ್ಳುವ ಅಂಶಗಳ ಕುರಿತಾಗಿ ಮೂಲಸ್ಥಳದಲ್ಲಿರುವವರ ಗ್ರಹಿಕೆಯ ಜೊತೆಗೆ ಹೊಂದಾಣಿಕೆ ಆಗಲಿಲ್ಲ. ಭಾಗವಹಿಸಿದ ಶೇಕಡಾ 97 ಜನ ತಮ್ಮ ಮೂಲ ಸ್ಥಳದಿಂದ ವಲಸೆ ಹೋಗಲು ಜೀವನೋಪಾಯದ ಅವಕಾಶದ ಕಾರಣವನ್ನು ಒಪ್ಪಲಿಲ್ಲ, ಅವರ ಮೂಲ ಸ್ಥಳದಲ್ಲಿದ್ದ ಸಮಾಜದಲ್ಲಿ ಮುಂದವರಿದ ಜಾತಿಯ ಜನರು ಈ ಸಾಮಾನ್ಯ ಕಾರಣಕ್ಕೆ ವಲಸೆ ಹೋಗುತ್ತಾರೆಂದು ಶೇಕಡಾ 65 ಜನ ನಿರ್ಧರಿಸಿದರು. ಅವರ ಮೂಲ ಸ್ಥಳದ ಸಮುದಾಯದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಲ್ಲಿ ಇದು ವಲಸೆಗೆ ಬಹಳ ಸಾಮಾನ್ಯ ಕಾರಣವೆಂದು, ಕ್ರಮವಾಗಿ ಶೇಕಡ45 ಮತ್ತು ಶೇಕಡಾ 53 ಜನ ಗುರುತಿಸಿದರು. ಈ ವಿಚಾರವು ಇತರೆ ಹಿಂದುಳಿದ ವರ್ಗದವರಲ್ಲಿ ಬಹಳ ಸಾಮಾನ್ಯ ಕಾರಣವೆಂದು, ಅವರ ಮೂಲ ಸ್ಥಳದಲ್ಲಿರುವ ಶೇಕಡಾ 35 ಭಾಗವಹಿಸಿದವರು ತಿಳಿಸಿದರು.

ಸಾಲ ಮರು ಪಾವತಿಯು ಸಾಮಾನ್ಯ ತಳ್ಳುವ ವಿಚಾರವೆಂದು ಕರ್ನಾಟಕದಲ್ಲಿ ಭಾಗವಹಿಸಿದಂತಹ ಕೇವಲ ಶೇಕಡಾ 5ಕ್ಕಿಂತ ಸ್ವಲ್ಪ ಹೆಚ್ಚಿನ ಜನರು ಗುರುತಿಸಿದರು, ಆದರೆ ಗೋವಾ ಮತ್ತು ಶೋಲಾಪುರದಲ್ಲಿ ಭಾಗವಹಿಸಿದ ಒಬ್ಬರೂ ಸಾಲವು ವಲಸೆಯ ಹಿಂದಿರುವ ಬಲವಂತಪಡಿಸುವ ಕಾರಣವೆಂದು ಗುರುತಿಸಲಿಲ್ಲ. ಆದರೆ, ತಮ್ಮ ಮೂಲಸ್ಥಳದಲ್ಲಿರುವ ಪರಿಶಿಷ್ಟ ಜಾತಿಯವರಿಗೆ ಸಾಲವು ಮುಖ್ಯವಾದ ತಳ್ಳುವ ಅಂಶವೆಂದು ಒಟ್ಟು ಭಾಗವಹಿಸಿದ ಶೇಕಡಾ 31 ಜನ ನಂಬಿದರು ಹಾಗೂ ಒಟ್ಟು ಭಾಗವಹಿಸಿದವರಲ್ಲಿ ಶೇಕಡಾ 13 ಜನ ಇತರೆ ಹಿಂದುಳಿದ ವರ್ಗದವರಲ್ಲಿ ಇದು ಬಹಳ ಸಾಮಾನ್ಯವೆಂದು ಯೋಚಿಸಿದರು. ಸುಮಾರು ಶೇಕಡಾ 7 ಭಾಗವಹಿಸಿದವರು ತಮ್ಮ ಮೂಲ ಸ್ಥಳದಲ್ಲಿ, ಪರಿಶಿಷ್ಟ ಪಂಡದವರು ಸಮುದಾಯದಲ್ಲಿ ಸಾಲ ಮರು ಪಾವತಿಯು ವಲಸೆಗೆ ಬಹಳ ಪ್ರಬಲ ಕಾರಣವೆಂದು ಅಭಿಪ್ರಾಯಪಟ್ಟರು. ಭಾಗವಹಿಸಿದವರಲ್ಲಿ ಬಹಳ ಕಡಿಮೆ ಪ್ರಮಾಣದವರು

ಬೆಳೆ ಹಾನಿ ಮತ್ತು ಉತ್ತಮ ಕಲ್ಯಾಣ ಯೋಜನೆಗಳು ಎಲ್ಲ ಜಾತಿಯವರೂ ವಲಸೆ ಹೋಗಲು ಹಿಂದಿರುವ ಬಹಳ ಸಾಮಾನ್ಯವಾದ ಕಾರಣ ಎಂದು ಗುರುತಿಸಿದರು.

| ಜಾತಿ ವರ್ಗ | ನಿಮ್ಮ ಮೂಲ ಸ್ಥಳದಲ್ಲಿ ಬೇರೆ ಬೇರೆ ಜಾತಿ ವರ್ಗಗಳಿಗಿರುವ ಬಹಳ ಸಾಮಾನ್ಯವಾದ ತಳ್ಳುವ ಅಂಶ | | | | | | |
|---|---|---|---|---|---|---|---|
| | ಉತ್ತಮ ವೇತನ | ಜೀವನೋಪಾಯದ ಹೆಚ್ಚಿನ ಅವಕಾಶಗಳು | ಬರಗಾಲ | ಸಾಲ ಮರುಪಾವತಿ | ಬೆಳೆ ನಷ್ಟ | ಕಾರ್ಮಿಕರಿಗೆ ಉತ್ತಮ ಕಲ್ಯಾಣ ಯೋಜನೆಗಳು | ಇತರೆ |
| **ಪರಿಶಿಷ್ಟ ಜಾತಿ** | **8.79%** | **43.95%** | **7.69%** | **30.76%** | **6.59%** | **2.19%** | **0%** |
| **ಪರಿಶಿಷ್ಟ ಪಂಗಡ** | **6.6%** | **53.33%** | **6.6%** | **26.6%** | **0%** | **6.6%** | **0%** |
| **ಇತರೆ ಹಿಂದುಳಿದ ವರ್ಗ** | **5%** | **35%** | **42.5%** | **12.5%** | **2.5%** | **0%** | **0%** |
| **ಇತರರು** | **8.69%** | **65.21%** | **13.04%** | **13.04%** | **0%** | **0%** | **0%** |

ಹೀಗೆ ತಮ್ಮ ಮೂಲ ಸ್ಥಳದ ಸಾಮಾನ್ಯ ತಳ್ಳುವ ವಿಚಾರದ ಕುರಿತು ಭಾಗವಹಿಸಿದವರ ಪ್ರತಿಕ್ರಿಯೆ ಮತ್ತು ಅದರ ಗ್ರಹಿಕೆ ಮತ್ತು ಅವರ ಮೂಲ ಸ್ಥಳದ ಹಲವಾರು ಜಾತಿ ವರ್ಗಗಳ ಸಾಮಾನ್ಯ ತಳ್ಳುವ ಅಂಶಗಳು ಬಹಳ ವೈವಿಧ್ಯಮಯವಾಗಿದ್ದವು. ಉಳಿದೆಲ್ಲ ಜಾತಿ ವರ್ಗಗಳಿಗೆ ಹೋಲಿಸಿದರೆ ಇತರೆ ಹಿಂದುಳಿದ ವರ್ಗದವರಿಗೆ, ಜೀವನೋಪಾಯದ ಅವಕಾಶಗಳ ದೊರಕುವಿಕೆ ಅವರ ವಲಸೆಯ ಹಿಂದಿರುವ ಬಹಳ ಸಾಮಾನ್ಯ ಕಾರಣವಾಗಿ ಕಂಡುಬಂತು. ಅಧ್ಯಯನದಲ್ಲಿ ಭಾಗವಹಿಸಿದ ಮೂಲ ಸ್ಥಳದಲ್ಲಿರುವ ಶೇಕಡಾ 45 ಪರಿಶಿಷ್ಟ ಜಾತಿಯವರಿಗೆ, ಶೇಕಡಾ 53 ಪರಿಶಿಷ್ಟ ಪಂಡದವರಿಗ ಮತ್ತು ಶೇಕಡಾ 65 ಸಾಮಾನ್ಯ ವರ್ಗದ ಜನರಿಗೆ ಇದು ಬಹಳ ಸಾಮಾನ್ಯ ಸೆಳೆಯುವ ವಿಚಾರವಾಗಿ ಕಂಡುಬಂತು. ಅವರಲ್ಲಿ ಸುಮಾರು ಶೇಕಡಾ 42 ಜನ, ತಮ್ಮ ಮೂಲ ಸ್ಥಳಗಳಲ್ಲಿರುವ ಇತರೆ ಹಿಂದುಳಿದ ವರ್ಗದವರಿಗೆ ಬರಗಾಲವೇ ಅವರ ವಲಸೆಯ ಹಿಂದಿನ ಬಹಳ ಸಾಮಾನ್ಯ ಕಾರಣವಾಗಿತ್ತೆಂದು ಸೂಚಿಸಿದರು. ಅವರಲ್ಲಿ ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ಪಂಡದವರಲ್ಲಿ ಈ ಕಾರಣವು ಸಾಮಾನ್ಯವಾಗಿ ತಳ್ಳುವ ಅಂಶವಾಗಿತ್ತೆಂದು ಕ್ರಮವಾಗಿ ಕೇವಲ ಶೇಕಡಾ 8 ಮತ್ತು ಶೇಕಡಾ 7 ಜನ ಗುರುತಿಸಿದರು. ಶೇಕಡಾ 13 ಭಾಗವಹಿಸಿದವರು, ತಮ್ಮ ಮೂಲ ಊರುಗಳಲ್ಲಿನ ಸಾಮಾನ್ಯ ವರ್ಗದವರಿಗೆ ಕಡ್ಡಾಯವಾಗಿ ವಲಸೆ ಹೋಗಲು ಬರಗಾಲವು ಹಿಂದಿರುವ ಕಾರಣವಾಗುತ್ತದೆಂದು ಅಭಿಪ್ರಾಯಪಟ್ಟರು.

**ಕರ್ನಾಟಕದಲ್ಲಿ ತಳ್ಳುವ ಮತ್ತು ಸೆಳೆಯುವ ಅಂಶಗಳ ಮೇಲೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪರಿಣಾಮ**

ಗ್ರಾಮೀಣ ಭಾರತದಲ್ಲಿ ಉದ್ಯೋಗಾವಕಾಶವನ್ನು ಸೃಷ್ಟಿಸಲು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವನ್ನು ಪ್ರಾರಂಭಿಸಲಾಯಿತು, ಅದರೆ ಬೆಂಗಳೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ವಲಸಿಗರಿಗೆ ಈ ಯೋಜನೆಯ ಕುರಿತು ಅರಿವಿರಲಿಲ್ಲವೆಂದು ಪ್ರಾಯೋಗಿಕ ಅಧ್ಯಯನದ ಸಂದರ್ಭದಲ್ಲಿ ತಿಳಿದುಬಂತು. ಮತ್ತೊಂದೆಡೆ, ಅಧ್ಯಯನದಲ್ಲಿ ಭಾಗವಹಿಸಿದ ಬೇರೆ ರಾಜ್ಯಗಳಿಂದ ಬಂದ ಬಹಳಷ್ಟು ಜನ, ಗ್ರಾಮೀಣ ಪ್ರದೇಶದಲ್ಲಿ 100 ದಿನಗಳ ಕಾಲ ಖಾತ್ರಿ ಉದ್ಯೋಗವನ್ನು ಕಲ್ಪಿಸಲು ಉದ್ದೇಶಿಸಿರುವ, ಸರಕಾರದ ಈ ಮಹತ್ವಾಕಾಂಕ್ಷಿ ಯೋಜನೆಯ ಕುರಿತು ಚರ್ಚಿಸಿದರು. ಆದರೆ ಕರ್ನಾಟಕದಲ್ಲಿರುವ ಜಿಲ್ಲಾಂತರ್ಗತ, ಅಂತರ್–ಜಿಲ್ಲಾ ಮತ್ತು ಅಂತರ್–ರಾಜ್ಯ ವಲಸಿಗರಲ್ಲಿ, ಈ ಕಾರ್ಯಕ್ರಮದ ಕುರಿತು ಅರಿವು ಸುಮಾರು ಅದೇ ಮಟ್ಟದಲ್ಲಿ ಇರುವುದನ್ನು ಅಂತಿಮ ಸಮೀಕ್ಷೆಯು ತೋರಿಸಿತು.

| ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಕುರಿತು ನೀವು ಕೇಳಿದ್ದೀರಾ? | | |
|---|---|---|
| ವಲಸೆ ಬಂದ ಸ್ಥಳ | ಹೌದು | ಇಲ್ಲ |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸೆ | 22% | 78% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ವಲಸಿಗರು | 22.32% | 77.68% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬೇರೆ ರಾಜ್ಯಗಳ ವಲಸಿಗರು | 23.52% | 76.46% |
| ಗೋವಾದಲ್ಲಿರುವ ಉತ್ತರ ಬೆಳಗಾವಿ ಮತ್ತು ಉತ್ತರ ಕನ್ನಡದ ವಲಸಿಗರು | 50.98% | 49.01% |
| ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ವಲಸಿಗರು | 28% | 72% |

ಬೇರೆ ರಾಜ್ಯಗಳ ವಲಸೆಯ ಗಮ್ಯ ಸ್ಥಾನಗಳನ್ನು ಗಮನಿಸಿದಾಗ, ಶೋಲಾಪುರದಲ್ಲಿರುವ ಶೇಕಡಾ 28ಕ್ಕೆ ಹೋಲಿಸಿದರೆ, ಗೋವಾದಲ್ಲಿರುವ ಸುಮಾರು ಶೇಕಡಾ 51 ವಲಸಿಗರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಕುರಿತು ಕೇಳಿದ್ದರು. ಬಹಳಷ್ಟು ಜನರು ಇದನ್ನು ಜೀವನೋಪಾಯದ ಆಯ್ಕೆಯಾಗಿ ನೋಡದಿರುವುದೇ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಕುರಿತು ಜನರ ಅಜ್ಞಾನಕ್ಕೆ ಕಾರಣ ಎಂದು

ಕೇಂದ್ರೀಕೃತ ಗುಂಪು ಚರ್ಚೆ ಮತ್ತು ವಿಶದವಾದ ಸಂದರ್ಶನದ ಸಂದರ್ಭದಲ್ಲಿ, ಕೆಲವು ಕಾರಣಗಳು ಹೊರಬಂದವು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದಿಂದ ಬಹಳ ಅನುಕೂಲ ಪಡೆದ ಅತಿ ಹೆಚ್ಚು ಭಾಗವಹಿಸಿದವರಿದ್ದ ಸಮುದಾಯವೆಂದರೆ ಪರಿಶಿಷ್ಟ ಪಂಡದವರು ಶೇಕಡಾ 21ಕ್ಕಿಂತ ಸ್ವಲ್ಪ ಹೆಚ್ಚಿಗೆ ಇದ್ದರೆ, ಇವರ ನಂತರ ಇತರೆ ಜಾತಿಯವರು ಸುಮಾರು ಶೇಕಡಾ 15 ಇದ್ದರು. ಆದಾಗ್ಯೂ, ಐದು ಜಾತಿ ವರ್ಗಗಳನ್ನೊಳಗೊಂಡಂತಹ ಭಾಗವಹಿಸಿದವರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಯಾವುದೇ ಕೆಲಸವನ್ನು ಪಡೆಯದವರು ಶೇಕಡಾ 78 ರಿಂದ ಶೇಕಡಾ 95 ರಷ್ಟಿದ್ದರೆಂದು ಕೆಳಗಿನ ಪಟ್ಟಿ ತೋರಿಸುತ್ತದೆ.

| ಜಾತಿ ವರ್ಗ | ಈ ಕಾರ್ಯಕ್ರಮದ (ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ) ಮೂಲಕ ನಿಮಗೆ ಯಾವಾಗಲಾದರೂ ಕೆಲಸ ಸಿಕ್ಕಿದೆಯೇ? | |
|---|---|---|
| | ಹೌದು | ಇಲ್ಲ |
| ಪರಿಶಿಷ್ಟ ಜಾತಿ | 10.1 | 89.89 |
| ಪರಿಶಿಷ್ಟ ಪಂಗಡ | 21.02 | 78.94 |
| ಇತರೆ ಹಿಂದುಳಿದ ವರ್ಗ | 5.17 | 94.82 |
| ಉಳಿದವರು | 14.58 | 85.49 |

ಉಳಿದವರು ವಿಶದವಾದ ಸಂದರ್ಶನ ಮತ್ತು ಕೇಂದ್ರೀಕೃತ ಗುಂಪು ಚರ್ಚೆಯ ಸಂದರ್ಭದಲ್ಲಿ ಅಧ್ಯಯನದಲ್ಲಿ ಭಾಗವಹಿಸಿದ ಕರ್ನಾಟಕದವರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಕುರಿತು ಅದು ಪರಿಣಾಮಕಾರಿಯಾದ ಕಾರ್ಯಕ್ರಮವಲ್ಲವೆಂಬ ತಮ್ಮ ಸಾಮಾನ್ಯವಾದ ಗ್ರಹಿಕೆ ಹಂಚಿಕೊಂಡರು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿ ಜನರು ರೂ.224 ವೇತನ ಪಡೆಯುತ್ತಾರೆ, ಆದರೆ ಕೇವಲ ಮಹಿಳಾ ಕಾರ್ಮಿಕರೇ ದಿನಕ್ಕೆ ಅದಕ್ಕಿಂತ ಹೆಚ್ಚು ಸಂಪಾದಿಸುತ್ತಾರೆಂದು, ಅಧ್ಯಯನದಲ್ಲಿ ಭಾಗಿಗಳಾದ ಯಾದಗಿರಿ ಮತ್ತು ಕೊಪ್ಪಳದವರು ಗಮನಿಸಿದರು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಕೆಲಸ ಸಿಗಲು ನೋಂದಾಯಿಸಿಕೊಳ್ಳುವ ಮತ್ತು ಮಾಡಬೇಕಾದ ಅಧಿಕೃತ ಕಾರ್ಯವಿಧಾನಗಳ ಪ್ರಕ್ರಿಯೆಗಳು ಕ್ಲಿಷ್ಟಕರವಾದುದರಿಂದ ಮುಗಿಸುವುದಕ್ಕಿಂತ ಜನರು ಬೇರೆ ಕೆಲಸ ಮಾಡಲು ಆದ್ಯತೆ ನೀಡಿದರೆಂದು ಭಾಗವಹಿಸಿದಂತಹ ಕರ್ನಾಟಕದವರು ಗುರುತಿಸಿದರು. ಕಾರ್ಯರೂಪಕ್ಕೆ ತರಲಾಗದ ಅನುಷ್ಠಾನ ಪ್ರಕ್ರಿಯೆಯು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದಲ್ಲಿ ಅನುಷ್ಠಾನಗೊಳಿಸುವಾಗ ಹೆಚ್ಚಾಗಿ ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ ಎನ್ನುವುದು ಕರ್ನಾಟಕದಲ್ಲಿ ಈ ಯೋಜನೆ ಪರಿಣಾಮಕಾರಿಯಾಗಿ ಆಗದಿರುವುದಕ್ಕೆ ಇದು ಬಹಳ ನಿರ್ಣಾಯಕವಾದ ವಿಚಾರವಾಗಿದೆ ಎಂದು ತಿಳಿಸಿದರು. ಕೇಂದ್ರೀಕೃತ ಗುಂಪು ಚರ್ಚೆಯಲ್ಲಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದಡಿಯಲ್ಲಿ ಪ್ರಾದೇಶಿಕ ಸರಕಾರದ ಸಂಬಂಧಪಟ್ಟ ಅಧಿಕಾರಿಗಳಿಗೆ ಯಾವಾಗಲೂ ಕಟ್ಟಡ ನಿರ್ಮಾಣದ ನಿರ್ದಿಷ್ಟ ಗುರಿ ಇರುತ್ತದೆ ಎಂದು ಗುರುತಿಸಲಾಯಿತು. ಆದರೆ ಕಡಿಮೆ ವೇತನದ ಸಮಸ್ಯೆಯಿಂದಾಗಿ, ಜನರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವನ್ನು ಜೀವನೋಪಾಯದ ಅವಕಾಶಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಮುಖ್ಯವಾಗಿ ಪರಿಗಣಿಸುವುದಿಲ್ಲ ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಕೆಲಸಗಾರರನ್ನು ಹುಡುಕಿ ಕೆಲಸ ನಡೆಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕಷ್ಟವಾಗುತ್ತದೆ. ಕ್ರಮೇಣ, ಕೆಲಸ ಮುಗಿಸಲು ಅವರು ಯಂತ್ರಗಳನ್ನು ಬಳಸುತ್ತಾರೆ. ಕೆಲಸಗಾರರು ಅದರಲ್ಲೂ ಮಹಿಳೆಯರಿಗೆ, ವೇತನದ ಸ್ವಲ್ಪ ಅಂಶ (ಸುಮಾರು ಶೇಕಡಾ 50) ನೀಡಿ, ಯಾವುದೇ ಕೆಲಸ ಮಾಡದೇ ಸಂದಾಯದ ರಸೀದಿಗೆ ಸಹಿ ಮಾಡುವಂತಹ ಸಾಮಾನ್ಯ ಧೋರಣೆ ಈ ಸಂದರ್ಭದಲ್ಲಿ ಪ್ರಾರಂಭವಾಯಿತು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದಿಂದ ಭಾಗವಹಿಸಿದ ಹೆಚ್ಚಿನವರಿಗೆ ಅನುಕೂಲ ಆಗದೇ ಇದ್ದರೂ, ಶೇಕಡಾ 59ಕ್ಕಿಂತ ಹೆಚ್ಚಿನ ಭಾಗವಹಿಸಿದ ಪುರುಷರು ಮತ್ತು ಶೇಕಡಾ 39ಕ್ಕಿಂತ ಹೆಚ್ಚಿನ ಮಹಿಳೆಯರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪರಿಣಾಮಕಾರಿ ಅನುಷ್ಠಾನದಿಂದ ವಲಸೆಯನ್ನು ತಡೆಯಬಹುದೆಂದು ಅಭಿಪ್ರಾಯಪಟ್ಟರು. ಈ ಕೆಳಗೆ ಪಟ್ಟಿ ಹೇಳುವಂತೆ ಶೇಕಡಾ 51 ಮಹಿಳೆಯರ ಜೊತೆಗೆ ಭಾಗವಹಿಸಿದಂತಹ ಶೇಕಡಾ 35 ಪುರುಷರು ಹಾಗೂ ಎಲ್ಲ ಐದು ತೃತೀಯ ಲಿಂಗಿಗಳು ವಲಸೆಯನ್ನು ತಡೆಯುವಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಕಾರ್ಯನೀತಿ ಕ್ರಮವಾಗುವ ಸಂಭಾವ್ಯತೆಯನ್ನು ತಳ್ಳಿಹಾಕಿದರು.

| ಲಿಂಗ | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪರಿಣಾಮಕಾರಿಯಾದ ಅನುಷ್ಠಾನ ವಲಸೆಯನ್ನು ತಡೆಯಬಹುದೆಂದು ನಿಮಗನಿಸುವುದೇ? | | |
|---|---|---|---|
| | ಹೌದು | ಇಲ್ಲ | ಗೊತ್ತಿಲ್ಲ |

| | | | |
|---|---|---|---|
| ತೃತೀಯ ಲಿಂಗಿ | 0% | 100% | 0% |
| ಮಹಿಳೆ | 39.28% | 50.89% | 9.82% |
| ಪುರುಷ | 59.04% | 34.57% | 6.38% |

ಬೆಂಗಳೂರಿನಲ್ಲಿರುವ ಬೇರೆ ರಾಜ್ಯದ ಕಟ್ಟಡ ನಿರ್ಮಾಣ ಕೆಲಸಗಾರರರೊಂದಿಗಿನ "ವಲಸೆಯ ಹಿಂದಿನ ಕಾರಣಗಳು" ಮೇಲಿನ ಕೇಂದ್ರೀಕೃತ ಗುಂಪು ಚರ್ಚೆಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವನ್ನು ಒಮ್ಮೆ ಉಲ್ಲೇಖಿಸಲಾಯಿತು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದಲ್ಲಿ ಕೆಲಸ ಮಾಡಿದ 4 ಕೆಲಸಗಾರರನ್ನು ಮತ್ತು ಕಟ್ಟಡ ನಿರ್ಮಾಣದ ಕೆಲಸಗಾರರನ್ನು ಒಳಗೊಂಡಂತೆ ಈ ಕೇಂದ್ರೀಕೃತ ಗುಂಪು ಚರ್ಚೆಯು ನಡೆಯಿತು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕುರಿತು ಅವರು ತಮ್ಮ ಗ್ರಹಿಕೆಯನ್ನು ಹಂಚಿಕೊಂಡಾಗ, ಯಾದಗಿರಿಯಿಂದ ಬಂದ ಕೆಲವು ವಲಸಿಗರು ಈ ಯೋಜನೆಯ ಕುರಿತು ಬಹಳ ಆಸಕ್ತರಾದರು. ಅವರು ಈ ಬಗ್ಗೆ ಕೇಳಿದ್ದರೂ, ಈ ಯೋಜನೆಯ ಅಡಿಯಲ್ಲಿ ದೊರಕಬಹುದಾದ ಉಪಯೋಗಗಳ ಕುರಿತು ಅರಿತಿರಲಿಲ್ಲ. ಅಧ್ಯಯನದ ತಂಡವು ಅವರಿಗೆ ಯೋಜನೆಯ ಕುರಿತು ತಿಳಿಸಿತು ಮತ್ತು ಈ ಮಾಹಿತಿ ವಿನಿಮಯವು 5 ಅಂತರ್–ಜಿಲ್ಲಾ ವಲಸಿಗರ ಜೊತೆಗೆ 7 ಅಂತರ್–ರಾಜ್ಯ ವಲಸಿಗರನ್ನು ಒಳಗೊಂಡ ಕೇಂದ್ರೀಕೃತ ಗುಂಪು ಚರ್ಚೆಯನ್ನು ನಡೆಸಲು ಕಾರಣವಾಯಿತು. ಭಾಷೆಯು ತೊಡಕಿದ್ದರೂ ಮತ್ತು ಎರಡು ಗುಂಪಿನ ವಲಸಿಗರು ತಮ್ಮ ವಿಷಯಗಳನ್ನು ಸಂವಹಿಸಲು ಕಷ್ಟಪಟ್ಟರೂ, ಕೇಂದ್ರೀಕೃತ ಗುಂಪು ಚರ್ಚೆಯು ಅಧ್ಯಯನದ ರೋಮಾಂಚಕ ಚರ್ಚೆಯಾಗಿ ಮೂಡಿಬಂತು. ಈ ಕಾರ್ಯಕ್ರಮವು ಬಹಳ ಭರವಸೆ ಮೂಡಿಸಿತೆಂದು ಎಲ್ಲ ವಲಸಿಗರೂ ಅಭಿಪ್ರಾಯಪಟ್ಟರು ಮತ್ತು ಈ ಕಾರ್ಯಕ್ರಮವು ವಲಸೆಯನ್ನು ತಡೆಯುವಲ್ಲಿ ಮಹತ್ವದ ಪಾತ್ರ ವಹಿಸುವುದೆಂದು ಅಭಿಪ್ರಾಯಪಟ್ಟರು. ಆದಾಗ್ಯೂ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವು ವಲಸೆಯನ್ನು ಸಂಪೂರ್ಣವಾಗಿ ನಿಲ್ಲಿಸಲಾರದೆಂದು ಕೂಡ ನೆನಪಿಸಿದರು ಮತ್ತು ಬಹಳಷ್ಟು ಜನರಿಗೆ ಇನ್ನೂ ವಲಸೆ ಹೋಗುವ ಅವಶ್ಯಕತೆ ಇತ್ತು. ವಲಸಿಗ ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಸ್ಪಷ್ಟವಾದ ಕಾರ್ಯಸೂಚಿಗಳನ್ನು ಹೊಂದುವುದು ಬಹಳ ಆವಶ್ಯಕವೆಂದು ಅವರು ಆಗ್ರಹಪಡಿಸಿದರು.

**ಸರಕಾರದಿಂದ ವಲಸಿಗ ಕಾರ್ಮಿಕರ ನಿರೀಕ್ಷೆಗಳು**

ಭಾಗವಹಿಸಿದವರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಲ್ಲದೇ, ವಲಸೆಯನ್ನು ತಡೆಯಲು ಬೇರೆ ಕಾರ್ಯನೀತಿಗಳ ಕುರಿತು ಚರ್ಚಿಸಿದರು. ಭಾಗವಹಿಸಿದ ಎಲ್ಲ ನಾಲ್ಕು ಜಾತಿ ವರ್ಗಗಳ ಬಹುತೇಕರು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಮತ್ತು ಆ ರೀತಿಯ ಇತರ ಯೋಜನೆಗಳ ಮೂಲಕ ತಮ್ಮ ಮೂಲ ಸ್ಥಳಗಳಲ್ಲಿ ಉದ್ಯೋಗ ಸೃಷ್ಟಿಗೆ ಆಗ್ರಹಪಡಿಸಿದರು. ಭಾಗವಹಿಸಿದ ಶೇಕಡಾ 44 ಇತರೆ ಹಿಂದುಳಿದ ವರ್ಗಗಳ, ಇನ್ನುಳಿದ ಮೂರು ಜಾತಿ ಗುಂಪುಗಳಲ್ಲಿನ ಭಾಗವಹಿಸಿದವರ ಸುಮಾರು ಶೇಕಡಾ 25 ರಿಂದ ಶೇಕಡಾ 32, ಹೆಚ್ಚಿನ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿ ಮಾಡುವಂತಹ ನಿರ್ಣಾಯಕ ಕಾರ್ಯನೀತಿಗಳನ್ನು ರೂಪಿಸುವ ಮೂಲಕ ತಮ್ಮ ಮೂಲ ಸ್ಥಳಗಳಲ್ಲಿ ವಲಸೆಯ ಹೊರಹರಿವನ್ನು ನಿಯಂತ್ರಿಸಬಹುದೆಂದು ಪರಿಗಣಿಸಿದರು. ಭಾಗವಹಿಸಿದವರು, ಅತಿ ಹೆಚ್ಚು ಬಡ್ಡಿ ದರವನ್ನು ಹೊರೆಸುವ ಹಣ ಸಾಲಕೊಡುವವರ ಪ್ರಭಾವ ಹೆಚ್ಚುತ್ತಿರುವ ಬಗ್ಗೆ ಚರ್ಚಿಸಿದರು ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಸಾಲದ ಹಣವನ್ನು ಮರುಪಾವತಿ ಮಾಡಲು ಜನ ವಲಸೆ ಹೋಗಬೇಕಾಗುತ್ತದೆ. ಸರಕಾರವು ತನ್ನ ಸಾಲವನ್ನು ಸುಲಭವಾಗಿ ಪಡೆಯಲು ಅನುಕೂಲ ಮಾಡಿಕೊಟ್ಟರೆ, ತಮಗೆ ವಲಸೆ ಹೋಗುವ ಅನಿವಾರ್ಯತೆ ಬರುತ್ತಿರಲಿಲ್ಲ ಮತ್ತು ತಮ್ಮ ಜೀವನ ಎಷ್ಟೋ ಚೆನ್ನಾಗಿರುತ್ತಿತ್ತು ಎಂದು ನಂಬಿದ್ದರು. ಇದನ್ನು ನಂಬಿದವರ ಪ್ರಮಾಣ, ತಮ್ಮ ಮೂಲ ಸ್ಥಳಗಳಲ್ಲಿ ಉದ್ಯೋಗಾವಕಾಶ ಸೃಷ್ಟಿ ಮಾಡಬೇಕಿರುವ ಆವಶ್ಯಕತೆಯನ್ನು ಒತ್ತಿ ಹೇಳಿದವರಷ್ಟೇ ಹೆಚ್ಚಾಗಿತ್ತು. ವಲಸೆಯ ಸಮಸ್ಯೆಗೆ ಸುಲಭ ಸಾಲದಂತಹ ನಿರ್ಣಾಯಕ ಆಯ್ಕೆಯನ್ನು ಗುರುತಿಸಿದಂತಹ, ಅಧ್ಯಯನದಲ್ಲಿ ಭಾಗವಹಿಸಿದಂತಹ ಸಮಾಜದಲ್ಲಿ ಮುಂದುವರಿದ ಜಾತಿ (ಇನ್ನಿತರ ವರ್ಗ)ಯ ಪರಿಮಾಣವು ಶೇಕಡಾ 38 ರಷ್ಟು ಅಧಿಕ ಸಂಖ್ಯೆಯಲ್ಲಿತ್ತು. ಭಾಗವಹಿಸಿದ ಇನ್ನುಳಿದ ಮೂರು ವರ್ಗದ ಶೇಕಡಾ 25 ರಿಂದ ಶೇಕಡಾ 33 ಜನರೂ ಈ ಅಭಿಪ್ರಾಯವನ್ನೇ ಹಂಚಿಕೊಂಡರು. ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಸಂಘಟಿಸುವ ಮೂಲಕ, ವಲಸೆಯನ್ನು ನಿಯಂತ್ರಿಸುವ ಸಾಧ್ಯತೆಯ ಕುರಿತು, ಸಾಮಾಜಿಕವಾಗಿ ಮುಂದುವರಿದ ಜಾತಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಜಾತಿಯ ಭಾಗವಹಿಸಿದವರ ಅಭಿಪ್ರಾಯದಲ್ಲಿ ವ್ಯತ್ಯಾಸವಿತ್ತು. 25% ಪರಿಶಿಷ್ಟ ಜಾತಿ ಮತ್ತು 23% ಪರಿಶಿಷ್ಟ ಪಂಗಡ ಕೇವಲ 11% ಇತರೆ ಹಿಂದುಳಿದ ವರ್ಗ, ಮತ್ತು 15% ಇತರೆ ವರ್ಗ(ಇನ್ನುಳಿದ ವರ್ಗ) ಅವರು ತಮ್ಮ ಮೂಲ ಸ್ಥಳಗಳಲ್ಲಿ ತಳ್ಳುವ ಅಂಶಗಳನ್ನು ಕ್ಷೀಣಿಸಲು ನಿರ್ಣಾಯಕ ಉಪಾಯವೆಂದು ಗುರುತಿಸಿದರು.

| ನಿರ್ದಿಷ್ಟ ಕಾರ್ಯನೀತಿಗಳ ಮೂಲಕ ವಲಸೆಯನ್ನು ತಡೆಯಬಹುದೆಂದು ನಿಮಗೆ ಅನಿಸುವುದೇ? ಹೌದು ಎಂದಾದಲ್ಲಿ, ಆ ಕಾರ್ಯನೀತಿಗಳು ಯಾವುವು? | | | | | |
|---|---|---|---|---|---|
| ಜಾತಿ | ಜೀವನೋಪಾಯದ ಹೆಚ್ಚಿನ ಅವಕಾಶಗಳನ್ನು ನಿರ್ಮಿಸುವುದು | ಕೌಶಲ್ಯ ತರಬೇತಿ ಕಾರ್ಯಕ್ರಮ | ಸಾಮಾಜಿಕ ಭದ್ರತೆಯ ಪ್ರಯೋಜನ | ಸುಲಭ ಸಾಲಕ್ಕೆ ದಾರಿ | ಇತರೆ |
| ಪರಿಶಿಷ್ಟ ಜಾತಿ | 32.18% | 25.29% | 13.41% | 24.52% | 4.60% |
| ಪರಿಶಿಷ್ಟ ಪಂಗಡ | 24.56% | 22.81% | 14.04% | 33.33% | 5.26% |
| ಇತರೆ ಹಿಂದುಳಿದ ವರ್ಗ | 44.61% | 10.71% | 14.29% | 26.79% | 3.57% |
| ಉಳಿದವರು | 30.77% | 15.38% | 0% | 38.46% | 15.38% |

ತಮ್ಮ ಮೂಲ ಸ್ಥಳಗಳಿಂದ ಕಾರ್ಮಿಕರ ಹೊರ ಹರಿವಿನಂತಹ ವಿಷಯವನ್ನು ಸಾಮಾಜಿಕ ಭದ್ರತೆಯ ಪ್ರಯೋಜನಗಳ ಮೂಲಕ ಎದುರಿಸಬಹುದೆಂದು ಅಧ್ಯಯನದಲ್ಲಿ ಭಾಗವಹಿಸಿದ ಸಾಮಾಜಿಕವಾಗಿ ಮುಂದುವರಿದ ಯಾವ ಜಾತಿಯವರೂ ಗುರುತಿಸಲಿಲ್ಲ. ಇನ್ನುಳಿದ ಮೂರು ವರ್ಗಗಳಲ್ಲಿ, ಸಾಮಾಜಿಕ ಭದ್ರತೆಯ ಪ್ರಯೋಜನಗಳು ವಲಸೆಯನ್ನು ತಡೆಗಟ್ಟಬಹುದೆಂದು ಪರಿಗಣಿಸಿದವರ ಅನುಪಾತ 13% ಮತ್ತು 14%ದ ನಡುವೆ ಇತ್ತು.

| ನಿರ್ದಿಷ್ಟ ಕಾರ್ಯನೀತಿಗಳ ಮೂಲಕ ವಲಸೆಯನ್ನು ತಡೆಯಬಹುದೆಂದು ನಿಮಗೆ ಅನಿಸುವುದೇ? ಹೌದು ಎಂದಾದಲ್ಲಿ, ಆ ಕಾರ್ಯನೀತಿಗಳು ಯಾವುವು? | | | | | |
|---|---|---|---|---|---|
| ಲಿಂಗ | ಜೀವನೋಪಾಯದ ಹೆಚ್ಚಿನ ಅವಕಾಶಗಳನ್ನು ನಿರ್ಮಿಸುವುದು | ಕೌಶಲ್ಯ ತರಬೇತಿ ಕಾರ್ಯಕ್ರಮ | ಸಾಮಾಜಿಕ ಭದ್ರತೆಯ ಪ್ರಯೋಜನ | ಸುಲಭ ಸಾಲಕ್ಕೆ ದಾರಿ | ಇತರೆ |
| ತೃತೀಯ ಲಿಂಗಿ | 0% | 33.3% | 0% | 66.67% | 0% |
| ಮಹಿಳೆಯರು | 37.57% | 22.10% | 11.05% | 23.76% | 5.52% |
| ಪುರುಷರು | 32.62% | 21.99% | 12.41% | 29.43% | 3.55% |

ವಲಸೆಯನ್ನು ನಿಯಂತ್ರಿಸುವಲ್ಲಿ ಕಾರ್ಯನೀತಿಗಳ ಕ್ರಮಗಳ ಕುರಿತಾದ ಅನಿಸಿಕೆಗಳು, ಜಾತಿಗಳ ನಡುವೆ ಕಂಡುಬಂದಂತೆ, ಭಾಗವಹಿಸಿದ ಪುರುಷರು ಮತ್ತು ಮಹಿಳೆಯರ ನಡುವೆ ಬಹಳ ವ್ಯತ್ಯಾಸವಿರಲಿಲ್ಲ. ತಳ್ಳುವ ಅಂಶವನ್ನು ನಿಷ್ಕ್ರಿಯಗೊಳಿಸಲು ಪ್ರಚಲಿತ ಜೀವನೋಪಾಯದ ಅವಕಾಶಗಳನ್ನು ನಿರ್ಮಿಸಬೇಕೆಂದು, ಮಹಿಳೆಯರು (ಶೇಕಡಾ 38) ಮತ್ತು ಪುರುಷರು (ಶೇಕಡಾ 33) ಇಬ್ಬರೂ ಸೂಚಿಸಿದರು. ಕಾರ್ಯನೀತಿಗಳ ಕ್ರಮದ ಕುರಿತು ಬಹಳ ಸಾಮಾನ್ಯವಾಗಿ ಸೂಚಿಸಿದ ಎರಡನೆಯ ಕ್ರಮವೆಂದರೆ, ಸುಲಭವಾಗಿ ಸಾಲ ದೊರೆಯುವಂತಾಗುವುದು (ಶೇಕಡಾ 24 ಮಹಿಳೆಯರು ಮತ್ತು ಶೇಕಡಾ 29 ಪುರುಷರು), ಅದರ ನಂತರ ಕೌಶಲ್ಯ ತರಬೇತಿ (ಶೇಕಡಾ 22 ಮಹಿಳೆಯರು ಮತ್ತು ಶೇಕಡಾ 22 ಪುರುಷರು). ಕೇವಲ ಶೇಕಡಾ 11 ಮಹಿಳೆಯರು ಮತ್ತು ಶೇಕಡಾ 12 ಪುರುಷರು, ವಲಸೆಯನ್ನು ನಿಯಂತ್ರಿಸುವಲ್ಲಿ ಸಾಮಾಜಿಕ ಭದ್ರತೆಯ ಪ್ರಯೋಜನವನ್ನು ಬಹಳ ಮುಖ್ಯ ಕಾರ್ಯನೀತಿಗಳ ಕ್ರಮವನ್ನಾಗಿ ಗುರುತಿಸಿದವರು. ಎಲ್ಲ ಜಾತಿ ಲಿಂಗಗಳನ್ನು ಒಳಗೊಂಡಂತೆ ಭಾಗವಹಿಸಿದ ಬಹುತೇಕರು, ವಲಸೆಯನ್ನು ತಡೆಯಲು, ತಮ್ಮ ಮೂಲ ಸ್ಥಳಗಳಲ್ಲಿ ಜೀವನೋಪಾಯದ ಅವಕಾಶಗಳನ್ನು ಕಲ್ಪಿಸುವುದನ್ನೇ ಕಾರ್ಯನೀತಿಯಾಗಿ ರೂಪಿಸಬೇಕೆಂದು ಸೂಚಿಸಿದರು. ತಳ್ಳುವ ಅಂಶವನ್ನು ತಡೆಗಟ್ಟಲು ಸೂಚಿಸಿದ ಎರಡನೆಯ ಬಹು ಮುಖ್ಯ ಸಲಹೆ ಎಂದರೆ ಸುಲಭದಲ್ಲಿ ಸಾಲ ಸೌಲಭ್ಯ ದೊರಕಿಸುವುದು ಮತ್ತು ಮೂರನೆಯದು ಕೌಶಲ್ಯ ತರಬೇತಿ. ವಲಸೆಯನ್ನು ತಡೆಗಟ್ಟುವಲ್ಲಿ ಸಾಮಾಜಿಕ ಭದ್ರತೆಯ ಪಾತ್ರವನ್ನು ಭಾಗವಹಿಸಿದವರಲ್ಲಿ ಪರಿಗಣಿಸಿದವರ ಪ್ರಮಾಣವು, ಉಳಿದ ಮೂರೂ ಸಲಹೆ ನೀಡಿದವರಿಗಿಂತ ಬಹಳ ಕಡಿಮೆ ಇತ್ತು.

# ಅಧ್ಯಾಯ ಆರು
# ವಲಸಿಗ ಕಾರ್ಮಿಕರ ಪರಿಸ್ಥಿತಿ ಮತ್ತು ಹಕ್ಕುಗಳು

**ವಲಸಿಗ ಕಾರ್ಮಿಕರ ಸ್ಥಿತಿ**

ತಮ್ಮ ಮೂಲ ಸ್ಥಾನ ಮತ್ತು ವಲಸೆಯ ಗಮ್ಯ ಸ್ಥಾನದಲ್ಲಿನ ಜೀವನ ಮತ್ತು ಕೆಲಸದ ಸ್ಥಿತಿಯ ಕುರಿತು, ಅಧ್ಯಯನದಲ್ಲಿ ಭಾಗವಹಿಸಿದ ಕರ್ನಾಟಕದಿಂದ ಹೋದ ವಲಸಿಗರ ಮತ್ತು ಕರ್ನಾಟಕದಲ್ಲಿರುವ ಬೇರೆ ರಾಜ್ಯದ ವಲಸಿಗರ, ಗ್ರಹಿಕೆಯಲ್ಲಿ ವ್ಯತ್ಯಾಸವಿತ್ತು. ತಮ್ಮ ಮೂಲ ಜಿಲ್ಲೆಯಲ್ಲಿ ಹಾಗೂ ಬೆಂಗಳೂರು ಮತ್ತು ಮೈಸೂರಿನ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುವ ಯಾದಗಿರಿ ಮತ್ತು ಕೊಪ್ಪಳದ ಶೇಕಡಾ 90ಕ್ಕಿಂತ ಹೆಚ್ಚು ಭಾಗವಹಿಸಿದವರು, ತಮ್ಮ ವಲಸೆ ಬಂದ ಸ್ಥಳದ ಜೀವನದ ಸ್ಥಿತಿಗಿಂತ ತಮ್ಮ ಮೂಲ ಸ್ಥಳದ ಜೀವನದ ಸ್ಥಿತಿ ಉತ್ತಮವಾಗಿತ್ತೆಂದು ಗ್ರಹಿಸುತ್ತಾರೆ. ಕೇಂದ್ರೀಕೃತ ಗುಂಪು ಚರ್ಚೆಯಲ್ಲಿ ಮತ್ತು ವಿಶದವಾದ ಸಂದರ್ಶನದಲ್ಲಿ, ಕರ್ನಾಟಕದ ಹಲವಾರು ಅಂತರ್-ಜಿಲ್ಲಾ ವಲಸಿಗರು, ತಮ್ಮ ಊರಿನಂತಲ್ಲದೇ, ಬೆಂಗಳೂರಿನ ತಮ್ಮ ಮನೆ/ವಸತಿ ಗೃಹದಲ್ಲಿ, ಶೌಚಾಲಯ, ವಿದ್ಯುತ್, ಕುಡಿಯುವ ನೀರಿನ ಸೌಕರ್ಯ ಇತ್ತೆಂದು ಒಪ್ಪಿಕೊಂಡರು. ಆದಾಗ್ಯೂ, ತಮ್ಮ ಮೂಲ ಸ್ಥಳದಲ್ಲಿರುವ ಶೌಚಾಲಯ, ಅಡುಗೆ ಅನಿಲದ ಒಲೆ ಇಲ್ಲದ ತಮ್ಮ ಕಚ್ಚಾ ಮನೆ ಬೆಂಗಳೂರಿನ ವಸತಿಗಿಂತ ವಿಶಾಲವಾಗಿದ್ದವು ಮತ್ತು ಬಿಕ್ಕಟ್ಟಿನ ಸಮಯದಲ್ಲಿ ಕುಟುಂಬದವರ ಆಸರೆ ಇದ್ದುದರಿಂದ, ಅಲ್ಲಿಯ ಜೀವನದ ಸ್ಥಿತಿಯೇ ತುಂಬಾ ಉತ್ತಮವಾಗಿತ್ತೆಂದು ಅವರಿಗೆ ಅನಿಸಿತು. ಇದಲ್ಲದೇ ಅವರ ಮೂಲ ಸ್ಥಳದಲ್ಲಿ ಸಾರ್ವಜನಿಕ ಆರೋಗ್ಯ ಸೇವೆಗಳು ಮತ್ತು ಶಿಕ್ಷಣ ಕೂಡ ತುಂಬಾ ಉತ್ತಮವಾಗಿದ್ದವು.

| ವಸತಿಯ ರೀತಿಗಳು | | | | | | | | |
|---|---|---|---|---|---|---|---|---|
| ಲಿಂಗ | ಬಾಡಿಗೆ | | ಸ್ವಂತ | | ವಸತಿ ಶಾಲೆ | | ಇನ್ನಿತರ | |
| | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ |
| ತೃತೀಯಲಿಂಗಿ | 0% | 60% | 100% | 20% | 0% | 20% | 0% | 0% |
| ಮಹಿಳೆಯರು | 11.51% | 62.17% | 87.05% | 18.58% | 1.43% | 18.58% | 0% | 0.56% |

| | | | | | | | | |
|---|---|---|---|---|---|---|---|---|
| ಪುರುಷರು | 11.53% | 46.53% | 88.46% | 17.3% | 0% | 36.15% | 0% | 0% |

ಮೂರು ಲಿಂಗ ವರ್ಗದ ಶೇಕಡಾ 87 ಭಾಗವಹಿಸಿದವರಿಗೆ ಅವರ ಮೂಲ ಸ್ಥಳಗಳಲ್ಲಿ ಸ್ವಂತ ಮನೆ ಇತ್ತು, ಆದರೆ ಶೇಕಡಾ 62 ಮಹಿಳೆಯರು ಮತ್ತು ಶೇಕಡಾ 47 ಪುರುಷರು ತಾವು ವಲಸೆ ಬಂದ ಸ್ಥಳದಲ್ಲಿ ಬಾಡಿಗೆ ಮನೆಯಲ್ಲಿ ಇದ್ದರು. ಅವರಲ್ಲಿ ಹೆಚ್ಚಿನವರು (ಶೇಕಡಾ 19 ಮಹಿಳೆಯರು ಮತ್ತು ಶೇಕಡಾ 36 ಪುರುಷರು) ಅದರಲ್ಲೂ ಬೆಂಗಳೂರು ಮತ್ತು ಮೈಸೂರಿನಲ್ಲಿರುವವರು ವಸತಿ ಶಾಲೆಗಳಲ್ಲಿ ಇದ್ದರು. ಎಲ್ಲಾ 5 ತೃತೀಯ ಲಿಂಗಿಗಳೂ ತಮ್ಮ ಮೂಲ ಸ್ಥಳದಲ್ಲಿ ಸ್ವಂತ ಮನೆಗಳನ್ನು ಹೊಂದಿದ್ದರು ಹಾಗೂ ಅವರಲ್ಲಿ ಕೇವಲ ಒಬ್ಬರು ತಾವು ವಲಸೆ ಬಂದ ಊರಿನಲ್ಲೂ (ಮೈಸೂರು) ಸ್ವಂತ ಮನೆಯಲ್ಲಿ ನೆಲೆಸಿದ್ದರು. ಮೈಸೂರಿನ ಮತ್ತೊಬ್ಬ ತೃತೀಯ ಲಿಂಗಿ ವಸತಿ ಶಾಲೆಯಲ್ಲಿ ಇದ್ದರು. ಯಾದಗಿರಿಯ ಏಕೈಕ ತೃತೀಯ ಲಿಂಗಿ ಮತ್ತು ಗೋವಾದ ಇಬ್ಬರು ಬಾಡಿಗೆ ಮನೆಯಲ್ಲಿ ವಾಸ ಮಾಡಿರುತ್ತಾರೆ..

ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಹೆಚ್ಚಿನ ಅಂತರ್-ಜಿಲ್ಲಾ ವಲಸಿಗರು, ತಮ್ಮ ಮೂಲ ಸ್ಥಳವಾದ ಯಾದಗಿರಿ ಮತ್ತು ಕೊಪ್ಪಳದಲ್ಲಿ ವೈದ್ಯಕೀಯ ಸವಲತ್ತುಗಳು ಮತ್ತು ಶಿಕ್ಷಣದ ಗುಣಮಟ್ಟ ತುಂಬಾ ಉತ್ತಮವಾಗಿತ್ತೆಂದು ಒತ್ತಿ ಹೇಳಿದರು. ಇದು ಅವರ ಸಮೀಕ್ಷೆಯ ಪ್ರಶ್ನೆಯ ಪ್ರತಿಕ್ರಿಯೆಗಳಲ್ಲೂ ಪ್ರತಿಫಲಿಸಿತು. ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಪಡೆಯಬಲ್ಲ ಮತ್ತು ಕೈಗೆಟಕುವ ವೈದ್ಯಕೀಯ ಸವಲತ್ತುಗಳ ಗುಣಮಟ್ಟವು, "ತುಂಬಾ ಚೆನ್ನಾಗಿದೆ" ಎಂದು ಯಾರೂ ಹೇಳಲಿಲ್ಲ, ಅವರಲ್ಲಿ ಶೇಕಡಾ 6ಕ್ಕಿಂತ ಹೆಚ್ಚು ಜನ ತಮ್ಮ ಮೂಲ ಸ್ಥಳಗಳಲ್ಲಿ ಈ ಸವಲತ್ತುಗಳು "ತುಂಬಾ ಚೆನ್ನಾಗಿವೆ" ವರ್ಗಕ್ಕೆ ಸೇರುತ್ತೇವೆಂದು ತಿಳಿದರು. ಈ ಸವಲತ್ತುಗಳ ಕುರಿತು ಬೆಂಗಳೂರಿನಲ್ಲಿರುವ ಅಂತರ್-ರಾಜ್ಯ ವಲಸಿಗರ ಪ್ರತಿಕ್ರಿಯೆಯೂ ಇದೇ ಆಗಿತ್ತು ಮತ್ತು ಇದು ತುಂಬಾ ಉತ್ತಮ ಗುಣಮಟ್ಟದಲ್ಲಿದೆ ಎಂದು ಯಾರಿಗೂ ಅನಿಸಲಿಲ್ಲ. ಆದರೂ, ಈ ಎರಡು ಊರುಗಳಲ್ಲಿರುವ ಶೇಕಡಾ 50ಕ್ಕಿಂತ ಹೆಚ್ಚು ಅಂತರ್-ರಾಜ್ಯ ಮತ್ತು ಶೇಕಡಾ 69ಕ್ಕಿಂತ ಹೆಚ್ಚು ಅಂತರ್-ಜಿಲ್ಲಾ ವಲಸಿಗರು ವೈದ್ಯಕೀಯ ಸವಲತ್ತುಗಳ ಗುಣಮಟ್ಟ ಉತ್ತಮವಾಗಿದೆ ಎಂದರು. ಬೆಂಗಳೂರು ಮತ್ತು ಮೈಸೂರಿನ ಕೈಗೆಟಕುವ ಮತ್ತು ಪಡೆಯಬಲ್ಲ ವೈದ್ಯಕೀಯ ಸವಲತ್ತುಗಳು ಉಪಯುಕ್ತವಲ್ಲವೆಂದು ಯಾರೂ ಅಂದುಕೊಳ್ಳಲಿಲ್ಲ. ಆದರೆ ಈ ನಗರಗಳಲ್ಲಿರುವ ಶೇಕಡಾ 23ಕ್ಕಿಂತ ಹೆಚ್ಚು ಅಂತರ್-ಜಿಲ್ಲಾ ಮತ್ತು ಶೇಕಡಾ 25ಕ್ಕಿಂತ ಮಿಗಿಲಾಗಿ ಅಂತರ್-ರಾಜ್ಯ ವಲಸಿಗರು, ಈ ನಗರಗಳಲ್ಲಿ ಪಡೆಯಬಲ್ಲ ಮತ್ತು ಕೈಗೆಟಕುವ ವೈದ್ಯಕೀಯ ಸವಲತ್ತುಗಳ ಗುಣಮಟ್ಟವು ತುಂಬಾ ಕಡಿಮೆ ಎಂದು ಅಭಿಪ್ರಾಯಪಟ್ಟರು. ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಶೇಕಡಾ 6 ಅಂತರ್-ಜಿಲ್ಲಾ ವಲಸಿಗ ಸಹಚರರಿಗೆ ಹೋಲಿಸಿದರೆ, ಯಾದಗಿರಿ ಮತ್ತು ಕೊಪ್ಪಳದ ಶೇಕಡಾ 16ಕ್ಕಿಂತ ಹೆಚ್ಚು ಅಂತರ್-ಜಿಲ್ಲಾ ವಲಸಿಗರು ತಮ್ಮ ಮೂಲ ಸ್ಥಳಗಳಲ್ಲಿರುವ ಕೈಗೆಟಕುವ ಮತ್ತು ಪಡೆಯಬಲ್ಲ ವೈದ್ಯಕೀಯ ಸವಲತ್ತುಗಳ ಗುಣಮಟ್ಟ ತುಂಬಾ ಉತ್ತಮವಾಗಿತ್ತು ಎಂದರು. ಗೋವಾ ಮತ್ತು ಶೋಲಾಪುರದಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕದ ಸುಮಾರು ಶೇಕಡಾ 8 ವಲಸಿಗರು ಈ ಸವಲತ್ತುಗಳ ಗುಣಮಟ್ಟ ಕಡಿಮೆ ಇದೆ ಎಂದರು ಮತ್ತು ಅವರಲ್ಲಿ ಸುಮಾರು ಶೇಕಡಾ 2 ಉತ್ತರ ಕನ್ನಡದ ತಮ್ಮ ಮೂಲ ಸ್ಥ¼ದಲ್ಲಿ ಇದು ಕೆಲಸ ಮಾಡುವುದಿಲ್ಲವೆಂದು ಹೇಳಿದರು.

| ನೀವು ಪಡೆಯಬಹುದಾದ, ದೊರಕುವ ವೈದ್ಯಕೀಯ ಸವಲತ್ತುಗಳ ಅವಕಾಶದ ಗುಣಮಟ್ಟ | | | | | | | | | | |
|---|---|---|---|---|---|---|---|---|---|---|
| ವಲಸಿಗರ ವರ್ಗ | ಅತ್ಯುತ್ತಮ | | ಉತ್ತಮ | | ಸಮಾಧಾನಕರ | | ಕಳಪೆ | | ಕೆಲಸ ಮಾಡುವುದಿಲ್ಲ | |
| | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್ ಜಿಲ್ಲೆ ವಲಸಿಗರು | 6.13% | 0% | 59.77% | 69.23% | 28.35% | 7.69% | 5.36% | 23.08% | 0.38% | 0% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್-ರಾಜ್ಯ ವಲಸಿಗರು | 16.35% | 0% | 58.65% | 50.41% | 19.71% | 24.39% | 5.29% | 25.20% | 0% | 0% |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸಿಗರು | 6.13% | 12.82% | 59.77% | 41.03% | 28.35% | 17.95% | 5.36% | 28.21% | 0.38% | 0% |
| ಗೋವಾ ಮತ್ತು ಶೋಲಾಪುರದಲ್ಲಿರುವ ಕರ್ನಾಟಕದ ಅಂತರ್- ರಾಜ್ಯ ವಲಸಿಗರು | 34.09% | 21.57% | 50% | 37.25% | 7.95% | 19.61% | 7.95% | 19.61% | 0% | 1.96% |

ಸುಮಾರು ಶೇಕಡಾ 5 ಅಂತರ್-ರಾಜ್ಯ ವಲಸಿಗರನ್ನು ಹೊರತುಪಡಿಸಿ, ಯಾವುದೇ ಅಂತರ್-ಜಿಲ್ಲಾ ವಲಸಿಗರು ತಮ್ಮ ಮಕ್ಕಳಿಗೆ ಕೈಗೆಟಕುವ ಮತ್ತು ಪಡೆಯಬಲ್ಲ ಅತ್ಯುತ್ತಮ ಶಿಕ್ಷಣವನ್ನು ಬೆಂಗಳೂರು ಮತ್ತು ಮೈಸೂರಿನಲ್ಲಿ ಪಡೆಯಲಿಲ್ಲ. ಮತ್ತೊಂದೆಡೆ, ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಸುಮಾರು ಶೇಕಡಾ 2 ಅಂತರ್-ಜಿಲ್ಲಾ ಮತ್ತು ಶೇಕಡಾ 27ಕ್ಕಿಂತ ಹೆಚ್ಚು ಅಂತರ್-ರಾಜ್ಯ ವಲಸಿಗರು, ತಮ್ಮ ಮೂಲ ಸ್ಥಳದಲ್ಲಿರುವ ಶಿಕ್ಷಣದ ಗುಣಮಟ್ಟವು ತುಂಬಾ ಉತ್ತಮವಾಗಿತ್ತೆಂದು ಅಭಿಪ್ರಾಯಪಟ್ಟರು. ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಶೇಕಡಾ 59ಕ್ಕಿಂತ ಹೆಚ್ಚಿನ ಅಂತರ್-ರಾಜ್ಯ ವಲಸಿಗರು, ತಮ್ಮ ಮಕ್ಕಳು ಪಡೆಯಬಹುದಾದ ಮತ್ತು

ಕೈಗೆಟಕುವ ಶಿಕ್ಷಣದ ಗುಣಮಟ್ಟವು ಈ ನಗರಗಳಲ್ಲಿ ಉತ್ತಮವಾಗಿದೆ ಎಂದು ಪರಿಗಣಿಸಿದರು. ಅವರಲ್ಲಿ ಸುಮಾರು ಶೇಕಡಾ 44 ಜನರು ತಮ್ಮ ಮೂಲ ಸ್ಥಳದಲ್ಲಿ ಮಕ್ಕಳ ಶಿಕ್ಷಣದ ಗುಣಮಟ್ಟದ ಕುರಿತು ಇದೇ ಭಾವನೆಯನ್ನು ಹೊಂದಿದ್ದರು. ಶೇಕಡಾ 2ಕ್ಕಿಂತ ಕಡಿಮೆ ಜಿಲ್ಲಾಂತರ್ಗತ ವಲಸಿಗರು ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ತಮ್ಮ ಮೂಲ ಸ್ಥಳದ ಕೈಗೆಟಕುವ ಮತ್ತು ಪಡೆಯಬಹುದಾದ ಶಿಕ್ಷಣವು ಉತ್ತಮ ಗುಣಮಟ್ಟದ್ದಾಗಿದೆಯೆಂದು ಅಭಿಪ್ರಾಯಪಟ್ಟರು ಮತ್ತು ಶೇಕಡಾ 20 ಜನರು ತಮ್ಮ ವಲಸೆಯ ಗುರಿಯಾದ ಯಾದಗಿರಿ ಮತ್ತು ಕೊಪ್ಪಳ ನಗರಗಳಲ್ಲೂ ಈ ಸವಲತ್ತುಗಳ ಕುರಿತು ಹಾಗೆಯೇ ಯೋಚಿಸಿದರು. ತಮ್ಮ ಮಕ್ಕಳಿಗೆ ಕೈಗೆಟಕುವ ಮತ್ತು ಪಡೆಯಬಲ್ಲ ಗುಣಮಟ್ಟದ ಶಿಕ್ಷಣ ತಮ್ಮ ಮೂಲ ಸ್ಥಳಗಳಲ್ಲಿ ಉತ್ತಮವಾಗಿರುತ್ತದೆಂದು ಪರಿಗಣಿಸಿದ ಯಾದಗಿರಿ ಮತ್ತು ಕೊಪ್ಪಳದ ಅಂತರ್–ಜಿಲ್ಲಾ (ಶೇಕಡಾ 74) ಮತ್ತು ಜಿಲ್ಲಾಂತರ್ಗತ (ಶೇಕಡಾ 74) ವಲಸಿಗರ ಪ್ರಮಾಣದಲ್ಲಿ ಯಾವ ವ್ಯತ್ಯಾಸವೂ ಇರಲಿಲ್ಲ. ಅಧ್ಯಯನದಲ್ಲಿ ಭಾಗಿಯಾದವರ ಪ್ರತಿಕ್ರಿಯೆಯ ಆಧಾರದ ಮೇಲೆ, ಉತ್ತರ ಕರ್ನಾಟಕದ ಈ ಪಟ್ಟಣಗಳ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕೈಗೆಟಕುವ ಆರೋಗ್ಯ ಮತ್ತು ಶಿಕ್ಷಣದ ಗುಣಮಟ್ಟದಲ್ಲಿ ಎದ್ದು ಕಾಣುವಂತಹ ವ್ಯತ್ಯಾಸ ಇಲ್ಲವೆಂದು ಭಾವಿಸಬಹುದಾಗಿದೆ. ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಭಾಗವಹಿಸಿದವರೂ ಈ ಊಹೆಯನ್ನು ವಿಶದವಾದ ಸಂದರ್ಶನದ ಸಮಯದಲ್ಲಿ ದೃಢೀಕರಿಸಿದರು.

| ನಿಮ್ಮ ಮಕ್ಕಳಿಗೆ ಪಡೆಯಬಹುದಾದ ಮತ್ತು ದೊರಕುವ ಶಿಕ್ಷಣದ ಗುಣಮಟ್ಟ | | | | | | | | | | |
|---|---|---|---|---|---|---|---|---|---|---|
| ವರ್ಗ | ಅತ್ಯುತ್ತಮ | | ಉತ್ತಮ | | ಸಮಾಧಾನಕಾರ | | ಕಳಪೆ | | ಕೆಲಸ ಮಾಡುವುದಿಲ್ಲ | |
| | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್ ಜಿಲ್ಲೆ ವಲಸಿಗರು | 1.64% | 0% | 73.77% | 53.85% | 10.93% | 38.46% | 11.48% | 7.69% | 2.19% | 0% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್–ರಾಜ್ಯ ವಲಸಿಗರು | 27.08% | 4.88% | 43.75% | 59.35% | 9.38% | 28.46% | 17.71% | 5.69% | 2.08% | 1.63% |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸಿಗರು | 1.64% | 20% | 73.77% | 80% | 10.93% | 0% | 11.48% | 0% | 2.19% | 0% |
| ಗೋವಾ ಮತ್ತು ಶೋಲಾಪುರದಲ್ಲಿರುವ ಕರ್ನಾಟಕದ ಅಂತರ್– ರಾಜ್ಯ ವಲಸಿಗರು | 50% | 30.43% | 48.08% | 41.30% | 1.92% | 2.17% | 0% | 26.09% | 0% | 0% |

ಶೇಕಡಾ 67ಕ್ಕಿಂತ ಹೆಚ್ಚಿನ ಮಹಿಳೆಯರು ತಮ್ಮ ವಲಸೆಯ ಗಮ್ಯ ಸ್ಥಳದಲ್ಲಿ ತಮ್ಮ ತಿಂಗಳ ಕೌಟುಂಬಿಕ ಆದಾಯವು ರೂ.6000ಕ್ಕಿಂತ ಕಡಿಮೆ ಇರುವುದಾಗಿ ತಿಳಿಸಿದರು. ಶೇಕಡಾ 60 ಪುರುಷರೂ ವಲಸೆಯ ಗಮ್ಯ ಸ್ಥಳದಲ್ಲಿ ತಮ್ಮ ತಿಂಗಳ ಕೌಟುಂಬಿಕ ಆದಾಯದ ಕುರಿತು ಅಷ್ಟೇ ಮೊತ್ತವನ್ನು ಸೂಚಿಸಿದರು. ಆದರೆ ಶೇಕಡಾ 13ಕ್ಕಿಂತ ಸ್ವಲ್ಪ ಹೆಚ್ಚು ಭಾಗವಹಿಸಿದ ಮಹಿಳೆಯರು ತಮ್ಮ ಮೂಲ ಸ್ಥಳದಲ್ಲಿ ಕುಟುಂಬದ ತಿಂಗಳ ಆದಾಯವು ರೂ.6000ಕ್ಕಿಂತ ಕಡಿಮೆ ಇತ್ತೆಂದು ತಿಳಿಸಿದರು. ಭಾಗವಹಿಸಿದ ಸುಮಾರು ಶೇಕಡಾ 47 ಮಹಿಳೆಯರು ತಮ್ಮ ಮೂಲ ಸ್ಥಳದಲ್ಲಿ ಕುಟುಂಬವು ರೂ.6000 ಮತ್ತು ರೂ.15000ದ ಮಧ್ಯೆ ಸಂಪಾದಿಸುತ್ತಿದೆ ಎಂದರು, ಹಾಗೆಯೇ, ಭಾಗವಹಿಸಿದ ಕೇವಲ ಶೇಕಡಾ 26 ಮಹಿಳೆಯರ ಕುಟುಂಬಗಳು ಅವರು ವಲಸೆ ಹೋದ ಸ್ಥಳದಲ್ಲಿ ಈ ಆದಾಯದ ಆವರಣದಲ್ಲಿ ಬರುತ್ತಾರೆ. ಹೀಗೆ, ಭಾಗವಹಿಸಿದ ಹೆಚ್ಚಿನ ಮಹಿಳೆಯರು ಮತ್ತು ಪುರುಷರ ಕುಟುಂಬಗಳು ಅವರು ವಲಸೆ ಹೋದ ಸ್ಥಳದಲ್ಲಿ ರೂ.6000ಕ್ಕಿಂತ ಕಡಿಮೆ ಸಂಪಾದಿಸುತ್ತಿದ್ದರು, ಆದರೆ ಅವರ ಮೂಲಸ್ಥಳಗಳಲ್ಲಿ ಶೇಕಡಾ 60 ಪುರುಷರ ಮತ್ತು ಶೇಕಡಾ 47 ಮಹಿಳೆಯರ ಕುಟುಂಬಗಳ ಮಾಸಿಕ ಆದಾಯವು ರೂ.6000 ಮತ್ತು ರೂ. 15000ದ ಮಧ್ಯೆ ಇತ್ತು.

| ಕುಟುಂಬದ ಮಾಸಿಕ ಆದಾಯ |
|---|

| ಲಿಂಗ | ರೂ.6000ಕ್ಕಿಂತ ಕಡಿಮೆ | | ರೂ.6000–15000 | | ರೂ.16000–25000 | | 26000 | 35000 | ರೂ.35000ಕ್ಕಿಂತ ಹೆಚ್ಚು | |
|---|---|---|---|---|---|---|---|---|---|---|
| | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ |
| ತೃತೀಯ ಲಿಂಗಿ | 50% | 80% | 25% | 20% | 25% | 0% | 0% | 0% | 0% | 0% |
| ಮಹಿಳೆಯರು | 13.40% | 67.03% | 46.91% | 25.82% | 34.54% | 4.95% | 1.55% | 0% | 3.61% | 2.20% |
| ಪುರುಷರು | 5.65% | 62.50% | 59.80% | 27.21% | 23.26% | 7.35% | 5.65% | 0.37% | 5.65% | 2.57% |

ತಮ್ಮ ಮೂಲ ಸ್ಥಳದಲ್ಲಿನ ಮತ್ತು ಅವರ ವಲಸೆಯ ಗಮ್ಯ ಸ್ಥಾನದ ಕೌಟುಂಬಿಕ ಮಾಸಿಕ ಆದಾಯದ ಕುರಿತು ಭಾಗವಹಿಸಿದ ಎಲ್ಲ ಲಿಂಗದವರ ಪ್ರತಿಕ್ರಿಯೆ ಗಮನಿಸಿದಾಗ ಅವರ ಮೂಲ ಸ್ಥಳದಲ್ಲಿ ಕುಟುಂಬಕ್ಕೆ ಹೆಚ್ಚಿನ ಸಂಪಾದನೆ ಮಾಡುವ ಸಾಧ್ಯತೆಯಿತ್ತು. ಹೆಚ್ಚಿನ ವಲಸಿಗರು ಒಬ್ಬಂಟಿಯಾಗಿ ಅಥವಾ ಅವರ ಜೊತೆಗಾರರು ಹಾಗೂ ಮಕ್ಕಳೊಂದಿಗೆ ವಲಸೆ ಹೋಗಿರುತ್ತಿದ್ದರು ಮತ್ತು ವಲಸೆಯ ಸ್ಥಳದಲ್ಲಿನ ಕೌಟುಂಬಿಕ ಆದಾಯದಲ್ಲಿ ಒಬ್ಬರು ಅಥವಾ ಇಬ್ಬರ ಆದಾಯವಿರುತ್ತಿದ್ದುದು ಬಹುಶಃ ಈ ಕಾರಣಕ್ಕಿರಬಹುದು. ಮತ್ತೊಂದೆಡೆ, ಮೂಲ ಸ್ಥಳದಲ್ಲಿನ ಕೌಟುಂಬಿಕ ಆದಾಯವೆಂದರೆ ಇಬ್ಬರು ಅಥವಾ ಇಬ್ಬರಿಗಿಂತ ಅಧಿಕ ಜನರ ಆದಾಯ. ಅದಲ್ಲದೇ ಅವರ ಮೂಲ ಸ್ಥಳದಲ್ಲಿ ತಮ್ಮ ಕಲ್ಯಾಣ ಯೋಜನೆಗಳ ಮತ್ತು ಸಾರ್ವಜನಿಕ ವಿತರಣಾ ಅಂಗಡಿಗಳ ಪ್ರಯೋಜನ ಪಡೆಯುವ ಅವಕಾಶವಿರುತ್ತದೆ ಮತ್ತು ಅದು ಅವರ ಕೌಟುಂಬಿಕ ಆದಾಯವನ್ನು ಹೆಚ್ಚಿಸುತ್ತದೆಂದು ವಿಶದವಾದ ಸಂದರ್ಶನದ ಸಂದರ್ಭದಲ್ಲಿ ತಿಳಿದುಬಂತು. ಆದರೆ ಅವರಿಗೆ ವಲಸೆಯ ಗಮ್ಯ ಸ್ಥಳದಲ್ಲಿ ಕಲ್ಯಾಣ ಯೋಜನೆಗಳ, ಸಾಮಾಜಿಕ ಭದ್ರತೆಯ ಕಾರ್ಯನೀತಿಗಳ ಪ್ರಯೋಜನ ಪಡೆಯುವ ಅವಕಾಶವಿರುವುದಿಲ್ಲ ಮತ್ತು ಆಹಾರ ಮತ್ತು ವಸತಿ ಮೊದಲುಗೊಂಡು ಆರೋಗ್ಯ ಮತ್ತು ಶಿಕ್ಷಣದವರೆಗಿನ ಪ್ರತಿಯೊಂದು ವಿಷಯದ ಮೇಲೂ ಅವರೇ ಖರ್ಚು ಮಾಡಬೇಕಾಗುತ್ತದೆ. ಭಾಗವಹಿಸಿದ ಹೆಚ್ಚಿನವರು ತಾವು ವಲಸೆಯ ವೆಚ್ಚ ಲಾಭಗಳ ವಿಶ್ಲೇಷಣೆ ಮಾಡಿದರೆ, ವಲಸೆ ಹೋಗುವುದರಿಂದ ತಾವು ಕಳೆದುಕೊಳ್ಳುತ್ತೇವೆಂಬುದನ್ನು ಸೂಚಿಸಿದರು. ಆದಾಗ್ಯೂ, ತಮ್ಮ ಮೂಲ ಸ್ಥಳದಲ್ಲಿ ಉದ್ಯೋಗ ಅವಕಾಶಗಳು ಯಾವಾಗಲೂ ಇರದ ಕಾರಣ ಅವರಿಗೆ ವಲಸೆ ಹೋಗುವುದನ್ನು ಬಿಟ್ಟು ಬೇರೆ ಅವಕಾಶವಿರಲಿಲ್ಲ.

**ವಲಸಿಗ ಕಾರ್ಮಿಕರ ಮೇಲೆ ಹಿಂಸಾಚಾರ**

ಅಧ್ಯಯನದಲ್ಲಿ ಭಾಗಿಗಳಾದ ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಂತರ್–ರಾಜ್ಯ ವಲಸಿಗರು ಸಹ ತಮ್ಮ ಮೇಲಾಗುತ್ತಿರುವ ಹಿಂಸಾಚಾರದ ಕುರಿತು ಚರ್ಚಿಸಿದರು. ಮೈಸೂರಿನ ಗ್ರಾನೈಟ್ ಕಾರ್ಖಾನೆಯಲ್ಲಿರುವ ಕೆಲವು ರಾಜಸ್ಥಾನಿ ವಲಸಿಗ ನೌಕರರು, ತಾವು ತಮ್ಮ ನ್ಯಾಯಯುತ ವೇತನವನ್ನು ಕೇಳಿದರೆ, ತಮ್ಮ ಮೇಲ್ವಿಚಾರಕರು ಮತ್ತು ಕಾರ್ಮಿಕ ಗುತ್ತಿಗೆದಾರರು ಯಾವಾಗಲೂ ತಮ್ಮನ್ನು ಶಬ್ದಗಳಿಂದ ಮತ್ತು ದೈಹಿಕ ಹಿಂಸಾಚಾರ ಮಾಡುವುದಾಗಿ ಬೆದರಿಸುವ ಮೂಲಕ ನಿಂದಿಸುತ್ತಾರೆಂದು ಹೇಳಿದರು. ಮೇಲ್ವಿಚಾರಕರು ಮತ್ತು ಕಾರ್ಮಿಕ ಗುತ್ತಿಗೆದಾರರು ಯಾವಾಗಲೂ ಜೊತೆಗೂಡಿ ಕೆಲಸ ಮಾಡುವ ಮೂಲಕ ಕೆಲಸಗಾರರಲ್ಲಿ ಹೆದರಿಕೆಯ ವಾತಾವರಣವನ್ನು ನಿರ್ಮಿಸಿ, ಅವರು ಕಡಿಮೆ ವೇತನಕ್ಕೆ ಕೆಲಸ ಮಾಡುವಂತೆ ನಿರ್ಬಂಧಿಸುತ್ತಾರೆ ಎಂದು ಭಾಗವಹಿಸಿದ ಕೆಲವರು ನಂಬಿದ್ದರು.

ವಲಸೆ ಬಂದ ಜಾಗದ ಸ್ಥಳೀಯರು ಹೆದರಿಸುವವರಲ್ಲವೆಂದು ಸಾಮಾನ್ಯವಾಗಿ ಭಾಗವಹಿಸಿದವರು ಭಾವಿಸಿದ್ದರು ಮತ್ತು ವಲಸಿಗರೊಂದಿಗಿನ ನಡವಳಿಕೆಗೆ ಗೋವಾದ ಸ್ಥಳೀಯರನ್ನು ಶ್ಲಾಘಿಸಿದ್ದರು. ಮೈಸೂರು, ಗೋವಾ ಮತ್ತು ಶೋಲಾಪುರದಲ್ಲಿರುವ ಯಾವ ಅಂತರ್–ರಾಜ್ಯ ವಲಸಿಗರು ಸಹ ಸ್ಥಳೀಯರಿಂದ ಹಿಂಸಾಚಾರದ ಕುರಿತು ದೂರಲಿಲ್ಲ. ಆದರೆ ಬೆಂಗಳೂರಿನಲ್ಲಿ ಭಾಗವಹಿಸಿದವರು ತಮ್ಮ ಮೇಲೆ ಹಿಂಸಾಚಾರ ನಡೆದಿದೆ ಎನ್ನುವ ಸುಳಿವನ್ನು ಸಮೀಕ್ಷೆಯ ಸಮಯದಲ್ಲಿ ನೀಡಿದರು. ಭಾಗವಹಿಸಿದವರು ತಮ್ಮ ಮೇಲಾದ ಯಾವುದೇ ರೀತಿಯ ಹಿಂಸಾಚಾರದ ಉದಾಹರಣೆ ನೀಡಲು ಅಥವಾ ಅವರ ಹಕ್ಕುಗಳಿಗೆ ಚ್ಯುತಿ ಬಂದಿದ್ದನ್ನು ತಿಳಿಸಲು ಸಂದರ್ಶನದ ಸಮಯದಲ್ಲಿ ಅವರು ಇಷ್ಟಪಡಲಿಲ್ಲ. ಆದರೆ ಕ್ರಮೇಣ ಅವರು ಮನಸ್ಸು ತೆರೆದು ಹೇಳಿಕೊಳ್ಳಲು ಆರಂಭಿಸಿದರು, ಮತ್ತು ಅವರಲ್ಲಿ ಬಹಳಷ್ಟು ಜನ ತಮ್ಮ ಆ ರೀತಿಯ ಅನುಭವಗಳನ್ನು ಸಂದರ್ಶನದ ನಂತರದ ಅನೌಪಚಾರಿಕ ಚರ್ಚೆಯ ಸಂದರ್ಭದಲ್ಲಿ ಹಂಚಿಕೊಂಡರು. ತಮ್ಮ ಉದ್ಯೋಗದಾತರಿಂದಾಗಿ ತಾವು ಹೇಗೆ ಯಾತನೆಗೆ

ಒಳಗಾದರೆಂಬುದನ್ನು ಮತ್ತು ಸ್ಥಳೀಯ ಜನರ ಹಿಂಸಾತ್ಮಕ ಆಕ್ರಮಣಶೀಲತೆಯನ್ನು ಬೆಂಗಳೂರಿನಲ್ಲಿರುವ ಕೆಲವು ಅಂತರ್–ರಾಜ್ಯ ವಲಸಿಗರು ಹಂಚಿಕೊಂಡರು.

ಸ್ಥಳೀಯರ ಆ ರೀತಿಯ ಪ್ರತಿಕ್ರಿಯೆಗೆ, ಕರ್ನಾಟಕಕ್ಕೆ ಕಾರ್ಮಿಕರ ಒಳ ಹರಿವೇ ಕಾರಣವೆಂದು ಅಧ್ಯಯನದಲ್ಲಿ ಭಾಗವಹಿಸಿದ ಕರ್ನಾಟಕಕ್ಕೆ ಬಂದ ವಲಸಿಗರು ಸೂಚಿಸಿದರು. ಕರ್ನಾಟಕದಲ್ಲಿ ಅಂತರ್–ರಾಜ್ಯ ವಲಸಿಗರ ಒಳ ಹರಿವು ಸ್ಥಳೀಯ ಜನರ ಉದ್ಯೋಗಾವಕಾಶಗಳ ಮೇಲೆ ಪರಿಣಾಮ ಬೀರಿತೆಂದು ಅವರಲ್ಲಿ ಶೇಕಡಾ 78 ಜನ ನಂಬಿದರು. ಕರ್ನಾಟಕದಲ್ಲಿನ ಶೇಕಡಾ 31 ಅಂತರ್–ರಾಜ್ಯ ವಲಸಿಗರು ಅದೇ ರೀತಿ ಭಾವಿಸಿದರು. ಅಂತಹ ಒಂದು ಸಾಧ್ಯತೆಯನ್ನು ಖಂಡಿಸಿದ ಅಂತರ್–ರಾಜ್ಯ ವಲಸಿಗರ ಪ್ರಮಾಣವು ಶೇಕಡಾ 46ಕ್ಕಿಂತ ಹೆಚ್ಚಾಗಿತ್ತು. ಕರ್ನಾಟಕದ ಶೇಕಡಾ 12 ಭಾಗವಹಿಸಿದ ವಲಸಿಗರು ಸಹ ಅಂತಹ ಸಾಧ್ಯತೆಯನ್ನು ಖಂಡಿಸಿದರು, ಹಾಗೂ ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಶೇಕಡಾ 23 ಅಂತರ್–ರಾಜ್ಯ ಸಹವರ್ತಿಗಳಿಗೆ ಹೋಲಿಸಿದರೆ, ಸುಮಾರು ಶೇಕಡಾ 11 ಜನ ಆ ಕುರಿತು ಖಚಿತ ಅಭಿಪ್ರಾಯ ಹೊಂದಿರಲಿಲ್ಲ.

| ವಲಸಿಗರ ಒಳಹರಿವಿನಿಂದಾಗಿ ಸ್ಥಳೀಯ ಜನರ ಜೀವನೋಪಾಯದ ಅವಕಾಶಗಳ ಮೇಲೆ ಪರಿಣಾಮ ಬೀರಿದೆ ಎಂದು ನಿಮನಿಸಿದೆಯೇ? | | | |
|---|---|---|---|
| ವರ್ಗ | ಹೌದು | ಇಲ್ಲ | ಹೇಳಲಾಗದು |
| ಕರ್ನಾಟಕದಿಂದ ಬಂದ ಭಾಗವಹಿಸಿದ ವಲಸಿಗ ಕಾರ್ಮಿಕರು | 77.52% | 11.63% | 10.85% |
| ಕರ್ನಾಟಕದಲ್ಲಿರುವ ಅಂತರ್ ರಾಜ್ಯ ವಲಸಿಗ ಕಾರ್ಮಿಕರು | 30.53% | 46.32% | 23.16% |

ಬೇರೆ ರಾಜ್ಯಗಳಿಂದ ಬಂದ ಕಾರ್ಮಿಕರ ಒಳ ಹರಿವು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯ ಮೇಲೆ ಪರಿಣಾಮ ಬೀರಿದೆ ಎಂದು ಭಾಗವಹಿಸಿದ ಕರ್ನಾಟಕದ ಸುಮಾರು ಶೇಕಡಾ 48 ಕಾರ್ಮಿಕರು ಅಭಿಪ್ರಾಯಪಟ್ಟರು. ಅವರಲ್ಲಿ ಸುಮಾರು ಶೇಕಡಾ 47 ಜನರಿಗೆ ಅಂತಹ ಒಂದು ಸಾಧ್ಯತೆಯ ಬಗ್ಗೆ ಖಚಿತತೆ ಇರಲಿಲ್ಲ ಮತ್ತು ಕೇವಲ ಶೇಕಡಾ 5ಕ್ಕಿಂತ ಸ್ವಲ್ಪ ಹೆಚ್ಚಿನವರು ಆ ಸಾಧ್ಯತೆಯನ್ನು ಖಂಡಿಸಿದರು. ಮತ್ತೊಂದೆಡೆ, ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬೇರೆ ರಾಜ್ಯಗಳಿಂದ ಬಂದ ಅಂತರ್–ರಾಜ್ಯ ವಲಸಿಗರಲ್ಲಿ ಸುಮಾರು ಶೇಕಡಾ 46 ಜನ ಅಂತಹ ಸಾಧ್ಯತೆಯನ್ನು ಖಂಡಿಸಿದರು ಮತ್ತು ಅವರಲ್ಲಿ ಸುಮಾರು ಶೇಕಡಾ 40 ಜನರಿಗೆ ಆ ಕುರಿತು ಖಚಿತತೆ ಇರಲಿಲ್ಲ. ಆದರೆ ಬೇರೇ ರಾಜ್ಯಗಳಿಂದ ಬಂದ ವಲಸಿಗ ಕಾರ್ಮಿಕರ ಒಳಹರಿವು ಕರ್ನಾಟಕದ ಕಾನೂನು ಮತ್ತು ಅಪರಾಧದ ಸ್ಥಿತಿಯ ಮೇಲೆ ಪರಿಣಾಮ ಬೀರಿದೆ ಎಂದು ಅವರಲ್ಲಿ ಶೇಕಡಾ 15ಕ್ಕಿಂತ ಹೆಚ್ಚು ಜನರು ಅಭಿಪ್ರಾಯಪಟ್ಟರು. ಆದಾಗ್ಯೂ, ಕರ್ನಾಟಕದಲ್ಲಿ ವಲಸಿಗರು ಬಂದ ಕಾರಣದಿಂದ ಅಪರಾಧಗಳು ಹೆಚ್ಚಾಗಿಲ್ಲವೆಂದು ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬಹುತೇಕ ಎಲ್ಲ ಅಂತರ್–ರಾಜ್ಯ ವಲಸಿಗರು ವಿಶದವಾದ ಸಂದರ್ಶನದ ಕಾಲದಲ್ಲಿ ಆಗ್ರಹಪಡಿಸಿದರು. ವಲಸಿಗರು ಸಾಮಾನ್ಯವಾಗಿ ದುರ್ಬಲರಾಗಿರುತ್ತಾರೆ ಮತ್ತು ಸ್ಥಳೀಯರ ಆಕ್ರೋಶಕ್ಕೆ ಬಲಿಪಶುವಾಗುತ್ತಾರೆ ಎಂದು ಕೆಲವರು ಹೇಳಿದರು.

| ಬೇರೆ ರಾಜ್ಯಗಳಿಂದ ಬಂದ ಕಾರ್ಮಿಕರಿಂದಾಗಿ ಕರ್ನಾಟಕದ ಅಪರಾಧ ಮತ್ತು ಕಾನೂನಿನ ಸ್ಥಿತಿಯ ಮೇಲೆ ಪರಿಣಾಮ ಬೀರಿದೆ ಎಂದು ನಿಮಗನಿಸಿದೆಯೇ? | | | |
|---|---|---|---|
| ವರ್ಗ | ಹೌದು | ಇಲ್ಲ | ಹೇಳಲಾಗದು |
| ಕರ್ನಾಟಕದಿಂದ ಬಂದ ಭಾಗವಹಿಸಿದ ವಲಸಿಗ ಕಾರ್ಮಿಕರು | 48.1% | 5.35% | 46.52% |
| ಕರ್ನಾಟಕದಲ್ಲಿರುವ ಅಂತರ್ ರಾಜ್ಯ ವಲಸಿಗ ಕಾರ್ಮಿಕರು | 15.22% | 45.65% | 39.13% |

ಈ ರೀತಿಯಾಗಿ ಮೇಲ್ಕಂಡ ಕೋಷ್ಟಕದ ಪ್ರಕಾರ ಕರ್ನಾಟಕದ ಬಹುಪಾಲು ಭಾಗಿಗಳು ತಮ್ಮ ರಾಜ್ಯದಲ್ಲಿರುವ ಇತರ ರಾಜ್ಯಗಳ ಕಾರ್ಮಿಕರ ಒಳಹರಿವಿನಿಂದ ಸಂತೋಷವಾಗಿರುವುದಿಲ್ಲ ಆದರೆ, ಬೇಗೂರು (ಬೆಂಗಳೂರು) ಹೊರತು ಪಡಿಸಿ ಎಲ್ಲಾ ಅಧ್ಯಯನ ಕ್ಷೇತ್ರಗಳಲ್ಲಿ, ಸ್ಥಳೀಯ ಜನರು ಸ್ನೇಹಪರರೆಂದು ಅಂತರ್ ರಾಜ್ಯ ವಲಸಿಗರು ಅಭಿಪ್ರಾಯಪಟ್ಟರು. ತಮ್ಮ ಮೇಲೆ ಸ್ಥಳೀಯರಿಂದ ಹಿಂಸಾತ್ಮಕ ಆಕ್ರಮಣ ಅಸಾಮಾನ್ಯ ಅಲ್ಲವೆಂದು ಬೇಗೂರಿನಲ್ಲಿರುವ ಅಂತರ್–ರಾಜ್ಯ ವಲಸಿಗರು ತಿಳಿಸಿದರು. ಒಂದು ಸಣ್ಣ ವಿಚಾರದಲ್ಲಿ ಭಿನ್ನಾಭಿಪ್ರಾಯ ಉಂಟಾಗಿ, ಸ್ಥಳೀಯರಿಂದ ತಾನು ಹೇಗೆ ದಾಳಿಗೊಳಗಾದೆ ಮತ್ತು ಘಾಸಿಗೊಂಡೆ ಎನ್ನುವುದನ್ನು ಅಧ್ಯಯನದಲ್ಲಿ ಭಾಗಿಯಾದ ಬಿಹಾರದಿಂದ ಬಂದ ವಲಸಿಗ ಅನೌಪಚಾರಿಕವಾಗಿ ತಿಳಿಸಿದ. ವಿಡಂಬನೆ ಎಂದರೆ, ಆತ ಇದನ್ನು ವಲಸಿಗ ಕಾರ್ಮಿಕರ ಹಕ್ಕುಗಳ ಉಲ್ಲಂಘನೆಯ ಕುರಿತ ಚರ್ಚೆಯಲ್ಲಿ ತಿಳಿಸಲಿಲ್ಲ ಆದರೆ ಬೆಂಗಳೂರಿನಲ್ಲಿ ವಲಸಿಗ ಕಾರ್ಮಿಕರ ವೈದ್ಯಕೀಯ ಸೌಲಭ್ಯಗಳ ದೊರಕುವಿಕೆಯ ಕುರಿತು ಚರ್ಚಿಸುವಾಗ ತಿಳಿಸಿದ. ಸ್ಥಳೀಯ ಜನರಿಂದ ಗಾಯಗೊಂಡು ಅವನು ಮತ್ತು ಇತರ ವಲಸಿಗ ಕಾರ್ಮಿಕರು ಚಿಕಿತ್ಸೆಗಾಗಿ ಕೆಲವು ದಿನಗಳ ಮಟ್ಟಿಗೆ ಸ್ಥಳೀಯ ಆಸ್ಪತ್ರೆಗೆ ದಾಖಲಾಗಿದ್ದರು. ಬೇಗೂರಿನ ಕಟ್ಟಡ ನಿರ್ಮಾಣ ಸ್ಥಳದಲ್ಲಿನ ಕಾರ್ಮಿಕರ ಕಾಲೋನಿಯ ತಾತ್ಕಾಲಿಕ ವಸತಿಯಲ್ಲಿ, ಯಾವಾಗಲೂ ಶೋಷಣೆಗೊಳಗಾಗುವ ಮತ್ತು

ದಾಳಿಗೊಳಗಾಗುವ ಹೆದರಿಕೆಯಲ್ಲಿ ಈ ವಲಸಿಗರು ವಾಸಿಸುತ್ತಿದ್ದರು. ತಮ್ಮ ಕೆಲಸದ ಸ್ಥಳದಲ್ಲಿ ಅಡಚಣೆ ಅಥವಾ ತೊಂದರೆ ಕೊಡುತ್ತಿದ್ದ ಐದು ವರ್ಷದ ಸ್ಥಳೀಯ ಮಗುವನ್ನು ನಯವಾಗಿ ತಡೆದರೂ, ಕಟ್ಟಡ ನಿರ್ಮಾಣ ಕೆಲಸಗಾರರು ಸ್ಥಳೀಯರ ಆಕ್ರಮಣ ಮತ್ತು ಹಿಂಸೆಯನ್ನು ಎದುರಿಸ ಬೇಕಾಗುತ್ತದೆಂದು ಅವರಲ್ಲಿ ಒಬ್ಬ ತಿಳಿಸಿದ. ತಮ್ಮ ಮೂಲ ಸ್ಥಳದಲ್ಲಿ ಸಾಮಾಜಿಕವಾಗಿ ಪ್ರಬಲವಾದ ಜಾತಿಯ ಜನರು ತಮಗೆ ಯಾವಾಗಲೂ ಕಿರುಕುಳ ನೀಡುತ್ತಿದ್ದರು, ಹಾಗಾಗಿ ವಲಸೆ ಬಂದ ಸ್ಥಳದಲ್ಲಿ ತಮ್ಮ ಮೇಲೆ ಹಿಂಸಾಚಾರ ನಡೆದರೂ ತಮ್ಮ ಜೀವನದಲ್ಲಿ ಈ ವಿದ್ಯಮಾನ ಹೊಸದೇನಲ್ಲ ಎಂದು ಭಾಗವಹಿಸಿದವರಲ್ಲಿ ಒಬ್ಬ ತಿಳಿಸಿದ.

**ವಾಸಿಸುವ ಮತ್ತು ಕೆಲಸದ ಪರಿಸ್ಥಿತಿ: ಯಾದಗಿರಿ ಮತ್ತು ಕೊಪ್ಪಳ**

ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮೂಲಭೂತ ಸೌಲಭ್ಯಗಳ ದೊರಕುವಿಕೆಯ ದೃಷ್ಟಿಯಿಂದ ವಾಸಿಸುವ ಪರಿಸ್ಥಿತಿಯು ತೃಪ್ತಿದಾಯಕಕ್ಕಿಂತ ಕಡಿಮೆಯದಾಗಿತ್ತು. ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಬಹುತೇಕ ಜಿಲ್ಲಾಂತರ್ಗತ ವಲಸಿಗರು ಕಡು ಬಡತನದಲ್ಲಿ ಜೀವಿಸುತ್ತಿದ್ದರು ಮತ್ತು ಮೂಲಭೂತ ಸೌಲಭ್ಯಗಳನ್ನು ಪಡೆಯಲು ಕಷ್ಟಪಡುತ್ತಿದ್ದರು. ಕೊಪ್ಪಳದ ಇಟ್ಟಿಗೆಯ ಭಟ್ಟಿಯಲ್ಲಿ ಕೆಲಸ ಮಾಡುತ್ತಿದ್ದವರ ಪರಿಸ್ಥಿತಿಯು, ಅವರಿಗೆ ಶೌಚಾಲಯ, ನೀರು ಮತ್ತು ನಿರಂತರ ವಿದ್ಯುತ್‌ನಂತಹ ಮೂಲಭೂತ ಸೌಲಭ್ಯಗಳು ದೊರಕದೇ ಇದ್ದುದರಿಂದ ಬಹಳ ಚಿಂತಾಜನಕವಾಗಿತ್ತು. ಅಧ್ಯಯನದಲ್ಲಿ ಭಾಗವಹಿಸಿದ ಬಹುತೇಕ ಜನರಿಗೆ ಕುಡಿಯುವ ನೀರನ್ನು ಪಡೆಯುವುದು ಬಹಳ ದೊಡ್ಡ ಸವಾಲಾಗಿತ್ತು ಮತ್ತು ಸಾಮಾನ್ಯವಾಗಿ ತಮ್ಮ ಮನೆಗಳಿಂದ 500 ಮೀಟರಿಗಿಂತಲೂ ದೂರದಲ್ಲಿರುವ ಸಾರ್ವಜನಿಕ ನೀರಿನ ಮೂಲದಿಂದ ಅವರು ನೀರನ್ನು ತರಬೇಕಾಗಿತ್ತೆಂದು ವಿಶದವಾದ ಸಂದರ್ಶನ ಮತ್ತು ಚರ್ಚೆಯ ಸಮಯದಲ್ಲಿ ಕಂಡುಬಂತು. ವಲಸಿಗರು ಕುಡಿಯುವ ಕೆಟ್ಟ ಗುಣಮಟ್ಟದ ನೀರಿನಿಂದಾಗಿ ಅವರು ಯಾವಾಗಲೂ ಖಾಯಿಲೆಗೊಳಗಾಗುತ್ತಿದ್ದರು. ಕೊಪ್ಪಳದ ಅಧ್ಯಯನದ ಸ್ಥಳಗಳಿಗೆ ಅಧ್ಯಯನದ ತಂಡ ಭೇಟಿ ನೀಡಿದಾಗ ಅವರಿಗೆ ಕಂಡುಬಂದ ಇನ್ನೊಂದು ಮಹತ್ವದ ತೊಂದರೆ ಎಂದರೆ ನೈರ್ಮಲ್ಯ ಮತ್ತು ಶುಚಿತ್ವ. ನೈರ್ಮಲ್ಯ ಮತ್ತು ಶುಚಿತ್ವದ ಪರಿಸ್ಥಿತಿಯು ಅತಿ ಹೀನಾಯವಾಗಿತ್ತು ಮತ್ತು ನಿರಂತರವಾಗಿ ನಿರ್ಲಕ್ಷ ಮಾಡಿದ ಸ್ಥಿತಿಯಲ್ಲಿತ್ತು. ಕಟ್ಟಡ ನಿರ್ಮಾಣ ಕಂಪನಿಗಳು ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವವರ ಜೀವನದ ಸ್ಥಿತಿಯು ಇಟ್ಟಿಗೆ ಭಟ್ಟಿಯಲ್ಲಿ ಕೆಲಸ ಮಾಡುವ ವಲಸಿಗರ ಸ್ಥಿತಿಗೆ ಹೋಲಿಸಿದರೆ ಉತ್ತಮವಾಗಿತ್ತು. ಅವರಿಗೆ ವಿದ್ಯುತ್, ನೀರು ಮತ್ತು ಹಂಚಿಕೊಳ್ಳಬಹುದಾದ ಶೌಚಾಲಯವಿತ್ತು. ಆದಾಗ್ಯೂ, ಒಂದು ಶೌಚಾಲಯವನ್ನು 20ಕ್ಕೂ ಅಧಿಕ ಜನರು ಹಂಚಿಕೊಳ್ಳಬೇಕಿತ್ತು ಮತ್ತು ಶೌಚಾಲಯಗಳು ಬಹಳ ಕೊಳೆಯಾಗಿದ್ದವು. ಒಟ್ಟಿನಲ್ಲಿ, ಜಿಲ್ಲಾಂತರ್ಗತ ವಲಸಿಗರ ಪರಿಸ್ಥಿತಿಯು ಈ ಅಧ್ಯಯನದ ಉಳಿದೆಲ್ಲ ಭಾಗವಹಿಸಿದ ವಲಸಿಗ ಗುಂಪುಗಳಿಗಿಂತ ಬಹಳ ಚಿಂತಾಜನಕವಾಗಿತ್ತು.

**ವಾಸಿಸುವ ಮತ್ತು ಕೆಲಸದ ಪರಿಸ್ಥಿತಿ: ಶೋಲಾಪುರ**

ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ವಲಸಿಗ ಕೆಲಸಗಾರರ ಪರಿಸ್ಥಿತಿಗೆ ಹೋಲಿಸಿದರೆ ಶೋಲಾಪುರದಲ್ಲಿರುವ ವಲಸಿಗ ಕಾರ್ಮಿಕರ ಸ್ಥಿತಿ ಉತ್ತಮವಾಗಿತ್ತು. ತಾವು ಸರಿಯಾದ ಸಮಯಕ್ಕೆ ವೇತನವನ್ನು ಪಡೆಯುವುದೇ ತಮ್ಮ ಸ್ಥಿತಿ ಚೆನ್ನಾಗಿರಲು ಪ್ರಮುಖ ಕಾರಣ ಎಂದು ಭಾಗವಹಿಸಿದವರು ಹೇಳಿದರು. ಇತ್ತೀಚೆಗಿನ ದಿನಗಳಲ್ಲಿ ಶೋಲಾಪುರವು ಕಾರ್ಖಾನೆಗಳ ಮಹತ್ವವನ್ನು ಕಳೆದುಕೊಳ್ಳುತ್ತಿರುವ ನಗರವಾಗಿ ಕಂಡುಬರುತ್ತಿದೆ. ಬೆಳಗಾವಿ ಮತ್ತು ಜೋಯ್ಡಾದಿಂದ ಬರುವವರಿಗೆ ಜನಪ್ರಿಯ ಸ್ಥಳವಾಗಿ ಉಳಿದಿಲ್ಲ. ಉತ್ತರ ಕರ್ನಾಟಕದ ರಾಯಚೂರು, ಗುಲ್ಬರ್ಗಾ ಮತ್ತು ವಿಜಯಪುರ ಜಿಲ್ಲೆಗಳ ವಲಸಿಗ ಕೆಲಸಗಾರರು ಶೋಲಾಪುರದಲ್ಲಿ ನೆಲೆಸಿದ್ದಾರೆ ಮತ್ತು ಅವರು ಶೋಲಾಪುರದಲ್ಲೇ ನೆಲೆ ನಿಂತಿದ್ದಾರೆ. ಆಸಕ್ತಿದಾಯಕವೆಂದರೆ, ವಾಣಿಜ್ಯಿಕ ಮಹತ್ವ ಕಡಿಮೆಯಾಗುತ್ತಿರುವ ಈ ಗಮ್ಯ ತಾಣವು ಯಾದಗಿರಿ ಮತ್ತು ಕೊಪ್ಪಳಕ್ಕಿಂತ, ಸಾಕಷ್ಟು ಉತ್ತಮವಾದ ವಾಸಿಸುವ ಮತ್ತು ಕೆಲಸದ ಪರಿಸ್ಥಿತಿಯನ್ನು ಹೊಂದಿದೆ. ಸರಕಾರ ತೆಗೆದುಕೊಂಡ ಕ್ರಮಗಳಿಂದಾಗಿ, ಹಲವಾರು ವಲಸಿಗ ಕೆಲಸಗಾರರು ಸಕ್ರಮವಾದ ಬಡಾವಣೆಗಳಲ್ಲಿ ಸ್ವಂತ ಮನೆಗಳನ್ನು ಹೊಂದಿದ್ದಾರೆ. ಅಂತಹ ಬಡಾವಣೆಗಳಲ್ಲಿ ಒಂದು, ಜಗಜೀವನ್ ರಾಂ ಕಾಲೊನಿ, ಇಲ್ಲಿ ಅಧ್ಯಯನದಲ್ಲಿ ಭಾಗವಹಿಸಿದ ಬಹುತೇಕ ವಲಸಿಗರು ನೆಲೆಸಿದ್ದಾರೆ. ಅವರ ಜೀವನವನ್ನು ಸುಲಭಗೊಳಿಸುವ ಮತ್ತು ಕೆಲ ಮಟ್ಟಿಗೆ ಆರೋಗ್ಯದಾಯಕ ಗೊಳಿಸುವ ನಿರಂತರ ವಿದ್ಯುತ್, ಶೌಚಾಲಯ ಮತ್ತು ನೀರಿನ ಸರಬರಾಜು ಒದಗಿಸಲಾಯಿತು. ಅವರ ಜೀವನದ ಪರಿಸ್ಥಿತಿಯ ಪರಿಣಾಮ, ಕ್ರಮಬದ್ಧವಾಗಿ ಶಾಲೆಗೆ ಹೋಗುವ ಮತ್ತು ಶುದ್ಧವಾದ ಬಟ್ಟೆ ಧರಿಸಿದ ಮಕ್ಕಳಲ್ಲಿ ಇದು ಸ್ಪಷ್ಟವಾಗಿ ಕಾಣುತ್ತಿತ್ತು.

**ವಾಸಿಸುವ ಮತ್ತು ಕೆಲಸದ ಪರಿಸ್ಥಿತಿ: ಗೋವಾ**

ಜೋಯ್ಡಾ ಮತ್ತು ಬೆಳಗಾವಿಯ ವಲಸಿಗ ಕೆಲಸಗಾರರನ್ನು ಗೋವಾದ ಬೆರ್ನಾ, ಪೊಂಡಾ, ವಾಸ್ಕೋ ಮತ್ತು ಪೊರ್ವೊರಿನ್ ಸ್ಥಳಗಳಲ್ಲಿ ಸಂದರ್ಶಿಸಲಾಯಿತು. ಗೋವಾದಲ್ಲಿರುವ ವಲಸಿಗರು ಮುಖ್ಯವಾಗಿ ಆತಿಥ್ಯದ ಉದ್ದಿಮೆ, ಚಿಕ್ಕ ವ್ಯಾಪಾರ ಮತ್ತು ಕಟ್ಟಡ

ನಿರ್ಮಾಣ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಅಧ್ಯಯನದಲ್ಲಿ ಭಾಗಿಯಾದ ವಲಸಿಗರು ಸಾಮಾನ್ಯವಾಗಿ ತಮ್ಮ ಮಾಲೀಕರು ಒದಗಿಸಿದ ವಸತಿಗಳಲ್ಲಿ ವಾಸಿಸುತ್ತಿದ್ದರು. ಆದರೆ ಅವರಲ್ಲಿ ಹೆಚ್ಚಿನವರು ಗೋವಾದಲ್ಲಿ ನೆಲೆ ನಿಂತರು ಮತ್ತು ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದರು. ಭಾಗವಹಿಸಿದವರಲ್ಲಿ ಜೋಯ್ಡಾದಿಂದ ಬಂದವರು ಸಾಮಾನ್ಯವಾಗಿ ಆತಿಥ್ಯದ ಉದ್ದಿಮೆಯಲ್ಲಿದ್ದರು ಹಾಗೂ ಬೆಳಗಾವಿಯ ವಲಸಿಗರು ಕಟ್ಟಡ ನಿರ್ಮಾಣ ಕೆಲಸದಲ್ಲಿದ್ದರು ಮತ್ತು ಹಲವರು ಟ್ರಕ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಗೋವಾದಲ್ಲಿರುವ ಕಾಲೋಚಿತ ವಲಸಿಗರು ಸಾಮಾನ್ಯವಾಗಿ ಗೋವಾದ ಅತಿ ಹೆಚ್ಚು ಪ್ರವಾಸಿಗರು ಬರುವ ಸಮಯವಾದ ಅಕ್ಟೋಬರ್ ಮತ್ತು ಏಪ್ರಿಲ್ ಮಧ್ಯದಲ್ಲಿ ಬರುತ್ತಿದ್ದರು. ಗೋವಾದ ಕ್ಷೇತ್ರ ಅಧ್ಯಯನವು ಅಕ್ಟೋಬರ್ ತಿಂಗಳಿಗೂ ಮೊದಲೇ ಮುಗಿದಿದ್ದರಿಂದ, ಅಧ್ಯಯನ ತಂಡಕ್ಕೆ ಕಾಲೋಚಿತ ವಲಸಿಗರ ಸಮೀಕ್ಷೆ ನಡೆಸಲು ಸಾಧ್ಯವಾಗಲಿಲ್ಲ. ಡಿಸೆಂಬರ್‌ನಲ್ಲಿ ಗೋವಾಕ್ಕೆ ಅನಧಿಕೃತ ಪ್ರವಾಸ ಕೈಗೊಂಡಾಗ, ಪ್ರಕರಣ ಅಧ್ಯಯನ ತಂಡದ ಸದಸ್ಯರಲ್ಲಿ ಒಬ್ಬರಿಗೆ, ಕೆಲವು ಕಾಲೋಚಿತ ವಲಸಿಗರೊಡನೆ ಮಾತನಾಡುವ ಸಂದರ್ಭ ಒದಗಿ ಬಂತು. ಗೋವಾದಲ್ಲಿರುವ ಕಾಲೋಚಿತ ವಲಸಿಗರ ಸ್ಥಿತಿಯು ತುಂಬಾ ದುರ್ಬಲವಾಗಿತ್ತು. ಗೋವಾದಲ್ಲಿ ನೆಲೆ ನಿಂತವರ ವಾಸಿಸುವ ಸ್ಥಿತಿ ಒಂದು ರೀತಿಯಲ್ಲಿ ತೃಪ್ತಿಕರವಾಗಿದ್ದರೆ, ಕಾಲೋಚಿತ ವಲಸಿಗರು ಸ್ಥಳೀಯ ಪುಂಡರ ಮತ್ತು ಪೋಲೀಸರ ದೌರ್ಜನ್ಯಕ್ಕೆ ಗುರಿಯಾಗುತ್ತಿದ್ದರು. ಹಲವು ಹಂತಗಳಲ್ಲಿ ಅವರು ಲಂಚವನ್ನು ಕೊಡಬೇಕಾಗುತ್ತಿತ್ತು. ಬೆಳಗಾವಿಯಿಂದ ಬಂದ ಕಲಂಗೂಟ್ ದಂಡೆಯಲ್ಲಿ ಮಾಲೀಶು ಮಾಡುವ ಕೆಲಸದಲ್ಲಿದ್ದ ಇಬ್ಬರು ಕಾಲೋಚಿತ ವಲಸಿಗ ಮಹಿಳೆಯರು, ಬೆಳಗಾವಿಯಲ್ಲಿ ಕೃಷಿ ಕೆಲಸಗಾರರಾಗಿ ದುಡಿದರೆ, ಅರ್ಧ ದಿನದ ಕೆಲಸಕ್ಕೆ ತಮಗೆ ರೂ.100ಕ್ಕಿಂತ ಹೆಚ್ಚಿಗೆ ಸಿಗುವುದಿಲ್ಲ ಮತ್ತು 6–8 ಗಂಟೆಗಳ ಕಾಲ ಕೆಲಸ ಮಾಡಿದರೆ ರೂ.150 ಸಿಗುತ್ತದೆ ಎಂದು ಹೇಳಿದರು. ಹಾಗಾಗಿ ಅವರು ಪ್ರತೀ ವರ್ಷ ಗೋವಾಗೆ ಬಂದು ಬಹುತೇಕ ಆರೋಗ್ಯ ಮತ್ತು ಮದುವೆಗೆ ಸಂಬಂಧಿಸಿದಂತೆ ಹೆಚ್ಚಿನ ಖರ್ಚುಗಳಿಗಾಗಿ, ಸ್ವಲ್ಪ ಹಣ ಉಳಿಸುತ್ತಾರೆ. ಕಾಲೋಚಿತ ವಲಸಿಗರು ಬಹುತೇಕ ವಿದ್ಯುತ್ ಮತ್ತು ಶೌಚಾಲಯದ ಅನುಕೂಲತೆಗಳಿರುವ ಆದರೆ ಕುಡಿಯುವ ನೀರಿನ ಅನುಕೂಲ ಇಲ್ಲದಿರುವ ಸಮುದ್ರ ದಂಡೆಯ ಸಮೀಪದಲ್ಲಿ ವಾಸಿಸುತ್ತಾರೆ.

**ವಾಸಿಸುವ ಮತ್ತು ಕೆಲಸದ ಪರಿಸ್ಥಿತಿ: ಮೈಸೂರು**

ಮೈಸೂರು ನಗರವು ರೇಶ್ಮೆಗೆ ಮತ್ತು ಶ್ರಿಗಂಧಕ್ಕೆ ಹೆಸರುವಾಸಿಯಾಗಿದೆ, ಇದರ ಕಾರ್ಖಾನೆಗಳು ವಲಸಿಗ ಕೆಲಸಗಾರರಲ್ಲೂ ಪ್ರಖ್ಯಾತವಾಗಿವೆ. ಈ ನಗರಕ್ಕೆ ಹೊಂದಿಕೊಂಡಂತೆ ಕೆಲವು ಕೈಗಾರಿಕಾ ಉಪನಗರಗಳಿವೆ. ಮೈಸೂರಲ್ಲದೇ ನಂಜನಗೂಡು ಕೈಗಾರಿಕಾ ಪ್ರದೇಶದಲ್ಲೂ ಅಧ್ಯಯನವನ್ನು ನಡೆಸಲಾಯಿತು. ನಂಜನಗೂಡಿನಲ್ಲಿ ಸುಮಾರು 60–70 ಕೈಗಾರಿಕೆಗಳಿವೆ ಮತ್ತು ಹೆಚ್ಚಿನ ಕಾರ್ಖಾನೆಗಳಲ್ಲಿ ವಲಸಿಗ ಕಾರ್ಮಿಕರನ್ನು, ಮಧ್ಯವರ್ತಿಯಂತೆ ಕೆಲಸ ಮಾಡುವ ಮತ್ತು ಕೆಲಸಗಾರರ ವೇತನ ನೀಡುವ ಜವಾಬ್ದಾರಿ ಹೊಂದಿರುವ ಗುತ್ತಿಗೆದಾರರ ಮೂಲಕ ನೇಮಿಸಿಕೊಳ್ಳಲಾಗುತ್ತದೆ. ಈ ಗುತ್ತಿಗೆದಾರರರಿಗೆ ಕೆಲಸಗಾರರು ಯಾವಾಗಲೂ ಕೆಲವು ಪಾಲು ಕಮಿಶನ್ ನೀಡಬೇಕಾಗುತ್ತದೆ. ವಲಸಿಗ ಕಾರ್ಮಿಕರು ಸಾಮಾನ್ಯವಾಗಿ ತಮ್ಮ ಉದ್ಯೋಗದಾತ ನೀಡಿರುವ ಸೂರಿನಡಿಯಲ್ಲಿ ವಾಸಿಸುತ್ತಾರೆ. ಈ ಸೂರುಗಳಲ್ಲಿ ವಿದ್ಯುತ್ ಹಾಗೂ ಶೌಚಾಲಯದ ಅನುಕೂಲಗಳಿವೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ, ಜನರು ನೀರನ್ನು ಹೊರಗಿನಿಂದ ತರಬೇಕಾಗುತ್ತದೆ. ನಂಜನಗೂಡು ಹಾಗೂ ರೀಡ್ ಆಂಡ್ ಟೇಲರ್, ನೆಸ್ಲೆಯಂತಹ ಕಂಪನಿಗಳಲ್ಲಿ ಕೆಲಸ ಮಾಡುವ ವಲಸಿಗ ಕೆಲಸಗಾರರಲ್ಲದೇ, ಮೈಸೂರು ನಗರದ ನರ್ಜುರಬಾದ್‌ನಲ್ಲಿ ನೆಲೆಸಿರುವ ವಲಸಿಗರ ಮೇಲೆಯೂ ಅಧ್ಯಯನ ನಡೆಸಲಾಯಿತು. ಇಂತಹ ನಗರ ಪ್ರದೇಶಗಳ ಬಡಾವಣೆಯಲ್ಲಿ ನೆಲೆಸಿರುವ ವಲಸಿಗರು ಸಾಮಾನ್ಯವಾಗಿ ಸಿಂಪ್ಲೆಕ್ಸ್ ಎನ್ನುವ ಕಟ್ಟಡ ನಿರ್ಮಾಣ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಕಂಪನಿ ಒದಗಿಸಿದ ನಿವಾಸಗಳಲ್ಲಿ ವಾಸಿಸುತ್ತಿದ್ದರು. ಸ್ಟೀಲ್ ಶೀಟಿನ ಈ ನಿವಾಸಗಳಲ್ಲಿ ನೀರು ಮತ್ತು ವಿದ್ಯುತ್ ಸೌಲಭ್ಯಗಳುಳ್ಳ 30 ಕೊಠಡಿಗಳಿದ್ದವು. ನಿವಾಸದಲ್ಲಿ ಮೂರು ಶೌಚಾಲಯಗಳಿದ್ದವು. ಬೆಂಗಳೂರು ಮತ್ತು ಮೈಸೂರಿನಲ್ಲಿ ಪ್ರತಿ ದಿನಕ್ಕೆ ಪುರುಷರಿಗೆ ರೂ.400 ಮತ್ತು ಮಹಿಳೆಯರಿಗೆ ರೂ.300–350 ವೇತನವಿದೆ. ಕೆಲಸಗಾರರು ತಮ್ಮ ಸಂಬಳವನ್ನು ಗುತ್ತಿಗೆದಾರರರಿಂದ ಪಡೆಯುತ್ತಿದ್ದರು ಮತ್ತು ಕೆಲವು ಸಂದರ್ಭಗಳಲ್ಲಿ ಕೆಲಸಗಾರರು 3–4 ತಿಂಗಳಿನಿಂದ ಸಂಬಳ ಪಡೆದಿರಲಿಲ್ಲ. ನೆಸ್ಲೆಯಂತಹ ಸಂಘಟಿತ ಕೈಗಾರಿಕಾ ಘಟಕಗಳಲ್ಲಿ, ವಲಸಿಗ ಕಾರ್ಮಿಕರು ಆರೋಗ್ಯ ವಿಮೆ, ಭವಿಷ್ಯ ನಿಧಿ(ಪಿಎಫ್) ಮತ್ತು ಇನ್ನುಳಿದ ಸಾಮಾಜಿಕ ಭದ್ರತೆಯ ಪ್ರಯೋಜನಗಳಿಗೆ ಹಕ್ಕುದಾರರಾಗುತ್ತಾರೆ, ಆದರೆ ಚಿಕ್ಕ ಘಟಕಗಳಲ್ಲಿ ಅವರ ಸಾಮಾಜಿಕ ಭದ್ರತೆಯ ಅನುಕೂಲಗಳು ಖಾಸಗೀ ಗುತ್ತಿಗೆದಾರರ ಮುಖಾಂತರ ತಲುಪುತ್ತವೆ. ಹಾಗಾಗಿ ದೊಡ್ಡ ಘಟಕಗಳು ಮತ್ತು ಸಂಘಟಿತ ಘಟಕಗಳಿಗಿಂತ ಚಿಕ್ಕ ಘಟಕಗಳಲ್ಲಿ ಶೋಷಣೆ ಹೆಚ್ಚಾಗಿರುತ್ತದೆ.

**ವಾಸಿಸುವ ಮತ್ತು ಕೆಲಸದ ಪರಿಸ್ಥಿತಿ: ಬೆಂಗಳೂರು**

ಭಾಗವಹಿಸಿದ ಒಟ್ಟು 518 ಕಾರ್ಮಿಕರಲ್ಲಿ, ಎಲ್ಲ ವರ್ಗದ ವಲಸಿಗರ ಜನಪ್ರಿಯ ಗಮ್ಯ ಸ್ಥಳವಾಗಿ ಹೆಸರು ಮಾಡಿರುವ ನಗರ, ಬೆಂಗಳೂರಿನಲ್ಲಿ 244 ಜನರನ್ನು ಸಂದರ್ಶಿಸಲಾಯಿತು. ಆದರೆ, ಬೆಂಗಳೂರಿನಲ್ಲಿ ಬಹುತೇಕ ವಲಸಿಗ ಕಾರ್ಮಿಕರು ಕರುಣಾಜನಕ

ಸ್ಥಿತಿಯಲ್ಲಿ ಬದುಕುತ್ತಿದ್ದರು. ಬೆಂಗಳೂರಿನ ಐಡಿಯಲ್ ಹೋಮ್ ಕ್ಲಬ್, ಕೆಂಚನಹಳ್ಳಿ, ಆದಿತ್ಯ ಲೇ ಔಟ್, ಬೇಗೂರು, ಬಂಗಾರಪ್ಪ ಗುಡ್ಡೆ, ಉತ್ತರಹಳ್ಳಿ ಮತ್ತು ರಾಜರಾಜೇಶ್ವರಿ ನಗರದಲ್ಲಿರುವ ವಲಸಿಗರ ಅಧ್ಯಯನ ನಡೆಸಲಾಯಿತು. ಇವುಗಳಲ್ಲಿ ಮೊದಲ ಮೂರು ನಿವಾಸಗಳಲ್ಲಿ ವಿದ್ಯುತ್, ನೀರು ಮತ್ತು ಶೌಚಾಲಯ ಸೌಲಭ್ಯಗಳು ಇರಲಿಲ್ಲ. ಆದಿತ್ಯ ಕಾಲೋನಿಯಲ್ಲಿರುವವರಿಗೆ ಬಯಲಿನಲ್ಲಿ ಶೌಚ ಮಾಡುವುದು ಸಾಮಾನ್ಯ ಅಭ್ಯಾಸವಾಗಿತ್ತು. ಕೆಂಚನಹಳ್ಳಿ ಮತ್ತು ರಾಜರಾಜೇಶ್ವರಿ ನಗರದಲ್ಲಿ ಕಾರ್ಮಿಕರ ವಸತಿಗಳಿಗೆ ಸಾರಿಗೆ ಸಂಪರ್ಕವಿಲ್ಲದ ತಲುಪಲು ಕಷ್ಟವಾದ ಜಾಗದಲ್ಲಿತ್ತು. ಅಧ್ಯಯನದಲ್ಲಿ ಭಾಗಿಯಾದ ಬೇರೆ ರಾಜ್ಯದವರು ಬೇಗೂರು ಪ್ರದೇಶದಲ್ಲಿ ವಾಸಿಸುತ್ತಿದ್ದರು ಮತ್ತು ಡಿಎಲ್‌ಎಫ್ ಮತ್ತು ಎಸ್‌ಆರ್‌ಎಸ್‌ನಂತಹ ದೊಡ್ಡ ಕಟ್ಟಡ ನಿರ್ಮಾಣ ಕಂಪನಿಗಳಿಗೆ ಕೆಲಸ ಮಾಡುತ್ತಿದ್ದರು. ಈ ಎಲ್ಲ ಕಾರ್ಮಿಕರ ಸೂರುಗಳಲ್ಲಿ ನೀರು, ವಿದ್ಯುತ್ ಮತ್ತು ಶೌಚಾಲಯದಂತಹ ಮೂಲಭೂತ ಸೌಲಭ್ಯಗಳಿದ್ದವು.




ಬೆಂಗಳೂರಿನಲ್ಲಿರುವ ವಲಸಿಗರ ಸೂರು

ಈ ಸ್ಥಳಗಳಲ್ಲದೇ, ಬೆಂಗಳೂರಿನಲ್ಲಿರುವ ಎರಡು ಉಡುಪಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ವಲಸಿಗರನ್ನು ಈ ಅಧ್ಯಯನಕ್ಕಾಗಿ ಸಂದರ್ಶಿಸಲಾಯಿತು. ಉಡುಪಿನ ಕಾರ್ಖಾನೆಯಲ್ಲಿ ಹೆಚ್ಚಿನ ಕೆಲಸಗಾರರೆಲ್ಲ ಇಪ್ಪತ್ತರ ವಯಸ್ಸಿನ ಆಸುಪಾಸಿನಲ್ಲಿದ್ದರು ಮತ್ತು ಯಾದಗಿರಿ ಮತ್ತು ಕೊಪ್ಪಳದಿಂದ ಬಂದ ಈ ವಲಸಿಗರಲ್ಲಿ, ಮದುವೆಗಾಗಿ ಹಣ ಉಳಿಸುವ ಮತ್ತು ಮದುವೆ ಆದ ನಂತರ ಕಾರ್ಖಾನೆಯಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸುವ ಸಾಮಾನ್ಯ ಅಭ್ಯಾಸ ಅವರಲ್ಲಿತ್ತು. ತಮ್ಮ ಹಾಗೂ ತಮ್ಮ ಉದ್ಯೋಗದಾತರ ಗುರುತನ್ನು ರಹಸ್ಯವಾಗಿಡುವ ಷರತ್ತಿನ ಮೇಲೆ ಕೆಲವು ಮಹಿಳೆಯರು, ಕೆಲಸದ ಸ್ಥಳದ ಮತ್ತು ತಮ್ಮ ವಸತಿ ಶಾಲೆಯಲ್ಲಿನ ದುರ್ಬಲ ಪರಿಸ್ಥಿತಿಯ ಕುರಿತು ಹಂಚಿಕೊಂಡರು. ಅವರ ಉದ್ಯೋಗದಾತರು ವಸತಿ ಶಾಲೆಯ ಬಾಡಿಗೆಯನ್ನು ಮತ್ತು ವಸತಿ ಶಾಲೆಯಲ್ಲಿ ಒದಗಿಸಿದ ಆಹಾರಕ್ಕೆ ಮಾಡಿದ ಖರ್ಚನ್ನು ಈ ಕೆಲಸಗಾರರ ವೇತನ/ಸಂಬಳದಿಂದ ಕಡಿತಗೊಳಿಸುತ್ತಿದ್ದರು ಮತ್ತು ಅವರು ಸಾಮಾನ್ಯವಾಗಿ ತಿಂಗಳಿಗೆ ರೂ.4000 ದಿಂದ ರೂ.7000ಕ್ಕಿಂತ ಹೆಚ್ಚಿಗೆ ಸಂಪಾದಿಸುತ್ತಿರಲಿಲ್ಲ. ಕಾರ್ಖಾನೆ ಮತ್ತು ವಸತಿ ಶಾಲೆಗಳಲ್ಲಿ ಶಿಸ್ತಿನ ಹೆಸರಿನಲ್ಲಿ ಮೌಖಿಕ ಹಾಗೂ ದೈಹಿಕ ನಿಂದನೆಯು ಬಹಳ ಸಾಮಾನ್ಯವಾಗಿತ್ತು. ವಿಶದವಾದ ಸಂದರ್ಶನದ ಸಂದರ್ಭದಲ್ಲಿ ಭಾಗವಹಿಸಿದ ಕೆಲವರು ಲೈಂಗಿಕ ಹಿಂಸಾಚಾರದಿಂದ ಬಲಾತ್ಕಾರದವರೆಗೆ ನಡೆದ ಲೈಂಗಿಕ ದೌರ್ಜನ್ಯಗಳನ್ನು ಕೂಡ ಹಂಚಿಕೊಂಡರು. ಇಪ್ಪತ್ತರ ವಯಸ್ಸಿನ ಆರಂಭದಲ್ಲಿರುವ ಹೆಚ್ಚಿನ ಈ ಯುವತಿಯರು, ಈ ಹಿಂಸಾಚಾರದ ವಿಚಾರಗಳನ್ನು ಹಂಚಿಕೊಳ್ಳುವಾಗ ಬಹಳ ಹುಷಾರಾಗಿದ್ದರು. ಕಾರ್ಖಾನೆಯಲ್ಲಿ ಸಂದರ್ಶಿಸಿದಾಗ ಆಡಳಿತ ಮಂಡಳಿಯನ್ನು ಈ ಮಹಿಳೆಯರಲ್ಲಿ ಹೆಚ್ಚಿನವರು ಹೊಗಳಿದರು ಮತ್ತು ತಾವು ತಮ್ಮ ಮನೆಗಳಿಗಿಂತ ವಸತಿ ಶಾಲೆಗಳಲ್ಲಿ ಬಹಳ ಉತ್ತಮ ಜೀವನ ನಡೆಸುತ್ತಿದ್ದೇವೆಂದು ಹೇಳಿದರು. ಅಧ್ಯಯನದ ತಂಡವು ಕೆಲವರೊಂದಿಗೆ ಮಾತನಾಡಿ ಅವರ ವಸತಿ ಶಾಲೆಯಲ್ಲಿ ವಿಶದವಾದ ಸಂದರ್ಶನ ನಡೆಸಲು ಒಪ್ಪಿಸಿದರು ಮತ್ತು ಅದರಿಂದ ಅವರು ಮುಕ್ತವಾಗಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಸಾಧ್ಯವಾಯಿತು. ಕಾರ್ಖಾನೆಗಳಲ್ಲಿನ ಅವರ ದುರ್ಬಲ ಪರಿಸ್ಥಿತಿಯೇ, ಅವರು ತಮ್ಮ ಸಹೋದರಿಯರು ಮತ್ತು ಇತರ ಮಹಿಳಾ ಸಂಬಂಧಿಕರು ಉಡುಪಿನ ಕಾರ್ಖಾನೆಗಳನ್ನು ಸೇರುವುದು ಇಷ್ಟವಿಲ್ಲದಿರುವುದನ್ನು ವಿವರಿಸುತ್ತದೆ.

**ವಲಸಿಗ ಕಾರ್ಮಿಕರ ಹಕ್ಕುಗಳು**




"ಅಂತರ್-ರಾಜ್ಯ ವಲಸಿಗ ಕೆಲಸಗಾರರ( ಉದ್ಯೋಗದ ನಿಬಂಧನೆ ಮತ್ತು ಸೇವೆಯ ಸ್ಥಿತಿ/ ಷರತ್ತು)ಅಧಿನಿಯಮ 1979", ಇದರ ಕುರಿತು ನೇರವಾದ ಪ್ರಶ್ನೆಯನ್ನು ಕೇಳದೇ, ಅವರಿಗೆ ವಲಸಿಗ ಕೆಲಸಗಾರರ ಹಕ್ಕುಗಳನ್ನು ಕಾಪಾಡುವ ಯಾವುದಾದರೂ ಕಾರ್ಯನೀತಿಗಳ ಕುರಿತು ಅರಿವಿದೆಯಾ ಎಂದು ಪ್ರಶ್ನಿಸಿದರು. ಭಾಗವಹಿಸಿದ ಕಾರ್ಮಿಕರು, ಉದ್ಯೋಗದಾತರ ಪ್ರತಿನಿಧಿಗಳು(ಆಡಳಿತ ಮಂಡಳಿ ಮತ್ತು/ಅಥವಾ ಮಾನವ ಸಂಪನ್ಮೂಲದ ಸಿಬ್ಬಂದಿ) ಮತ್ತು ಅಧ್ಯಯನದಲ್ಲಿ ಭಾಗವಹಿಸಿದ ಕಾರ್ಮಿಕರ ಗುತ್ತಿಗೆದಾರರೊಡನೆ ನಡೆಸಿದ ವಿಶದವಾದ ಸಂದರ್ಶನದ ಸಂದರ್ಭದಲ್ಲಿಯೂ ಕೇಳಲಾಯಿತು. ಸುಮಾರು ಶೇಕಡಾ 80 ಪುರುಷರು ಮತ್ತು ಭಾಗವಹಿಸಿದ ಶೇಕಡಾ 80 ಮಹಿಳೆಯರಿಗೆ ಇಂತಹ ಯಾವುದೇ ಕಾರ್ಯನೀತಿಗಳ ಅರಿವಿರಲಿಲ್ಲ. ವಲಸಿಗ ಕೆಲಸಗಾರರ ಉದ್ಯೋಗದಾತರ ಎಲ್ಲ ಪ್ರತಿನಿಧಿಗಳಿಗೆ (ಒಟ್ಟು 7), ವಲಸಿಗ ಕಾರ್ಮಿಕರ ಹಕ್ಕುಗಳ ರಕ್ಷಣೆಯ ಕುರಿತು ಇರುವ ಕಾರ್ಯನೀತಿಗಳು ಮತ್ತು ಕಾನೂನುಗಳ ಅರಿವಿತ್ತು. ಆದರೆ ಕೇವಲ ಇಬ್ಬರಿಗೆ ಮಾತ್ರ "ಅಂತರ್-ರಾಜ್ಯ ವಲಸಿಗ ಕೆಲಸಗಾರರ (ಉದ್ಯೋಗದ ನಿಬಂಧನೆ ಮತ್ತು ಸೇವೆಯ ಸ್ಥಿತಿ/ ಷರತ್ತು)ಅಧಿನಿಯಮ 1979"ರ ಬಗ್ಗೆ ತಿಳಿದಿತ್ತು. ಕಾರ್ಮಿಕ ಗುತ್ತಿಗೆದಾರರಲ್ಲಿ, 3 ಜನರಿಗೆ ಅಧಿನಿಯಮದ ಅರಿವಿತ್ತು ಆದರೆ ಉಳಿದ 5 ಜನರಿಗೆ ವಲಸಿಗ ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಕಾನೂನು/ಕಾರ್ಯನೀತಿಗಳು ಇರುವ ವಿಚಾರ ಕೇಳಿ ಗೊತ್ತಿತ್ತು.

ಮಹಿಳಾ ಕಾರ್ಮಿಕರೊಡನೆ ತಾರತಮ್ಯ ಮತ್ತು ಹಿಂಸಾಚಾರಗಳು ಪ್ರಚಲಿತವಾಗಿದ್ದರೂ, ಕೆಲಸದ ಸ್ಥಳದಲ್ಲಿ ಈ ತೊಂದರೆಗಳನ್ನು ಗುರುತಿಸಲು ಯಾವುದೇ ಕರಾರು/ಕಾರ್ಯನೀತಿ/ಸಮಿತಿಗಳನ್ನು ನೋಡಿರಲಿಲ್ಲ ಮತ್ತು ಕೇಳಿರಲಿಲ್ಲವೆಂದು ಭಾಗವಹಿಸಿದ ಬಹುತೇಕರು ಹೇಳಿದರು. ಅವರಲ್ಲಿ ಹೆಚ್ಚಿನವರಿಗೆ ವಲಸಿಗ ಕೆಲಸಗಾರರ ಹಕ್ಕುಗಳು ಮತ್ತು ಆ ಹಕ್ಕುಗಳನ್ನು ರಕ್ಷಿಸಲು ಇರುವ ಯಾವುದೇ ಕಾರ್ಯನೀತಿಗಳ ಕುರಿತಾಗಲೀ ತಿಳಿದಿರಲಿಲ್ಲ. ವಲಸಿಗ ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಇರುವ ಕಾರ್ಯನೀತಿಗಳ ಇರುವಿಕೆಯ ಕುರಿತು ಮಹಿಳೆ ಮತ್ತು ಪುರುಷರಲ್ಲಿ ಸಮಾನವಾಗಿ ಇರುವ ಅಜ್ಞಾನವನ್ನು ಈ ಕೆಳಗಿರುವ ಪಟ್ಟಿಯು ತೋರಿಸುತ್ತದೆ.

ಎಲ್ಲ ಅಧ್ಯಯನ ಸ್ಥಳಗಳಲ್ಲಿರುವ ಶೇಕಡಾ 92 ವಲಸಿಗರಿಗೆ, ವಲಸಿಗ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಇರುವ ಕಾರ್ಯನೀತಿಗಳ ತಿಳುವಳಿಕೆ ಇಲ್ಲದಿರುವುದನ್ನು, ವಲಸೆಯ ಗಮ್ಯ ಸ್ಥಾನದ ಕುರಿತಂತೆ ಇರುವ ದತ್ತಾಂಶಗಳು ತಿಳಿಸುತ್ತವೆ. ಶೋಲಾಪುರದ ವಿಚಾರದಲ್ಲೂ, ಭಾಗವಹಿಸಿದ ಯಾರೂ ಅಂತಹ ಕಾರ್ಯನೀತಿಗಳ ಕುರಿತು ಕೇಳಿರಲಿಲ್ಲ.

| ಲಿಂಗ | ವಲಸಿಗ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ಯಾವುದಾದರೂ ಕಾರ್ಯನೀತಿಯ ಕುರಿತು ನಿಮಗೆ ಅರಿವಿದೆಯೇ? | | |
|---|---|---|---|
| | ಹೌದು | ಇಲ್ಲ | ಹೇಳಲಾಗದು |
| ತೃತೀಯ ಲಿಂಗಿ | 0% | 66.6% | 33.3% |
| ಮಹಿಳೆ | 4.67% | 83.48% | 11.85% |
| ಪುರುಷ | 4.40% | 83.65% | 11.93% |

ಈ ಕೆಳಗಿನ ಪಟ್ಟಿ ತೋರಿಸುವಂತೆ, ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಅಧ್ಯಯನದಲ್ಲಿ ಭಾಗವಹಿಸಿದ ಶೇಕಡಾ 5ಕ್ಕಿಂತ ಕಡಿಮೆ ಮತ್ತು ಗೋವಾದ ಶೇಕಡಾ 4 ಕ್ಕಿಂತ ಕಡಿಮೆ ವಲಸಿಗರು, ವಲಸಿಗರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತಹ ನಿರ್ದಿಷ್ಟ ಕಾರ್ಯನೀತಿಗಳ ಅರಿವು ಇದೆ ಎಂದರು.

| ವಲಸಿಗ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ಯಾವುದಾದರೂ ಕಾರ್ಯನೀತಿಯ ಅರಿವು ನಿಮಗೆ ನಿಮಗಿದೆಯೇ? | | | |
|---|---|---|---|
| ವಲಸೆ ಬಂದ ಸ್ಥಳ | ಹೌದು | ಇಲ್ಲ | ಗೊತ್ತಿಲ್ಲ |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸೆ | 2% | 92% | 6% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ವಲಸಿಗರು | 3.89% | 97.53% | 3.57% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬೇರೆ ರಾಜ್ಯದ ವಲಸಿಗರು | 4.81% | 95.18% | 0% |
| ಗೋವಾದಲ್ಲಿರುವ ಉತ್ತರ ಬೆಳಗಾವಿ ಮತ್ತು ಉತ್ತರ ಕನ್ನಡದ ವಲಸಿಗರು | 3.92% | 96.07% | 0% |
| ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ವಲಸಿಗರು | 0% | 100% | 0% |

ವಲಸಿಗ ಕಾರ್ಮಿಕರ ಕುಂದುಕೊರತೆಗಳನ್ನು ಪರಿಹರಿಸುವ ವ್ಯವಸ್ಥೆಯ ಕುರಿತು ಯಾರಾದರೂ ಕೇಳಿದ್ದಾರೆಯೇ ಎಂದೂ ಭಾಗವಹಿಸಿದವರಿಗೆ ಕೇಳಲಾಯಿತು. ಎಲ್ಲ ಅಧ್ಯಯನದ ಸ್ಥಳದಲ್ಲಿರುವ ಭಾಗವಹಿಸಿದವರಲ್ಲಿ ಶೇಕಡಾ 92 ಜನರು ಯಾವುದೇ ಕುಂದುಕೊರತೆಗಳನ್ನು ಪರಿಹರಿಸುವ ವ್ಯವಸ್ಥೆಯ ಕುರಿತು ಕೇಳಿರಲಿಲ್ಲ. ಅಧ್ಯಯನದಲ್ಲಿ ಭಾಗವಹಿಸಿದವರು, ಉದ್ಯೋಗದಾತರ ಪ್ರನಿಧಿಗಳು(ಆಡಳಿತ ಮಂಡಳಿ ಮತ್ತು/ಅಥವಾ ಮಾನವ ಸಂಪನ್ಮೂಲ ವ್ಯಕ್ತಿಗಳು) ಮತ್ತು ಅಧ್ಯಯನದಲ್ಲಿ ಭಾಗವಹಿಸಿದವರ


ಕಾರ್ಮಿಕ ಗುತ್ತಿಗೆದಾರರಿಗೆ, ಅಂತರ್–ರಾಜ್ಯ ವಲಸಿಗ ಕೆಲಸಗಾರರ ಅಧಿನಿಯಮದಂತೆ (1979), ಕಾರ್ಮಿಕರ ಕುಂದುಕೊರತೆಗಳನ್ನು ಪರಿಹರಿಸುವ ವ್ಯವಸ್ಥೆಯ ಪ್ರಶ್ನೆಯ ಕುರಿತು ಮತ್ತು ಅಂತರ್–ರಾಜ್ಯ ವಲಸಿಗ ಕಾರ್ಮಿಕರ ಕಾನೂನು ರಕ್ಷಣೆ(1979ರ ಅಧಿನಿಯಮದಂತೆ) ಕುರಿತು, ವಿಶದವಾದ ಸಂದರ್ಶನದ ಸಮಯದಲ್ಲಿ ಕೇಳಲಾಯಿತು. ಉದ್ಯೋಗದಾತರ ಪ್ರತಿನಿಧಿಗಳಲ್ಲಿ 7 ರಲ್ಲಿ 4 ಜನರಿಗೆ ಈ ಕಾರ್ಯನೀತಿಗಳ ಪರಿಚಯವಿತ್ತು ಮತ್ತು ಅವರಲ್ಲಿ ಕೇವಲ ಒಬ್ಬರಿಗೆ ಮಾತ್ರ ಕಾರ್ಯನೀತಿಯ ನಿಖರ ಮಾಹಿತಿಯಿತ್ತು. 8 ಗುತ್ತಿಗೆದಾರರಲ್ಲಿ, ಕೇವಲ ಇಬ್ಬರಿಗೆ ವಲಸಿಗ ಕಾರ್ಮಿಕರ ಕುಂದುಕೊರತೆಗಳನ್ನು ಪರಿಹರಿಸುವ ಕಾರ್ಯನೀತಿಯ ತಿಳುವಳಿಕೆ ಇತ್ತು.

ಈ ರೀತಿಯ ವ್ಯವಸ್ಥೆಯ ಕುರಿತು ಕೇಳಿರುವ ಭಾಗವಹಿಸಿದ ವಲಸಿಗರಲ್ಲಿ ಹೆಚ್ಚಿನವರು ಅಂತಹ ವ್ಯವಸ್ಥೆಯು ಒಂದೇ ಕೆಲಸ ಮಾಡುವುದಿಲ್ಲ ಅಥವಾ ಪ್ರಭಾವಶಾಲಿಯಾಗಿ ಇಲ್ಲವೆಂದು ಒತ್ತಿ ಹೇಳಿದರು. ಗೋವಾ, ಯಾದಗಿರಿ ಮತ್ತು ಕೊಪ್ಪಳದ ಯಾವುದೇ ಭಾಗವಹಿಸಿದವರು ಈ ವ್ಯವಸ್ಥೆಯ ಕುರಿತು ಕೇಳಿರಲಿಲ್ಲ ಮತ್ತು ಅದು ಕೆಲಸ ಮಾಡಬಹುದೆಂದು ಭಾವಿಸಲೂ ಇಲ್ಲ. ಯಾದ್ಗಿರ ಮತ್ತು ಕೊಪ್ಪಳದಲ್ಲಿರುವ ಶೇಕಡಾ 92 ಜನರು ಈ ವ್ಯವಸ್ಥೆ ಪರಿಣಾಮಕಾರಿ ಅಲ್ಲ ಎಂದು ಭಾವಿಸಿದರು ಮತ್ತು ಶೇಕಡಾ 8 ಜನ ಇದು ಕೆಲಸ ಮಾಡುವುದಿಲ್ಲ ಎಂದರು. ಗೋವಾದಲ್ಲಿ ಅಧ್ಯಯನದಲ್ಲಿ ಭಾಗವಹಿಸಿದವರಲ್ಲಿ ಶೇಕಡಾ 96 ಜನ ವಲಸಿಗ ಕಾರ್ಮಿಕರ ಕುಂದುಕೊರತೆಗಳನ್ನು ಪರಿಹರಿಸುವ ವ್ಯವಸ್ಥೆಯು ಪರಿಣಾಮಕಾರಿ ಅಲ್ಲ ಮತ್ತು ಸುಮಾರು ಶೇಕಡಾ 4 ಜನ ಅದು ಕೆಲಸ ಮಾಡುವುದಿಲ್ಲವೆಂದು ಅಭಿಪ್ರಾಯಪಟ್ಟರು.

| ವಲಸಿಗ ಕಾರ್ಮಿಕರ ಕುಂದು ಕೊರತೆಯ ಪರಿಹಾರಕ್ಕೆ ಕೈಗೊಂಡ ಸಿದ್ಧತೆಗಳು ಪರಿಣಾಮಕಾರಿ ಎಂದು ನಿಮಗೆ ಅನಿಸಿದೆಯೋ? | | | |
|---|---|---|---|
| ವಲಸೆ ಬಂದ ಸ್ಥಳ | ಪರಿಣಾಮಕಾರಿ | ಪರಿಣಾಮಕಾರಿಯಾಗಿಲ್ಲ | ಕೆಲಸ ಮಾಡುವುದಿಲ್ಲ |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸೆ | 0% | 92% | 8% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ವಲಸಿಗರು | 1.94% | 95.77% | 2.27% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬೇರೆ ರಾಜ್ಯದ ವಲಸಿಗರು | 2.02% | 90.9% | 7.07% |
| ಗೋವಾದಲ್ಲಿರುವ ಉತ್ತರ ಬೆಳಗಾವಿ ಮತ್ತು ಉತ್ತರ ಕನ್ನಡದ ವಲಸಿಗರು | 0% | 96.07% | 3.92% |
| ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ವಲಸಿಗರು | 24% | 76% | 0% |

ದಕ್ಷಿಣ ಕರ್ನಾಟಕದಲ್ಲಿರುವ ಬಹುತೇಕ ಭಾಗವಹಿಸಿದ ವಲಸಿಗರು ಕೂಡ ಅದೇ ಅಭಿಪ್ರಾಯ ವ್ಯಕ್ತಪಡಿಸಿದರು. ಮೇಲೆ ತೋರಿಸಿರುವ ಪಟ್ಟಿ ಹೇಳುವಂತೆ, ಅವರಲ್ಲಿ ಸುಮಾರು ಶೇಕಡಾ 91 ಜನ ಅಂತಹ ವ್ಯವಸ್ಥೆ ಪರಿಣಾಮಕಾರಿಯಲ್ಲ ಎಂದು ಭಾವಿಸಿದರು ಮತ್ತು ಶೇಕಡಾ 7 ಅದು ಕೆಲಸ ಮಾಡುವುದಿಲ್ಲವೆಂದು ತಿಳಿಸಿದರು. ಆದಾಗ್ಯೂ, ಅಂತರ್–ಜಿಲ್ಲೆ ಮತ್ತು ಜಿಲ್ಲಾಂತರ್ಗತ ವರ್ಗಗಳಲ್ಲಿ ಪ್ರತೀ ವರ್ಗದಿಂದ ಸುಮಾರು ಶೇಕಡಾ 2 ವಲಸಿಗರು, ಬೆಂಗಳೂರು ಮತ್ತು ಮೈಸೂರಿನಲ್ಲಿ ಈ ವ್ಯವಸ್ಥೆಯು ಪರಿಣಾಮಕಾರಿಯಾಗಿರುತ್ತದೆ ಎಂದು ನಂಬಿದರು.

| ನಿಮ್ಮ ಬಳಿ ವಲಸಿಗ ಕಾರ್ಮಿಕರ ಪಾಸ್ ಬುಕ್ ಇದೆಯೋ? | | | |
|---|---|---|---|
| ವಲಸೆ ಬಂದ ಸ್ಥಳ | ಹೌದು | ಇಲ್ಲ | ಅದರ ಬಗ್ಗೆ ಕೇಳಿಲ್ಲ |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸೆ | 0% | 76% | 24% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಯಾದಗಿರಿ ಮತ್ತು ಕೊಪ್ಪಳದ ವಲಸಿಗರು | 9.18% | 68.85% | 21.96% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬೇರೆ ರಾಜ್ಯದ ವಲಸಿಗರು | 2% | 91% | 7% |
| ಗೋವಾದಲ್ಲಿರುವ ಉತ್ತರ ಬೆಳಗಾವಿ ಮತ್ತು ಉತ್ತರ ಕನ್ನಡದ ವಲಸಿಗರು | 0% | 0% | 0% |
| ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ವಲಸಿಗರು | 0% | 0% | 0% |






ಬೆಂಗಳೂರಿನಲ್ಲಿರುವ ಒಬ್ಬ ವಲಸಿಗ ಕೆಲಸಗಾರನ ಗುರುತಿನ ಪತ್ರ

ಭಾಗವಹಿಸಿದ ಬಹುತೇಕರ ಬಳಿ ವಲಸಿಗ ಕೆಲಸಗಾರರ ಪಾಸ್‌ಬುಕ್ ಇರಲಿಲ್ಲ. ಬೆಂಗಳೂರು ಮತ್ತು ಮೈಸೂರು ಹೊರತು ಪಡಿಸಿ, ಅಧ್ಯಯನದ ಯಾವ ಸ್ಥಳಗಳಲ್ಲಿರುವ ಭಾಗವಹಿಸಿದವರಲ್ಲೂ ಪಾಸ್‌ಬುಕ್ ಇರಲಿಲ್ಲ. ಗೋವಾ ಮತ್ತು ಶೋಲಾಪುರದಲ್ಲಿರುವವರಿಗೆ ಇದರ ಅರಿವೂ ಇರಲಿಲ್ಲ. ಬೆಂಗಳೂರು ಮತ್ತು ಮೈಸೂರಿನಲ್ಲಿ, ಅಂತರ್–ಜಿಲ್ಲೆಯವರಲ್ಲಿ ಶೇಕಡಾ 9 ಮತ್ತು ಅಂತರ್–ರಾಜ್ಯದವರಲ್ಲಿ ಶೇಕಡಾ 2 ವಲಸಿಗರ ಬಳಿ ಪಾಸ್‌ಬುಕ್ ಇತ್ತು ಹಾಗೂ ಕರ್ನಾಟಕದ ಅಧ್ಯಯನದಲ್ಲಿ ಭಾಗಿಗಳಾದ ಕೇವಲ ಶೇಕಡಾ 22ರಿಂದ ಶೇಕಡ24 ಜನರಿಗೆ ಇದರ ಬಗ್ಗೆ ತಿಳುವಳಿಗೆ ಇರಲಿಲ್ಲ. ಭಾಗವಹಿಸಿದ ಕರ್ನಾಟಕದ ಕೆಲವರ ಬಳಿ ವಲಸಿಗ ಕೆಲಸಗಾರರ ಗುರುತಿನ ಚೀಟಿಯೂ ಇತ್ತು.

"ಅಂತರ್–ರಾಜ್ಯ ವಲಸಿಗ ಕೆಲಸಗಾರರ( ಉದ್ಯೋಗದ ನಿಬಂಧನೆ ಮತ್ತು ಸೇವೆಯ ಸ್ಥಿತಿ/ ಷರತ್ತು) ಅಧಿನಿಯಮ 1979", ವಿವಿಧ ಹಂತಗಳಲ್ಲಿ ಇದರ ಮಿತಿಮೀರಿದ ಉಲ್ಲಂಘನೆಯಾಗಿರುವುದು ಅಧ್ಯಯನದಲ್ಲಿ ಕಂಡುಬರುತ್ತದೆ. ಅಧಿನಿಯಮದ ಪ್ರಕಾರ, ಕೆಲಸಗಾರರು ತಮ್ಮ ವಲಸೆಯ ಗಮ್ಯ ಸ್ಥಾನ ತಲುಪಲು ಮಾಡುವ ಪ್ರಯಾಣದ ದಿನಗಳಿಗೂ ವೇತನವನ್ನು ಪಡೆಯಲು ಅರ್ಹತೆಯನ್ನು ಪಡೆದಿರುತ್ತಾರೆ. ಆದರೆ ಬಿಹಾರ್ ಮತ್ತು ಅಸ್ಸಾಂನಂತಹ ದೂರದ ರಾಜ್ಯಗಳಿಂದ ಬರುವ ಭಾಗವಹಿಸಿದವರೂ, ತಮ್ಮ ಗುತ್ತಿಗೆದಾರರು ತಾವು ಪ್ರಯಾಣಿಸಿದ ದಿನಗಳಿಗೆ ವೇತನವನ್ನು ನೀಡಲಿಲ್ಲವೆಂದು ತಿಳಿಸಿದರು. ಅಧಿನಿಯಮವು ಪುರುಷರಿಗೆ ಹಾಗೂ ಮಹಿಳೆಯರಿಗೆ ಸಮಾನ ವೇತನವನ್ನು ಪ್ರತಿಪಾದಿಸುತ್ತದೆ ಆದರೆ ವೇತನದಲ್ಲಿನ ಅಸಮಾನತೆಯು ವಲಸಿಗರಿಂದ ಒಂದು ಸಾಮಾನ್ಯ ಲಕ್ಷಣದಂತೆ ಅದೇರೀತಿ ಸ್ವೀಕಾರಾರ್ಹ ಧೋರಣೆಯಾಗಿತ್ತು. ವಲಸಿಗ ಕೆಲಸಗಾರರು ತಮ್ಮ ಉದ್ಯೋಗದಾತರು/ಮೇಲ್ವಿಚಾರಕರು/ಗುತ್ತಿಗೆದಾರರಿಂದಷ್ಟೇ ಅವರ ಹಕ್ಕುಗಳಿಂದ ವಂಚಿತರಾಗಲಿಲ್ಲ, ಬದಲು ಅವರು ಸ್ಥಳೀಯರ ಆಕ್ರೋಶ ಮತ್ತು ಹಿಂಸಾಚಾರಕ್ಕೂ ಗುರಿಯಾಗಬೇಕಾಯ್ತು. ಆ ರೀತಿಯ ಹಿಂಸಾಚಾರಕ್ಕೆ ಒಳಪಟ್ಟಿದ್ದರಿಂದ ಮತ್ತು ಹಕ್ಕುಗಳ ಉಲ್ಲಂಘನೆಗೆ ಒಳಗಾದದ್ದರಿಂದ, ವಲಸಿಗರು ತಮ್ಮ ಹಕ್ಕುಗಳ ರಕ್ಷಣೆಗೆ ಸಂಸ್ಥೆಯನ್ನು ಹುಟ್ಟುಹಾಕುವ ಕಲ್ಪನೆಯನ್ನು ಶಾಂತಗೊಳಿಸಬೇಕಾಯಿತು. ಆದರೂ, ಈ ರೀತಿಯ ಅವಕಾಶ ಕೆಲಸದ ಸ್ಥಳದಲ್ಲಿ ದೊರೆಯಬೇಕೆಂದು ಭಾಗವಹಿಸಿದವರು ಅಂದುಕೊಂಡರೂ, ಯಾವುದೇ ಕಾರ್ಮಿಕ ಕಾರ್ಯನೀತಿಗಳು/ಕರಾರುಗಳು/ ತೊಡಗುವಿಕೆಗಳನ್ನು ತಮ್ಮ ಪರವಾಗಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬಹುದೆಂಬ ಬಗ್ಗೆ ಅವರಿಗೆ ಖಾತ್ರಿ ಇರಲಿಲ್ಲ.

# ಅಧ್ಯಾಯ ಏಳು
# ವಲಸಿಗ ಮಹಿಳೆಯರು ಮತ್ತು ಮಕ್ಕಳ ಪರಿಸ್ಥಿತಿ

**ಕೆಲಸದ ಸ್ಥಳಗಳಲ್ಲಿ ಲಿಂಗ**

ನಮ್ಮ ಸಮಾಜದ ರಚನೆಯಲ್ಲಿ ಲಿಂಗ ಆಧಾರಿತ ತಾರತಮ್ಯ ಎದ್ದು ಕಾಣುತ್ತದೆ. ಈ ತಾರತಮ್ಯ ಕೆಲಸದ ಸ್ಥಳದಲ್ಲಿ ವೇತನದಲ್ಲಿಯ ತಾರತಮ್ಯದಿಂದ ಮಹಿಳೆಯರ ಮೇಲಿನ ದೌರ್ಜನ್ಯದವರೆಗೆ ಬೇರೆ ಬೇರೆ ರೂಪಗಳಲ್ಲಿ ಪ್ರಕಟವಾಗುತ್ತದೆ. ಆದಾಗ್ಯೂ, ಈ ಅಧ್ಯಯನದಲ್ಲಿ ಭಾಗವಹಿಸಿದ ಸುಮಾರು ಶೇಕಡಾ 74 ಮಹಿಳೆಯರು ಮತ್ತು ಶೇಕಡಾ 79 ಪುರುಷರು, ತಾವು ವಲಸೆ ಬಂದ ಸ್ಥಳದಲ್ಲಿ ಈ ರೀತಿಯ ಆಚರಣೆ ಇರುವುದನ್ನು ಅಲ್ಲಗಳೆದರು. ಸುಮಾರು ಶೇಕಡಾ 62 ಮಹಿಳೆಯರು ಮತ್ತು ಶೇಕಡಾ 77 ಪುರುಷರು ತಮ್ಮ ಮೂಲ ಸ್ಥಳಗಳಲ್ಲಿನ ಕೆಲಸದ ಸ್ಥಳಗಳಲ್ಲಿಯೂ ತಾರತಮ್ಯ ಇಲ್ಲವೆಂದು ನಂಬಿದ್ದರು. ತಮ್ಮ ಮೂಲ ಸ್ಥಳಗಳಲ್ಲಿರುವ ಕೆಲಸದ ಸ್ಥಳಗಳಲ್ಲಿ ಹಾಗೂ ವಲಸೆಯ ಬಂದ ತಾಣದಲ್ಲಿ ಲಿಂಗ ಆಧಾರಿತ ತಾರತಮ್ಯ ಇರುವುದನ್ನು ಗುರುತಿಸಿದ ಪುರುಷರ ಪ್ರಮಾಣವು ಶೇಕಡಾ 14 ಮತ್ತು ಶೇಕಡಾ 15ರ ನಡುವೆ ಇತ್ತು. ತಾವು ವಲಸೆ ಬಂದ ಸ್ಥಳದಲ್ಲಿರುವ ಕೆಲಸದ ಸ್ಥಳದಲ್ಲಿ ಸುಮಾರು ಶೇಕಡಾ 19 ಮಹಿಳೆಯರು ತಾರತಮ್ಯಕ್ಕೆ ಸಾಕ್ಷಿಯಾಗಿದ್ದರು ಹಾಗೂ ಅವರಲ್ಲಿ ಶೇಕಡಾ 32 ಮಹಿಳೆಯರು ತಮ್ಮ ಮೂಲ ಸ್ಥಳದಲ್ಲಿಯೂ ಇದನ್ನು ಕಂಡಿದ್ದರು.

| ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಯಾವುದೇ ರೀತಿಯ ತಾರತಮ್ಯ ತೋರುವುದನ್ನು ನೀವು ನೋಡಿದ್ದೀರಾ? | | | | | | |
|---|---|---|---|---|---|---|
| ಲಿಂಗ | ಹೌದು | | ಇಲ್ಲ | | ಹೇಳಲಾಗದು | |
| | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ |
| ತೃತೀಯ ಲಿಂಗಿ | 25% | 33.33% | 75% | 66.67% | 0% | 0% |
| ಹೆಂಗಸರು | 31.77% | 18.82% | 61.98% | 73.53% | 6.25% | 7.65% |
| ಗಂಡಸರು | 14.29% | 14.13% | 76.53% | 78.99% | 9.18% | 6.88% |

ಈ ಅಧ್ಯಯನದಲ್ಲಿರುವ ಸುಮಾರು ಶೇಕಡಾ 95 ಮಹಿಳೆಯರು ವರ್ಷಕ್ಕೆ ರೂ.1,00,000ಕ್ಕಿಂತ ಕಡಿಮೆ ಸಂಪಾದಿಸಿದರು ಮತ್ತು ಕೇವಲ ಸುಮಾರು ಶೇಕಡಾ 5 ಮಹಿಳೆಯರು ವರ್ಷಕ್ಕೆ ರೂ.1,00,000ಕ್ಕಿಂತ ಹೆಚ್ಚು ಸಂಪಾದಿಸಿದರು. ಆದರೆ ಶೇಕಡಾ 50 ಕ್ಕಿಂತ ಹೆಚ್ಚು ಪುರುಷರಲ್ಲಿ ವಾರ್ಷಿಕ ಆದಾಯ ರೂ.1,00,000ಕ್ಕಿಂತ ಹೆಚ್ಚಾಗಿತ್ತು.

| ವಾರ್ಷಿಕ ಆದಾಯ (ರುಪಾಯಿಗಳಲ್ಲಿ) | | | | | | | |
|---|---|---|---|---|---|---|---|
| ಲಿಂಗ | 15000ಕ್ಕಿಂತ ಕಡಿಮೆ | 16000–25000 | 26000–50000 | 51000–75000 | 76000–100000 | 100000–125000 | 125000ಕ್ಕಿಂತ ಹೆಚ್ಚು |
| ತೃತೀಯ ಲಿಂಗಿ | 0% | 20% | 40% | 20% | 0% | 20% | 0% |
| ಹೆಂಗಸರು | 11.76% | 12.94% | 15.88% | 23.52% | 30.58% | 2.35% | 2.94% |
| ಗಂಡಸರು | 7.09% | 11.7% | 10.28% | 10.28% | 10.63% | 29.43% | 20.56% |

ಹೀಗೆ, ಈ ಅಧ್ಯಯನದಲ್ಲಿ ಉಲ್ಲೇಖಿಸಿರುವ ಆದಾಯದ ಆವರಣದೊಳಗೆ, ಹೆಚ್ಚಿನ ಆದಾಯ ಶ್ರೇಣಿಯಲ್ಲಿ ಬರುವ ತಮ್ಮ ಪುರುಷ ಸಹವರ್ತಿಗಳಿಗೆ ಹೋಲಿಸಿದರೆ, ಮಹಿಳೆಯರು ಮಧ್ಯಮ ಆದಾಯ ಗುಂಪಿನಲ್ಲಿರುವ ಸಂಭವನೀಯತೆ ಹೆಚ್ಚಾಗಿದೆ. ಈ ಧೋರಣೆಯು, ಭಾಗವಹಿಸಿದ ಎಲ್ಲರಿಂದಲೂ ಸಾಮಾನ್ಯವಾಗಿ ಒಪ್ಪಲ್ಪಟ್ಟ ಲಿಂಗ ಆಧಾರಿತ ವೇತನ ತಾರತಮ್ಯವನ್ನು ಕೂಡ ತೋರಿಸುತ್ತದೆ ಹಾಗೂ ಕೆಳಗೆ ತೋರಿಸಿರುವ ಪಟ್ಟಿಯಲ್ಲಿ ಅದು ಸ್ಪಷ್ಟವಾಗಿ ಕಾಣುತ್ತದೆ.

| ಲಿಂಗ | ಹೌದು | ಇಲ್ಲ | ಹೇಳಲಾಗದು |
|---|---|---|---|
| ತೃತೀಯ ಲಿಂಗಿ | 0% | 75% | 25% |
| ಹೆಂಗಸರು | 16.31% | 73.04% | 10.03% |
| ಗಂಡಸರು | 12.55% | 83.50% | 3.64% |

ಅಂತರ್–ರಾಜ್ಯ ವಲಸಿಗ ಕೆಲಸಗಾರರ ಅಧಿನಿಯಮವು ಪುರುಷರಿಗೆ ಹಾಗೂ ಮಹಿಳೆಯರಿಗೆ ಸಮಾನ ವೇತನವನ್ನು ಸೂಚಿಸುತ್ತದೆ ಎನ್ನುವುದನ್ನು ಮುಖ್ಯವಾಗಿ ಗಮನಿಸಬೇಕು. ಆದಾಗ್ಯೂ, ಸುಮಾರು ಶೇಕಡಾ 73 ಮಹಿಳೆಯರು ಮತ್ತು ಶೇಕಡಾ 84 ಪುರುಷರು, ಪುರುಷರು ಹಾಗೂ ಮಹಿಳೆಯರು ಸಮಾನ ವೇತನವನ್ನು ಪಡೆಯುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ವಲಸೆ ಬರುವ ಸ್ಥಳಗಳಲ್ಲಿ ವೇತನ ತಾರತಮ್ಯ ಸಾಮಾನ್ಯವಾಗಿದ್ದರೂ, ಸುಮಾರು ಶೇಕಡಾ 22 ಮಹಿಳೆಯರು ಮತ್ತು ಶೇಕಡಾ 35 ಪುರುಷರು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಅಡಿಯಲ್ಲಿ ಮಹಿಳೆಯರಿಗಿಂತ ಪುರುಷರು ಹೆಚ್ಚು ಕೆಲಸದ ದಿನಗಳನ್ನು ಪಡೆಯುತ್ತಾರೆಂದು ನಂಬುತ್ತಾರೆ.ಆದರೆ ಭಾಗವಹಿಸಿದ ಸುಮಾರು ಶೇಕಡಾ 64 ಪುರುಷರು ಮತ್ತು ಶೇಕಡಾ 33 ಮಹಿಳೆಯರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಅಡಿಯಲ್ಲಿ ಮಹಿಳೆಯರಿಗಿಂತ ಪುರುಷರು ಹೆಚ್ಚು ಕೆಲಸದ ದಿನಗಳನ್ನು ಪಡೆಯುವ ಅಭ್ಯಾಸ ಇಲ್ಲವೆಂದು ಆಗ್ರಹಿಸಿದರು. ಆದರೆ, ಭಾಗವಹಿಸಿದ ಶೇಕಡಾ 44 ಕ್ಕಿಂತ ಹೆಚ್ಚಿನ ಮಹಿಳೆಯರು ಈ ಯೋಜನೆಯ ಕುರಿತು ಕೇಳಿರಲಿಲ್ಲ ಹಾಗಾಗಿ ಈ ಪ್ರಶ್ನೆಗೆ ಅವರಿಗೆ ಉತ್ತರಿಸಲು ಆಗಲಿಲ್ಲ.

**ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಮತ್ತು ಮಹಿಳೆಯರು**

ಕಾರ್ಮಿಕರ ವಲಸೆಯು ಮಹಿಳೆಯರಿಗಿಂತ ಪುರುಷರಲ್ಲಿ ಹೆಚ್ಚು ಎಂದು ಭಾಗವಹಿಸಿದವರಲ್ಲಿ ಹೆಚ್ಚಿನವರು ಒಪ್ಪಿಕೊಂಡರು ಹಾಗೂ ಹೆಚ್ಚಿನ ಸಂದರ್ಭಗಳಲ್ಲಿ ಪುರುಷರು ಇಲ್ಲದಿದ್ದರೆ, ಮಹಿಳೆಯರೇ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ರೀತಿಯ ಸರಕಾರೀ ಕಾರ್ಯನೀತಿಗಳ ಮುಖ್ಯ ಫಲಾನುಭವಿಗಳಾಗುತ್ತಾರೆ.

| ಲಿಂಗ | ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಅಡಿಯಲ್ಲಿ ಹೆಂಗಸರಿಗಿಂತ ಗಂಡಸರಿಗೆ ಸಾಮಾನ್ಯವಾಗಿ ಹೆಚ್ಚು ದಿನ ಕೆಲಸ ದೊರಕುತ್ತದೆಯೋ? | | |
|---|---|---|---|
| | ಹೌದು | ಇಲ್ಲ | ಗೊತ್ತಿಲ್ಲ |
| ತೃತೀಯ ಲಿಂಗಿ | 0% | 0% | 0% |
| ಮಹಿಳೆ | 22.2% | 33.3% | 44.3% |
| ಪುರುಷ | 34.09% | 63.63% | 2.27% |

ಇದಲ್ಲದೇ, ಐದನೆಯ ಅಧ್ಯಾಯದ (ತಳ್ಳುವ ಮತ್ತು ಸೆಳೆಯುವ ಅಂಶಗಳು) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಭಾಗದಲ್ಲಿ ಈ ವರದಿಯಲ್ಲಿ ಗುರುತಿಸಿದಂತೆ, ಈ ಯೋಜನೆಯ ಅಡಿಯಲ್ಲಿ ಮಹಿಳೆಯರು ಯಾವುದೇ ಕೆಲಸ ಮಾಡದೆ ಸರ್ವೇಸಾಧಾರಣವಾಗಿ , ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಅಡಿಯಲ್ಲಿ ಉದ್ದೇಶಿತ ವೇತನದ ಸುಮಾರು ಶೇಕಡಾ 50 ಪಾಲನ್ನು ಪಡೆಯುತ್ತಾರೆ. ಕೆಲಸವನ್ನು ಪೂರೈಸಲು, ಅಥವಾ ತಮ್ಮ ಗುರಿಯನ್ನು ತಲುಪಲು, ಸಂಬಂಧಪಟ್ಟ ಅಧಿಕಾರಿಗಳು ಯಂತ್ರಗಳನ್ನು ಬಳಸುತ್ತಾರೆ. ಕೇಂದ್ರೀಕೃತ ಗುಂಪು ಚರ್ಚೆಯ ಸಂದರ್ಭದಲ್ಲಿ ಯಾದಗಿರಿಯಲ್ಲಿರುವ ಗ್ರಾಮೀಣ ನಾಯಕರು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಈ ರೀತಿಯ ದುರ್ವ್ಯವಹಾರಗಳು ಸಾಮಾನ್ಯ ಎಂದು ಒಪ್ಪಿಕೊಂಡರು, ಯಾದಗಿರಿಯಲ್ಲಿರುವ ಜನರಿಗೆ ಈ ಯೋಜನೆಯ ಕುರಿತು ಒಂದೋ ತಿಳಿದಿರಲಿಲ್ಲ ಅಥವಾ ಇದನ್ನು ಜೀವನೋಪಾಯದ ಒಂದು ಅವಕಾಶವೆಂದು ಪರಿಗಣಿಸಿರಲಿಲ್ಲ.

| ಲಿಂಗ | ನೀವು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕುರಿತು ಕೇಳಿದ್ದೀರಾ? | | |
|---|---|---|---|
| | ಹೌದು | ಇಲ್ಲ | ಗೊತ್ತಿಲ್ಲ |

| | | | |
|---|---|---|---|
| ತೃತೀಯ ಲಿಂಗಿ | 0% | 100% | 0% |
| ಮಹಿಳೆ | 22.24% | 75% | 0.75% |
| ಪುರುಷ | 19.21% | 79.47% | 1.31% |

ಅಧ್ಯಯನದಲ್ಲಿ ಭಾಗವಹಿಸಿದ ಬಹುತೇಕ ಕರ್ನಾಟಕದ ಮಹಿಳೆಯರಿಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಕುರಿತು ತಿಳಿದಿರಲಿಲ್ಲ. ಯಾವುದೋ ಯೋಜನೆಯ ಅಡಿಯಲ್ಲಿ ತಾವು ರೂ.100 ಪಡೆದಿರುವುದಾಗಿ ವಿಶದವಾದ ಸಂದರ್ಶನದ ಸಂದರ್ಭದಲ್ಲಿ ಕೆಲವರು ಒಪ್ಪಿಕೊಂಡರು, ಆದರೆ ಆ ಯೋಜನೆಯ ಹೆಸರನ್ನು ನೆನಪು ಮಾಡಿಕೊಳ್ಳಲು ಅವರಿಗೆ ಆಗಲಿಲ್ಲ. ಪುರುಷರಂತೆಯೇ ಭಾಗವಹಿಸಿದ ಬಹತೇಕ ಮಹಿಳೆಯರೂ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕುರಿತು ಕೇಳಿರಲಿಲ್ಲ. ಆದಾಗ್ಯೂ, ಈ ಯೋಜನೆಯ ಪರಿಚಯವಿರುವ ಪುರುಷ ವಲಸಿಗರಿಗಿಂತ ಮಹಿಳೆಯರು ಶೇಕಡಾ 5ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕುರಿತು ಕೇಳಿದ್ದರು.

**ಕೆಲಸದ ಸ್ಥಳದಲ್ಲಿ ವಲಸಿಗ ಮಹಿಳಾ ಕಾರ್ಮಿಕರ ಮೇಲೆ ಹಿಂಸಾಚಾರ**

ಕರ್ನಾಟಕದಿಂದ ಹೊರಗೆ ಮತ್ತು ಕರ್ನಾಟಕಕ್ಕೆ ವಲಸೆ ಬರುವ ಮಹಿಳೆಯರು ಲಿಂಗ ಆಧಾರಿತ ದಬ್ಬಾಳಿಕೆಯನ್ನಾಗಿ ಎದುರಿಸಬೇಕಾಗಿದ್ದು ಕೇವಲ ವೇತನ ತಾರತಮ್ಯವನ್ನಲ್ಲ. ಅಧ್ಯಯನ ನಡೆಸಿದ ಎಲ್ಲ ಸ್ಥಳಗಳಲ್ಲೂ, ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಹಿಂಸಾಚಾರವು ನಡೆದಿತ್ತು. ಆದರೆ ಭಾಗವಹಿಸಿದ ಬಹುತೇಕರು, ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಹಿಂಸಾಚಾರ ನಡೆದಿಲ್ಲವೆಂದು ಸಮೀಕ್ಷೆಯ ಸಮಯದಲ್ಲಿ ತಿಳಿಸಿದರು. ಸುಮಾರು ಶೇಕಡಾ 63 ಮಹಿಳೆಯರು ಮತ್ತು ಶೇಕಡಾ 78 ಪುರುಷರು ತಮ್ಮ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಯಾವುದೇ ರೀತಿಯ ಹಿಂಸಾಚಾರ ನಡೆದಿದ್ದು ನೋಡಿರುವುದನ್ನು ಅಲ್ಲಗಳೆದರು.

| ಲಿಂಗ | ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಯಾವುದೇ ರೀತಿಯ ಹಿಂಸಾಚಾರವನ್ನು ನೀವು ನೋಡಿದ್ದೀರಾ? | | |
|---|---|---|---|
| | ಹೌದು | ಇಲ್ಲ | ಹೇಳಲಾಗದು |
| ತೃತೀಯ ಲಿಂಗಿ | 0% | 66.6% | 33.3% |
| ಮಹಿಳೆ | 24.84% | 62.73% | 12.42% |
| ಪುರುಷ | 10.61% | 77.51% | 11.83% |

ತಮ್ಮ ಮೂಲ ಸ್ಥಳದ ಕೆಲಸದ ಸ್ಥಳದಲ್ಲಿ ಹಾಗೂ ವಲಸೆ ಬಂದ ಸ್ಥಳದಲ್ಲಿ ಮಹಿಳೆಯರ ಮೇಲೆ ಹಿಂಸಾಚಾರ ನಡೆದಿರುವುದರ ಕುರಿತು ಭಾಗವಹಿಸಿದವರ ಪ್ರತಿಕ್ರಿಯೆಯು ಯಥಾಸ್ಥಿತಿ ಹೊಂದಿರುವ ಪ್ರವೃತ್ತಿಯನ್ನು ಪ್ರತಿಬಿಂಬಿಸಿತು. ಈ ಸಮಸ್ಯೆಯ ಕುರಿತು, ಅದರಲ್ಲೂ ತಾವು ವಲಸೆ ಬಂದ ಸ್ಥಳದ ಕೆಲಸದ ಸ್ಥಳದ ಕುರಿತು ಚರ್ಚಿಸಲು ಅವರು ಹಿಂಜರಿದರು. ಶೇಕಡಾ 80ಕ್ಕೂ ಹೆಚ್ಚಿನ ಮಹಿಳೆಯರು ಮತ್ತು ಶೇಕಡಾ 79 ಪುರುಷರು ತಾವು ವಲಸೆ ಬಂದ ಸ್ಥಳದ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುವುದನ್ನು ಯಾವತ್ತೂ ನೋಡಿಲ್ಲವೆಂದರು. ಶೇಕಡಾ 65 ಮಹಿಳೆಯರು ಮತ್ತು ಶೇಕಡಾ 79 ಪುರುಷರು, ತಮ್ಮ ಮೂಲ ಸ್ಥಳದ ಕೆಲಸದ ಸ್ಥಳದಲ್ಲೂ ಈ ರೀತಿಯ ಪ್ರವೃತ್ತಿಯನ್ನು ಅಲ್ಲಗಳೆದರು. ತಾವು ವಲಸೆ ಬಂದ ಸ್ಥಾನದ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಉಂಟಾಗುತ್ತಿರುವ ಕುರಿತು ಸುಮಾರು ಶೇಕಡಾ 12 ಮಹಿಳೆಯರು ಮತ್ತು ಶೇಕಡಾ 10 ಪುರುಷರು ತಮಗೆ ಗೊತ್ತಿಲ್ಲವೆಂದರು. ಸುಮಾರು ಶೇಕಡಾ 13 ಮಹಿಳೆಯರು ಮತ್ತು ಶೇಕಡಾ 12 ಪುರುಷರು ತಮ್ಮ ಮೂಲ ಸ್ಥಾನದ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಉಂಟಾಗುತ್ತಿರುವ ಕುರಿತು ಖಚಿತವಾಗಿ ತಿಳಿದಿಲ್ಲವೆಂದರು.

| ಲಿಂಗ | ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಯಾವುದೇ ರೀತಿಯ ಹಿಂಸಾಚಾರವನ್ನು ನೀವು ನೋಡಿದ್ದೀರಾ? | | | | | |
|---|---|---|---|---|---|---|
| | ಹೌದು | | ಇಲ್ಲ | | ಹೇಳಲಾಗದು | |
| | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ | ಮೂಲ ಸ್ಥಳ | ವಲಸೆ ಬಂದ ಸ್ಥಳ |
| ತೃತೀಯ ಲಿಂಗಿ | 0% | 0% | 66.67% | 50% | 33.33% | 50% |
| ಮಹಿಳೆ | 22.22% | 6.92% | 65% | 81.13% | 12.78% | 11.95% |
| ಪುರುಷ | 9.78% | 10.77% | 78.62% | 79.23% | 11.59% | 10% |

| ವಲಸೆ ಬಂದ ಸ್ಥಳ | ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಯಾವುದೇ ರೀತಿಯ ಹಿಂಸಾಚಾರವನ್ನು ನೀವು ನೋಡಿದ್ದೀರಾ? | | | |
|---|---|---|---|---|
| | ಲಿಂಗ | ಹೌದು | ಇಲ್ಲ | ಹೇಳಲಾಗದು |
| ಯಾದಗಿರಿ ಮತ್ತು ಕೊಪ್ಪಳದಲ್ಲಿರುವ ಜಿಲ್ಲಾಂತರ್ಗತ ವಲಸೆ | ತೃತೀಯ ಲಿಂಗಿ | 0 | 0 | 100% |
| | ಮಹಿಳೆ | 32% | 44% | 24% |
| | ಪುರುಷ | 16% | 36% | 48% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ, ಯಾದಗಿರಿ ಮತ್ತು ಕೊಪ್ಪಳದ ಅಂತರ್–ಜಿಲ್ಲಾ ವಲಸಿಗರು | ತೃತೀಯ ಲಿಂಗಿ | 0 | 0 | 100% |
| | ಮಹಿಳೆ | 55.20% | 40.72% | 4.07% |
| | ಪುರುಷ | 21.59% | 69.01% | 9.38% |
| ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬೇರೆ ರಾಜ್ಯಗಳಿಂದ ಬಂದಿರುವ ಅಂತರ್–ರಾಜ್ಯ ವಲಸಿಗರು | ತೃತೀಯ ಲಿಂಗಿ | – | – | – |
| | ಮಹಿಳೆ | 39.07% | 33.82% | 26.47% |
| | ಪುರುಷ | 14.66% | 54.66% | 30.69% |
| ಗೋವಾದಲ್ಲಿರುವ ಉತ್ತರ ಕರ್ನಾಟಕದ ಅಂತರ್–ರಾಜ್ಯ ವಲಸಿಗರು | ತೃತೀಯ ಲಿಂಗಿ | 0 | 100% | 0 |
| | ಮಹಿಳೆ | 23.07% | 46.17% | 30.76% |
| | ಪುರುಷ | 29.16% | 46.16% | 24.69% |
| ಶೋಲಾಪುರದಲ್ಲಿರುವ ಉತ್ತರ ಕರ್ನಾಟಕದ ಅಂತರ್–ರಾಜ್ಯ ವಲಸಿಗರು | ತೃತೀಯ ಲಿಂಗಿ | – | – | – |
| | ಮಹಿಳೆ | 54.54% | 18.18% | 27.27% |
| | ಪುರುಷ | 25% | 37.5% | 37.5% |

ಅವರ ಮೂಲ ಸ್ಥಳದ ಕೆಲಸದ ಸ್ಥಳದಲ್ಲಿ ಶೇಕಡಾ 22 ಮಹಿಳೆಯರು ಹಿಂಸಾಚಾರವನ್ನು ಕಂಡಿದ್ದರೆ, ಕೇವಲ ಶೇಕಡಾ 7 ಮಹಿಳೆಯರು ಈ ರೀತಿಯ ಪ್ರವೃತ್ತಿಯನ್ನು ತಾವು ವಲಸೆ ಬಂದ ಜಾಗದ ಕೆಲಸದ ಸ್ಥಳದಲ್ಲಿ ನೋಡಿರುವುದಾಗಿ ತಿಳಿಸಿದರು. ವಿಶೇಷವಾಗಿ ಮಹಿಳೆಯರೊಂದಿಗಿನ ಕೇಂದ್ರೀಕೃತ ಗುಂಪು ಚರ್ಚೆಯ ಮತ್ತು ವಿಶದವಾದ ಸಂದರ್ಶನದ ಸಮಯದಲ್ಲಿ, ಮಹಿಳೆಯರ ಮೇಲಿನ ಹಿಂಸಾಚಾರದ ಕುರಿತ ಉಲ್ಲೇಖವು ಬಹಳ ಪ್ರಮುಖವಾಗಿ ಕಂಡುಬಂದಿತು.ವಾಸ್ತವವಾಗಿ, ಗೋವಾದವರನ್ನು ಹೊರತುಪಡಿಸಿ, ಈ ಸಮಸ್ಯೆಯ ಕುರಿತು ಸಮೀಕ್ಷೆ ಮತ್ತು ವಿಶದವಾದ ಸಂದರ್ಶನದಲ್ಲಿ ಭಾಗವಹಿಸಿದವರು ನೀಡಿದ ಪ್ರತಿಕ್ರಿಯೆಗಳ ನಡುವೆ ಅಗಾಧವಾದ ವ್ಯತ್ಯಾಸವಿತ್ತು. ಭಾಗವಹಿಸಿದ ಗೋವಾದ ಶೇಕಡಾ 46 ಕ್ಕೂ ಮಿಗಿಲಾಗಿ ಮಹಿಳೆಯರು ಮತ್ತು ಅಷ್ಟೇ ಪ್ರಮಾಣದಲ್ಲಿ ಪುರುಷರು, ತಮ್ಮ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಹಿಂಸಾಚಾರವನ್ನು ನೋಡಿಲ್ಲವೆಂದು ಹೇಳಿದರು. ಇದು ಅಸಾಮಾನ್ಯ ಪ್ರತಿಕ್ರಿಯೆ ಏನಾಗಿರಲಿಲ್ಲ. ಶೋಲಾಪುರವನ್ನು ಹೊರತುಪಡಿಸಿ, ಉಳಿದ ಅಧ್ಯಯನದ ಸ್ಥಳದಲ್ಲಿರುವ ಭಾಗವಹಿಸಿದವರು ಕೂಡ ತಮ್ಮ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಹಿಂಸಾಚಾರ ನಡೆಯುವ ಸಾಧ್ಯತೆಯನ್ನು ಅಲ್ಲಗಳೆದರು. ಏನೇ ಆದರೂ, ಮಹಿಳೆಯರು ಹಿಂಸಾಚಾರಕ್ಕೆ ಗುರಿಯಾಗುವುದು ಸಾಮಾನ್ಯವಾದರೂ ತಮ್ಮ ಮೇಲೆ ಅಂತಹ ಘಟನೆಗಳು ನಡೆಯುವುದನ್ನು ಒಪ್ಪುವ ಮನಸ್ಥಿತಿಯಲ್ಲಿ ಅವರು ಇರಲಿಲ್ಲವೆಂಬುದು ವಿಶದವಾದ ಸಂದರ್ಶನದ ಸಮಯದಲ್ಲಿ ಎದ್ದು ಕಾಣುತ್ತಿತ್ತು. ಆದರೂ ಗೋವಾದಲ್ಲಿರುವ ಪುರುಷ ಮತ್ತು ಮಹಿಳಾ ವಲಸಿಗರು, ತಮ್ಮ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಹಿಂಸಾಚಾರ ಸಾಮಾನ್ಯ ವಿದ್ಯಮಾನ ಅಲ್ಲವೆಂದು ವಿಶದವಾದ ಸಂದರ್ಶನ ಮತ್ತು ಕೇಂದ್ರೀಕೃತ ಗುಂಪು ಚರ್ಚೆಯ ಸಂದರ್ಭದಲ್ಲಿ ತಿಳಿಸಿದರು. ಮತ್ತೊಂದೆಡೆ, ಶೋಲಾಪುರದಲ್ಲಿರುವ ಶೇಕಡಾ 54 ಭಾಗವಹಿಸಿದ ಮಹಿಳೆಯರು ತಮ್ಮ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಹಿಂಸಾಚಾರವನ್ನು ಕಂಡಿದ್ದರು ಹಾಗೂ ವಿಶದವಾದ ಸಂದರ್ಶನದ ಸಮಯದಲ್ಲಿ ಅದನ್ನು ಹೇಳಿದರು.

ತಮ್ಮ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯವಾಗುತ್ತಿರುವುದನ್ನು ಕಂಡಿರುವುದನ್ನು ಅತಿ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಒಪ್ಪಿಕೊಂಡ ಸ್ಥಳವೆಂದರೆ ಅದು ಬೆಂಗಳೂರು. ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಶೇಕಡಾ 55ಕ್ಕಿಂತ ಹೆಚ್ಚು

ಅಂತರ್–ಜಿಲ್ಲಾ ಮತ್ತು ಶೇಕಡಾ 40 ಅಂತರ್–ರಾಜ್ಯ ವಲಸಿಗ ಮಹಿಳೆಯರು, ತಮ್ಮ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಹಿಂಸಾಚಾರ ನಡೆಯುವುದನ್ನು ಕಂಡಿರುವುದಾಗಿ ತಿಳಿಸಿದರು. ಬೆಂಗಳೂರಿನಲ್ಲಿರುವ ಬಹುತೇಕ ಎಲ್ಲ ಅಂತರ್–ಜಿಲ್ಲಾ ವಲಸಿಗ ಮಹಿಳೆಯರು ಇಪ್ಪತ್ತು ವಯಸ್ಸಿನ ಆಸುಪಾಸಿನಲ್ಲಿರುವವರಾಗಿದ್ದು ಅವರು ಉಡುಪಿನ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದರು. ಅವರು ಸಾಮಾನ್ಯವಾಗಿ ವಸತಿ ಗೃಹಗಳಲ್ಲಿ, ಕೋಣೆಗಳನ್ನು ಹಂಚಿಕೊಂಡು ವಾಸಿಸುತ್ತಿದ್ದರು, ಮತ್ತು ಮದುವೆಗಾಗಿ ಹಣ ಉಳಿಸಲು ಕೆಲಸ ಮಾಡುತ್ತಿದ್ದರು. ತಮ್ಮ ಆದಾಯದ ಕೆಲ ಅಂಶವನ್ನು ಕುಟುಂಬಕ್ಕೆ ಕಳುಹಿಸಿದರೂ, ಮದುವೆಗಾಗಿ ಹಣ ಉಳಿಸಬೇಕೆನ್ನುವುದು ಉಡುಪಿನ ಕಾರ್ಖಾನೆಯ ಹೆಚ್ಚಿನ ಮಹಿಳಾ ಕಾರ್ಮಿಕರ ಬಹು ಮುಖ್ಯ ಉದ್ದೇಶವಾಗಿತ್ತು. ಈ ಮಹಿಳೆಯರು ಬಹಳ ಅಸಹನೀಯ ಪರಿಸ್ಥಿತಿಯಲ್ಲಿ ಬದುಕುತ್ತಿದ್ದರು ಮತ್ತು ಶಿಸ್ತಿನ ಹೆಸರಿನಲ್ಲಿ ವಿವಿಧ ರೀತಿಯ ಹಿಂಸಾಚಾರಕ್ಕೆ ಗುರಿಯಾಗುತ್ತಿದ್ದರು. ಮಹಿಳೆಯರ ಮೇಲೆ ನಡೆಯುವ ಬಹಳ ಸಾಮಾನ್ಯವಾದ ಹಿಂಸೆ ಎಂದರೆ, ಇದನ್ನು ಅನುಭವಿಸಿದವರು ಗುರುತಿಸುವಂತೆ, ಅದು ಮೌಖಿಕ ನಿಂದನೆ. ಕೆಲಸದ ಸ್ಥಳದಲ್ಲಿ ಮಹಿಳೆಯರು ಮೌಖಿಕ ನಿಂದನೆಗೆ ಗುರಿಯಾಗುವುದನ್ನು ಕಂಡಿರುವುದಾಗಿ ಸುಮಾರು ಶೇಕಡಾ 73 ಪುರುಷರು ಮತ್ತು ಶೇಕಡಾ 60 ವಲಸಿಗ ಮಹಿಳೆಯರು ತಿಳಿಸಿರುವುದನ್ನು ಈ ಕೆಳಗಿನ ಪಟ್ಟಿಯು ತೋರಿಸುತ್ತದೆ. ಭಾಗವಹಿಸಿದ ಸುಮಾರು ಶೇಕಡಾ 14 ಮಹಿಳೆಯರು ಮತ್ತು ಶೇಕಡಾ 9 ಪುರುಷರು ತಾವು ಮೌಖಿಕ ನಿಂದನೆಯಿಂದ ಆರಂಭಿಸಿ, ದೈಹಿಕ ಹಾಗೂ ಲೈಂಗಿಕ ಹಿಂಸಾಚಾರದಂತಹ ಎಲ್ಲಾ ಬಗೆಯ ಹಿಂಸೆಗಳನ್ನು ಕಂಡಿರುವುದಾಗಿ ಸ್ಪಷ್ಟಪಡಿಸಿದರು. ಶೇಕಡಾ 17 ಮಹಿಳೆಯರು ಮತ್ತು ಶೇಕಡಾ 16ಕ್ಕಿಂತ ಹೆಚ್ಚಿನ ಪುರುಷರು, ಇನ್ನುಳಿದ ವರ್ಗಗಳ ಮಹಿಳೆಯರ ಮೇಲೆ ಹಿಂಸಾಚಾರ ನಡೆದಿರುವುದನ್ನು ಗಮನಿಸಿರುವುದಾಗಿ ತಮ್ಮ ಅನುಭವ ಹಂಚಿಕೊಂಡರು.

| ಲಿಂಗ | ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಯಾವ ರೀತಿಯ ಹಿಂಸಾಚಾರವನ್ನು ನೀವು ನೋಡುತ್ತೀರ? | | | | |
|---|---|---|---|---|---|
| | ಮೌಖಿಕ | ದೈಹಿಕ | ಲೈಂಗಿಕ | ಮೂರೂ ರೀತಿಯಲ್ಲಿ | ಇನ್ನಿತರ |
| ತೃತೀಯ ಲಿಂಗಿ | 40% | 0% | 40% | 0% | 20% |
| ಮಹಿಳೆ | 59.09% | 9.09% | 1.51% | 13.63% | 16.6% |
| ಪುರುಷ | 72.52% | 1.03% | 1.21% | 8.80% | 16.39% |

**ಹಿಂಸೆಯ ಆಂತರೀಕರಣ ಮತ್ತು ದಬ್ಬಾಳಿಕೆ**

ಬೆಂಗಳೂರಿನ ಉಡುಪಿನ ಕಾರ್ಖಾನೆಯ ಅಂತರ್–ಜಿಲ್ಲಾ ವಲಸಿಗ ಮಹಿಳೆಯರು ಆರಂಭಿಕ ಮಾತುಕತೆಗಳಲ್ಲಿ, ಬೆಂಗಳೂರಿನಲ್ಲಿಯ ತಮ್ಮ ಜೀವನದ ಸ್ಥಿತಿಯ ಕುರಿತು ಮಿಶ್ರ ಅಭಿಪ್ರಾಯ ವ್ಯಕ್ತಪಡಿಸಿದರು. ಸಾಮಾನ್ಯವಾಗಿ ಕಾರ್ಖಾನೆಯ ವಸತಿ ನಿಲಯದ ರೀತಿಯ ತಂಗುದಾಣದಲ್ಲಿ ವಾಸಿಸುವ ಉಡುಪಿನ ಕಾರ್ಖಾನೆಯ ಕೆಲವು ನೌಕರರು, ಕೆಲಸದ ಸ್ಥಳದಲ್ಲಷ್ಟೇ ಅಲ್ಲ ಅವರ ತಂಗುದಾಣದಲ್ಲೂ ಪಾಲಿಸುವ, ತಮ್ಮ ಓಡಾಟವನ್ನು ನಿಗ್ರಹಿಸುವ, ಕೆಲವು ಕಟ್ಟುನಿಟ್ಟಾದ ಕಟ್ಟುಪಾಡುಗಳ ಕುರಿತು ದೂರಿದರು. ಆದರೂ, ಪ್ರಾಯೋಗಿಕ ಅಧ್ಯಯನದ ಸಮಯದಲ್ಲಿ ಉಡುಪಿನ ಕಾರ್ಖಾನೆಯ ಬಹುತೇಕ ನೌಕರ ಮಹಿಳೆಯರು, ತಮ್ಮ ಊರಿನಲ್ಲಿ ಮನೆಯಿಂದ ಹೊರಗೆ ಕೆಲಸ ಮಾಡಿ ಬಂದ ನಂತರವೂ ಮನೆಯಲ್ಲಿ ಮನೆಗೆಲಸಗಳನ್ನು ಮಾಡಬೇಕಾಗಿರುವುದಕ್ಕೆ ಹೋಲಿಸಿದರೆ, ಇಲ್ಲಿಯ ವಾತಾವರಣ ಎಷ್ಟೋ ಉತ್ತಮವಾಗಿದ್ದು, ತಾವು ವಸತಿಶಾಲೆಯ ಕಟ್ಟುನಿಟ್ಟಿನ ವಾತಾವರಣದಲ್ಲಿ ವಾಸಿಸಲು ಸಂತೋಷಪಡುತ್ತೇವೆ ಎಂದರು. ಆದರೆ ಬೆಂಗಳೂರಿನ, ವಸತಿ ಶಾಲೆಯಲ್ಲಿ ಅವರಿಗೆ ಆಹಾರವನ್ನೂ ನೀಡಲಾಗುತ್ತಿದ್ದು, ಸಂಜೆಯ ಹೊತ್ತಿನಲ್ಲಿ ಅವರು ದೂರದರ್ಶನವನ್ನು ನೋಡಿ ಸಂತಸಪಡುವ ಸವಲತ್ತನ್ನು ಹೊಂದಿದ್ದರು. ಅದಲ್ಲದೇ, ತಮ್ಮ ಮೂಲ ಸ್ಥಳದಲ್ಲಿ ತೆರೆದ ಹೊಲಗದ್ದೆಗಳಲ್ಲಿ ಮತ್ತು ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ ಕೆಲಸ ಮಾಡುವುದಕ್ಕಿಂತ ಕಾರ್ಖಾನೆಯ ಸೂರಿನಡಿಯಲ್ಲಿ ಕೆಲಸ ಮಾಡುವುದು ಯಾವತ್ತಿದ್ದರೂ ಆರಾಮದಾಯಕವೆಂದು ಅವರು ಅರಿತಿದ್ದರು. ತಮಗಿನ್ನೂ ಮದುವೆ ಆಗಿಲ್ಲ ಹಾಗೂ ಬಿಸಿಲಿಗೆ ಬಣ್ಣಗೆಡುವುದನ್ನು ತಪ್ಪಿಸಲು ಕಾರ್ಖಾನೆಯಲ್ಲಿ ಕೆಲಸ ಮಾಡುವುದಾಗಿ ಅವರಲ್ಲಿ ಕೆಲವರು ತಮ್ಮ ಕಾರಣ ಸೇರಿಸಿದರು.

ಬೆಂಗಳೂರಿನಲ್ಲಿ ವಾಸಿಸುವ ಮತ್ತು ಕೆಲಸ ಮಾಡುವುದರ ಅನುಕೂಲಗಳನ್ನು ಹೋಲಿಸಿ, ಉಡುಪಿನ ಕಾರ್ಖಾನೆಯ ಕೆಲಸಗಾರರು ಸ್ಪಷ್ಟವಾಗಿ ಚರ್ಚಿಸಿದರೂ, ಅವರಲ್ಲಿ ಹೆಚ್ಚಿನವರು ತಮ್ಮ ತಂಗಿಯರು ಕಾರ್ಖಾನೆಗಳಲ್ಲಿ ಕೆಲಸ ಮಾಡುವುದು ಬೇಡವೆಂದು ಅಭಿಪ್ರಾಯಪಟ್ಟರು. ತಾವು ಮನೆಗೆ ಹಣ ಕಳುಹಿಸುತ್ತಿರುವುದರಿಂದ ತಮ್ಮ ಸಹೋದರಿಯರು ಕೆಲಸ ಮಾಡುವ ಆವಶ್ಯಕತೆ ಇಲ್ಲವೆಂಬ ಒಂದು ಕಾರಣವನ್ನು ಅವರು ಮೇಲಿಂದಮೇಲೆ ಹಂಚಿಕೊಂಡರು. ತಮ್ಮ ಮದುವೆ ಆದ ನಂತರ ಕಾರ್ಖಾನೆಯಲ್ಲಿ ಕೆಲಸ ಮಾಡಲು ಇಷ್ಟ ಪಡುವುದಿಲ್ಲವೆಂದು ಕೂಡ ಸೂಚಿಸಿದರು. ಹೀಗೆ ಕಾರ್ಖಾನೆಯ ಮಹಿಳಾ ನೌಕರರರೊಡನೆ ನಡೆಸಿದ ಸಮೀಕ್ಷೆ ಹಾಗೂ ನಂತರ ನಡೆಸಿದ ಕೇಂದ್ರೀಕೃತ ಗುಂಪು ಚರ್ಚೆಗಳು, ತಾವು ವಸತಿ ಶಾಲೆಯ ಜೀವನವನ್ನು ಆಯ್ಕೆ

ಮಾಡಿಕೊಂಡು, ತಮ್ಮ ಸಹೋದರಿ ಅಥವಾ ಬೇರಾವುದೇ ಮಹಿಳಾ ಸಂಬಂಧಿಕರಿಗೆ ಅದನ್ನು ಬೇಡವೆಂದು ಹೇಳುವುದರ ಹಿಂದಿರುವ ಸೂಕ್ತ ಕಾರಣವನ್ನು ಭಾಗವಹಿಸಿದವರು ಸೂಚಿಸಲಿಲ್ಲ.

ಬೆಂಗಳೂರಿನ ಉಡುಪಿನ ಕಾರ್ಖಾನೆಯ ಕೆಲಸದವರ ಕುರಿತಾದ ವರದಿಗಳು ಮತ್ತು ಸುದ್ದಿಗಳು ಅವರ ವಿರುದ್ಧ ಇರುವ ದಬ್ಬಾಳಿಕೆಯನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಪ್ರಾಯೋಗಿಕ ಅಧ್ಯಯನದ ಆಧಾರದ ಮೇಲೆ, ಅಧ್ಯಯನ ತಂಡವು ಉಡುಪಿನ ಕಾರ್ಖಾನೆಯ ಕೆಲಸಗಾರರರೊಡನೆ ಕಾರ್ಖಾನೆಯ ಆವರಣದಲ್ಲಿ ಮಾತುಕತೆ ನಡೆಸಲಿಲ್ಲ. ಒಂದು ವೇಳೆ ಅವರ ಕೆಲಸದ ಸ್ಥಳದಲ್ಲಿ ಅವರ ಸಂದರ್ಶನ ನಡೆದಿದ್ದರೆ, ವಿಶದವಾದ ಸಂದರ್ಶನಗಳನ್ನು ಹೆಚ್ಚಾಗಿ ಕೆಲಸದ ನಂತರ ಅವರ ವಸತಿ ಶಾಲೆಗಳಲ್ಲಿ ನಡೆಸಲಾಯಿತು. ಬೆಂಗಳೂರಿನಲ್ಲಿ ತಮ್ಮ ವಾಸದ ಮತ್ತು ಕೆಲಸದ ಅನುಭವಗಳನ್ನು ಹಂಚಿಕೊಳ್ಳಲು ವಸತಿಶಾಲೆಗಳಲ್ಲಿಯೇ, ಉಡುಪಿನ ಕಾರ್ಖಾನೆಯ ಯುವ ಮಹಿಳಾ ಕೆಲಸಗಾರರು ಹೆಚ್ಚು ಮುಕ್ತವಾಗಿದ್ದರು. ಮತ್ತು ಕೆಲಸದ ಸ್ಥಳದಲ್ಲಿ ಹಾಗೂ ವಸತಿ ಶಾಲೆಯಲ್ಲಿಯೂ ತಾವು ಯಾವ ರೀತಿಯ ಹಿಂಸಾಚಾರಕ್ಕೆ ಒಳಗಾಗುತ್ತೇವೆ ಎಂಬುದನ್ನು ಹೇಳಲು ಹಿಂಜರಿಯಲಿಲ್ಲ. ಪ್ರಚಲಿತ ವಸ್ತುಸ್ಥಿತಿಯನ್ನು ನಿರಾಕರಿಸುವ ವರ್ತನೆ ಅಸಾಮಾನ್ಯವೇನಲ್ಲ. ವೇತನದಲ್ಲಿ ಲಿಂಗ ತಾರತಮ್ಯ ಇರುವುದು ಗೊತ್ತಿದ್ದರೂ ಹಾಗೂ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯದ ಘಟನೆಗಳು ನಡೆದಿರುವುದು ಗೊತ್ತಿದ್ದರೂ, ಭಾಗವಹಿಸಿದವರಲ್ಲಿ ಹೆಚ್ಚಿನವರು ಕೆಲಸದ ಸ್ಥಳದಲ್ಲಿ ಯಾವುದೇ ರೀತಿಯ ತಾರತಮ್ಯವಿರುವುದನ್ನು ಅಲ್ಲಗಳೆದರು. ಹೀಗೆ ಮಹಿಳೆಯರ ಮೇಲೆ ತಾರತಮ್ಯ ನಡೆಯುವುದರ ಕುರಿತು ಅಧ್ಯಯನದಲ್ಲಿ ಭಾಗಿಯಾದವರ ಪ್ರತಿಕ್ರಿಯೆ ನೋಡಿದರೆ ಅದು ನಿರಾಕರಣೆಯಾಗಿದೆ. ಆದರೆ ಕೆಲಸದ ಸ್ಥಳದಲ್ಲಿನ ಸಾಮಾನ್ಯ ಅಭ್ಯಾಸಗಳ ಕುರಿತಂತೆ ಒಬ್ಬೊಬ್ಬ ಕಾರ್ಮಿಕರಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಪ್ರಶ್ನೆಗಳನ್ನು ಕೇಳುತ್ತಾ ಬಂದಾಗ, ಭಾಗವಹಿಸಿದವರಲ್ಲಿ ಕ್ರಮೇಣ ಅದರ ಮನವರಿಕೆಯಾಗಿದ್ದು ಅಥವಾ ವಸ್ತುಸ್ಥಿತಿಯನ್ನು ಒಪ್ಪಿಕೊಂಡಿದ್ದು ಅವರ ಉತ್ತರದಲ್ಲಿ ಸ್ಪಷ್ಟವಾಗಿ ಕಂಡುಬಂತು.

**ವಲಸೆ ಮತ್ತು ಮಕ್ಕಳು**

ಮಹಿಳಾ ಕಾರ್ಮಿಕರ ಮೇಲಿನ ತಾರತಮ್ಯದ ಪ್ರಶ್ನೆಯಷ್ಟು ಇದು ಗೋಚರವಾಗದಿದ್ದರೂ, ಬಾಲ ಕಾರ್ಮಿಕರ ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಒಪ್ಪದ ಪ್ರವೃತ್ತಿಯೂ ಜನರ ಪ್ರತಿಕ್ರಿಯೆಯಲ್ಲಿ ಎದ್ದುಕಾಣುತ್ತಿತ್ತು. ಕುಟುಂಬದ ಉಳಿವಿಗೆ ಕೇವಲ ವಯಸ್ಕರ ಅತ್ಯಲ್ಪ ಸಂಪಾದನೆ ಸಾಮಾನ್ಯವಾಗಿ ಸಾಲುವುದಿಲ್ಲ. ಮಕ್ಕಳು ಕೆಲಸ ಮಾಡಲು ಈ ವಿಚಾರವೇ ಹೆಚ್ಚಾಗಿ ಒತ್ತಾಯಿಸುತ್ತದೆ. ಭಾರತದ ವಲಸಿಗ ಸಮುದಾಯದಲ್ಲಿ ಗುರುತಿಸದ, ದುರ್ಬಲ ಗುಂಪೆಂದರೆ ಬಹುಶಃ ಮಕ್ಕಳೇ. ಬೆಂಗಳೂರಿನಲ್ಲಿ ಮಕ್ಕಳು, ಚಹಾದ ಅಂಗಡಿಗಳಲ್ಲಿ ಕೆಲಸ ಮಾಡುವುದನ್ನು ಹಾಗೂ ಮಾರಾಟಗಾರರರಿಗೆ ಸಹಾಯ ಮಾಡುವುದನ್ನು ಕಾಣಬಹುದೆಂದು ಭಾಗವಹಿಸಿದ ಹಲವರು ಅನೌಪಚಾರಿಕ ಚರ್ಚೆಯ ಸಮಯದಲ್ಲಿ ತಿಳಿಸಿದರು. ಆದರೆ ಬೆಂಗಳೂರಿನಲ್ಲಿ ಯಾವುದೇ ರೂಪದಲ್ಲಿ ಬಾಲ ಕಾರ್ಮಿಕರಿರುವುದನ್ನು ಹೆಚ್ಚಿನವರು ಸಮೀಕ್ಷೆಯ ಸಮಯದಲ್ಲಿ ಅಲ್ಲಗಳೆದರು. ಭಾಗವಹಿಸಿದವರ ಮಕ್ಕಳಿಗೆ ಶಾಲೆ ಹಾಗೂ ವೈದ್ಯಕೀಯ ಸವಲತ್ತುಗಳ ದೊರಕುವಿಕೆಯ ಕುರಿತ ನೇರ ಪ್ರಶ್ನೆಯು, ಭಾಗವಹಿಸಿದವರು ವಲಸಿಗ ಕಾರ್ಮಿಕರ ಮಕ್ಕಳ ಪರಿಸ್ಥಿತಿಯ ಕುರಿತು ಮಾತನಾಡುವಂತೆ ಮಾಡಿತು. ತಮ್ಮ ಮಕ್ಕಳ ಆರೋಗ್ಯದ ಕುರಿತು ಭಾಗವಹಿಸಿದ ಹೆಚ್ಚಿನವರು ಚಿಂತಿತರಾಗಿದ್ದರು. ವಲಸಿಗ ಕಾರ್ಮಿಕರ ಮಕ್ಕಳಲ್ಲಿ ಹೆಚ್ಚಿನವರು ಅಪೌಷ್ಟಿಕತೆಯಿಂದ ಬಳಲುತ್ತಿದ್ದರು ಮತ್ತು ಬೆಂಗಳೂರಿನ ಕೆಲವು ಕಾರ್ಮಿಕರ ಕಾಲೊನಿಯಲ್ಲಿ ತಾಯಿಯು ಸಾವಿಗೀಡಾದ ನಿದರ್ಶನವೂ ಇತ್ತು.

ಶುದ್ಧ ಆಹಾರವಾಗಲೀ ಬಟ್ಟೆಯಾಗಲೀ ಸಿಗದಂತಹ ಮಕ್ಕಳು, ವಲಸಿಗ ಕಾರ್ಮಿಕರ ಬಹಳಷ್ಟು ವಸತಿಗಳು/ಕಾಲೋನಿಗಳಲ್ಲಿನ ಅನಾರೋಗ್ಯಕರ ಮತ್ತು ನೈರ್ಮಲ್ಯವಿಲ್ಲದ ವಾಸಿಸುವ ಪರಿಸ್ಥಿತಿಯಿಂದಲೂ ಬಹಳಷ್ಟು ಬಾಧಿತರಾಗಿದ್ದರು. ಅವರ ದೈನಂದಿನ ಆಹಾರದಲ್ಲಿ ಪೌಷ್ಟಿಕಾಂಶಗಳ ಮತ್ತು ನೈರ್ಮಲ್ಯತೆಯ ಕೊರತೆಯಿತ್ತು. ಪ್ರಧಾನ ಆಹಾರವಾಗಿ ಅಕ್ಕಿಯ ಜೊತೆಗೆ ಆಲೂಗಡ್ಡೆ ಮತ್ತು ಕೆಲವು ತರಕಾರಿಗಳನ್ನು ಬಳಸಲಾಗುತ್ತಿತ್ತು. ತಮ್ಮ ಮಕ್ಕಳು ಕ್ರಮವಾಗಿ ಶಾಲೆಗೆ ಹೋಗುತ್ತಾರೆಂದು ಭಾಗವಹಿಸಿದ ಹೆಚ್ಚಿನವರು ಹೇಳಿದರೂ, ಅವರ ಮಕ್ಕಳ ಶಿಕ್ಷಣ, ಏನೇ ಆಗಿದ್ದರೂ ಸಾಮಾನ್ಯವಾಗಿ ಅಂತೂ ಇರಲಿಲ್ಲ. ಅವರು ಪಡೆಯುವ ಶಿಕ್ಷಣದ ಗುಣಮಟ್ಟ ಕೆಳ ದರ್ಜೆಯದಾಗಿತ್ತು. ಶೋಲಾಪುರ ಮತ್ತು ಗೋವಾವನ್ನು ಹೊರತುಪಡಿಸಿ, ಅಧ್ಯಯನದ ಎಲ್ಲ ಸ್ಥಳಗಳಲ್ಲೂ ಶಿಕ್ಷಣವೇ ದೊಡ್ಡ ತೊಡಕಾಗಿತ್ತು. ಸುಮಾರು 3 ರಿಂದ 6 ತಿಂಗಳು ಮಾತ್ರ ವಾಸಿಸುವ ಗೋವಾದ ಕಾಲೋಚಿತ ವಲಸಿಗರಲ್ಲಿ ಕೂಡ, ಶಿಕ್ಷಣ ದೊಡ್ಡ ಸಮಸ್ಯೆಯಾಗಿತ್ತು.

ಸರಕಾರಿ ಶಾಲೆಗಳನ್ನು ಗುರುತಿಸುವುದೇ ವಲಸಿಗರಿಗೆ ಸಾಮಾನ್ಯವಾಗಿ ದೊಡ್ಡ ಸಮಸ್ಯೆಯಾಗುತ್ತಿತ್ತು ಮತ್ತು ಒಂದು ವೇಳೆ ಅವರಿಗೆ ಸಿಕ್ಕರೂ, ವರ್ಗಾವಣೆಗೆ ಬೇಕಾದ ಕಾಗದ ಪತ್ರದ ಕೆಲಸಗಳು ಅವರನ್ನು ಧೃತಿಗೆಡಿಸುತ್ತಿತ್ತು. ಹಾಗಾಗಿ ವಲಸಿಗರ ಮಕ್ಕಳು ಸಾಮಾನ್ಯವಾಗಿ ಖಾಸಗಿ ಶಾಲೆಗಳಿಗೆ ಹೋಗುತ್ತಿದ್ದರು. ಕುಟುಂಬ ಸಮೇತರಾಗಿ ವಲಸೆಹೋಗುವ ಕೆಲವು ಭಾಗವಹಿಸಿದವರು, ತಮ್ಮ

ತಾತ್ಕಾಲಿಕ ಕೆಲಸದ ಸ್ವಭಾವವು ತಮ್ಮ ಮಕ್ಕಳ ವಿದ್ಯಾಭ್ಯಾಸದ ಮೇಲೆ ಪ್ರಭಾವ ಬೀರುತ್ತದೆಂಬ ತಮ್ಮ ಆತಂಕವನ್ನು ಹಂಚಿಕೊಂಡರು. ಇನ್ನು ಕೆಲವು ಸಂದರ್ಭದಲ್ಲಿ, ವಲಸಿಗರ ಮಕ್ಕಳು ಶಾಲೆಗೆ ಹೋಗುತ್ತಿರಲಿಲ್ಲ ಮತ್ತು ವಲಸಿಗರ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಸರಕಾರ ಮಾಡಿದ ಕಾರ್ಯನೀತಿಗಳ ಅರಿವು ಭಾಗವಹಿಸಿದವರಲ್ಲಿ ಹೆಚ್ಚಿನವರಿಗೆ ಇರಲಿಲ್ಲ. ಈ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಅವರ ಮೂಲ ಸ್ಥಳದಲ್ಲಿ ಕ್ರಮವಾದ ಶಿಕ್ಷಣದ ಅನುಕೂಲತೆಗಳು ಇಲ್ಲದ ಕಾರಣ, ಕಾಲೋಚಿತ ವಲಸಿಗರ ಮಕ್ಕಳು ಮತ್ತೆ ಸಾಂಪ್ರದಾಯಿಕ ಶಿಕ್ಷಣದ ವ್ಯವಸ್ಥೆಗೆ ಸೇರಿಕೊಳ್ಳುವುದು ಬಹಳ ಕಷ್ಟಸಾಧ್ಯವಾಗಿತ್ತು. ಮಕ್ಕಳು ಶಾಲೆಗೆ ಹೋಗುವುದು ಮತ್ತು ಶಾಲೆಗಳಲ್ಲಿ ಅಧ್ಯಯನಕ್ಕೆ ಉಳಿದುಕೊಳ್ಳುವುದನ್ನು ವಲಸೆ ತಡೆಯುತ್ತದೆ ಎನ್ನುವಷ್ಟರ ಮಟ್ಟಿಗೆ ಅನೇಕ ವಿದ್ವಾಂಸರ ಚಿಂತನೆ ಸೂಚಿಸುತ್ತದೆ. (ಬರ್ಮನ್, 1966). ಅದಲ್ಲದೇ, ಪೋಷಕರ ಜೊತೆಯಲ್ಲಿ ವಲಸೆ ಬಂದು, ತಮ್ಮ ಬಾಲ್ಯದ ಬಹಳಷ್ಟು ಸಮಯವನ್ನು ಅಪರಿಚಿತ ಮತ್ತು ಅಸುರಕ್ಷಿತ ವಲಸೆ ಬಂದ ಸ್ಥಳದಲ್ಲಿ ಕಳೆಯುವ ಮಕ್ಕಳಿಗೆ,  ತಂದೆ ತಾಯಿಯರ ಜೊತೆಯಲ್ಲಿ ಕೆಲಸ ಮಾಡುವುದು ಒಂದು ದೊಡ್ಡ ಚಟುವಟಿಯೇ ಸರಿ.



ಬೆಂಗಳೂರಿನಲ್ಲಿ ಮಗುವಿನ ಜೊತೆಯಲ್ಲಿ ವಲಸಿಗ ಮಹಿಳೆ

# ಅಧ್ಯಾಯ ಎಂಟು
# ಪ್ರಮುಖ ಶಿಫಾರಸ್ಸುಗಳು

ಕರ್ನಾಟಕದ ಉತ್ತಮ ಗುಣಮಟ್ಟದ ಕೈಗೆಟಕುವ ಮತ್ತು ಪ್ರವೇಶ ದೊರಕಿಸಿಕೊಳ್ಳಬಹುದಾದ ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳ ಕುರಿತು ಕರ್ನಾಟಕದಲ್ಲಿರುವ ಭಾಗವಹಿಸಿದವರ, ಅಗಾಧ ಪ್ರಮಾಣದ ಪ್ರತಿಕ್ರಿಯೆಯಿಂದ ಸ್ಫೂರ್ತಿಗೊಂಡು, ಈ ಅಧ್ಯಯನದ ಬಹಳ ನಿರ್ಣಾಯಕ ಶಿಫಾರಸ್ಸು ರೂಪುಗೊಂಡಿದೆ. ಉತ್ತಮ ಗುಣಮಟ್ಟದ ಶಿಕ್ಷಣ ಮತ್ತು ವೈದ್ಯಕೀಯ ಸವಲತ್ತುಗಳು ಬಡ ಜನರಿಗೆ ದೊರಕುವಲ್ಲಿ ಸರಕಾರವು ಮುಖ್ಯ ಪಾತ್ರವಹಿಸುವುದನ್ನು ಮುಂದುವರಿಸಬೇಕಾಗಿದೆ ಎಂದು, ಈ ಅಧ್ಯಯನದಿಂದ ತಿಳಿದುಬಂದ ಅಂಶಗಳ ಆಧಾರದ ಮೇಲೆ ಶಿಫಾರಸ್ಸು ಮಾಡಲಾಯಿತು.

ತಮ್ಮ ಮೂಲ ಸ್ಥಳಗಳಲ್ಲಿ ಕೆಲಸ ಇಲ್ಲದ ಕಾರಣ ವಲಸೆ ಹೋಗಿದ್ದಾರೆಯೇ ಹೊರತು ಉತ್ತಮ ಜೀವನೋಪಾಯ ಮತ್ತು ಜೀವನವನ್ನು ಹುಡುಕುತ್ತಾ ಬಹುಪಾಲು ಜನರು ವಲಸೆ ಹೋಗಿಲ್ಲ. ಮೂಲ ಸ್ಥಳಗಳಲ್ಲಿ ಜೀವನೋಪಾಯದ ಅವಕಾಶಗಳ ಲಭ್ಯತೆ ಮತ್ತು ಸಾಲ ದೊರೆಯುವಿಕೆಯು ವಲಸೆಯನ್ನು ದೊಡ್ಡ ಪ್ರಮಾಣದಲ್ಲಿ ತಡೆಯಬಹುದು. ಈ ಅಧ್ಯಯನದಲ್ಲಿ ಭಾಗವಹಿಸಿದ ಬಹಳಷ್ಟು ಕಾರ್ಮಿಕರು ಶೌಚಾಲಯ ಮತ್ತು ಶುದ್ಧ ಕುಡಿಯುವ ನೀರಿನಂತಹ ಮೂಲಭೂತ ಸೌಲಭ್ಯಗಳು ಅತಿ ಕಡಿಮೆ ಪ್ರಮಾಣದಲ್ಲಿ ದೊರಕುವ ಅಥವಾ ಏನೂ ಸಿಗದಂತಹ ಶೋಚನೀಯ ಪರಿಸ್ಥಿತಿಯಲ್ಲಿ ವಾಸಿಸುತ್ತಿದ್ದರು ಮತ್ತು ಕೆಲಸ ಮಾಡುತ್ತಿದ್ದರು. ಈ ಸನ್ನಿವೇಶವು ಕಾರ್ಯನೀತಿಗಳ ಮೂಲಕ ಮಧ್ಯ ಪ್ರವೇಶಿಸಿಲು ಸರಕಾರಕ್ಕೆ ಕರೆ ನೀಡುತ್ತದೆ. ಈ ಉದ್ದೇಶಕ್ಕಾಗಿ ಕೆಲವು ಶಿಫಾರಸ್ಸುಗಳನ್ನು ಮತ್ತು ಕಾರ್ಯನೀತಿಗಳನ್ನು ಈ ಕೆಳಗೆ ಸೂಚಿಸಲಾಗಿದೆ:

**ಅಲ್ಪಾವಧಿ ಶಿಫಾರಸ್ಸುಗಳು**

- ಸ್ಥಳೀಯ ಮಟ್ಟದಲ್ಲಿ ಜೀವನೋಪಾಯದ ಆಯ್ಕೆಗಳನ್ನು ಹುಟ್ಟುಹಾಕಲು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು
- ಕೃಷಿಕರಿಗೆ ಬೀಜಗಳು, ಗೊಬ್ಬರ ಮೊದಲಾದವುಗಳನ್ನು ಕಡಿಮೆ ದರದಲ್ಲಿ ಒದಗಿಸುವುದು ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲ ಒದಗಿಸುವ ಭರವಸೆ ಕೊಡಬೇಕು
- ಚಿಕ್ಕ ವಾಣಿಜ್ಯೋದ್ಯಮಿಗಳಿಗೆ ಮತ್ತುಸಣ್ಣ ವ್ಯಾಪಾರಿಗಳಿಗೆ ಸುಲಭದಲ್ಲಿ ಸಾಲ ದೊರಕುವಿಕೆಯ ಭರವಸೆ ನೀಡುವುದು
- ಅಧ್ಯಯನದ ಎಲ್ಲ ಸ್ಥಳಗಳಲ್ಲಿ ವಲಸಿಗ ಕಾರ್ಮಿಕರಿಂದ ಕಮಿಷನ್ ಪಡೆಯುವಂತಹ ನೋಂದಾಯಿಸದ ಗುತ್ತಿಗೆದಾರರ ಏಕಸ್ವಾಮ್ಯವನ್ನು ತಡೆಯಲು ಕಠಿಣ ಅಧಿನಿಯಮ/ಕಾರ್ಯನೀತಿ ತರುವುದು
- ಪರಿಹಾರ ಕಾರ್ಯ ರಚನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು
- ಮಹಿಳಾ ಕೆಲಸಗಾರರ ಹಕ್ಕುಗಳ ರಕ್ಷಣೆ ಮತ್ತು ಕೆಲಸದ ಸ್ಥಳದಲ್ಲಿ ಅವರ ಸುರಕ್ಷತೆ ಗಮನಿಸುವ ಸಂಘಟನೆಗಳು ಮತ್ತು ಘಟಕಗಳ ಬಲವರ್ಧನೆ ಮಾಡುವುದು
- ಕೆಲಸಗಾರರಿಗೆ ಅವರ ಹಕ್ಕುಗಳ ಕುರಿತು ತಿಳುವಳಿಕೆ ನೀಡಲು ನಿಯಮಿತವಾಗಿ ತರಬೇತಿ ಕಾರ್ಯಾಗಾರಗಳನ್ನು ಸಂಘಟಿಸಲು ಅವಕಾಶ ಕಲ್ಪಿಸುವುದು
- ಲಿಂಗ ಸಂವೇದನಾಶೀಲತೆಗಾಗಿ ತರಬೇತಿ ಕಾರ್ಯಾಗಾರಗಳನ್ನು ಸಂಘಟಿಸಲು ಅವಕಾಶ ಕಲ್ಪಿಸುವುದು

**ದೀರ್ಘಾವಧಿ ಶಿಫಾರಸ್ಸುಗಳು**

- ಸ್ಥಳೀಯ ಮಟ್ಟದಲ್ಲಿ ಉದ್ಯೋಗಾವಕಾಶ ಕಲ್ಪಿಸಲು ತಕ್ಕ ಕ್ರಮ
- ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆ ಕುರಿತು ಜಾಗೃತಿ ಹೆಚ್ಚಿಸುವುದು
- ಸ್ಥಳೀಯ ಮಟ್ಟದಲ್ಲಿ ಇತರ ಅಭಿವೃದ್ಧಿ ಕಾರ್ಯಕ್ರಮಗಳು/ಯೋಜನೆಗಳ ಜೊತೆಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಜೋಡಿಸುವುದು

- ಉತ್ತಮ ಗುಣಮಟ್ಟದ ಆರೋಗ್ಯ ಸೇವೆಗಳು ಮತ್ತು ಮಕ್ಕಳಿಗೆ ಶಿಕ್ಷಣ ಒದಗಿಸುವುದು (ವಿಶೇಷವಾಗಿ ಬೇರೆ ರಾಜ್ಯಗಳಲ್ಲಿ, ಏಕೆಂದರೆ ಕರ್ನಾಟಕದ ವಲಸಿಗ ಕಾರ್ಮಿಕರು ತಮ್ಮ ಮೂಲ ಸ್ಥಳದಲ್ಲಿ ದೊರಕುವ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಕುರಿತು ಮೆಚ್ಚಿದ್ದರು)
- ಕಲ್ಯಾಣ ಯೋಜನೆಗಳ, ಅದರಲ್ಲೂ ವಿಶೇಷವಾಗಿ ಆದಾಯ ಉತ್ಪತ್ತಿಯ, ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದವುಗಳ ಪರಿಣಾಮಕಾರಿಯಾದ ಅನುಷ್ಠಾನ
- ಬಾಲ ಕಾರ್ಮಿಕ ಪದ್ಧತಿಯನ್ನು ತಡೆಯಲು ಕಠಿಣ ಕಾರ್ಯನೀತಿಗಳು
- ಲಿಂಗ ಆಧಾರಿತ ವೇತನ ತಾರತಮ್ಯ ತಡೆಯಲು ಕಠಿಣ ಕಾರ್ಯನೀತಿಗಳು
- ವಲಸಿಗ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಗೆ ಪರಿಣಾಮಕಾರಿಯಾದ ಕಾರ್ಯನೀತಿಗಳ ಅನುಷ್ಠಾನ
- ಲೈಂಗಿಕ ಕಿರುಕುಳದ ವಿರುದ್ಧ ಸಮಿತಿಗಳ ಪರಿಣಾಮಕಾರಿಯಾದ ಪಾತ್ರ

**ಕಾರ್ಯನೀತಿಯಲ್ಲಿ ಬದಲಾವಣೆಗಳು**

- ವಲಸಿಗ ಕಾರ್ಮಿಕರ ನೋಂದಣಿ ಮತ್ತು ಅವರಿಗೆ ಗುರುತಿನ ಚೀಟಿ ನೀಡುವ ಭರವಸೆ
- ಗುರುತಿನ ಚೀಟಿ ಅವರಿಗೆ ಇವುಗಳ ಅವಕಾಶವನ್ನು ಖಚಿತಪಡಿಸಬೇಕು:
    - ವಲಸೆಯ ಗಮ್ಯ ಸ್ಥಳದಲ್ಲಿರುವ ಪಡಿತರ ಅಂಗಡಿ
    - ಸಾರ್ವಜನಿಕ ಆರೋಗ್ಯ ರಕ್ಷಣಾ ಸಂಸ್ಥೆಗಳು
    - ಸರಕಾರಿ ಶಾಲೆ
- ಆರೋಗ್ಯ, ನೈರ್ಮಲ್ಯ ಮತ್ತು ಇನ್ನುಳಿದ ಕಲ್ಯಾಣ ಸೇವೆಗಳಂತಹ ಮೂಲಭೂತ ಸೇವೆಗಳು ವಲಸಿಗ ಕಾರ್ಮಿಕರಿಗೆ ದೊರೆಯುವಂತೆ ಕಾರ್ಯಯೋಜನೆಗಳನ್ನು ರೂಪಿಸುವುದು
- ವಲಸಿಗ ಕಾರ್ಮಿಕರ ಹಕ್ಕುಗಳ ಉಲ್ಲಂಘನೆ ; ಮಹಿಳಾ ವಲಸಿಗ ಕಾರ್ಮಿಕರ ಶೋಷಣೆ; ವೇತನದಲ್ಲಿಯ ತಾರತಮ್ಯ; ಮತ್ತು ಬಾಲ ಕಾರ್ಮಿಕರ ತಡೆಯಲು ಕಠಿಣ ಕಾರ್ಯನೀತಿಗಳು
- ನೋಂದಾಯಿಸದ ಗುತ್ತಿಗೆದಾರರನ್ನು ನಿಯಂತ್ರಿಸಲು ಕಾರ್ಯನೀತಿಗಳು/ಅಧಿನಿಯಮಗಳನ್ನು ರೂಪಿಸುವುದು
- ಕಾರ್ಮಿಕರಿಗೆ, ಉದ್ಯೋಗದಾತರಿಗೆ ಮತ್ತು ಆಡಳಿತ ಮಂಡಳಿಯ ಸಿಬ್ಬಂದಿಗೆ ಅವರ ಕೆಲಸದ ಸ್ಥಳದಲ್ಲಿ ವಲಸಿಗ ಕಾರ್ಮಿಕರ ಹಕ್ಕುಗಳ ಕುರಿತು ತರಬೇತಿ ಕಾರ್ಯಾಗಾರಗಳನ್ನು ಸಂಘಟಿಸಲು ಅವಕಾಶ ಕಲ್ಪಿಸುವುದು
- ಲಿಂಗ ಸಂವೇದನಾಶೀಲತೆಯ ಕಾರ್ಯಾಗಾರವನ್ನು ಪುರುಷ ಮತ್ತು ಮಹಿಳಾ ಕೆಲಸಗಾರರು ಹಾಗೆಯೇ ಉದ್ಯೋಗದಾತರು ಮತ್ತು ಆಡಳಿತ ಮಂಡಳಿ ಸಿಬ್ಬಂದಿಗೆ ಕೆಲಸದ ಸ್ಥಳದಲ್ಲಿ ಸಂಯೋಜಿಸಲು ಅವಕಾಶ ಕಲ್ಪಿಸುವುದು

REFERENCES

- Bremen, J. (1996). Footloose labour: Working in India's informal economy. London: Cambridge University Press.
- Census of India (2011). Population, size and decadal change. New Delhi, Retrieved February 20, 2017, from http://www.censusindia.gov.in/2011census/PCA/PCA_ Highlights/pca _highlights_file/India/Chapter-1.pdf
- Dang, N. (2003). Internal migration policy in the ESCAP region. Asia-Pacific population Journal, Department for International Development.
- Frank, A. (1978). Development of underdevelopment or underdevelopment of development.
- Modern China 4 (3), 341-350.
- Habib, I. (2011). Economic history of medieval India, 1200-1500. New Delhi: Pearson Education India.
- Hindu (2015). Caste shadows migration patterns in Karnataka. Retrieved on July 25, 2008, from,http://www.thehindu.com/todays-paper/tp-national/caste-shadows-migration-patterns-in-karnataka-says-study/article7478890.ece
- Hiraway, I. (2011). Missing labour force. Economic and Political Weekly, 47(37), 2027-36.
- ILO (2013). Global employment trends report for 2013. Geneva: ILO.
- NSSO 64th Round (2010). Retrieved on November 20, 2016 from, http://mospi.nic.in/sites/default/files/publication_reports/531_final.pdf
- Karan, A. (2003). Changing pattern of migration from rural Bihar. New Delhi: Kanishka Publications.
- Karlekar, M. (1995). Gender dimension in labour market: An overview. Loes Schenk Sandbergen (ed.). New Delhi: Sage Publications.
- Kuptsch, C. (2006). Merchants of labour. New Delhi: Bookwell Publications.
- Menasinakail, S. (2017, March 21). Drought forces Koppal farmers to migrate to cities. Retrieved on October 18, 2016 from indiatitimesofindia.mes.com/city/hubballi/drought-forces-koppal-farmers-to-migrate-to-cities/articleshow/57740371.cms
- International Organization for Migration (2005). Migration, development and poverty reduction in Asia. Geneva: IOM.
- Misra, S. N. (1998). Dynamics of rural urban migration In India. New Delhi: Anmol Publications.
- Munshi, K. and Rosenzweig, M. (2016). Networks and misallocation: Insurance, migration, and the rural-urban wage gap. American Economic Review, AVol.106 (1), 46-98.
- Myrdal, G. (1957). Economic theory of underdeveloped region. London: Harper and Row.
- National Sample Survey (2007). Unorganised manufacturing sector in India- Employment, Assets and Borrowings. Retrieved July 25, 2009

http://mospi.nic.in/rept%20_%20pubn/ftest.asp?rept_id=525&type=NSSO
http://mospi.nic.in/rept%20_%20pubn/ftest.asp?rept_id=525&type=NSSO

- Pandey, D. (1998). Migrant labour, employment and gender dimension. Lakshmi Lingam (ed.).
- The Indian Journal of Social Work- Special Issue, 59 (3).
- Ravenstein, E. G. (1885). The laws of migration. Journal of the Statistical Society of London, Vol. 48 (2), 167-235.
- Santos, M. D. (2003). Migration as a source of growth: Perspectives of a developing country.
- Journal of Population Studies, 16 (1).
- Shanthi, K. (2006). Female labour migration in India: Insights from NSSO data. Working Paper No. 4, Madras School of Economics, Cehnnai.
- Start, P. D. (2003). Seasonal migration for livelihood, coping, accumulation and exclusion.
- Working Paper no.220, Overseas Development Institute.
- Sundari, S. (2007). Migrant women and urban labour market. New Delhi: Deep and Deep Publications.
- Uma, H. R., Madhu, G. R. and Habeeb, U. H. (2013). An analysis of the causes of regional migration using Garret's scale. IOSR Journal of Humanities and Social Scienc , 12 (1), 20-23(2013). Regional migration for inclusion: A study of agricultural labourers from North Karnataka to South Karnataka. International Journal of Scientific and Research Publications, 3 (6).
- Varma, R. A. (2014, March 03). Internal labor migration in India raises integration challenges for migrants. Retrieved on February 20, 2017 from www.migrationpolicy.org:
- http://www.migrationpolicy.org/article/internal-labor-migration-india-raises-integration-challenges-migrants
- Virani, P. (2016). Politics of the womb. Gurugram: Penguin India.
- Tripathy, S. N. and Dash, C. R. (1997) Migrant labour in India, New Delhi: Discovery Publishing House.
- Joseph, J. and Stanislaus, L. (2007) Migration and mission in India (ed.) New Delhi: ISPCK,
- Pande, A. (2014). Wombs in labour: Transnational commercial surrogacy in India, Columbia:
- Columbia University Press.

## ಅನುಬಂಧ

**ಪ್ರಶ್ನಾವಳಿ**

ಕರ್ನಾಟಕದಿಂದ ಹೊರಗೆ ಮತ್ತು ಕರ್ನಾಟಕಕ್ಕೆ ಕಾರ್ಮಿಕರ ವಲಸೆಯ ಮೌಲ್ಯಮಾಪನ ಅಧ್ಯಯನಕ್ಕಾಗಿ

| | ಹಳ್ಳಿ/ನಗರ | ಬ್ಲಾಕ್ | ಜಿಲ್ಲೆ | ರಾಜ್ಯ |
|---|---|---|---|---|
| ವಲಸೆಯ ಗುರಿ | | | | |
| ಮೂಲ ಸ್ಥಳ | | | | |

**ವಿಭಾಗ ಅ: ಅಧ್ಯಯನದಲ್ಲಿ ಭಾಗವಹಿಸಿದ ವ್ಯಕ್ತಿಯ ಸಾಮಾನ್ಯ ವಿವರದ ಮಾಹಿತಿ**

| | |
|---|---|
| ಮಾಹಿತಿದಾರನ ಹೆಸರು | |
| ವಯಸ್ಸು | |
| ಲಿಂಗ (1–ತೃತೀಯಲಿಂಗಿ, 2–ಹೆಣ್ಣು, 3–ಗಂಡು) | |
| ವೈವಾಹಿಕ ಸ್ಥಿತಿ (1–ಮದುವೆಯಾದವರು; 2–ಮದುವೆಯಾಗದವರು) | |
| ಉದ್ಯೋಗ (1–ರೈತ; 2–ಸ್ವಉದ್ಯೋಗಿ; 3–ದಿನಗೂಲಿ ನೌಕರ; 4–ಕಾರ್ಖಾನೆಯ ಕಾರ್ಮಿಕ; 5–ಇತರೆ)<br><br>ಬೇರೆ ಇದ್ದಲ್ಲಿ, ದಯವಿಟ್ಟು ಸೂಚಿಸಿ. | |
| ವಾರ್ಷಿಕ ಆದಾಯ (1– ರೂ.15000ಕ್ಕಿಂತ ಕಡಿಮೆ; 2– ರೂ.16000–25000;<br>3– ರೂ.26000–50000; 4– ರೂ.51000–75000; 5– ರೂ.76000–100000;<br>6– ರೂ.100000–125000; 7– ರೂ.126000ಕ್ಕಿಂತ ಹೆಚ್ಚು) | |
| ವ್ಯವಸಾಯ ಭೂಮಿಯ ಗಾತ್ರ (1–ಭೂಮಿ ಇಲ್ಲ; 2– 1 ಎಕರೆಗಿಂತ ಕಡಿಮೆ;<br>3–2 ಎಕರೆಗಿಂತ ಕಡಿಮೆ; 4– 3 ಎಕರೆಗಿಂತ ಕಡಿಮೆ; 5– 3 ಎಕರೆಗಿಂತ ಹೆಚ್ಚು)<br><br>ದಯವಿಟ್ಟು ವ್ಯವಸಾಯ ಭೂಮಿಯ ಗಾತ್ರವನ್ನು ಸೂಚಿಸಿ: ____ಎಕರೆಗಳು | |
| ನೀವು ಭೂಮಿ ಹೊಂದಿದ್ದರೆ, ದಯವಿಟ್ಟು ನೀರಾವರಿ ಭೂಮಿಯ ಗಾತ್ರವನ್ನು ಸೂಚಿಸಿ<br>(1–ಯಾವುದೂ ಇಲ್ಲ; 2– 1 ಎಕರೆಗಿಂತ ಕಡಿಮೆ; 3–2 ಎಕರೆಗಿಂತ ಕಡಿಮೆ;<br>4– 3 ಎಕರೆಗಿಂತ ಕಡಿಮೆ; 5– 3 ಎಕರೆಗಿಂತ ಹೆಚ್ಚು)<br>ದಯವಿಟ್ಟು ನೀವು ಹೊಂದಿರುವ ನೀರಾವರಿ ಭೂಮಿಯ ಗಾತ್ರವನ್ನು ಸೂಚಿಸಿ:<br>____ಎಕರೆಗಳು | |
| ವಿದ್ಯಾಭ್ಯಾಸದ ಮಟ್ಟ<br>[ 1–ಅನಕ್ಷರಸ್ಥ;<br>2–ಪ್ರಾಥಮಿಕ ಶಿಕ್ಷಣ (1ರಿಂದ 5ನೆಯ ತರಗತಿ);<br>3–ಮಾಧ್ಯಮಿಕ(6ರಿಂದ 8ನೆಯ ತರಗತಿ);<br>4–ಪೌಢಶಿಕ್ಷಣ (9ರಿಂದ 10ನೆಯ ತರಗತಿ);<br>5–ಉನ್ನತ ಪ್ರೌಢಶಿಕ್ಷಣ (11ರಿಂದ 12ನೆಯ ತರಗತಿ);<br>6–ತಾಂತ್ರಿಕ ಶಿಕ್ಷಣ/ಡಿಪ್ಲೋಮಾ;<br>7–ಪದವಿ;<br>8–ಸ್ನಾತಕೋತ್ತರ;<br>9–ಇನ್ನುಳಿದವು (ಸೂಚಿಸಿ) ] | |
| ಜಾತಿ (1–ಎಸ್ಸಿ; 2–ಎಸ್ಟಿ ; 3–ಬಿಸಿ; 4–ಓಬಿಸಿ; 5–ಉಳಿದವರು) | |
| ಧರ್ಮ (1–ಹಿಂದು; 2–ಮುಸ್ಲಿಮ್; 3–ಕ್ರಿಶ್ಚಿಯನ್; 4–ಸಿಖ್; 5–ಉಳಿದವರು) | |
| ಕುಟುಂಬದ ಪ್ರಕಾರ (1–ಕೂಡು; 2–ಮೂಲ) | |
| ಮಕ್ಕಳ ಸಂಖ್ಯೆ | |

**ವಿಭಾಗ ಬ: ಕುಟುಂಬದ ಮಾಹಿತಿ**

| ಸಂಖ್ಯೆ | ಹೆಸರು (ಕುಟುಂಬದ ಹಿರಿಯರ ಹೆಸರಿನಿಂದ ಆರಂಭಿಸಿ) | ಮಾಹಿತಿದಾರನೊಡನೆ ಸಂಬಂಧ | ವಯಸ್ಸು | ಲಿಂಗ(1–ತೃತೀಯ ಲಿಂಗಿ; 2–ಸ್ತ್ರೀ 3–ಪುರುಷ) | ವೈವಾಹಿಕ ಸ್ಥಿತಿ (1–ಮದುವೆಯಾದವರು; 2–ಮದುವೆಯಾಗದವರು) | ಶಿಕ್ಷಣ<br><br>[ 1–ಅನಕ್ಷರಸ್ಥ;<br>2–ಪ್ರಾಥಮಿಕ ಶಿಕ್ಷಣ (1ರಿಂದ 5ನೆಯ ತರಗತಿ);<br>3–ಮಾಧ್ಯಮಿಕ(6ರಿಂದ 8ನೆಯ ತರಗತಿ); 4–ಪೌಢಶಿಕ್ಷಣ (9ರಿಂದ 10ನೆಯ ತರಗತಿ);<br>5–ಉನ್ನತ ಪ್ರೌಢಶಿಕ್ಷಣ (11ರಿಂದ 12ನೆಯ ತರಗತಿ);<br>6–ತಾಂತ್ರಿಕ ಶಿಕ್ಷಣ/ಡಿಪ್ಲೋಮಾ; 7–ಪದವಿ;<br>8–ಸ್ನಾತಕೋತ್ತರ;<br>9–ಇನ್ನುಳಿದವು (ಸೂಚಿಸಿ) ] | ಉದ್ಯೋಗ<br>(1–ರೈತ; 2–ಸ್ವಉದ್ಯೋಗಿ; 3–ದಿನಗೂಲಿ ನೌಕರ; 4–ಕಾರ್ಖಾನೆಯ ಕಾರ್ಮಿಕ; 5–ವ್ಯಾಪಾರ; 6–ಸೇವೆ; 7–ಇತರ) | ಮಾಸಿಕ ಆದಾಯ<br>(1– ರೂ.6000ಕ್ಕಿಂತ ಕಡಿಮೆ; 2– ರೂ.6000–15000; 3– ರೂ.16000–25000; 4– ರೂ.26000–35000; 5– ರೂ.35000ಕ್ಕಿಂತ ಹೆಚ್ಚು) | ಚುನಾವಣಾ ಗುರುತಿನ ಚೀಟಿ<br>(1–ಇದೆ;<br>1–ಇಲ್ಲ) |
|---|---|---|---|---|---|---|---|---|---|
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

**ವಿಭಾಗ ಕ: ವಲಸೆ: ಕಾರಣ ಮತ್ತು ವೈಖರಿ**

| ಕ್ರಮ ಸಂಖ್ಯೆ | ಪ್ರಶ್ನೆ | ಪ್ರತಿಕ್ರಿಯೆ | ಅಭಿಪಾಯ (ಇದ್ದಲ್ಲಿ) |
|---|---|---|---|
| 1. | ನೀವು ವಲಸೆ ಹೋಗಲು ಪ್ರೇರೇಪಿಸಿದ/ಬಲವಂತಪಡಿಸಿದ ಮುಖ್ಯ ಕಾರಣ ಯಾವುದು? [ 1–ಉತ್ತಮ ವೇತನ; 2–ಜೀವನೋಪಾಯದ ಹೆಚ್ಚಿನ ಅವಕಾಶಗಳು; 3–ಬರಗಾಲ; 4–ಸಾಲ ಮರುಪಾವತಿಗೆ; 5–ಬೆಳೆ ನಷ್ಟ; 6–ಉಳಿದವು(ದಯವಿಟ್ಟು ಸೂಚಿಸಿ)] | | |
| 2. | ನೀವಿಲ್ಲಿ ನಿಮ್ಮ ಕುಟುಂಬದೊಡನೆ ನೆಲೆಸಿರುವಿರಾ ? (1–ಹೌದು; 2–ಇಲ್ಲ) | | |
| **3** | ಹೌದು ಎಂದಾದಲ್ಲಿ, ನೀವು ಯಾವಾಗಿನಿಂದ ಇಲ್ಲಿ ನಿಮ್ಮ ಕುಟುಂಬದೊಡನೆ ನೆಲೆಸಿದ್ದೀರಿ? (1–ಒಂದು ವರ್ಷಕ್ಕಿಂತ ಕಡಿಮೆ; 2–3 ವರ್ಷಕ್ಕಿಂತ ಕಡಿಮೆ; 3–5 ವರ್ಷಕ್ಕಿಂತ ಕಡಿಮೆ; 4–5 ವರ್ಷಕ್ಕಿಂತ ಹೆಚ್ಚು) | | |
| **4** | ಎರಡನೆಯ ಪ್ರಶ್ನೆಗೆ ಉತ್ತರ ಇಲ್ಲ ಎಂದಾದಲ್ಲಿ, ನೀವು ಈ ನಗರ/ಹಳ್ಳಿಗೆ ಮಾತ್ರ ಬಂದಿದ್ದೀರ ಅಥವಾ ಕೆಲಸವನ್ನು ಹುಡುಕಿ ಬೇರೆ ಪಟ್ಟಣಗಳು/ಹಳ್ಳಿಗಳಿಗೆ ಹೋಗುತ್ತೀರಾ? (1–ಕೇವಲ ಈ ನಗರ/ಹಳ್ಳಿ; 2–ಬೇರೆ ನಗರಗಳು/ಹಳ್ಳಿಗಳಿಗೆ ವಲಸೆ ಹೋಗುತ್ತೇನೆ; 3–ಕೆಲಸಕ್ಕೋಸ್ಕರ ಇದೇ ಮೊದಲ ಬಾರಿ ನಾನು ವಲಸೆ ಬಂದಿರುವುದು) | | |
| **5** | ನಿಮ್ಮ ಮೂಲ ಸ್ಥಳದಲ್ಲಿ ವಲಸೆ ಸಾಮಾನ್ಯ ಅಥವಾ ನಿಯಮಿತವಾಗಿ ನಡೆಯುವ ವಿದ್ಯಮಾನವೇ? (1–ಹೌದು; 2–ಇಲ್ಲ; 3–ಗೊತ್ತಿಲ್ಲ) | | |
| **6** | 5. ಹೌದಾದಲ್ಲಿ, ನಿಮ್ಮ ಮೂಲ ಸ್ಥಳದಿಂದ ವಲಸೆ ಹೋಗಲು ಇರುವ ಬಹಳ ಸಾಮಾನ್ಯವಾದ ಕಾರಣವನ್ನು ಹಂಚಿಕೊಳ್ಳಿ. [1–ಕೆಲಸ ಇಲ್ಲದಿರುವದು; 2–ಬೆಳೆ ನಷ್ಟ; 3–ಬರಗಾಲ; 4–ಸಾಲ ಮರುಪಾವತಿಗೆ; 5–ಉತ್ತಮ ವೇತನ; 6–ಜೀವನೋಪಾಯದ ಹೆಚ್ಚಿನ ಅವಕಾಶಗಳು; 7–ಉಳಿದವು (ದಯವಿಟ್ಟು ಸೂಚಿಸಿ)] | | |
| **7** | ನಿಮ್ಮ ಮೂಲ ಸ್ಥಳದಿಂದ ವಲಸೆ ಹೋಗಲು ಸಾಮಾನ್ಯವಾಗಿ ಯಾವುದಾದರೂ ನಿರ್ದಿಷ್ಟ ತಿಂಗಳು/ಋತುಮಾನ ಇದೆಯೇ? (1–ಹೌದು; 2–ಇಲ್ಲ; 3–ಗೊತ್ತಿಲ್ಲ) ಹೌದಾದಲ್ಲಿ, ದಯವಿಟ್ಟು ಆ ಕಾಲಮಾನಗಳ/ತಿಂಗಳುಗಳ ಹೆಸರುಗಳನ್ನು ತಿಳಿಸಿ | | |
| **8** | ನಿಮ್ಮ ಮೂಲ ಜಿಲ್ಲೆಯಲ್ಲಿ ವಲಸೆಯು ಕೆಲವು ನಿರ್ದಿಷ್ಟ ತಾಲೂಕುಗಳಿಗೆ ಸೀಮಿತವಾಗಿದೆಯೇ? (1–ಹೌದು; 2–ಇಲ್ಲ; 3–ಗೊತ್ತಿಲ್ಲ) | | |
| 9. | ಹೌದಾದಲ್ಲಿ, ದಯವಿಟ್ಟು ಆ ತಾಲೂಕುಗಳ ಹೆಸರುಗಳನ್ನು ತಿಳಿಸಿ. | | |
| 10. | ಈ ತಾಲೂಕುಗಳಿಂದ ಹೆಚ್ಚಿನ ಕಾರ್ಮಿಕರು ಹೊರ ಹೋಗಲು ಕಾರಣವೇನು? [1–ಕೆಲಸ ಇಲ್ಲದಿರುವುದು; 2–ಬೆಳೆ ನಷ್ಟ; 3–ಬರಗಾಲ; 4–ಸಾಲ ಮರುಪಾವತಿಗೆ; 5–ಉತ್ತಮ ವೇತನ; 6–ಜೀವನೋಪಾಯದ ಹೆಚ್ಚಿನ ಅವಕಾಶಗಳು; 7–ಉಳಿದವು(ದಯವಿಟ್ಟು ಸೂಚಿಸಿ)] | | |
| 11. | ಯಾವುದಾದರೂ ನಿರ್ದಿಷ್ಟ ಜಾತಿಯಲ್ಲಿ ಕಾರ್ಮಿಕರ ವಲಸೆ ಬಹಳ ಸಾಮಾನ್ಯವಾಗಿದೆಯೇ? (1–ಹೌದು; 2–ಇಲ್ಲ; 3–ಗೊತ್ತಿಲ್ಲ) | | |
| **12** | ಹೌದಾದಲ್ಲಿ, ನಿಮ್ಮ ಮೂಲ ಸ್ಥಳದಿಂದ ಯಾವ ಜಾತಿಯ ಕಾರ್ಮಿಕರು ಸರ್ವೇ ಸಾಮಾನ್ಯವಾಗಿ ಹೊರ ಹೋಗುತ್ತಾರೆ? [1–ಎಸ್ಸಿ 2–ಎಸ್ಟಿ 3–ಓಬಿಸಿ; 4–ಸಾಮಾನ್ಯ/ಉಳಿದವರು (ದಯವಿಟ್ಟು ಸೂಚಿಸಿ) | | |
| 13. | ಬೇರೆ ರಾಜ್ಯಗಳಿಂದ ಬಂದ ವಲಸಿಗರಿಂದಾಗಿ ಕರ್ನಾಟಕದ ಸ್ಥಳೀಯ ಜನರ ಜೀವನೋಪಾಯದ ಅವಕಾಶಗಳ ಮೇಲೆ ಪರಿಣಾಮ ಬೀರಿದೆಯೆಂದು ನಿಮಗನಿಸಿದೆಯೇ? (1–ಹೌದು; 2–ಇಲ್ಲ; 3–ಹೇಳಲಾಗದು) | | |
| 14. | ಬೇರೆ ರಾಜ್ಯಗಳಿಂದ ಬಂದ ಕಾರ್ಮಿಕರಿಂದಾಗಿ ಕರ್ನಾಟಕದ ಕಾನೂನು ಮತ್ತು ಸುವ್ಯವಸ್ಥೆಯ ಸ್ಥಿತಿಯ ಮೇಲೆ ಪರಿಣಾಮ ಬೀರಿದೆಯೆಂದು ನಿಮಗನಿಸಿದೆಯೇ? (1–ಹೌದು; 2–ಇಲ್ಲ; 3–ಹೇಳಲಾಗದು) | | |
| 15 | ನೀವು ಏಕಾಂಗಿಯಾಗಿ ವಲಸೆ ಬಂದಿದ್ದೀರಾ? (1–ಹೌದು; 2–ಇಲ್ಲ) | | |

| | | | |
|---|---|---|---|
| 16. | ಇಲ್ಲ ಎಂದಾದಲ್ಲಿ, ನೀವು ಯಾರೊಂದಿಗೆ ವಲಸೆ ಬಂದಿದ್ದೀರಾ?<br>[1–ಹೆಂಡತಿ ಮತ್ತು ಮಕ್ಕಳ ಜೊತೆಗೆ; 2–ಕುಟುಂಬದ ಇತರ ಪುರುಷರ 'ಜೊತೆಗೆ; 3–ಹಳ್ಳಿಯ/ನಗರದ ಇತರ ಪುರುಷರ 'ಜೊತೆಗೆ; 4–ಬೇರೆ ಹಳ್ಳಿ/ನಗರದ ಸ್ನೇಹಿತರ ಜೊತೆಗೆ; 5–ಉಳಿದವರು(ದಯವಿಟ್ಟು ಸೂಚಿಸಿ)] | | |
| 17. | ಎಷ್ಟು ದಿನಗಳಿಗೊಮ್ಮೆ ನಿಮ್ಮ ಮೂಲ ಊರು/ಮೂಲ ಹಳ್ಳಿಗೆ ವಾಪಾಸು ಹೋಗುತ್ತೀರ?<br>(1–ತಿಂಗಳಿಗೊಮ್ಮೆ; 2–ವರ್ಷಕ್ಕೊಮ್ಮೆ; 3–ವರ್ಷದಲ್ಲಿ ಎರಡರಿಂದ ನಾಲ್ಕು ಬಾರಿ; 4–2–3 ವರ್ಷಗಳಿಗೊಮ್ಮೆ; 5–ಇಲ್ಲಿಗೆ ಬಂದ ನಂತರ ಒಮ್ಮೆಯೂ ವಾಪಾಸು ಹೋಗಿಲ್ಲ.) | | |
| 18. | ನೀವು ವಲಸೆ ಹೋಗಲು ನಿರ್ದಿಷ್ಟ ಕಾಲ/ತಿಂಗಳುಗಳು ಇವೆಯೇ?<br>ಹೌದಾದಲ್ಲಿ, ದಯವಿಟ್ಟು ಆ ಕಾಲವನ್ನು ಹೇಳಿರಿ. | | |
| 19. | ನೀವು ಹಣ ಉಳಿಸುವಿರಾ?<br>(1–ಹೌದು; 2–ಇಲ್ಲ) | | |
| 20. | ನೀವು ನಿಮ್ಮಕುಟುಂಬಕ್ಕೆ ಹಣ ಕಳುಹಿಸುವಿರಾ?<br>(1–ಹೌದು; 2–ಇಲ್ಲ; 3–ಅನ್ವಯಿಸುವುದಿಲ್ಲ) | | |
| 21. | ಹೌದು ಎಂದಾದಲ್ಲಿ, ಕುಟುಂಬಕ್ಕೆ ಎಷ್ಟು ಬಾರಿ ಹಣ ಕಳುಹಿಸುತ್ತೀರಿ?<br>(1–ಯಾವಾಗ ಬೇಕಾಗುವುದೋ ಆಗ; 2–ತಿಂಗಳಿಗೆ; 3–ತಿಂಗಳಿಗೆ ಎರಡು ಬಾರಿ 4–ಯಾವಾಗ ಮನೆಗೆ ಹೋಗುತ್ತೇವೋ ಆಗ) | | |
| 22. | ನೀವು ಮನೆಗೆ ಹಣವನ್ನು ಹೇಗೆ ಕಳುಹಿಸುತ್ತೀರಿ?<br>(1–ವೈಯಕ್ತಿಕವಾಗಿ; 2–ಗೆಳೆಯರು/ಸಂಬಂಧಿಕರ ಮೂಲಕ; 3–ಮನಿ ಆರ್ಡರ್ ಮೂಲಕ; 4–ಬ್ಯಾಂಕ್ನ; ಖಾತೆಗೆ ಹಾಕುವುದು; 5–ಇತರೆ) | | |
| 23. | ನಿರ್ದಿಷ್ಟ ಕಾರ್ಯನೀತಿಗಳ ಮೂಲಕ ವಲಸೆಯನ್ನುತಡೆಯಬಹುದೇ?<br>ಹೌದು ಎಂದಾದಲ್ಲಿ, ಆ ಕಾರ್ಯನೀತಿಗಳು ಯಾವುವು?<br>(1–ಹೆಚ್ಚಿನ ಜೀವನೋಪಾಯದ ಅವಕಾಶಗಳನ್ನು ರೂಪಿಸುವುದು; 2–ಕೌಶಲ್ಯ ತರಬೇತಿ ಕಾರ್ಯಕ್ರಮ; 3–ಸಾಮಾಜಿಕ ಭದ್ರತೆಯ ಪ್ರಯೋಜನಗಳು; 4–ಸುಲಭ ಸಾಲದ ಸೌಲಭ್ಯ; 5– ಇತರೆ) | | |
| 24 | ನೀವು ಎಂಎನ್ಆರ್ಇಜಿಎಸ್ ಕುರಿತು ಕೇಳಿದ್ದೀರಾ?<br>(1–ಹೌದು; 2–ಇಲ್ಲ) | | |
| 25. | ಹೌದು ಎಂದಾದಲ್ಲಿ, ಈ ಕಾರ್ಯಕ್ರಮದ ಮೂಲಕ ನೀವು ಎಂದಾದರೂ ಕೆಲಸ ಪಡೆದಿದ್ದೀರಾ?<br>(1–ಹೌದು; 2–ಇಲ್ಲ) | | |
| 26. | ಎಂಎನ್ಆರ್ಇಜಿಎಸ್ ಅಡಿಯಲ್ಲಿ ಸಾಮಾನ್ಯವಾಗಿ ಎಷ್ಟು ದಿನಗಳ ಕೆಲಸ ಲಭ್ಯವಿರುತ್ತದೆ? | | |
| 27. | ಎಂಎನ್ಆರ್ಇಜಿಎಸ್ ಅನುಷ್ಠಾನದಲ್ಲಿ ವ್ಯತ್ಯಾಸ ಇದೆಯೆಂದು ನೀವು ಯೋಚಿಸಿದ್ದೀರಾ?<br>ಹೌದು ಎಂದಾದಲ್ಲಿ, ವಿವರಿಸಿ. | | |
| 28. | ಎಂಎನ್ಆರ್ಇಜಿಎಸ್ ಅಡಿಯಲ್ಲಿ ಮಹಿಳೆಯರಿಗಿಂತ ಪುರುಷರು ಹೆಚ್ಚಿನ ಕೆಲಸದ ದಿನಗಳನ್ನು ಪಡೆಯುತ್ತಾರೆಯೇ?<br>(1–ಹೌದು; 2–ಇಲ್ಲ; 3–ಹೇಳಲಾಗದು) | | |
| 29. | ಎಂಎನ್ಆರ್ಇಜಿಎಸ್ ಅಡಿಯಲ್ಲಿ ಮಹಿಳೆಯರಿಗಿಂತ ಪುರುಷರು ಹೆಚ್ಚಿನ ವೇತನ ಪಡೆಯುತ್ತಾರೆಯೇ?<br>(1–ಹೌದು; 2–ಇಲ್ಲ; 3–ಹೇಳಲಾಗದು) | | |
| 30. | ಎಂಎನ್ಆರ್ಇಜಿಎಸ್ ಅಡಿಯಲ್ಲಿ ಬಡ ವರ್ಗದವರಿಗಿಂತ ಉನ್ನತ ವರ್ಗದ ಜನರು ಹೆಚ್ಚು ದಿನ ಕೆಲಸವನ್ನು ಪಡೆಯುತ್ತಾರೆಯೇ?<br>(1–ಹೌದು; 2–ಇಲ್ಲ; 3–ಹೇಳಲಾಗದು) | | |
| 31. | ಎಂಎನ್ಆರ್ಇಜಿಎಸ್ ಕೆಲಸದ ಸ್ಥಳಗಳಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಶಿಶುಕೇಂದ್ರಗಳ ಅನುಕೂಲವಿದೆಯೇ?<br>(1–ಹೌದು; 2–ಇಲ್ಲ; 3–ಹೇಳಲಾಗದು) | | |
| 32. | ಎಂಎನ್ಆರ್ಇಜಿಎಸ್ ಕೆಲಸದ ಸ್ಥಳಗಳಲ್ಲಿ ಸುರಕ್ಷಿತ ಕುಡಿಯುವ ನೀರಿನ ಸೌಕರ್ಯವಿದೆಯೇ? | | |

| | | | |
|---|---|---|---|
| | (1–ಹೌದು; 2–ಇಲ್ಲ; 3–ಹೇಳಲಾಗದು) | | |
| 33. | ಎಂಎನ್‌ಆರ್‌ಇಜಿಎಸ್ ಕೆಲಸದ ಸ್ಥಳಗಳಲ್ಲಿ ನಿರ್ಮಲೀಕರಣದ ಸೌಲಭ್ಯಗಳಿವೆಯೇ? (1–ಹೌದು; 2–ಇಲ್ಲ; 3–ಹೇಳಲಾಗದು) | | |
| 34. | ಒಂದು ವೇಳೆ ಹೌದು ಎಂದಾದಲ್ಲಿ, ಈ ಸೌಲಭ್ಯಗಳು ಸ್ವಚ್ಛ ಮತ್ತು ಶುಚಿಯಾಗಿವೆಯೇ? (1–ಹೌದು; 2–ಇಲ್ಲ; 3–ಹೇಳಲಾಗದು) | | |
| 35. | ಎಂಎನ್‌ಆರ್‌ಇಜಿಎಸ್ ಪರಿಣಾಮಕಾರಿಯಾದ ಅನುಷ್ಠಾನ ವಲಸೆಯನ್ನು ತಡೆಯಬಹುದೆಂದು ನಿಮಗನಿಸುವುದೇ? (1–ಹೌದು; 2–ಇಲ್ಲ) | | |
| 36 | ಎಂಎನ್‌ಆರ್‌ಇಜಿಎಸ್‌ನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಹೇಗೆ ಮಾಡಬಹುದೆಂದು ನಿಮಗೆ ಅನಿಸುತ್ತದೆ? (1–ಹೆಚ್ಚಿನ ಕೆಲಸದ ದಿನಗಳನ್ನು ಒದಗಿಸುವ ಮೂಲಕ; 2–ಸರಿಯಾದ ಸಂಭಾವನೆಯನ್ನು ದೃಢೀಕರಿಸುವ ಮೂಲಕ; 3–ಮಹಿಳೆಯರಿಗೆ ಬೆಂಬಲಿಸುವಂತಹ ಕೆಲಸದ ಪರಿಸ್ಥಿತಿಯನ್ನು ಖಚಿತಪಡಿಸುವ ಮೂಲಕ(ಉದಾ: ಸಮಾನ ವೇತನ, ಶಿಶುಕೇಂದ್ರ/ ಹಗಲು ಪೋಷಣಾ ಕೇಂದ್ರ ಮೊದಲಾದವು); 4–ಪಂಚಾಯತ್ ಮೂಲಕ ಕೆಲಸದ ಹಂಚಿಕೆಯನ್ನುಖಚಿತಪಡಿಸುವ ಮೂಲಕ; 5–ಈ ಎಲ್ಲವನ್ನು ಸೇರಿಸಿ) | | |

**ವಿಭಾಗ ಡ: ಮೂಲ ಸ್ಥಳ ಮತ್ತು ವಲಸೆ ಬಂದ ಸ್ಥಳದಲ್ಲಿ ವಾಸಿಸುವ ಮತ್ತು ಕೆಲಸದ ಸ್ಥಳದ ಪರಿಸ್ಥಿತಿ**

| ಕ್ರಮ ಸಂಖ್ಯೆ | ಸೂಚಕಗಳು | ಮೂಲಹಳ್ಳಿ/ನಗರ | ವಲಸೆಯ ಸ್ಥಳ | ಅಭಿಪ್ರಾಯಗಳು |
|---|---|---|---|---|
| 1 | ಕುಟುಂಬದ ಮಾಸಿಕ ಆದಾಯ<br>(1– ರೂ.6000ಕ್ಕಿಂತ ಕಡಿಮೆ; 2– ರೂ.6000–15000;<br>3– ರೂ.16000–25000; 4– ರೂ.26000–35000;<br>5– ರೂ.35000ಕ್ಕಿಂತ ಹೆಚ್ಚು | | | |
| 2 | ಜೀವನಕ್ಕೆ ನೀವೇನು ಮಾಡುತ್ತೀರಿ? ಕೆಳಗೆ ಕೊಟ್ಟಿರುವ ಆಯ್ಕೆಗಳ ಸೂಚಿಸುವ ಸಂಖ್ಯೆಯ ಜೊತೆಗೆ ಸಾಧ್ಯವಾದಲ್ಲಿ ನೀವು ಮಾಡುವ ನಿರ್ದಿಷ್ಟವಾದ ಕೆಲಸವನ್ನುದಯವಿಟ್ಟು ಸೂಚಿಸಿ. (1–ರೈತ; 2–ಮನೆಗೆಲಸದ ಸ್ವ ಉದ್ಯೋಗಿಗಳು;<br>3–ದಿನಗೂಲಿ ನೌಕರ; 4–ಕಾರ್ಖಾನೆಯ ಕಾರ್ಮಿಕ;<br>5–ವ್ಯಾಪಾರ; 6–ಸೇವೆ; 7–ಇತರ) | | | |
| 3 | ನಿಮ್ಮ ಮೂಲ ಊರುಗಳಿಂದ ವಲಸೆ ಬಂದಜನರು ಸಾಮಾನ್ಯವಾಗಿ ಮಾಡುವ ಕೆಲಸ ಯಾವುದು? ಕೆಳಗೆ ಕೊಟ್ಟಿರುವ ಆಯ್ಕೆಗಳ ಸೂಚಿಸುವ ಸಂಖ್ಯೆಯಜೊತೆಗೆ ಸಾಧ್ಯವಾದಲ್ಲಿ ನೀವು ಮಾಡುವ ನಿರ್ದಿಷ್ಟವಾದ ಕೆಲಸವನ್ನುದಯವಿಟ್ಟು ಸೂಚಿಸಿ.<br>(1–ರೈತ; 2–ಮನೆಗೆಲಸದ ಸ್ವ ಉದ್ಯೋಗಿಗಳು;<br>3–ದಿನಗೂಲಿ ನೌಕರ; 4–ಕಾರ್ಖಾನೆಯಕಾರ್ಮಿಕ;<br>5–ವ್ಯಾಪಾರ; 6–ಸೇವೆ; 7–ಇತರ) | | | |
| 4 | ನೀವು ಪಡಿತರ ಚೀಟಿಯನ್ನು ಹೊಂದಿದ್ದೀರಾ? (1–ಹೌದು; 2– ಇಲ್ಲ) | | | |
| 5 | ನಿಮಗೆ ಪಿಡಿಎಸ್‌ಗೆ ಪ್ರವೇಶವಿದೆಯೇ? (1–ಹೌದು; 2–ಇಲ್ಲ) | | | |
| 6 | ಹೌದಾದಲ್ಲಿ, ಪಿಡಿಎಸ್‌ನಿಂದ ನೀವು ಪಡೆಯುವ ಪಡಿತರದ ಪ್ರಮಾಣವು ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಬೇಕಾದಷ್ಟು ಇರುತ್ತದೆಯೇ? (1–ಹೌದು; 2–ಇಲ್ಲ) | | | |
| 7 | ನೀವು ಪಿಡಿಎಸ್‌ನಿಂದ ಪಡೆಯುವ ಪಡಿತರದ ಗುಣಮಟ್ಟ ಹೇಗಿದೆ?<br>(1–ಉತ್ತಮ; 2–ಸಮಾಧಾನಕರ; 3–ಕೆಟ್ಟದ್ದು) | | | |
| 8 | ನಿಮ್ಮ ಬಳಿ ಬಿಪಿಎಲ್ ಚೀಟಿ ಇದೆಯೇ? (1–ಹೌದು; 2–ಇಲ್ಲ) | | | |
| 9 | ಮನೆಯ ಸ್ವರೂಪ (1–ತಾತ್ಕಾಲಿಕ ಮನೆ; 2–ಗಟ್ಟಿ ಮನೆ) | | | |
| 10 | ಯಾವ ರೀತಿಯ ಮನೆ (1–ಬಾಡಿಗೆ ಮನೆ; 2–ಸ್ವಂತ; 3–ವಸತಿ ಶಾಲೆ) | | | |
| 11 | ನಿಮ್ಮ ಮನೆಯಲ್ಲಿ ವಿದ್ಯುತ್ ಇದೆಯೇ? (1–ಹೌದು; 2–ಇಲ್ಲ) | | | |
| 12 | ನಿಮ್ಮದೇ ಆದ ಕುಡಿಯುವ ನೀರಿನ ಆಧಾರ ಇದೆಯೇ? (1–ಹೌದು; 2–ಇಲ್ಲ) | | | |
| 13 | ನಿಮ್ಮ ಮನೆಯಲ್ಲಿ ಶೌಚಾಲಯವಿದೆಯೇ? (1–ಹೌದು; 2–ಇಲ್ಲ) | | | |
| 14 | ಅಡುಗೆ ಮಾಡಲು ಯಾವ ರೀತಿಯ ಒಲೆಯನ್ನು ನಿಮ್ಮ ಮನೆಯಲ್ಲಿ ಉಪಯೋಗಿಸುತ್ತೀರ?<br>(1–ಗ್ಯಾಸ್; 2–ಸೀಮೆಎಣ್ಣೆ; 3–ಕಟ್ಟಿಗೆ; 4–ಇದ್ದಿಲು) | | | |
| 15 | ನಿಮ್ಮ ನಿವಾಸದಿಂದ ಹತ್ತಿರದ ಸರಕಾರಿ ಆಸ್ಪತ್ರೆಗಿರುವ | | | |

| | | | | |
|---|---|---|---|---|
| | ದೂರ,<br>(1–2 ಕಿಮೀಗಿಂತ ಕಡಿಮೆ; 2: 2–5 ಕಿಮೀ; 3: 5–7 ಕಿಮೀ; 4: 7–10ಕಿಮೀ; 5: 10 ಕಿಮೀಗಿಂತ ಹೆಚ್ಚು) | | | |
| 16 | ನಿಮಗೆ ದೊರಕುವ ಮತ್ತು ಸಿಗುವ ಆರೋಗ್ಯರಕ್ಷಣೆ ಮತ್ತು ಸವಲತ್ತುಗಳ ಗುಣಮಟ್ಟ, (1–ಅತ್ಯುತ್ತಮ; 2–ಉತ್ತಮ; 3– ಸಮಾಧಾನಕರ; 4–ಕೆಟ್ಟದಾಗಿದೆ; 5–ಕೆಲಸ ಮಾಡುತ್ತಿಲ್ಲ) | | | |
| 17 | ನಿಮ್ಮ ಮನೆಯಿಂದ ಹತ್ತಿರದ ಶಾಲೆಗಿರುವ ದೂರ.<br>(1: 2 ಕಿಮೀಗಿಂತ ಕಡಿಮೆ; 2: 2–5 ಕಿಮೀ;<br>3: 5 ಕಿಮೀಗಿಂತ ಹೆಚ್ಚು) | | | |
| 18 | ನಿಮ್ಮ ಮಕ್ಕಳು ಶಾಲೆಗೆ ಹೋಗುತ್ತಾರೆಯೇ?<br>(1–ಹೌದು; 2–ಇಲ್ಲ) | | | |
| 19 | ನಿಮ್ಮ ಸಮುದಾಯ/ಬಡಾವಣೆಯಲ್ಲಿ ಮಕ್ಕಳು ಯಾವತರಗತಿಯವರೆಗೆ ಶಾಲೆ/ಕಾಲೇಜಿಗೆ ಹೋಗುತ್ತಾರೆ?<br>(1–ಪ್ರಾಥಮಿಕ ಹಂತ; 2–ಮಾಧ್ಯಮಿಕ ಹಂತಅಥವಾ 8ನೆಯ ತರಗತಿ; 3–10ನೆಯ ತರಗತಿ; 4–12ನೆಯ ತರಗತಿ; 5–ಪದವಿ; 6–ಸ್ನಾತಕೋತ್ತರ ಪದವಿ ಹಾಗೂ ಅದಕ್ಕೂ ಹೆಚ್ಚಿನದು; 7–ಹೇಳಲಾಗದು) | | | |
| 20 | ನಿಮ್ಮ ಮಕ್ಕಳಿಗೆ ಸಿಗುವ ಮತ್ತು ಪಡೆಯಬಹುದಾದ ಶಿಕ್ಷಣದ ಗುಣಮಟ್ಟ.<br>(1–ಅತ್ಯುತ್ತಮ; 2–ಉತ್ತಮ; 3– ಸಮಾಧಾನಕರ; 4–ಕೆಟ್ಟದಾಗಿದೆ; 5–ಕೆಲಸ ಮಾಡುತ್ತಿಲ್ಲ) | | | |
| 21 | ವಲಸಿಗ ಕಾರ್ಮಿಕರಾಗಿ ನಿಮ್ಮನ್ನು ರಕ್ಷಿಸುವ ಯಾವುದಾದರೂ ಕಾನೂನು ಅಥವಾ ಕಾರ್ಯನೀತಿಗಳ ಕುರಿತು ನಿಮಗೆ ತಿಳಿದಿದೆಯೇ?<br>(1–ಹೌದು; 2–ಇಲ್ಲ) | | | |
| 22 | ಹೌದು ಎಂದಾದಲ್ಲಿ, ಆ ಕಾನೂನು/ಕಾರ್ಯನೀತಿಗಳು ಪರಿಣಾಮಕಾರಿ ಅಥವಾ ಉಪಯೋಗಕಾರಿಯೆಂದು ನಿಮಗೆ ಅನಿಸಿದೆಯೇ?<br>(1–ಹೌದು; 2–ಇಲ್ಲ ; 3–ಹೇಳಲಾಗದು) | | | |
| 23 | ಈ ಕಾನೂನಿನ ಅತಿಕ್ರಮಣವಾದಲ್ಲಿ ತೊಂದರೆಯ ನಿವಾರಣೆಗೆ ಯಾವುದಾದರೂ ವ್ಯವಸ್ಥೆ ಅಥವಾ ಅವಕಾಶವಿದೆಯೇ?<br>(1–ಹೌದು; 2–ಇಲ್ಲ ; 3–ಹೇಳಲಾಗದು) | | | |
| 24 | ಹೌದು ಎಂದಾದಲ್ಲಿ, ಆ ವ್ಯವಸ್ಥೆ ಪರಿಣಾಮಕಾರಿಯಾಗಿದೆಯೇ?<br>(1–ತುಂಬಾ ಪರಿಣಾಮಕಾರಿ; 2–ಪರಿಣಾಮಕಾರಿ; 3–ಪರಿಣಾಮಕಾರಿಯಾಗಿಲ್ಲ) | | | |
| 25 | ಮಕ್ಕಳೂ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆಯೇ?<br>(1–ಹೌದು; 2–ಇಲ್ಲ) | | | |
| 26 | ಹೌದು ಎಂದಾದಲ್ಲಿ, ಕೆಲಸದ ಸ್ಥಳದಲ್ಲಿ ಅವರ ಮೇಲೆ ಯಾವುದೇ ರೀತಿಯ ತಾರತಮ್ಯ ತೋರಿಸುವುದನ್ನು ನೀವು ನೋಡಿದ್ದೀರಾ?<br>(1–ಹೌದು; 2–ಇಲ್ಲ ; 3–ಹೇಳಲಾಗದು) | | | |
| 27 | ಕೆಲಸದ ಸ್ಥಳದಲ್ಲಿ ಮಕ್ಕಳ ಮೇಲೆ ಯಾವುದೇರೀತಿಯ | | | |

| | | | | |
|---|---|---|---|---|
| | ಹಿಂಸಾಚಾರ ನಡೆಯುವುದನ್ನು ನೀವು ನೋಡಿದ್ದೀರಾ? (1–ಹೌದು; 2–ಇಲ್ಲ ; 3–ಹೇಳಲಾಗದು) | | | |
| 28 | ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನವಾದ ವೇತನ ದೊರಕುತ್ತದೆಯೇ? (1–ಹೌದು; 2–ಇಲ್ಲ ; 3–ಹೇಳಲಾಗದು) | | | |
| 29 | ನಿಮ್ಮ ಮನೆಯಲ್ಲಿ ಗಂಡಸರ ಊಟವಾದ ನಂತರ ಹೆಂಗಸರು ಊಟ ಮಾಡುತ್ತಾರೆಯೇ? (1–ಹೌದು; 2–ಇಲ್ಲ) | | | |
| 30 | ಕೆಲಸದ ಸ್ಥಳದಲ್ಲಿ ಮಹಿಳೆಯರ ವಿಷಯದಲ್ಲಿ ಯಾವುದೇ ರೀತಿಯ ಪಕ್ಷಪಾತ ನಡೆಯುವುದನ್ನು ನೀವು ನೋಡಿದ್ದೀರಾ? (1–ಹೌದು; 2–ಇಲ್ಲ ; 3–ಹೇಳಲಾಗದು) | | | |
| 31 | ಕೆಲಸದ ಸ್ಥಳದಲ್ಲಿ ಯಾವುದೇ ರೀತಿಯ ಹಿಂಸಾಚಾರ ನಡೆಯುವುದನ್ನು ನೀವು ನೋಡಿದ್ದೀರಾ? (1–ಹೌದು; 2–ಇಲ್ಲ ; 3–ಹೇಳಲಾಗದು) | | | |
| 32 | ಹೌದು ಎಂದಾದಲ್ಲಿ, ಯಾವ ರೀತಿಯ ಹಿಂಸಾಚಾರವನ್ನು ಕೆಲಸದ ಸ್ಥಳದಲ್ಲಿ ನೀವು ಅನುಭವಿಸಿದ್ದೀರಿ? [1–ಮೌಖಿಕ; 2–ದೈಹಿಕ; 3–ಲೈಂಗಿಕ; 4–ಮೂರೂರೀತಿಯಲ್ಲಿ; 5–ಇನ್ನಿತರ(ದಯವಿಟ್ಟು ಸೂಚಿಸಿ)] | | | |
| 33 | ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಹಿಂಸಾಚಾರವನ್ನು ಸಂಬಾಳಿಸಲು ಏನಾದರೂ ಸಿದ್ಧತೆ ಇದೆಯೇ? (1–ಹೌದು; 2–ಇಲ್ಲ ; 3–ಹೇಳಲಾಗದು) | | | |
| 34 | ಹೌದು ಎಂದಾದಲ್ಲಿ, ಆ ಅವಕಾಶ/ಸಿದ್ಧತೆ ಎಷ್ಟು ಪರಿಣಾಮಕಾರಿಯಾಗಿದೆ? (1–ತುಂಬಾ ಪರಿಣಾಮಕಾರಿ; 2–ಪರಿಣಾಮಕಾರಿ; 3–ಪರಿಣಾಮಕಾರಿಯಾಗಿಲ್ಲ) | | | |
| 35 | ವಾಸದ ಪರಿಸ್ಥಿತಿ (1–ಅತ್ಯುತ್ತಮ; 2–ಉತ್ತಮ; 3–ಕೆಟ್ಟದ್ದು; 4– ತುಂಬಾಕೆಟ್ಟದ್ದು) | | | |
| 36 | ಕೆಲಸದ ಸ್ಥಿತಿ (1–ಅತ್ಯುತ್ತಮ; 2–ಉತ್ತಮ; 3–ಕೆಟ್ಟದ್ದು; 4–ತುಂಬಾಕೆಟ್ಟದ್ದು; 5–ಅನ್ವಯಿಸುವುದಿಲ್ಲ) | | | |
| 37 | ನಿಮ್ಮ ವಾಸಿಸುವ ಮತ್ತು ಕೆಲಸದ ಪರಿಸ್ಥಿತಿಯನ್ನು ಸುಧಾರಿಸಲು ತತ್ಕ್ಷಣದಲ್ಲಿ ಸರಕಾರ ತೆಗೆದುಕೊಳ್ಳಬಹುದಾದ ಐದು ಕ್ರಿಯೆಗಳು/ಉಪಕ್ರಮಗಳನ್ನು ದಯವಿಟ್ಟು ಸೂಚಿಸಿ. | | | |

ಕರ್ನಾಟಕದಿಂದ ಮತ್ತು ಕರ್ನಾಟಕಕ್ಕೆ
ಕಾರ್ಮಿಕರ ವಲಸೆ ಕುರಿತು ಮೌಲ್ಯಮಾಪನ ಅಧ್ಯಯನ

---

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
#542, 5ನೇ ಮಹಡಿ, 2ನೇ ಹಂತ
ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀಧಿ
ಬೆಂಗಳೂರು–560 001.

ಜಾಲತಾಣ: kea.karnataka.gov.in
ದೂರವಾಣಿ : 080 2203 2561
ಇ–ಮೇಲ್: keagok@karnataka.gov.in